ಮನೆಮಂದಿಗೆಲ್ಲ ಮುದ ನೀಡುವ ಮಾಸಿಕ

ಕಸ್ತೂರಿ

ಸೆಪ್ಟೆಂಬರ್
೧೯೯೭




* ಪ್ರವಾಸಿಗರ ಸ್ವರ್ಗ ಸೆಷಲ
* ಕೃತಯುಗದಿಂದ ಕಲಿಯುಗದವರೆಗೆ...
* ಗಂಗವ್ವ ಗಂಗಾಮಾಯಿ

ಪುಸ್ತಕ ವಿಭಾಗ

ಬೆಲೆ: ಆರು ರೂ.

ತಿರುಗು ತಿರುಗೆಲೆ ತಿಗರಿ....



ಕಸ್ತೂರಿ

ಕನ್ನಡ ಡೈಜೆಸ್ಟ್

ಲೋಕ ಶಿಕ್ಷಣ ಟ್ರಸ್ಟಿನ
ಹೆಮ್ಮೆಯ ಕಾಣಿಕೆ

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಎಸ್.ವಿ. ಜೋಶಿ

ನಿರ್ವಹಣೆ:
ಗೋಪಾಲ ವಾಜಪೇಯಿ
ಶ್ರೀಕಾಂತ ಮಳಗಿ

ಕಲೆ:
ಪಿ.ಆರ್. ಪಾಟೀಲ

ಮುಖಪುಟ ಚಿತ್ರ:
'ಕಸ್ತೂರಿ' ಸಂಗ್ರಹದಿಂದ

'ಕಸ್ತೂರಿ' ಕಾರ್ಯಾಲಯ,
ಕೊಪ್ಪೀಕರ ರಸ್ತೆ,
ಹುಬ್ಬಳ್ಳಿ – ೫೮೦ ೦೨೦

ಚಿಂತನ

ಇದು ವಿಶ್ವಾಮಿತ್ರ ಸೃಷ್ಟಿಯ ಕಾಲ. ಆದರೆ ವಿಶ್ವಾಮಿತ್ರನ ಕೆಲಸವನ್ನು ವಿಜ್ಞಾನಿಗಳೇ ವಹಿಸಿಕೊಂಡಿದ್ದಾರೆ. ವಂಶವಾಹಿಗಳ ಬಗೆಗಿನ ತಿಳಿವಳಿಕೆ ಹೆಚ್ಚಿದಂತೆಲ್ಲ, ಡಿಎನ್ಎ ಸರಪಳಿಯನ್ನು ವಿಭಜಿಸಿ, ಬೇರೆ ಬೇರೆ ಸರಪಳಿಗಳ ಕೊಂಡಿಗಳನ್ನು ಜೋಡಿಸಿ, ಹೊಸ ಬಗೆಯ ತಳಿಗಳನ್ನೇ ಉತ್ಪಾದಿಸಲು ವಿಜ್ಞಾನಿಗಳು ಪ್ರಾರಂಭಿಸಿದ್ದಾರೆ. ಹೀಗಾಗಿ ಇನ್ನು ಕೆಲವೆ ವರ್ಷಗಳಲ್ಲಿ ಔಷಧೀಯ ಗುಣಗಳುಳ್ಳ ತರಕಾರಿಗಳು, ಹಣ್ಣುಹಂಪಲಗಳು ಪೇಟೆಗೆ ಬಂದರೆ ಆಶ್ಚರ್ಯ ವಿಲ್ಲ.

ಆದರೆ ವಿಜ್ಞಾನಿಗಳ ಕಾರ್ಯ ಇಷ್ಟಕ್ಕೇ ಮುಗಿಯುವುದಿಲ್ಲ. ವಾಣಿಜ್ಯೋದ್ದೇಶವೇ ಮೂಲ ಆಧಾರವಾಗಿರುವ ಇಂದಿನ ದಿನಗಳಲ್ಲಿ ವಿಜ್ಞಾನಿಗಳು ಮಾಡಿದ್ದೆಲ್ಲವೂ ಒಳ್ಳೆಯದು ಎಂದೂ ಹೇಳಲಾಗುವುದಿಲ್ಲ. ಬರಿ ಮೂರು-ನಾಲ್ಕು ವರ್ಷಗಳ ಹಿಂದೆ ಅಮೆರಿಕನ್ ವಿಜ್ಞಾನಿಗಳು ಹೊಸ ಬಗೆಯ ಟೊಮ್ಯಾಟೊ ತಳಿಯನ್ನು ಸೃಷ್ಟಿಸಿದರು. ಕಡಿಮೆ ಗೊಬ್ಬರ ಉಪಯೋಗಿಸಿ ಹೆಚ್ಚು ಫಸಲು ಪಡೆಯಬಹುದಾಗಿದ್ದರೂ ಹಾಗೂ ಟೊಮ್ಯಾಟೊ ರುಚಿಕರವಾಗಿದ್ದರೂ ದೂರಗಾಮಿ ಜೈವಿಕ ಪರಿಣಾಮ ಏನಾಗುವುದೆಂಬುದು ಇನ್ನೂ ಖಚಿತವಾಗಿರದ್ದರಿಂದ ಅದನ್ನು ಬಹಿಷ್ಕರಿಸಬೇಕೆಂದು ಅಮೆರಿಕದ ಜನ ಚಳವಳಿಯನ್ನೆ ಹೂಡಿದರು. ಅವರು ಬಹಿಷ್ಕರಿಸಿದ್ದನ್ನು ನಾವು ಸ್ವೀಕರಿಸಿದೆವು. ಈ ಬಗ್ಗೆ ಜನರ ಗಮನ ಸೆಳೆಯಲು 'ಕಸ್ತೂರಿ'ಯು ಒಂದು ಲೇಖನವನ್ನು ಪ್ರಕಟಿಸಿತು. ಪಶ್ಚಿಮದ ದೇಶಗಳಹಾಗೆ ನಮ್ಮ ಗ್ರಾಹಕರು ಜಾಗ್ರತರಲ್ಲದ್ದರಿಂದ ಅದರ ಪರಿಣಾಮ ಏನೂ ಆಗುವುದಿಲ್ಲವೆಂಬುದು ಗೊತ್ತೇ ಇತ್ತು. ಊಹೆ ನಿಜವಾಯಿತು.

ವಿಶ್ವಾಮಿತ್ರ ಸೃಷ್ಟಿಯ ಹೊಸ ಹೊಸ ಮಾದರಿಗಳು ಪೇಟೆಗೆ ಬರುತ್ತಿವೆ. ಅವುಗಳ ಫಸಲು ಚೆನ್ನಾಗಿ ಬರುತ್ತದೆ ಎನ್ನುವುದಾಗಲಿ ಅವು ರುಚಿಕರವಾಗಿರುತ್ತವೆ ಎನ್ನುವುದಾಗಲಿ ಕಂಪನಿಯ ಸಾಹಿತ್ಯದಿಂದ ಗ್ರಾಹಕರಿಗೆ ಗೊತ್ತಾಗುತ್ತದೆಯೆ ಹೊರತು, ಅದರ ನಿತಾಂತ ಸೇವನೆಯಿಂದ ಮುಂದೆ ಯಾವ ದುಷ್ಪರಿಣಾಮವೂ ಆಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಂಡ ನಂತರವೇ ಆ ತಳಿಗಳನ್ನು ಪೇಟೆಗೆ ಬಿಡುಗಡೆ ಮಾಡಿದ್ದೇವೆ ಎನ್ನುವುದನ್ನು ಅವುಗಳನ್ನು ಉತ್ಪಾದಿಸಿದ ಕಂಪನಿಗಳು ಹೇಳುವುದೇ ಇಲ್ಲ.

'ಅಯಟ್ರಾಲಜಿ' ಎಂದರೆ ಏನೆಂಬುದು ಸುಮಾರಾಗಿ ಇಂಗ್ಲೀಷು ಬರುವ ಎಲ್ಲರಿಗೂ ಗೊತ್ತಿದ್ದದ್ದೆ. ಈ ಶಬ್ದಕ್ಕೆ ಸಂವಾದಿಯಾಗಿ ತಳಿ ಶಾಸ್ತ್ರದಲ್ಲಿಯೂ ಮುಂದೆ ಹೊಸ ಶಬ್ದ ಹುಟ್ಟಿಕೊಂಡರೆ ಆಶ್ಚರ್ಯ ವಿಲ್ಲ.

• ವ್ಯವಸ್ಥಾಪಕ ಸಂಪಾದಕ

ಸಹ-ಚಿಂತನ

ವಾರೆ...ವ್ಹಾ! ಎಷ್ಟು ಸೊಗಸು!

'ಕಸ್ತೂರಿ'ಯ ಆಗಸ್ಟ್ ಸಂಚಿಕೆ ನೋಡಿದೆ. ವಾರೆ....ವ್ಹಾ! ಎಂತಹ ಸೊಗಸಾದ ಮುಖಪುಟ ನೀಡಿದ್ದೀರಿ ಮಾರಾಯ್ರೇ! ಮುದ್ದಾದ ಆ ಮಕ್ಕಳ ಚಿತ್ರ ಫ್ರೇಮ್ ಹಾಕಿಸಿ ಇಡುವಂತಿದೆ. ಈ ಚಿತ್ರ ಸಕಾಲಿಕ. ಸರ್ವಜನಾಕರ್ಷಕ!

★ ಗೀತಾಮಂಜು, ಸೊರಬ
ಪಿ. ಎಚ್. ಕುಲಕರ್ಣಿ, ಬೆಳಗಾವಿ

****

ತುಂಬಾ ಅರ್ಥಪೂರ್ಣಮುಖ ಪುಟ. ಬೀಸುವ ಬಿರುಗಾಳಿ, ಪಕ್ಕದಲ್ಲೇ ಬಾಯ್ತೆರೆದ ಕಂದರಗಳಿಂದ ಕುಗ್ಗದೆಯೇ ಮಕ್ಕಳು ಸ್ವಾತಂತ್ರ್ಯದ ಸ್ವರ್ಣಮಹೋತ್ಸವ ಸಂದರ್ಭದಲ್ಲಿ ತ್ರಿವರ್ಣಧ್ವಜಕ್ಕೆ ಗೌರವ ಸಲ್ಲಿಸುತ್ತಿರುವ ಚಿತ್ರ ಸದಾಕಾಲ ನೆನಪಿನಲ್ಲಿ ಉಳಿಯುತ್ತದೆ.

★ ಆರ್. ಡಿ. ಅಂಗಡಿ, ಜಮ್ಮನಕಟ್ಟಿ

*****

ಸಕಾಲಿಕವಾದ ಮುಖಪುಟ. ಚಿತ್ರದಲ್ಲಿ ಪರಿಸರ ಪ್ರೇಮ, ಮಿತ ಸಂತಾನದ ಬಗೆಗೂ ಸೂಚ್ಯವಾಗಿ ಹೇಳಿದಂತಾಗಿದೆ. 'ಆಜಾದರ ಅಂತಿಮ ಸಮರ' (ಸ್ವಯಂಭೂ) ಲೇಖನ ಸಮಯೋಚಿತವಾಗಿದ್ದು ಅಂದಿನ ಘಟನೆಯನ್ನು ಕಣ್ಣಿಗೆ ಕಟ್ಟುವಂತೆ ಲೇಖನದಲ್ಲಿ ವಿವರಿಸಲಾಗಿದೆ.

★ ಗೋಪಾಲಕೃಷ್ಣ ಭಟ್ ಎಂ.
ಪಲಕಡ್ಕ (ಪುತ್ತೂರು)

*****

ಅತ್ಯುಪಯುಕ್ತ ಮಾಹಿತಿ

ಸುಂದರ ಮುಖಪುಟದ 'ಕಸ್ತೂರಿ'ಯ 'ಚಿಂತನದಲ್ಲಿ' ಬಹಳಷ್ಟು ಜನರಿಗೆ ಗೊತ್ತಿಲ್ಲದ ಭಾರತದ ಪ್ರಥಮ ಮಹಿಳಾ ಕ್ರಾಂತಿಕಾರಿ ಮೇಡಮ್ ಕಾಮಾಳ ಬಗೆಗೆ ಉಲ್ಲೇಖಿಸಿ ಉಪಕಾರ ಮಾಡಿದ್ದೀರಿ. ಇಂತಹ ಅತ್ಯುಪಯುಕ್ತ ಮಾಹಿತಿ ನೀಡುವುದರಿಂದಲೇ 'ಕಸ್ತೂರಿ' ಜನಪ್ರಿಯವಾಗಿದೆ. 'ಅಂಗಾರಕನಿಂದ ಬಂದ ಅವಧೂತ' (ಬಿಂಡಿಗನವಿಲೆ ಭಗವಾನ್) ಲೇಖನ ಮಂಗಳನ ಮೇಲೆ ನಡೆದ ನಾನಾ ಬಗೆಯ ಪ್ರಯೋಗಗಳ ಬಗ್ಗೆ ಮಾಹಿತಿ ನೀಡಿತು. 'ಪಾಥ್ ಫೈಂಡರ್' ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿಯೆ ಅಂಗಾರಕನ ಅತಿ ವಿಶಿಷ್ಟ ಮಾಹಿತಿ ಒದಗಿಸಿದ್ದೀರಿ.

★ ಗಾಯತ್ರಿನಂದನ, ಗಳತಗಾ
ಕೆ. ಮಧುಸೂದನ, ಕಾರವಾರ

*****

ಸ್ಫೂರ್ತಿ ನೀಡಿದ ಸ್ಮರಣೆ

'ಆಜಾದರ ಅಂತಿಮ ಸಮರ' (ಸ್ವಯಂಭೂ) ಲೇಖನ ದೇಶಕ್ಕಾಗಿ ಅಂದಿನವರು ಮಾಡಿದ ತ್ಯಾಗ, ಬಲಿದಾನಗಳ ಹೃದಯಸ್ಪರ್ಶಿ ವಿವರಣೆಯಾಗಿತ್ತು. ಆ ತ್ಯಾಗಜೀವಿಯ ಧೀರ ಹೋರಾಟಗಾರರ ಸ್ಮರಣೆಯೇ ಸ್ಫೂರ್ತಿ ನೀಡಿತು. ಪ್ರತಿಯೊಬ್ಬ ಭಾರತೀಯರು ಆಜಾದ್ ಅವರಂತಹ ನಿಃಸ್ವಾರ್ಥ ನಾಯಕರ ಜೀವನಗಾಥೆಯಿಂದ ಸ್ಫೂರ್ತಿ ಪಡೆಯುತ್ತಾರೆ. ಸ್ವಾತಂತ್ರ್ಯದ ಸ್ವರ್ಣ ಮಹೋತ್ಸವ ಸಂದರ್ಭದಲ್ಲಿ ಆ ತ್ಯಾಗಜೀವಿಗಳನ್ನು ನೆನಪು ಮಾಡಿಕೊಂಡು, ಅವರಿಗೆ ನಮನ ಸಲ್ಲಿಸಿ, ಅವರ ಆದರ್ಶ ಪಾಲನೆಯ ಸಂಕಲ್ಪ ಮಾಡಬೇಕು.

★ ಶಹಾಬುದ್ದೀನ್ ಅ. ಮೋಜನ್, ಇಸ್ಲಾಂಪುರ
ವೀರಸಂಗಪ್ಪ ಅಂಗಡಿ, ಗದಗ

*****

ಸುಂದರ ಮುಖಚಿತ್ರ, ಸೊಗಸಾದ ಲೇಖನಗಳನ್ನು ಒಳಗೊಂಡ 'ಕಸ್ತೂರಿ'ಯ ಆಗಸ್ಟ್ ಸಂಚಿಕೆ ಸಂಗ್ರಹಯೋಗ್ಯವಾಗಿದೆ. 'ಅಹಂಕಾರದ ದಾನ' (ಟೇಕಲ್ ಗೋಪಾಲಕೃಷ್ಣ) ನೀತಿಕಥೆ, 'ಆಜಾದರ ಅಂತಿಮ ಸಮರ' 'ಅಂಗಾರಕನಿಂದ ಬಂದ ಅವಧೂತ ಲೇಖನಗಳೆಲ್ಲ ಸೊಗಸಾಗಿದ್ದವು.

☙ ಅಚ್ಯುತರಾವ್ ನಾಡಿಗೇರ, ತಿಳವಳ್ಳಿ

ಮನಸೆಳೆಯಿತು

ಪ್ರಹ್ಲಾದ ಅಗಸನಕಟ್ಟೆ ಅವರ 'ಸರಳ ಸಮಸ್ಯೆಗೆ ಸಂಕೀರ್ಣ ಉತ್ತರ' ಲೇಖನ ಮನ ಸೆಳೆಯಿತು. ವ್ಯಕ್ತಿಯೊಬ್ಬನ ಆರೋಗ್ಯದ ಮೇಲೆ ಅವನು ವಾಸಿಸುವ ಪರಿಸರ, ಊಟೋಪಚಾರ, ವಾರ್ಷಿಕ ವರಮಾನ ಮತ್ತು ಕುಟುಂಬದ ಗಾತ್ರ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಲೇಖಕರು ಚೆನ್ನಾಗಿ ವಿವರಿಸಿದ್ದಾರೆ.

ಛ ರೂಪಾ ಮರಿಗೇರಿ, ಬೆಳಗಾವಿ

ಸೊಗಸಾಗಿತ್ತು

ಆಗಸ್ಟ್ ಸಂಚಿಕೆ ಸರ್ವಾಂಗ ಸುಂದರವಾಗಿತ್ತು, ಸೊಗಸಾಗಿತ್ತು. 'ಅಂಗಾರಕನಿಂದ ಬಂದ ಅವಧೂತ' 'ಸ್ನೇಹಸಿಂಧು ಅಮೃತಬಿಂದು' (ಶಾಂತಾದೇವಿ ಮಾಳವಾಡ), 'ಈ ಶಬ್ದ ಆನ್ನುವದು' (ತೇರಳಿ ಎನ್. ಶೇಖರ) ಕವನ, 'ಸರಳ ಸಮಸ್ಯೆಗೆ ಸಂಕೀರ್ಣ ಉತ್ತರ' ಲೇಖನಗಳೆಲ್ಲ ಚೆನ್ನಾಗಿದ್ದವು.

ಛ ರಾಮು ಡಿ. ಚಲವಾದಿ, ಕುಕನೂರ
ಎಫ್. ಎಂ. ಬಾಗವಾನ, ವಿಜಾಪುರ

ಸರಿಯಾದ ಮಾಹಿತಿ

'ಅಂಗಾರಕನಿಂದ ಬಂದ ಅವಧೂತ' (ಬಿಂಡಿಗನವಿಲೆ ಭಗವಾನ್) ಲೇಖನದಲ್ಲಿ ಭೂಮಿಯಿಂದ ಮಂಗಳನ ದೂರ ಐದೂವರೆ ಲಕ್ಷ ಕಿಲೋ ಮೀಟರ್ ಎಂದು ಹೇಳಲಾಗಿದೆ. ಆದರೆ, ಪಾಥ್ ಫೈಂಡರ್ ಪ್ರತಿ ಗಂಟೆಗೆ ೮೫೦೦ ಕಿ.ಮೀ ವೇಗದಲ್ಲಿ ಒಂಭತ್ತು ತಿಂಗಳಿನಲ್ಲಿ ಐದುವರೆ ಕೋಟಿ ಕಿಲೋಮೀಟರ್ ಕ್ರಮಿಸಿ ಮಂಗಳನನ್ನು ತಲುಪಿದೆ, ಅಲ್ಲವೆ ?

ಛ ರವಿ ಬ. ಕುಡಚಿ, ಬೆಳಗಾವಿ

ಚಿ.ನ.ಮಂಗಳಾ ಸ್ನೇಹದಪರಿ!

'ಸ್ನೇಹಸಿಂಧು ಅಮೃತ ಬಿಂದು' (ಆಗಸ್ಟ್ ಸಂಚಿಕೆ) ಶಾಂತದೇವಿ ಮಾಳವಾಡ ಬರೆದ ಚಿ.ನ.ಮಂಗಳಾ ಕುರಿತಾದ ಲೇಖನ ದಿ. ಸಹೋದರಿಗೆ ಸಲ್ಲಿಸಿದ 'ಕಂಬನಿಯ ಚುಂಬನ' ದಂತಿತ್ತು.

ನಿಜಕ್ಕೂ ಇದೊಂದು ತೂಕದ, ಹೃದಯಸ್ಪರ್ಶಿ ಬರಹ. ಕಣ್ಮರೆಯಾದ ಚಿ.ನ.ಮಂಗಳಾ ಕುರಿತು ಈಗಾಗಲೇ ಹಲವಾರು ಪತ್ರಿಕೆಗಳಲ್ಲಿ ಬೇಕಾದಷ್ಟು ಲೇಖನಗಳು ಪ್ರಕಟವಾಗಿದ್ದರೂ 'ಕಸ್ತೂರಿ'ಯ ಲೇಖನ ವಿಶಿಷ್ಟತರದ್ದು.

ಸುಮಾರು ೧೦-೧೫ ವರ್ಷಗಳ ಹಿಂದೆ ಚಿ.ನ.ಮಂಗಳಾ ಅವರ ಪುಸ್ತಕವೊಂದನ್ನು ತರಿಸಿಕೊಳ್ಳುವ ಇಚ್ಛೆಯಿಂದ ಅವರ ವಿಳಾಸಕ್ಕೆ ಪತ್ರ ಬರೆದಿದ್ದೆ. ಅವರು ತಕ್ಷಣ ನನಗೆ ಬೇಕಾಗಿದ್ದ ಪುಸ್ತಕವನ್ನು ಕಳುಹಿಸಿಕೊಟ್ಟು ಹೀಗೆ ಪತ್ರ ಬರೆದಿದ್ದರು: "ದೂರದ ಬರೋಡದಲ್ಲಿದ್ದೂ ಕನ್ನಡದ ಪುಸ್ತಕಗಳಿಗೆ ಹಂಬಲಿಸುತ್ತಿರುವ ತಮ್ಮ ಕನ್ನಡಾಭಿಮಾನ ಮೆಚ್ಚುವಂಥಾದ್ದು. .ಕೆಲವು ವರ್ಷಗಳ ಹಿಂದೆ ನನ್ನ ತಮ್ಮನೊಬ್ಬ ಬರೋಡದಲ್ಲಿದ್ದ. ಆ ಸಮಯದಲ್ಲಿ ನಾನು ಆಗಾಗ ಬರೋಡಕ್ಕೆ ಬರುತ್ತಿದ್ದೆ. ಆಗ ತಮ್ಮ ಪರಿಚಯವಾಗಿದ್ದರೆ ಮುಖತಃ ನಿಮ್ಮಲ್ಲಿಗೆ ಬಂದು ಕಾಣುತ್ತಿದ್ದೆ. ಬರೋಡದಲ್ಲಿ ಆಗ ನಮ್ಮವರು ತೀರಾ ಕಡಿಮೆ ಸಂಖ್ಯೆಯಲ್ಲಿದ್ದರು. ಮುಂದೆ ಎಂದಾದರೊಮ್ಮೆ ಪರಸ್ಪರ ಭೆಟ್ಟಿಯಾಗೋಣ."

ಆದರೆ ಅವರು ಬರೆದ 'ಆ ಮುಂದೆ' ಎಂಬುದು ನನ್ನ ಪಾಲಿಗೆ ಕೇವಲ ಕನಸಾಗಿ ಉಳಿಯಿತು. ಚಿ.ನ.ಮಂಗಳಾ ಆವರ 'ಸ್ನೇಹದ ಪರಿ' ಎಂಥಾದ್ದು ಎಂಬುದಕ್ಕೆ ಇದೊಂದು ನಿದರ್ಶನ!

ಛ ಎಸ್ಕೆ. ಹಳೆಯಂಗಡಿ, ಬರೋಡ.

ಉಕ್ಕಿ ಬಂದ ನೆನಪು

ಇನ್ನೂ ಬಹುಕಾಲ ಬದುಕಿ, ಕನ್ನಡ ನಾಡಿಗೆ ಬಹುಮುಖ ಸೇವೆ ಸಲ್ಲಿಸಬೇಕಾಗಿದ್ದ ಚಿ.ನ.ಮಂಗಳಾ ಹಠಾತ್ತನೆ ಕಣ್ಮರೆಯಾದರು. 'ಕಸ್ತೂರಿ'ಯಲ್ಲಿ ಶ್ರೀಮತಿ ಶಾಂತಾದೇವಿ ಮಾಳವಾಡ ಅವರ ಲೇಖನ ಓದುತ್ತಿದ್ದಂತೆ ಹಳೆಯ ನೆನಪೊಂದು ಉಕ್ಕಿ ಬಂತು.

೧೯೫೧-೫೨ರ ಸಮಯ. ಮಂಗಳೂರಿನ ಸಂತ ಎಲೊಸಿಯಸ್ ಕಾಲೇಜಿನಲ್ಲಿ ನಾನಾಗ ವಿದ್ಯಾರ್ಥಿಯಾಗಿದ್ದೆ. ಆ ಬಾರಿಯ ವಾರ್ಷಿಕೋತ್ಸವಕ್ಕೆ ಚಿ.ನ.ಮಂಗಳಾ ಅವರ ತಂದೆ, ಕೊಡಗು ಜಿಲ್ಲಾಧಿಕಾರಿಯಾಗಿದ್ದ ನರಸಿಂಹ

(ಆರನೇ ಪುಟಕ್ಕೆ)



ಗಂಗವ್ವ ಗಂಗಾಮಾಯಿ

ಮೂಲ: ಡಾ.ಶಂಕರಮೊಕಾಶಿ ಪುಣೇಕರ

ಸಂಗ್ರಹ: ಡಾ.ಮಂದಾಕಿನಿ ಪುರೋಹಿತ



ಬೆಳಕಿಂಡಿ

ಹಣ ಬಂದಹಾಗೆ ಹಣದ ದಾಹ ಹೆಚ್ಚುವಂತೆ ಜ್ಞಾನವನ್ನು ಸಂಪಾದಿಸಿದಂತೆಲ್ಲ ಇನ್ನಷ್ಟು ಗಳಿಸಬೇಕೆಂಬ ಲವಲವಿಕೆಯೂ ಹೆಚ್ಚುತ್ತದೆ.

★ ಸ್ಟರ್ನ್ ಲಾರೆನ್ಸ್

ಒಮ್ಮೆ ನೀವು ಮದುವೆಯಾದಿರೆಂದರೆ ಒಳ್ಳೆಯವರಾಗಿರುವುದರ ಹೊರತು ಬೇರೆ ದಾರಿಯೇ ಇಲ್ಲ.

★ ಆರ್.ಎಲ್. ಸ್ಟೀವೆನ್‌ಸನ್

ಸಭ್ಯಗೃಹಸ್ಥನೆಂದು ಹೇಳಿಕೊಳ್ಳುವವ ಹಾಗೆ ಇರುವ ಸಂಭವ ತೀರಾ ಕಡಿಮೆ.

★ ರಾಬರ್ಟ್ ಸ್ಮಿತ್

ಎಲ್ಲರೂ ದೀರ್ಘಕಾಲ ಬದುಕಲು ಅಪೇಕ್ಷಿಸುತ್ತಾರೆ. ಆದರೆ ಮುದುಕರಾಗಲು ಯಾರೂ ಇಚ್ಛಿಸುವುದಿಲ್ಲ.

★ ಜೋನಾಥನ್ ಸ್ವಿಫ್ಟ್

ದಡ್ಡತನ ಬೇರೆ ಬೇರೆ ರೂಪಧರಿಸಿ ಬರುತ್ತದೆ. ಆದರೆ ಅವಿವೇಕ ಮಾತ್ರ ಒಂದೇ ಆಗಿರುತ್ತದೆ.

★ -ಎರಿಕ್ ಹಾಸ್ಟರ್

ಕೋಳಿಯನ್ನು ಎಲ್ಲರೂ ಶಪಿಸುವುದು ಅದು ಎಲ್ಲರಿಗಿಂತ ಮೊದಲು ಏಳುತ್ತದೆ ಎನ್ನುವುದಕ್ಕಲ್ಲ, ತಾನು ಎದ್ದಿದ್ದನ್ನು ಘಂಟಾಘೋಷವಾಗಿ ಘೋಷಿಸಿಕೊಳ್ಳುತ್ತದೆ ಎನ್ನುವುದಕ್ಕೆ.

★ -ಎರಿಕ್ ಹಾಫ್‌ಮನ್

ಮಹಾಪುರುಷರು ತಮ್ಮ ಯೋಗ್ಯತೆಯನ್ನು ಯಾರೂ ಗುರುತಿಸುತ್ತಿಲ್ಲವಲ್ಲ ಎನ್ನುವುದಕ್ಕೆ ಮರುಗುವುದಿಲ್ಲ, ತಮ್ಮ ಯೋಗ್ಯತೆ ಎಷ್ಟು ಚಿಕ್ಕದಾಗಿದೆಯಲ್ಲ ಎನ್ನುವುದಕ್ಕೆ ಮರುಗುತ್ತಾರೆ.

★ -ಕನ್‌ಫ್ಯೂಷಿಯಸ್, ಚೀನೀ ತತ್ವಜ್ಞಾನಿ

(ಮೂರನೆ ಪುಟದಿಂದ)

ಮೂರ್ತಿ ಅವರು ಅಧ್ಯಕ್ಷರಾಗಿ ಆಗಮಿಸಿದ್ದರು. ಅವರನ್ನು ಆಹ್ವಾನ ನೀಡಿ ಕರೆತಂದವರು ನಮ್ಮ ಪ್ರಾಧ್ಯಾಪಕ ಜಿ.ಟಿ.ನಾರಾಯಣರಾಯರು. ತಂದೆ ಮಾಡಿದ ಭಾಷಣ ಈಗ ನನ್ನ ನೆನಪಿನಲ್ಲಿ ಇಲ್ಲ. ಆದರೆ, ಅದೇ ಸಂದರ್ಭದಲ್ಲಿ 'ಕೋಲು ಸಖಿ, ಚಂದ್ರಮುಖಿ, ಕೋಲು ಕೋಲಣ್ಣ ಕೋಲೆ' ಹಾಗೂ ಬಿ.ಎಂ.ಶ್ರೀಯವರ ಕೆಲ ಗೀತೆಗಳನ್ನು ಸುಶ್ರಾವ್ಯವಾಗಿ ಅವರ ಮಗಳು ಚಿ.ನ.ಮಂಗಳಾ ಹಾಡಿದ್ದು ಚೆನ್ನಾಗಿ ನೆನಪಿದೆ. ನಾನು ಅವರನ್ನು ನೋಡಿದ್ದು ಅದೇ ಮೊದಲು, ಅದೇ ಕೊನೆ. ವೈಯಕ್ತಿಕ ಆಶೆ ಆಕಾಂಕ್ಷೆಗಳಿಲ್ಲದೆ ಜೀವನ ದುದ್ದಕ್ಕೂ ಜನಹಿತ ಕಾರ್ಯಮಾಡಿದ ಚಿ.ನ. ಮಂಗಳಾ ಬಿಟ್ಟು ಹೋದದ್ದು ಪ್ರೀತಿ, ಸೇವೆಯ ಋಣ ಹಾಗೂ ಅಪಾರ ವಿದ್ಯಾರ್ಥಿ ಬಂಧುಗಳನ್ನು.

ಅಕ್ಕ ಶಾಂತಾದೇವಿ ಮಾಳವಾಡರು ಚಿ.ನ.ಮಂಗಳಾ ಅವರ ಬಗ್ಗೆ ಬರೆದ ಆತ್ಮೀಯ ಲೇಖನ ಹೃದಯಸ್ಪರ್ಶಿಯಾಗಿತ್ತು.

ಆ ಸರವು ರಾಮ ಭಟ್ಟ, ಸಂಪಾಜೆ

* * *

'ಸ್ನೇಹಸಿಂಧು ಅಮೃತಬಿಂದು' ಚಿ.ನಾ. ಮಂಗಳಾ ಅವರ ಕುರಿತಾದ ಲೇಖನ ಓದುತ್ತಿದ್ದಂತೆ 'ಹೆಣ್ಣು ಜಗದ ಕಣ್ಣು' ಎಂಬ ಮಾತು ಎಷ್ಟೊಂದು ಅರ್ಥಪೂರ್ಣ ಎನಿಸಿತು. ಅವರ ಸೇವಾ ಭಾವನೆ, ಪ್ರೀತಿ, ವಾತ್ಸಲ್ಯಗಳ ಬಗ್ಗೆ ಓದಿದಾಗ ಜಗತ್ತಿನ ಅಪರೂಪದ ಸುಂದರ ಮುಖದ ದರ್ಶನ ವಾಯಿತು. ಅವರದು ಆದರ್ಶಮಯ ಬದುಕು.

ಆ ಶಾಂತಾ ಬಸವರಾಜ, ಬೆಳಗಾವಿ

ಸಂತೆಬೆನ್ನೂರ ಮಂಜಪ್ಪ, ಸೊರಬ

ಆರೋಗ್ಯದಂಗಳ

ಓದುಗರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ 'ಕಸ್ತೂರಿ' ಪ್ರತಿ ತಿಂಗಳೂ ಒಂದೊಂದು ರೋಗದ ಬಗ್ಗೆ ವಿವರ ವಿವರಣೆ ನೀಡಿ, ಪರಿಹಾರೋಪಾಯಗಳನ್ನು ಸೂಚಿಸಿ ಮಹದುಪಕಾರ ಮಾಡುತ್ತಿದೆ. ಈ ಬಾರಿ ಡಾ.ಎಚ್.ವಿ.ಮೂರ್ತಿಯವರ 'ಮೂಲವ್ಯಾಧಿಗೆ ಇಲ್ಲಿದೆ ಉಪಚಾರ' ಲೇಖನ ಮಾಹಿತಿಪೂರ್ಣವಾಗಿತ್ತು. ಉಪಚಾರದ ಬಗ್ಗೆ ತಿಳಿಸಿದ್ದು ಉಪಯುಕ್ತವಾಗಿತ್ತು.

ಆ ಮಾರುತಿ ವಾಕ್ಪಟೆ, ಗಳತಗಾ

ಆ ಶಂಕರಗೌಡ ಆರ್. ಪಾಟೀಲ, ರೋಣ

ಕವಿಗಳೇ ಹೀಗೇಕೆ?

ಜುಲೈ ಸಂಚಿಕೆಯ ೬೩ನೆಯ ಪುಟದಲ್ಲಿ ಪ್ರಕಟವಾದ ಸಿದ್ಧು ಸಾವಳಸಂಗ ಅವರ 'ನೀನಿಲ್ಲದ ನಾನು' ಹನಿಗನವ ೧೩-೭-೯೭ರ 'ಕರ್ಮವೀರ' ಸಂಚಿಕೆಯ ೩೭ನೆಯ ಪುಟದಲ್ಲಿ ಪ್ರಕಟವಾದ ಸಿದ್ಧರಾಜ ಸೊನ್ನದ ಅವರ 'ಸ್ಥಿತಿ' (ಪ್ರತಿ ಲಗತ್ತಿಸಲಾಗಿದೆ) ಹನಿಗವನಗಳೆರಡೂ ಅವಳಿ ಜವಳಿಯಂತಿವೆ. ಇಲ್ಲಿ ಮೂಲ ಲೇಖಕರು ಯಾರೆಂಬುದು ಗುರುತಿಸುವುದು ನಿಜಕ್ಕೂ ಕಠಿಣ. 'ಕಸ್ತೂರಿ' ಸೂಕ್ತ ಉತ್ತರ ನೀಡೀತೆ ?

ಆ ಮುರುಗೇಶ ಸಂಗಮ,

ಬಸವನಬಾಗೇವಾಡಿ

* * * *

ಇದೇ ಹನಿಗವನ ಅವರದೇ ಹೆಸರಿನಲ್ಲಿ ೧೯೯೪ರ 'ಪ್ರಜಾವಾಣಿ' ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾಗಿದೆ. (ಪ್ರತಿ ಲಗತ್ತಿಸಲಾಗಿದೆ) ಒಂದೇ ಕವನ ಒಂದು ತಿಂಗಳು ಅಥವಾ ಎರಡು-ಮೂರು ತಿಂಗಳಿನಲ್ಲಿ ಆಚಾತುರ್ಯದಿಂದ ಪ್ರಕಟವಾಗಬಹುದು. ಒಂದು ಕಡೆ ಕಳಿಸಿದ ಕವನ ಬಹಳಕಾಲದವರೆಗೆ ಪ್ರಕಟವಾಗದಿದ್ದಾಗ, ಅದೇ ಕವನವನ್ನು ಬೇರೆ ಪತ್ರಿಕೆಗೆ ಕಳುಹಿಸಿದ ಸಂದರ್ಭದಲ್ಲಿ ಎರಡೂ ಕಡೆ ಒಮ್ಮೆಲೆ ಆ ಕವನ ಪ್ರಕಟವಾಗುವ ಸಂಭವವಿರುತ್ತದೆ. ಅದು ಅರ್ಥಮಾಡಿಕೊಳ್ಳ ಬಹುದಾದ ಸಂಗತಿ. ಆದರೆ ಇದು ಹಾಗಲ್ಲ. ಮೂರು ವರ್ಷಗಳ ಹಿಂದೆ ಪ್ರಕಟವಾಗಿದ್ದ ಕವನವನ್ನೇ ಬೇರೆ ಪತ್ರಿಕೆಗೆ ಕಳಿಸುವುದು ದುರದೃಷ್ಟಕರ ಎನ್ನೋಣವೆ ?

ಆ ಗೀತಾ ಎಸ್.ವೆಂಕಟೇಶ, ಬೈಂದೂರ

ಕಸ್ತೂರಿ

ಕನ್ನಡ ಡೈಜೆಸ್ಟ್

ವರ್ಷ : ೪೨	ಸೆಪ್ಟೆಂಬರ್ ೧೯೯೭	ಸಂಚಿಕೆ : ೧

ಮಾತೃದೇವೋ ಭವ

ಸರ್ ಆಶುತೋಷ ಮುಖರ್ಜಿಯವರು ಕಲಕತ್ತಾ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಇದರೊಂದಿಗೆ ಕಲಕತ್ತಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರೂ ಆಗಿದ್ದಾಗ ನಡೆದ ಘಟನೆ. ಒಮ್ಮೆ ಆಗಿನ ಬ್ರಿಟಿಷ್ ಸರಕಾರ ಅವರನ್ನು ಇಂಗ್ಲಂಡಿಗೆ ಕಳಿಸಬೇಕೆಂದು ನಿರ್ಧರಿಸಿತು. ವಿದೇಶ ಪ್ರವಾಸದ ಎಲ್ಲ ವೆಚ್ಚವನ್ನೂ ಸರಕಾರವೇ ವಹಿಸಿಕೊಂಡಿತ್ತು. ಅಲ್ಲದೆ ಆಶುತೋಷ ಮುಖರ್ಜಿಯವರು ಕೂಡ ಹೋಗಲು ಒಪ್ಪಿದ್ದರು. ಆದರೆ ಅವರ ತಾಯಿ ಧಾರ್ಮಿಕ ವಿಚಾರದವಳಾಗಿದ್ದರಿಂದ ವಿದೇಶಕ್ಕೆ ಹೋಗಲು ಒಪ್ಪಿಗೆಯನ್ನು ಕೊಡಲಿಲ್ಲ.

ತಾಯಿಯ ಆಜ್ಞೆ ಸರ್ವಶ್ರೇಷ್ಠವೆಂದು ಬಗೆದ ಆಶುತೋಷರು "ನನ್ನ ತಾಯಿ ವಿದೇಶಕ್ಕೆ ಹೋಗಲು ನನಗೆ ಒಪ್ಪಿಗೆ ನೀಡಿಲ್ಲ. ಆದ್ದರಿಂದ ನಾನು ವಿದೇಶಕ್ಕೆ ಹೋಗಲಾರೆ," ಎಂದು ಸರಕಾರಕ್ಕೆ ಪತ್ರ ಬರೆದರು. ಅವರ ಪತ್ರವನ್ನೋದಿ ವೈಸ್‌ರಾಯ್ ಲಾರ್ಡ್ ಕರ್ಜನ್ ಕೋಪದಿಂದ ಕೆಂಡವಾದರು. ಅವರು ಕೂಡಲೇ ಆಶುತೋಷ ಮುಖರ್ಜಿಯವರನ್ನು ಕರೆದು, "ನೋಡಿ, ನಿಮ್ಮ ತಾಯಿಗೆ ಹೇಳಿರಿ. ಭಾರತದ ವೈಸ್‌ರಾಯರು ಅವರ ಮಗನನ್ನು ವಿದೇಶಕ್ಕೆ ಹೋಗಲು ಆದೇಶ ನೀಡಿದ್ದಾರೆ," ಎಂದು ಹೇಳಿದರು.

ಒಂದು ರೀತಿಯಲ್ಲಿ ಸರ್ವಾಧಿಕಾರಿಯೆ ಆಗಿದ್ದ ವೈಸ್‌ರಾಯರ ಆದೇಶವನ್ನು ನಿರಾಕರಿಸುವುದು ಸರಳವಾಗಿರಲಿಲ್ಲ. ಇದಲ್ಲದೆ ಕರ್ಜನ್ ಕಠೋರ ಸ್ವಭಾವದವರಾಗಿದ್ದರು. ಶೀಘ್ರಕೋಪಿಯೂ ಆಗಿದ್ದರು. ದೊಡ್ಡ ದೊಡ್ಡ ರಾಜಮಹಾರಾಜರೂ ಅವರಿಗೆ ಹೆದರುತ್ತಿದ್ದರು. ಆದರೆ ಸರ್ ಆಶುತೋಷ ಮುಖರ್ಜಿಯವರು ಸ್ವಲ್ಪವೂ ವಿಚಲಿತರಾಗಲಿಲ್ಲ. ಅವರು ತಮ್ಮ ತಾಯಿಯ ಆಜ್ಞೆಯನ್ನು ಉಲ್ಲಂಘಿಸಲು ಸುತಾರಾಂ ಸಿದ್ಧರಿರಲಿಲ್ಲ. "ಮಾತೃದೇವೋಭವ ಎನ್ನುವುದು ನಮ್ಮ ಪರಂಪರೆ ಮತ್ತು ಸಂಸ್ಕೃತಿ. ಆದ್ದರಿಂದ ಈ ವಿಷಯದಲ್ಲಿ ತಾವು ಯಾವುದೇ ಪ್ರಕಾರದ ಒತ್ತಾಯ ಮಾಡಬೇಡಿ," ಎಂದು ಅವರು ಕರ್ಜನ್ನರಿಗೆ ಅವರಿಗೆ ಖಡಾಖಂಡಿತವಾಗಿ ಹೇಳಿದರು.

ಅವರ ದೃಢ ಸಂಕಲ್ಪ ಮತ್ತು ಮಾತೃಭಕ್ತಿಯನ್ನು ನೋಡಿ ಲಾರ್ಡ್ ಕರ್ಜನ್‌ರ ಆಕ್ರೋಶ ಶಾಂತವಾಯಿತು.

• ವೆಂಕಟೇಶ ಗಂಗಾವತಿ

ಪ್ರವಾಸಿಗರ ಸ್ವರ್ಗ- ಸೆಷಲ್ಸ್

⊙ ವನಮಾಲಾ ರಂಗನಾಥರಾವ್

ಪ್ರಪಂಚದ ಯಾವೆಡೆಯಲ್ಲಿಯೂ ಕಾಣಸಿಕ್ಕದ ಅವಳಿ ತೆಂಗಿನಕಾಯಿ, ಬಂಡೆಗಾತ್ರದ ಆಮೆಗಳು, ಜಗತ್ತಿನಲ್ಲಿಯೇ ಅತಿಚಿಕ್ಕದಾದ ಕಪ್ಪೆ, ಆರೇಳು ಮಹಡಿಗಳೆತ್ತರದ ಎಲೆಗಳಿರುವ ತಾಳೆಗಿಡ, ತನ್ನ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಅರಳಿ ಅಳಿಯುವ, ಅರಳಿದ ಹೂಗುಚ್ಛದಲ್ಲಿ ಕೋಟಿ ಹೂಗಳನ್ನು ಹೊಂದಿರುವ ಗಿಡ, ಕೀಟಭಕ್ಷಕ ಕುಡಿಕೆ ಹೂವಿನ ಗಿಡ, ಅಗಾಧವಾದ ವನಸಿರಿ, ಅಪೂರ್ವ ಪಕ್ಷಿಸಂಕುಲ, ಅಪರೂಪದ ಕಡಲಜೀವಿಗಳು ಇರುವ ತಾಣ.

ನೆಲ, ಮುಗಿಲು, ಕಡಲುಗಳಲ್ಲಿ ಅದ್ಭುತಗಳನ್ನು ಸೂರೆಯಾಗಿಸುವ ಸ್ಥಳ. ಭೂದೇವಿಯ ಸಿರಿಮೊಗಕ್ಕೆ ದೃಷ್ಟಿಯಾಗದಿರಲೆಂದು ರವಿಯು ಮುಂಜಾನೆ, ಸಂಜೆ ಓಕುಳಿಯ ಕದಲಾರತಿಯನ್ನು ಎತ್ತುವ ಅನುಪಮ ತಾಣ. ಪಚ್ಚೆ, ನೀಲ, ವಜ್ರಗಳ ಕಾಂತಿಯನ್ನು ಮುಕ್ಕಳಿಸುತ್ತ, ಹೊತ್ತೇರಿದಂತೆ ಕಾಮನಬಿಲ್ಲಿನ ಬಣ್ಣವನ್ನು ಪಸರಿಸುತ್ತ, ಶುಭ್ರಶ್ವೇತವರ್ಣದ ಮರಳಿನೊಂದಿಗೆ ಸ್ಪರ್ಧಿಸುತ್ತ, ಚೇತೋಹಾರಿಯಾದ ಸೌಂದರ್ಯವನ್ನು ಪ್ರಕೃತಿಯ ಆರಾಧಕರಿಗೆ ಉಣಬಡಿಸುವ ಸಾಗರವಿರುವ ಅಪೂರ್ವ ಸ್ಥಳ.

ಇದೇ 'ಸೆಷಲ್ಸ್' ದ್ವೀಪಸಮೂಹ. ಭೂಮಧ್ಯರೇಖೆಯ ದಕ್ಷಿಣಕ್ಕೆ ನಾಲ್ಕು ಡಿಗ್ರಿ ಕೆಳಗೆ, ಭಾರತ- ಆಫ್ರಿಕದ ತೀರಗಳಿಂದ ಒಂದು ಸಾವಿರ ಮೈಲಿ ದೂರವಿರುವ ಪ್ರವಾಸಿಗರ ಸ್ವರ್ಗ.

ಒಂದಾನೊಂದು ಕಾಲದಲ್ಲಿ ಇಡಿಯಾಗಿದ್ದ ಭೂಮಂಡಲವು, ಭೂಮಿಯ ಕೆಳಗಿನ ಶಿಲೆಗಳ ಪದರುಗಳು ಸರಿದು ಖಂಡಖಂಡಗಳಾಗಿ ಪಸರಿಸಿ ಹೋದಾಗ, ಕೆಲವು ತುಣುಕುಗಳು ಹಿಂದೂಮಹಾಸಾಗರದ ಒಂದೆಡೆ ಉಳಿದವು. ಅದೇ 'ಸೆಷಲ್ಸ್' ದ್ವೀಪಗಳು. ಪುರಾತನಕಾಲದ 'ಗೊಂಡ್ವಾನಾ' ಪ್ರದೇಶವೆಂದು ಈ ನಡುಗಡ್ಡೆಗಳು ವಿಜ್ಞಾನಿಗಳಿಂದ ಗುರುತಿಸಲ್ಪಡುತ್ತವೆ. ವಿಶಾಲಸಾಗರದ ಮೂಲೆಯಲ್ಲಿ ಉಳಿದ ಈ ದ್ವೀಪಗಳು ತಮ್ಮದೇ ಆದ ಪ್ರಾಣಿ, ಪಕ್ಷಿ, ಮರಗಿಡಗಳ ವೈಶಿಷ್ಟ್ಯವನ್ನು ಉಳಿಸಿಕೊಂಡಿವೆ.

ಈ ದ್ವೀಪಗುಚ್ಛದಲ್ಲಿ ಒಟ್ಟು ನೂರಾಹದಿನೈದು ದ್ವೀಪಗಳಿವೆ. ಇಪ್ಪತ್ತೇಳು ಕಿಲೋಮೀಟರು ಉದ್ದ ಹಾಗೂ ಆರು ಕಿಲೋಮೀಟರು ಅಗಲವಿರುವ 'ಮಾಹೆ' ದ್ವೀಪವೇ ಉಳಿದೆಲ್ಲಕ್ಕಂತ ದೊಡ್ಡದು. ಪ್ರ್ಯಾಂಲೆ, ಕ್ಯೂರಿಯಾ, ಸಿಲೌಟ್, ಲಾಡಿಗ್, ಅಲ್‌ಡಾಬ್ರಾ, ಫ್ರಿಗೇಟ್, ಪಕ್ಷಿದ್ವೀಪ ಮುಂತಾದ ಕೆಲವು ದ್ವೀಪಗಳನ್ನು ಬಿಟ್ಟರೆ ಹಲವು ಚಿಕ್ಕಪುಟ್ಟ ನಡುಗಡ್ಡೆಗಳು ವಾಸಯೋಗ್ಯವಾಗಿಲ್ಲ.

ಪ್ರ್ಯಾಂಲೆ ಮತ್ತು ಕ್ಯೂರಿಯೋಸ್ ದ್ವೀಪಗಳ ಗಹನವಾದ ಅರಣ್ಯಗಳಲ್ಲಿ ತಾನೇ ತಾನಾಗಿ ಬೆಳೆಯುವ ಅವಳಿ ತೆಂಗಿನಕಾಯಿ ಮರ ಪ್ರಪಂಚದ ವಿಸ್ಮಯಗಳಲ್ಲೊಂದು. ಮೊಳಕೆಯೊಡೆಯಲು ಮೂರುವರ್ಷ, ಗಿಡ ಬೆಳೆದು ಕಾಯಿ ಬಿಡಲು ಇಪ್ಪತ್ತೈದು ವರ್ಷ, ಬಿಟ್ಟ ಕಾಯಿ ಬಲಿತು ತಿನ್ನುವಂತಾಗಲು ಮತ್ತೆ ಏಳು ವರ್ಷ ತೆಗೆದುಕೊಳ್ಳುವ ಈ ಗಿಡ ಪೂರ್ಣವಾಗಿ ಬೆಳೆದು ನಿಲ್ಲಲು ಎಪ್ಪತ್ತೈದು ವರ್ಷ ಹಿಡಿಯುತ್ತದೆ. "ಕೊಕೊ ಡಿ ಮೆ" ಎಂದು ಕರೆಯಲ್ಪಡುವ ಈ ಕಾಯಿಯ ರುಚಿಯಾದ ಕೊಬ್ಬರಿ ಮತ್ತು ಎಳೆನೀರನ್ನು ಸವಿದೇ ತಿಳಿಯಬೇಕು.

ನೂರಾರು ಕಿಲೋ ತೂಗುವ, ನೂರಾರು ವರ್ಷ ಬಾಳುವ ನೆಲದಾಮೆಗಳು ಸೆಷಲ್ಸ್‌ನ

ಅನೇಕ ದ್ವೀಪಗಳಲ್ಲಿವೆ. 'ಮಾಹೆ'ಯ ನಿವಾಸಿಗಳ ಮನೆಮನೆಗಳಲ್ಲಿ, ಹೋಟೆಲ್ ಆವರಣಗಳಲ್ಲಿ ಸಾಕು ಪ್ರಾಣಿಗಳಾಗಿ ಹಾಯಾಗಿ ವಿಹರಿಸುವುದನ್ನು ನೋಡುವುದೇ ಒಂದು ಸೊಗಸು. 'ಆಲ್‌ಡಾಬ್ರಾ' ದ್ವೀಪದಲ್ಲಿ ಆ ಆಮೆಗಳ ಸಂಖ್ಯೆ ಒಂದೂವರೆ ಲಕ್ಷ ಇದೆಯಂತೆ. ಇದೇ ದ್ವೀಪವಾಸಿಯಾದ 'ಎಸ್ಮರಾಲ್ಡಾ' ಎಂಬ ನೆಲದಾಮೆಯ ತೂಕ ಮೂನ್ನೂರನಾಲ್ಕು ಕಿಲೊಗ್ರಾಮ್ ಇದ್ದು ಪ್ರಪಂಚದಲ್ಲಿಯೇ ಇದಕ್ಕೆ ಸಮಾನವಾದ ತೂಕದ ಪ್ರಾಣಿ ಇಲ್ಲವೆಂದು ಹೇಳುತ್ತಾರೆ. ಫ್ರಿಗೇಟ್ ದ್ವೀಪದಲ್ಲಿರುವ ಒಂದು ಜಾತಿಯ



ಹವಳದ ದಂಡೆಗಳ ಮಧ್ಯೆ ಮತ್ಸ್ಯ ವಿಹಾರ

ಆಮೆಯನ್ನು ಎತ್ತಿ ತೂಗಲೂ ಸಾಧ್ಯವಿಲ್ಲವಂತೆ.

ಪೂರ್ಣ ಪ್ರಮಾಣದಲ್ಲಿ ಬೆಳೆದ, ಬಿಚ್ಚಹಸಿರುಬಣ್ಣದ, ಬರಿ ಹುಣಸೆಬೀಜದಷ್ಟು ಗಾತ್ರದ ಕಪ್ಪೆಯು ಕಣ್ಣಿಗೆ ಬೀಳುವುದೇ ಕಷ್ಟ. ಆದರೆ 'ಮಾಹೆ'ಯ ದಟ್ಟ ಅರಣ್ಯದಲ್ಲಿ ಧಾರಾಕಾರವಾಗಿ ಮಳೆ ಸುರಿಯುತ್ತಿರುವಾಗ, ಅದರ ಸೀಳುದನಿ ಸುತ್ತಲ ವಾತಾವರಣವನ್ನು ತುಂಬಿ ಅದರ ಇರವಿನ ಅರಿವು ಉಂಟಾಗುತ್ತದೆ.

'ರಫಿಯಾ' ಎಂಬ ಹೆಸರಿನ ತಾಳೆಗಿಡ 'ಸೆಷಲ್ಸ್'ನ ಹಲವಾರು ದ್ವೀಪಗಳಲ್ಲಿ ಬೆಳೆಯುತ್ತದೆ. ಈ ಗಿಡದ ಎಲೆಗಳು ಸುಮಾರು ಇಪ್ಪತ್ತು ಮೀಟರ್ ಉದ್ದ. ಈ ದೈತ್ಯವೃಕ್ಷವನ್ನು ನೋಡಿದ ಹುಲುಮಾನವ ಸೃಷ್ಟಿಯ ಅಗಾಧತೆಗೆ ತಲೆಬಾಗುತ್ತಾನೆ.

ಒಡಲಲ್ಲಿ ಮಧುವನ್ನು ತುಂಬಿಕೊಂಡು, ಕ್ರಿಮಿಕೀಟಗಳನ್ನು ಆಕರ್ಷಿಸಿ, ಬಂದು ಕುಳಿತೊಡನೆ ಸ್ವಾಹಾ ಮಾಡುವ, ಮುಚ್ಚಳವಿರುವ ಕುಡಿಕೆಯಂತೆ ಇರುವ ಕೀಟಭಕ್ಷಕ ಹೂವಿನಗಿಡ 'ಮಾಹೆ'ಯ ಕಾಡಿನಲ್ಲಿ ಬೆಳೆಯುತ್ತದೆ.

ಪ್ರ್ಯಾಂಲೆ, ಮಾಹೆ, ಆಲ್‌ಡಾಬ್ರಾ ದ್ವೀಪಗಳ ದೈತ್ಯಾಕಾರದ ಬಂಡೆಗಳನ್ನು ಧಿಕ್ಕರಿಸಿ ಬೆಳೆದ ಕಾನನ ಎಂಥವರನ್ನೂ ಬೆರಗುಗೊಳಿಸುತ್ತದೆ.

ಬಲಿತ ತೆಂಗಿನಕಾಯಿ ಬಂಡೆಗಳ ಸಂದಿಯಲ್ಲಿ ಮೊಳಕೆಯೊಡೆದು ವಾಮನನಂತೆ ಒಂದೇ ಹೆಜ್ಜೆಯೂರಿ, ತ್ರಿವಿಕ್ರಮನಂತೆ ಆಕಾಶದೆತ್ತರ ಬೆಳೆದು ಪೂರ್ಣಫಲಗಳನ್ನು ಸೃಷ್ಟಿಕರ್ತನಿಗೆ ವಿನಯದಿಂದ ಬಾಗಿ ಸಮರ್ಪಿಸುವಂತೆ ತೋರುತ್ತದೆ. ತಾಳೆಗಿಡಗಳು ಕೊಡೆಯಂತೆ ರಕ್ಷಣೆ ಕೊಡುವುದರಿಂದ ಕಾಡಿನಲ್ಲಿ ನಡೆಯುವಾಗ ಜೋರಾಗಿ ಮಳೆ ಬೀಳುತ್ತಿದ್ದರೂ ಮೈ ನೆನೆಯುವುದಿಲ್ಲ. ಬಗೆಬಗೆಯ ಪೊದೆ, ಬಳ್ಳಿಗಳು, ಬಣ್ಣಬಣ್ಣದ ಸೀತಾಳೆ ಹೂ, ನೂರಾರು ಅಡಿ ಎತ್ತರದ ವೃಕ್ಷಗಳು, ಪರ್ವತಗಳಿಂದ ಹರಿದುಬರುತ್ತಿರುವ ತಿಳಿನೀರ ಝುರಿಗಳು ಮನಕ್ಕೆ ಮುದವನ್ನುಂಟು ಮಾಡುತ್ತವೆ. ಇಲ್ಲಿನ ಅರಣ್ಯಗಳಲ್ಲಿ ಸದಾ ರುದ್ರ ಗಂಭೀರ ಮೌನ ಕವಿದಿರುತ್ತದೆ. ಕಾಡಿನ ಬೆಡಗನ್ನು ನೋಡುತ್ತಿದ್ದಂತೆ ನಾವು ಆಶ್ಚರ್ಯ ಆನಂದಾನುಭೂತಿಗಳಿಂದ ಮೂಕರಾಗುತ್ತೇವೆ.

ಕಪ್ಪುಗಿಣಿ, ಮ್ಯಾಗ್‌ಪೈ, ರಾಬಿನ್ ಎಂಬ ಅಪರೂಪದ ಹಕ್ಕಿ, ವಿಶಿಷ್ಟಜಾತಿಗೆ ಸೇರಿದ ಗೂಬೆ, ಹಾರಲಾರದ 'ರೈಲ್' ಎಂಬ ಹಕ್ಕಿ, ಮುಷ್ಟಿಗಾತ್ರದ ಬಸವನಹುಳು ಇವಲ್ಲದೆ ಲೆಕ್ಕಕ್ಕೆ ಸಿಕ್ಕದ ನಾನಾ ಜಾತಿಯ ಪ್ರಾಣಿ, ಹಲ್ಲಿಗಳು, ವಿಷಪೂರಿತ ಹಾವು ಇವನ್ನೆಲ್ಲಾ ಇಲ್ಲಿ ನೋಡಬಹುದು.

ರಾಜಹಂಸ, ಕ್ರೌಂಚಪಕ್ಷಿಗಳು ಈ ದ್ವೀಪಗಳಿಗೆ ಭೇಟಿ ಕೊಡುತ್ತವೆ. ಕಸಿನ್ ಪಕ್ಷಿ, ಹಲವು ಜಾತಿಯ ಹಕ್ಕಿಗಳು, ಉತ್ತರಧ್ರುವದಲ್ಲಿ ಚಳಿಗಾಲ ಆರಂಭವಾದೊಡನೆ ಹಿಂಡುಗಟ್ಟಲೆ ಬರುತ್ತವೆ. ಇಲ್ಲಿನ ಸುರಕ್ಷಿತ ತಾಣಗಳಲ್ಲಿ ಮೊಟ್ಟೆಯಿಟ್ಟು ಮರಿ ಮಾಡಿಕೊಂಡು ಹೋಗುತ್ತವೆ. ಅವುಗಳಿಗೆ ಬೇಕಾದ ಆಹಾರ ಇಲ್ಲಿ ಸಮೃದ್ಧವಾಗಿದೆ. ಪಕ್ಷಿವೀಕ್ಷಕರಿಗೆ ಇದು ಆದರ್ಶಪ್ರಾಯವಾದ ಸ್ಥಳ. ಅಲ್ಲಿ ನಾವಿದ್ದಾಗ 'ಮಾಹೆ' ದ್ವೀಪದಲ್ಲಿ ಹಗಲು ಹನ್ನೆರಡರ ಹೊತ್ತಿನಲ್ಲೂ ಸಾವಿರಾರು ಪಕ್ಷಿಗಳ ಕಲರವ ಕೇಳಿಬರುತ್ತಿತ್ತು. ಮನುಷ್ಯರ ಭಯವಿಲ್ಲದ ಹಲವು ಪಕ್ಷಿಗಳು ಬಂದವರಾರೆಂದು ನೋಡಲು ಕುಪ್ಪಳಿಸುತ್ತ ಹತ್ತಿರ ಬರುತ್ತಿದ್ದವು. ಅದನ್ನು ನೋಡುತ್ತಿದ್ದಂತೆ ನನ್ನ ಪುಟಾಣಿ ಮೊಮ್ಮಕ್ಕಳ ಹಿಗ್ಗು ಮೇರೆ ಮೀರುತ್ತಿತ್ತು.

ದ್ವೀಪಸಮೂಹದ ಸುತ್ತಲ ಕಡಲು ಹೆಚ್ಚು ಆಳವಿಲ್ಲದ ಖಾರಿ. ಮೈಲುಗಟ್ಟಲೆ ಹವಳದ ದಂಡೆಗಳಿಂದ ಆವೃತವಾಗಿದೆ. ಮಾನವನ ದುರಾಶೆಯ ತುಳಿತಕ್ಕೆ ಸಿಕ್ಕು ಈ ಜಾಗ ಕಲುಷಿತವಾಗಿಲ್ಲ.

ಜಲದೇವತೆಯ ನಂದನವನದಂತೆ ಇರುವ ಈ ಹವಳದ ದಂಡೆಗಳಲ್ಲಿ ಅಸಂಖ್ಯಾತ ಸೂಕ್ಷ್ಮ ಜೀವಿಗಳು ವಾಸಿಸುತ್ತವೆ. ಅವುಗಳೇ ಈ 'ತೋಟದ' ಶಿಲ್ಪಿಗಳೂ, ಮಾಲಿಗಳೂ, ಮಾಲೀಕರೂ ಸಹ. ಇವುಗಳ ಮಧ್ಯೆ ವಿಹರಿಸುವ ಮೀನುಗಳ ವೈವಿಧ್ಯ ವರ್ಣಿಸಲಸದಳ. ಸುಂದರ ಹೂಬನವನ್ನು ನೆನಪಿಸುವ ಬಗೆಬಗೆಯ ಬಣ್ಣದ 'ಅನಿಮೋನ್'ಗಳೆಂಬ ಸಮುದ್ರಜೀವಿಗಳು, ಗಿಣಿಯಂತೆ ಇರುವ ಮೀನು, ಮುಖಕ್ಕೆ ನಾಮವಿರುವ ಕೋಡಂಗಿಮೀನು, ನಕ್ಷತ್ರಮೀನು, ಕಡುನೀಲಿ, ಕೆಂಪು, ಹಳದಿ, ಕಿತ್ತಳೆಬಣ್ಣದ



ವಿಪರ್ಯಾಸ

ಅವ,
'ಮದ್ಯಪಾನದ ದುಷ್ಪರಿಣಾಮಗಳು'
ಎಂಬ ಪುಸ್ತಕವೊಂದು ಬರೆದ.
ಬಂದ ಹಣದಿಂದ
'ಸೆರೆದಂಗಡಿ' ಯೊಂದ ತೆರೆದ.

-ಭಾವುಕ

ಮೀನುಗಳು, ಯಾವ ಕುಶಲ ಕಲಾವಿದನ ಕೈಚಳಕಕ್ಕೂ ಎಟುಕದ ಚಿತ್ರವಿಚಿತ್ರ ಸಿಂಪು, ಶಂಖ, ಕವಡೆಗಳು ಇಲ್ಲಿವೆ. ಸೌತೆಕಾಯಿಯನ್ನು ಹೋಲುವ ಮೀನು, 'ಷಾರ್ಕ್' ಜಾತಿಗೆ ಸೇರಿದರೂ ಅಪಾಯಕರವಲ್ಲದ ಹನ್ನೆರಡು ಮೀಟರ್ ಉದ್ದದ ಮೀನು, ಎರಡೂವರೆ ಮೀಟರ್ ಉದ್ದವಿದ್ದು ಎಂಟುನೂರಾ ಅರವತ್ತೈದು ಕಿಲೊಗ್ರಾಂ ತೂಗುವ ಕಡಲಾಮೆ, ಅಷ್ಟಪದಿ, ಏಡಿ, ಊಹಿಸಲು ಸಾಧ್ಯವಿಲ್ಲದ ಆಕಾರದ ಸಮುದ್ರಸಸ್ಯಗಳೂ ಇಲ್ಲಿವೆ.

ಆಧುನಿಕ ಸಲಕರಣೆಗಳಿಂದ ಸಜ್ಜಿತರಾಗಿ ಸಮುದ್ರದಲ್ಲಿ ಮುಳುಗಿ ವೀಕ್ಷಿಸುವ ಸಾಹಸಿಗಳ ಕಣ್ಣಿಗೆ ರಸದೌತಣ. ಮಾಹೆ, ಪ್ರ್ಯಾಂಲೆ, ಲಾಡಿಗ್ ಮೊದಲಾದ ದ್ವೀಪಗಳ ಶುಭ್ರ, ಶಾಂತ, ನಿರ್ಜನ, ಚೆಲುವಿನ ಹಲವಾರು ಸಮುದ್ರತೀರಗಳು ಪ್ರವಾಸಿಗರನ್ನು ವರ್ಷವಿಡೀ ಆಕರ್ಷಿಸುತ್ತವೆ. ಕಳೆದವರ್ಷ ನಡೆದ ವಿಶ್ವಸುಂದರಿಯರ ಈಜುಡುಗೆಯ ಸ್ಪರ್ಧೆ ನಡೆದದ್ದು ಮಾಹೆಯ ಸುಪ್ರಸಿದ್ಧ 'ಬೊಂವ್ರಾಲೊ' ಸಮುದ್ರತೀರದಲ್ಲಿ.

ಸಿಂದಬಾದನ ಸಾಹಸಗಾಥೆಯಲ್ಲಿ ಬರುವ ದ್ವೀಪಗಳ ಎಲ್ಲಾ ಲಕ್ಷಣಗಳನ್ನೂ ಹೊಂದಿರುವ 'ಸೆಷಲ್ಸ್' ಬಹುಕಾಲ ಹೊರಜಗತ್ತಿಗೆ ಅಪರಿಚಿತವಾಗಿಯೇ ಇತ್ತು. ಕೇವಲ ಇನ್ನೂರೈವತ್ತು ವರ್ಷಗಳ ಹಿಂದೆ ಕಡಲುಗಳ್ಳರ ಆಶ್ರಯಸ್ಥಾನವಾಗಿತ್ತು. ಅವರು ತಮ್ಮ ಹಡಗುಗಳಿಗೆ ಅಗತ್ಯವಾದ ಮರಮುಟ್ಟುಗಳು, ಸಿಹಿನೀರು, ಮೀನು, ಮಾಂಸಗಳಿಗಾಗಿ ಇಲ್ಲಿ ಬೀಡು ಬಿಡುತ್ತಿದ್ದರು. ಅಷ್ಟೇ ಅಲ್ಲದೆ, ತಾವು ಕೊಳ್ಳೆ ಹೊಡೆದ ಅಗಾಧ ಸಂಪತ್ತನ್ನು ಬಚ್ಚಿಡಲೂ ಈ ದ್ವೀಪಗಳು ಅತ್ಯಂತ ಅನುಕೂಲಕರವಾಗಿದ್ದವು. ಈ ಕಡಲ್ಗಳ್ಳರು ಹೂತಿದ್ದಾರೆ ಎನ್ನಲಾದ ನಿಧಿಯನ್ನು ಶೋಧಿಸಲು ಇಂದಿಗೂ ಪ್ರಯತ್ನಗಳು ನಡೆಯುತ್ತಾ ಇವೆ.

ಹದಿನೆಂಟನೆಯ ಶತಮಾನದಲ್ಲಿ ಫ್ರೆಂಚರು ಈ ದ್ವೀಪಗಳನ್ನು ಕೈವಶ ಮಾಡಿಕೊಂಡರು. ಅನಂತರ ನಡೆದ ಬ್ರಿಟಿಷರೊಂದಿಗಿನ ಮೇಲಾಟದಲ್ಲಿ ಹಲವು ಬಾರಿ ಕೈ ಬದಲಾಯಿಸಿ ಕೊನೆಗೆ ೧೭೭೦ರಲ್ಲಿ ಈ ದ್ವೀಪ ಸಮೂಹ ಬ್ರಿಟಿಷರ ವಸಾಹತಾಯಿತು.

ಸೂರ್ಯ ಅಸ್ತಮಿಸದ ಸಾಮ್ರಾಜ್ಯವೆಂದು ಖ್ಯಾತಿ ಗಳಿಸಿದ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಬಿರುಕುಗಳು ಕಾಣಿಸತೊಡಗಿ ಒಂದೊಂದೇ ವಸಾಹತುಗಳು ಕೈಬಿಡತೊಡಗಿದ್ದು ಇಪ್ಪತ್ತನೇ ಶತಮಾನದಲ್ಲಿ. ಹಲವು ಸಾಹಸಿ, ಸ್ವಾತಂತ್ರ್ಯಪ್ರೇಮಿಗಳ ಹೋರಾಟದ ಫಲವಾಗಿ ೧೯೭೬ರಲ್ಲಿ 'ಸೆಷಲ್ಸ್' ಸ್ವತಂತ್ರವಾಯಿತು.

* * *

ಈ ದ್ವೀಪಗಳಲ್ಲಿ ವಾಸಿಸುವ 'ಸೆಷಲೋಯಿಸ್' ಎಂದು ಕರೆಯಲ್ಪಡುವ ಜನ ಯಾರು ? ಎಲ್ಲಿಂದ ಬಂದವರು ?

ಅಪಾರವಾದ ಅರಣ್ಯಸಂಪತ್ತಿರುವ ಈ ದ್ವೀಪಗಳು ಹೆಚ್ಚು ಕಡಿಮೆ ನಿರ್ಜನವಾಗಿಯೇ ಉಳಿದಿದ್ದವು. ಫ್ರೆಂಚರು ಈ ದ್ವೀಪಗಳಲ್ಲಿ ಕಾಲಿಟ್ಟನಂತರ ಭಾರತದೊಂದಿಗಿನ ಮಸಾಲೆಪದಾರ್ಥಗಳ ವ್ಯಾಪಾರದ ಅವಲಂಬನವನ್ನು ತಪ್ಪಿಸಿಕೊಳ್ಳಲು ದಾಲ್ಚಿನ್ನಿ, ಲವಂಗ ಹಾಗೂ ಜಾಜಿಕಾಯಿಗಳನ್ನು ಬೆಳೆಯತೊಡಗಿದರು. ಆಗ ದೊಡ್ಡ

ಈ ಶತಮಾನದ ಪ್ರಾರಂಭದಲ್ಲಿ ಅಬಿಸೀನಿಯಾ (ಈಗಿನ ಇಥಿಯೋಪಿಯಾ)ವನ್ನಾಳುತ್ತಿದ್ದ ಮೆನೆಲೆಕ್ ದೊರೆಗೆ ಮರಣದಂಡನೆಗೆ ಒಳಗಾದವರನ್ನು ಸೌಮ್ಯರೀತಿಯಿಂದ ನಡೆಸಿಕೊಳ್ಳಬೇಕೆಂಬ ವಿಚಾರ ಬಂದು ಅಮೆರಿಕದಿಂದ ಇಲೆಕ್ಟ್ರಿಕ್ ಚೇರ್ ತರಿಸಿಕೊಂಡ. ಆದರೆ ದೇಶದಲ್ಲಿ ವಿದ್ಯುತ್ತಿನ ಉತ್ಪಾದನೆಯಾಗುತ್ತಿದ್ದರೆ ತಾನೆ ಇಲೆಕ್ಟ್ರಿಕ್ ಚೇರ್ ಉಪಯೋಗಕ್ಕೆ ಬರುವುದು! ಅಷ್ಟು ಮುತುವರ್ಜಿವಹಿಸಿ ಪರದೇಶದಿಂದ ತರಿಸಿದ್ದನ್ನು ಹಾಗೆಯೆ ಬಿಡುವಂತೆಯೂ ಇಲ್ಲ. ದೊರೆ ಆ ಕುರಿತು ಬಹಳವಾಗಿ ಯೋಜಿಸಿ ಕೊನೆಗೆ ಅದನ್ನು ಸಿಂಹಾಸನವನ್ನಾಗಿ ಬಳಸುವುದೆಂದು ನಿರ್ಧರಿಸಿದ!

ದೊಡ್ಡ ಪ್ಲಾಂಟೇಷನ್ನುಗಳಲ್ಲಿ ದುಡಿಯಲು ಕೂಲಿಯಾಳುಗಳ ಅಗತ್ಯವಿತ್ತು.

೧೮೩೪ರಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ 'ಗುಲಾಮಗಿರಿ ನಿಷೇಧ' ದ ಕಾಯಿದೆ ಪಾಸಾಯಿತು. ಆದರೂ ಸಹ ಅರಬ್ ಮತ್ತು ಡಚ್ ವ್ಯಾಪಾರಿಗಳು ಕಾನೂನನ್ನು ಕಡೆಗಣಿಸಿ ಕಳ್ಳತನದಿಂದ ಆಫ್ರಿಕದ ನಾನಾಭಾಗಗಳಿಂದ ಜನರನ್ನು ಹಡಗುಗಟ್ಟಲೆಯಲ್ಲಿ ತಂದು ಮಾರಾಟ ಮಾಡುತ್ತಿದ್ದರು. ಅದನ್ನು ತಡೆಯುವ ಸಲುವಾಗಿ ನಿಯುಕ್ತವಾಗಿದ್ದ ಬ್ರಿಟಿಷ್ ನೌಕಾಪಡೆ ಗುಲಾಮರನ್ನು ಸಾಗಿಸುವ ಹಡಗುಗಳನ್ನು ಹಿಡಿದು, ಜನರನ್ನು ಮಾರಿಷಸ್, ಮಡಗಾಸ್ಕರ್ ದ್ವೀಪಗಳಲ್ಲಿ ಬಿಡುಗಡೆ ಮಾಡುತ್ತಿತ್ತು. 'ಸೆಷಲ್ಸ್' ನಡುಗಡ್ಡೆಗಳು ಬೆಳಕಿಗೆ ಬಂದನಂತರ ಸಾವಿರಾರು ಜನರನ್ನು ಇಲ್ಲಿಗೆ ತಂದುಬಿಡಲಾಯಿತು.

ಫ್ರೆಂಚ್, ಬ್ರಿಟಿಷ್ ಪ್ಲಾಂಟರುಗಳಿಗೆ ಈ ಜನರು ಬಂದದ್ದು ನಿಧಿ ಸಿಕ್ಕಂತಾಯಿತು. ಅವರನ್ನು ಹಗಲೂ ರಾತ್ರಿ ದುಡಿಸಿಕೊಂಡರು. ಸಾಧ್ಯವಿದ್ದ ಎಲ್ಲಾ ರೀತಿಯಿಂದಲೂ ಶೋಷಿಸಿದರು. ಕೈಗೊಂದು, ಕಾಲಿಗೊಂದು ಆಳನ್ನಿಟ್ಟುಕೊಂಡು ದರ್ಬಾರು ಮಾಡಿದರು. ತಮ್ಮ ಕಾಮತೃಷೆಯನ್ನು ಈ ಅಸಹಾಯಕ, ಅಮಾಯಕ ಜನರಲ್ಲಿ ತೀರಿಸಿಕೊಂಡರು. ಇಲ್ಲಿನ ಜನ ಫ್ರೆಂಚ್, ಬ್ರಿಟಿಷ್ ಪ್ಲಾಂಟರುಗಳು, ನಾವಿಕರು, ಆಫ್ರಿಕದ ಗುಲಾಮರು, ಅರಬ್, ಚೀನೀ, ಭಾರತೀಯ ವರ್ತಕರು ಇವರುಗಳಿಗೆ ಹುಟ್ಟಿದ ಮಿಶ್ರಜನಾಂಗ. ಅವರು ಬಿಳಿಚರ್ಮ, ಗುಂಗುರು ಕೂದಲಿನವರಾಗಿರಬಹುದು. ಇಲ್ಲವೆ, ಕಂದುಬಣ್ಣದ ಚರ್ಮ, ಹೊಂಗೂದಲಿನವರೂ ಆಗಿರಬಹುದು. ಒಟ್ಟಾರೆ ಹಲವು ಜನಾಂಗಗಳ ಸಮ್ಮಿಳನದ ಫಲ ಸೆಷಲೋಯಿಸ್ ಜನ.

ಈ ಜನರ ಎದ್ದುಕಾಣುವ ಗುಣವೆಂದರೆ ಜೀವನವನ್ನು ಹಗುರವಾಗಿ ತೆಗೆದುಕೊಳ್ಳುವುದು. ಯಾವಾಗಲೂ ನಗುನಗುತ್ತ ಹಾಯಾಗಿ ಇರುತ್ತಾರೆ. ಸ್ನೇಹಪರರು. ಫ್ರೆಂಚ್ ಭಾಷೆ, ಸಂಸ್ಕೃತಿಗಳ ಪ್ರಭಾವ ಇಲ್ಲಿ ಗಾಢವಾಗಿದೆ. ಇಂಗ್ಲಿಷ್, ಫ್ರೆಂಚ್, ಬುಡಕಟ್ಟಿನ ಭಾಷೆ ಇವೆಲ್ಲಾ ಸೇರಿದಂತಹ 'ಕ್ರಿಯೋಲ್' ಎಂಬ ಭಾಷೆಯನ್ನಾಡುತ್ತಾರೆ. ಹೆಚ್ಚಿನ ಜನರ ಧರ್ಮ 'ಕ್ಯಾಥೋಲಿಕ್'. ಆಫ್ರಿಕದ ಬುಡಕಟ್ಟಿನ ಧರ್ಮಗಳ ಪಳೆಯುಳಿಕೆಯಾಗಿ ಮಾಟ, ಮಂತ್ರ, ಕಣಿಕೇಳುವುದು ಇವೆಲ್ಲಾ ಉಂಟು. ಹಾಡು, ನೃತ್ಯ ಈ ಜನರ ಜೀವನಾಡಿ ಇದ್ದಂತೆ. ಸಂಜೆಯ ಹೊತ್ತು ಬೆಂಕಿಯ ಸುತ್ತ ಹಲವು ವಾದ್ಯಗಳೊಂದಿಗೆ ಹಾಡುತ್ತ, ಕುಣಿಯುತ್ತ ಸಂತೋಷವಾಗಿ ಕಾಲ ಕಳೆಯುತ್ತಾರೆ.



ಸೆಷಲ್ಸ್ ರಾಜಧಾನಿ ವಿಕ್ಟೋರಿಯದ ವಿಹಂಗಮ ನೋಟ

ಒಂದುಕಾಲದಲ್ಲಿ ತೆಂಗಿನಕಾಯಿ, ಎಣ್ಣೆ, ದಾಲ್ಚಿನ್ನಿ ಇವುಗಳನ್ನು ರಫ್ತು ಮಾಡುತ್ತಿದ್ದರು. ಪ್ರವಾಸೋದ್ಯಮ ಬೆಳೆದು ಆ ಮೂಲಕ ಆದಾಯ ಹೆಚ್ಚಿದುದರಿಂದ ಸರ್ಕಾರವು

ಮಕ್ಕಳು, ಯುವಕರು, ಮುದುಕರೆನ್ನದೆ ಎಲ್ಲರಿಗೂ ಸಾಕಷ್ಟು ಸಹಾಯಧನ ಕೊಡುತ್ತದೆ. ಇದರಿಂದಾಗಿ ಇಂದಿನ ಯುವಜನಾಂಗದಲ್ಲಿ ಸೋಮಾರಿತನ ಹೆಚ್ಚಿದೆ. ಬೆಳಗಾಗೆದ್ದು ಕೈಯಲ್ಲೊಂದು ಬೀರ್, ಕೋಕೊಕೋಲಾ ಅಥವಾ ಸ್ಪ್ರೈಟ್ ಬಾಟಲನ್ನು ಹಿಡಿದು ಅಲ್ಲಲ್ಲಿ ಕಟ್ಟೆ ಮೇಲೆ ಕುಳಿತು ಹರಟೆ ಹೊಡೆದು ಕಾಲ ಕಳೆಯುತ್ತಾರೆ. ತೆಂಗಿನಗಿಡ ಹತ್ತುವುದು ಕಷ್ಟವೆಂದು ಯಾರೂ ಕೀಳುವುದಿಲ್ಲ. ಅಲ್ಲಲ್ಲಿ ತೆಂಗಿನಕಾಯಿ ಬಿದ್ದು ಉರುಳಾಡುತ್ತಿರುತ್ತದೆ. ಬ್ರೆಡ್‌ಫ್ರುಟ್ ತಿನ್ನಲು ರುಚಿ. ದ್ವೀಪದಲ್ಲಿ ಎಲ್ಲೆಲ್ಲಿಯೂ ಬೆಳೆಯುತ್ತದೆ. ಆದರೆ ಮರ ಏರಿ ಕಷ್ಟಪಟ್ಟು ಕೊಯ್ಯುವರಾರು? ಯಾರಾದರೂ ಹತ್ತಿ ಕಿತ್ತು ಕೊಟ್ಟರೆ 'ಸೆಷಲ್ವಾ' ಯುವಕ 'ಥ್ಯಾಂಕ್ಸ್' ತಪ್ಪದೆ ಹೇಳಿ ತಿನ್ನುತ್ತಾನೆ.

ದ್ವೀಪಸಮೂಹದ ಒಟ್ಟು ಜನಸಂಖ್ಯೆ ೭೫,೦೦೦. ನಾಲ್ಕೋ ಆರೋ ಮನೆಗಳು ಇರುವ ಚಿಕ್ಕ ಪುಟ್ಟ ದ್ವೀಪಗಳೂ ಇಲ್ಲಿ ಇವೆ. ಹೆಚ್ಚಿನ ದ್ವೀಪಗಳಲ್ಲಿ ಕಗ್ಗಲ್ಲಬಂಡೆಗಳಿಂದ ಕೂಡಿದ ಬೆಟ್ಟಗಳಿರುವುದರಿಂದ ಭೂಮಿ ವ್ಯವಸಾಯಯೋಗ್ಯವಾಗಿಲ್ಲ. ರಸ್ತೆ ಅಂಕುಡೊಂಕಾಗಿ ಬೆಟ್ಟಗಳೊಂದಿಗೆ ಏರಿ ಸಮುದ್ರತೀರಕ್ಕೆ ಇಳಿಯುತ್ತದೆ. ಸಮತಟ್ಟಾದ ನೆಲ ಕಡಿಮೆ. ಇರುವ ಕಡಿಮೆ ಭೂಮಿಯಲ್ಲೇ ತೆಂಗಿನಕಾಯಿ, ದಾಲ್ಚಿನ್ನಿ, ಚಹ ಇವುಗಳನ್ನು ಬೆಳೆಯುತ್ತಾರೆ. ಮೀನುಗಾರಿಕೆ ಮತ್ತು ಪ್ರವಾಸೋದ್ಯಮ ಆದಾಯದ ಮುಖ್ಯ ಮೂಲಗಳು.

'ಸೆಷಲ್ಸ್' ಬ್ರಿಟಿಷರ ವಸಾಹತುವಾಗಿದ್ದಾಗ ಇಲ್ಲಿನ ಜನಗಳನ್ನು ದನಗಳಂತೆ ದುಡಿಸಿಕೊಂಡರು. ಇವರ ಕಷ್ಟ, ದುಃಖ, ಬಡತನ, ನಿರಾಶೆಗಳನ್ನು ಕಡೆಗಣಿಸಿದರು. ಚಾಟಿಏಟಿನ ಬಲದಿಂದ ಗುಲಾಮರನ್ನು ಹೆದರಿಸಿ ಇಟ್ಟುಕೊಂಡಿದ್ದರು. ಸ್ವಾತಂತ್ರ್ಯಾನಂತರ ನಿಧಾನವಾಗಿಯಾದರೂ ಜನರು ಜಾಗೃತರಾಗುತ್ತಿದ್ದಾರೆ. ಅಧ್ಯಕ್ಷ 'ಆಲ್ಬರ್ಟ್ ರೆನೆ' ಸಾಮಾನ್ಯ ಕೆಲಸಗಾರರ ಮನೆಯಿಂದ ಬಂದವರಾದರೂ ಸ್ವಂತ ಪರಿಶ್ರಮ, ಬುದ್ಧಿವಂತಿಕೆಗಳಿಂದ ರಾಜಕೀಯ ವಿಜ್ಞಾನ ಮತ್ತು ಕಾನೂನುಗಳಲ್ಲಿ ಪದವಿಗಳಿಸಿದ್ದಾರೆ.

ಹೊಂದಿಕೆ

ದಂಪತಿಗಳಲ್ಲಿದ್ದರೆ
ಹೊಂದಿಕೆ
ಸುಖಸಂಸಾರ
ಇಲ್ಲದಿದ್ದರೆ
ಸುಖ
ಸಂಹಾರ

⊙ ವೆಂಕಟೇಶ ಎಸ್. ಹಾರೇಬೈಲು

ಮಾಹೆ ದ್ವೀಪದಲ್ಲಿ ಸರ್ಕಾರದ ಕೇಂದ್ರವಿದೆ. ಅಲ್ಲಿಂದ ಬೇರೆ ದ್ವೀಪಗಳಿಗೆ ಹೋಗಲು ಹೆಲಿಕಾಪ್ಟರ್, ದೋಣಿಗಳ ಸೇವೆ ಲಭ್ಯವಿದೆ. ಜಗತ್ತಿನ ಎಲ್ಲೆಡೆಯಿಂದಲೂ ಧನಿಕರಾದ ರಸಿಕರು ಈ ದ್ವೀಪಗಳಿಗೆ ಲಗ್ಗೆಯಿಟ್ಟು, ಸುಸಜ್ಜಿತ ಹೋಟಲ್ಲುಗಳಲ್ಲಿ ತಂಗಿ, ವಿಹರಿಸಿ, ಸವಿನೆನಪನ್ನು ಕೊಂಡೊಯ್ಯುತ್ತಾರೆ.

ಪ್ರವಾಸಿಗಳಿಗೆ ಸಾಕಷ್ಟು ಅನುಕೂಲಗಳನ್ನು ಸರ್ಕಾರ ಒದಗಿಸಿಕೊಟ್ಟಿದೆ. ಜಲಕ್ರೀಡೆಗಳು, ಸಮುದ್ರತಳದ ಹವಳದ ದಂಡೆಗಳ ವೀಕ್ಷಣೆಗೆ ಗಾಜಿನ ತಳದ ದೋಣಿಗಳು, ಈಜುಗಾರಿಕೆ, ಕಾಡಿನಲ್ಲಿ ಅಲೆದು ಅಲ್ಲಿನ ಗಿಡಮರಗಳನ್ನು, ಪಕ್ಷಿಪ್ರಾಣಿಗಳನ್ನು ವೀಕ್ಷಿಸಲು ಎಲ್ಲ ಸೌಲಭ್ಯಗಳೂ ಇವೆ. ಆದಕ್ಕೆಂದೇ ಈ ದ್ವೀಪಸಮೂಹ 'ಪ್ರವಾಸಿಗರ ಸ್ವರ್ಗ' ಎಂದು ಹೆಸರಾಗಿದೆ.

ಇಂತಹ ಚೆಲುವಿನ ಬೀಡಿಗೆ ಹೋಗಲು ನನಗೆ ಅವಕಾಶ ಸಿಕ್ಕಿದ್ದು ಕಳೆದ ಎಪ್ರಿಲ್‌ನಲ್ಲಿ. ಅಲ್ಲಿದ್ದಾಗ, 'ಸೆಷಲ್ವಾ' ಶ್ರೀಸಾಮಾನ್ಯನ ಕರುಣ ಕತೆ, ಪ್ಲಾಂಟೇಶನ್ ಮಾಲೀಕರ ದೌರ್ಜನ್ಯದ ಕತೆಗಳನ್ನು ಕೇಳಿ ದಿಗ್ಭ್ರಮೆಗೊಂಡೆ. ನಿರ್ಮಲವಾದ ವಿಶಾಲ ಸಾಗರ, ಪ್ರಾಣಿ, ಪಕ್ಷಿ, ಕಡಲಜೀವಿಗಳನ್ನು ಕಂಡು ಅಚ್ಚರಿಗೊಂಡೆ. ಭಗವಂತನ ಸೃಷ್ಟಿವೈಭವಕ್ಕೆ ಬೆರಗಾದೆ. ಈ ಭೂತಲದ ಸ್ವರ್ಗದ ಸಿರಿಯನ್ನು ಕಣ್ಣಾರೆ ನೋಡಿ ಆನಂದಗೊಂಡೆ. ಸುಂದರ ನೆನಪಿನ ಬುತ್ತಿಯೊಂದಿಗೆ ಭಾರತಕ್ಕೆ ಹಾರಿಬಂದೆ.

*

ಹೀಗೊಂದು ವ್ಯಥೆಯ ಕಥೆ

⊙ ಶ್ರೀಕಾಂತ ಮಳಗಿ

[ಆಧಾರ: 'ಸತ್ಯಕಥಾ'ದಲ್ಲಿ ರತೀಂದ್ರನಾಥರ ಲೇಖನ]

"ನಡೆಯುವುದಂತೂ ದೂರ ಉಳಿಯಿತು, ಈಗ ಎದ್ದು ಕೂಡಲೂ ನನಗಾಗುವುದಿಲ್ಲ. ಏನಾದರೂ ತಿನ್ನುವ ಮನಸ್ಸಾಗುತ್ತದೆ. ಆದರೆ ಕೊಂಡುಕೊಳ್ಳಲು ಹಣ ಬೇಕಲ್ಲ? ನನ್ನನ್ನು ನೋಡಲು ಅಣ್ಣಂದಿರು ಬರುವುದಿಲ್ಲ, ಅಕ್ಕ ಬರುವುದಿಲ್ಲ, ತಾಯಿ ಕೂಡ ಬರುವುದಿಲ್ಲ. ನಾನೀಗ ಯಾರಿಗೂ ಬೇಡವಾದ ಜೀವ. ಯಮರಾಜ ಕೂಡ ನನ್ನನ್ನು ಕರೆದುಕೊಳ್ಳಲು ತಯಾರಿಲ್ಲ," ಎಂದು ಅಕಸ್ಮಾತ್ತಾಗಿ ಅವಳನ್ನು ಭೇಟಿಯಾಗಲು ಬಂದ ಗೆಳತಿಯೆದುರು ದುಃಖ ತೋಡಿಕೊಂಡಾಕೆ ಪಾಟ್ನಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಕೊನೆಯ ಕ್ಷಣಗಳನ್ನು ಎಣಿಸುತ್ತಾ ಮಲಗಿದ ಅಥವಾ ಮಲಗಿದ್ದ ಡಾ. ಸಂಧ್ಯಾದಾಸ್.

ಒಂದಾನೊಂದು ಕಾಲದಲ್ಲಿ ಲಂಡನ್ನಿನ ಡಾರ್ಲಿಂಗಟನ್ ಆಸ್ಪತ್ರೆಯಲ್ಲಿ ಸ್ತ್ರೀರೋಗತಜ್ಞಳಾಗಿ ಕೆಲಸಮಾಡುತ್ತಿದ್ದ ಸಂಧ್ಯಾ ಕೈತುಂಬಾ ಹಣ ಸಂಪಾದಿಸಬಹುದಾಗಿತ್ತು. ಆದರೆ ದೈವೇಚ್ಛೆ ಬೇರೆಯೆ ಆಗಿತ್ತು.

ಹಾಗಾದರೆ ಯಾರು ಈ ಡಾ. ಸಂಧ್ಯಾದಾಸ್? ಇಂಥಾ ಸ್ಥಿತಿ ಅವಳಿಗೆ ಬಂದದ್ದಾದರೂ ಹೇಗೆ?

ನಿಜವಾಗಿಯೆಂದರೆ ಅವಳ ಜೀವನಗತಿಯೆ ವಿಚಿತ್ರ. ಮೂಲತಃ ಆಕೆ ಈಗಿನ ಬಾಂಗ್ಲಾದೇಶದವಳು. ತಂದೆ ಇಂದ್ರಭವನ ದಾಸ್ ಚಟಗಾಂವಿನ ದೊಡ್ಡ ಜಮೀನುದಾರ. ಸಿವಿಲ್ ಎಂಜನಿಯರಿಂಗ್‌ನಲ್ಲಿ ಡಿಪ್ಲೋಮಾಧಾರಕ. ಸರಕಾರಿ ಕೆಲಸ ಒಗ್ಗದ್ದರಿಂದ ಅದನ್ನು ಬಿಟ್ಟು ಪಿತ್ರಾರ್ಜಿತ ಆಸ್ತಿಯನ್ನು ನೋಡಿಕೊಳ್ಳಲು ನಿರ್ಧರಿಸಿದ. ಅಷ್ಟರಲ್ಲಿ ಮತೀಯ ಗಲಭೆಗಳು ಪ್ರಾರಂಭವಾದವು. ಜೀವ ಉಳಿಸಿಕೊಳ್ಳಲು ಆಸ್ತಿಯನ್ನೆಲ್ಲ ಬಿಟ್ಟು ಸಂಸಾರ ಸಮೇತನಾಗಿ ಕಲಕತ್ತೆಗೆ ಬಂದ. ನೌಕರಿ ದೊರೆಯಲಿಲ್ಲ.

ಪಾಟ್ನಾಕ್ಕೆ ಬಂದಾಗ ಲೋಕೋಪಯೋಗಿ ಇಲಾಖೆಯಲ್ಲಿ ಜ್ಯೂನಿಯರ್ ಎಂಜನಿಯರನ ನೌಕರಿ ದೊರೆತು ದೈವ ತೆರೆಯಿತು. ಕಾಲಾಂತರದಲ್ಲಿ ಆತ ಆ ಊರಿನಲ್ಲಿ ಬಂಗಲೆಯನ್ನೂ ಕೊಂಡುಕೊಂಡ. ಇದೇ ಬಂಗಲೆಯಲ್ಲಿಯೇ ೧೯೩೭ರಲ್ಲಿ ಸಂಧ್ಯಾ ಹುಟ್ಟಿದ್ದು.

ಅವಳಿಗೆ ಇಬ್ಬರು ಅಣ್ಣಂದಿರು, ಒಬ್ಬಳು ಅಕ್ಕ. ಒಬ್ಬಾತ "ಬರ್ನ್‌ಪುರ ಆಯರ್ನ್ ಫ್ಯಾಕ್ಟರಿ"ಯಲ್ಲಿ ಕೆಲಸಮಾಡುತ್ತಿದ್ದರೆ ಇನ್ನೊಬ್ಬ ಕಲಕತ್ತೆಯ ಔಷಧ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಅಕ್ಕ ಡಾಲೀದಾಸ್ ಧನಬಾದಿನ ಕಲ್ಲಿದ್ದಲ ಗಣಿಯ ಕಂಪನಿಯೊಂದರಲ್ಲಿ ಕಾರ್ಯದರ್ಶಿಯಾಗಿದ್ದಳು. ಆಕೆಯೂ ಸಂಧ್ಯಾಳ ಹಾಗೆ ವಿವಾಹವಾಗಿಲ್ಲ.

ಚಿಕ್ಕವಳಾದ ಸಂಧ್ಯಾ ಅಕ್ಕರೆಯ ಮಗುವಾಗಿಯೆ ಬೆಳೆದಳು. ಶಾಲೆಯಲ್ಲಿಯೂ ಕುಶಾಗ್ರಮತಿ. ೧೯೫೩ರಲ್ಲಿ ಆಕೆ ಪ್ರಥಮ ವರ್ಗದಲ್ಲಿ ಎಸ್.ಎಸ್.ಎಲ್.ಸಿ. ಪಾಸಾಗಿ ಅದೇ ವರ್ಷ ಮುಂದಿನ ಓದಿಗಾಗಿ ಮಗಧ ಮಹಿಳಾ ಕಾಲೇಜನ್ನು ಸೇರಿದಳು. ಇಂಟರ್ ಸೈನ್ಸ್ ಪರೀಕ್ಷೆಯಲ್ಲಿ ಶೇಕಡಾ ೭೦ರಷ್ಟು ಅಂಕಗಳು ಬಂದಿದ್ದರಿಂದ ಪಾಟ್ನಾ ಮೆಡಿಕಲ್ ಕಾಲೇಜಿನಲ್ಲಿ ಸೀಟು ದೊರಕಿಸಿಕೊಳ್ಳಲು ಆಕೆಗೇನೂ ಕಷ್ಟವಾಗಲಿಲ್ಲ.

ಸಂಧ್ಯಾ ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿರುವಾಗಲೆ ತಂದೆ ಹೃದಯಾಘಾತದಿಂದ ತೀರಿಕೊಂಡರು. ಅಕ್ಕ, ಅಣ್ಣಂದಿರು ಆ ವೇಳೆಗೆ ನೌಕರಿ



ಮರಣದ ನಿರೀಕ್ಷೆಯಲ್ಲಿ....

ಹಿಡಿದು ಬೇರೆಡೆ ಹೊರಟುಹೋಗಿದ್ದರಿಂದ ಮನೆಯಲ್ಲಿ ತಾಯಿಯನ್ನು ನೋಡಿಕೊಳ್ಳುತ್ತ ವಿದ್ಯಾಭ್ಯಾಸವನ್ನು ಮುಂದುವರಿಸುವ ಪ್ರಸಂಗ ಸಂಧ್ಯಾಳಿಗೆ ಬಂತು. ೧೯೬೦ ರಲ್ಲಿ ಎಂ.ಬಿ.ಬಿ.ಎಸ್. ಮುಗಿಸಿ ಸ್ನಾತಕೋತ್ತರ ಪದವಿಗಾಗಿ ತಾನು ಕಲಿತ ಕಾಲೇಜಿನಲ್ಲೆ ಶಿಕ್ಷಣ ಮುಂದುವರೆಸಿದಳು. ಮುಂದೆ ಎರಡೇ ವರ್ಷಗಳಲ್ಲಿ ಎಂ.ಎಸ್. ಪದವಿ ಪಡೆದು ಸ್ತ್ರೀರೋಗ ತಜ್ಞಳಾಗಿ ಕಾಲೇಜಿನಿಂದ ಹೊರಬಂದಳು.

'ಮುಂಗೇರ ಸದರ ಆಸ್ಪತ್ರೆ'ಯಲ್ಲಿ ನೌಕರಿಯೂ ದೊರೆಯಿತು. ಆಸ್ಪತ್ರೆಯ ಆವರಣದಲ್ಲೆ ಕ್ವಾರ್ಟರ್ ಕೂಡ ಸಿಕ್ಕಿತು. ಅಣ್ಣಂದಿರಾಗಲಿ ಅಕ್ಕನಾಗಲಿ ಆಗಾಗ ಅಲ್ಲಿಗೆ ಬಂದು ಹೋಗತೊಡಗಿದರು. ಆಕೆಯಲ್ಲಿ ಕಲಿಯುವ ಲವಲವಿಕೆ ಇನ್ನೂ ತೀವ್ರವಾಗಿಯೇ ಇದ್ದುದರಿಂದ ೧೯೭೨ರಲ್ಲಿ ವೇತನರಹಿತ ರಜೆಹಾಕಿ ಲಂಡನ್ನಿನ ಡಾರ್ಲಿಂಗಟನ್ ಆಸ್ಪತ್ರೆಯ ಪ್ರಾಯೋಜಕತ್ವದಲ್ಲಿ ಎಂ.ಆರ್.ಸಿ.ಎಸ್. ಮಾಡಲು ಸಂಧ್ಯಾ ಇಂಗ್ಲೆಂಡಿಗೆ ಹೊರಟು ಹೋದಳು.

ಅದು ಆರು ವರ್ಷಗಳ ಕೋರ್ಸು. ಶಿಕ್ಷಣ ಮುಗಿಯುವವರೆಗೆ ಡಾರ್ಲಿಂಗ್‌ಟನ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸಬೇಕಿತ್ತು. ೧೯೭೭ರಲ್ಲಿ ಎಂ.ಆರ್.ಸಿ.ಎಸ್. ಪದವಿ ದೊರೆಯುವುದೇ ತಡ, ಸಂಧ್ಯಾಳ ನಿಷ್ಠ ಸೇವೆಯನ್ನು ಪರಿಗಣಿಸಿದ ಆಸ್ಪತ್ರೆಯ ಅಧಿಕಾರಿಗಳು ಆವಳಿಗೆ ಬಡ್ತಿಯನ್ನೂ ನೀಡಿದರು. ಇಂಗ್ಲೆಂಡಿನ ವಾತಾವರಣಕ್ಕೆ ಒಗ್ಗಿಕೊಂಡ ಆಕೆ ಅಲ್ಲಿಯೆ ನೆಲೆಸಿ ತಾಯಿಯನ್ನು ಕರೆಸಿಕೊಳ್ಳುವುದಾಗಿ ನಿಶ್ಚಯಿಸಿದಳು.

ಆಕೆಯ ದುರ್ದೆಶೆಯ ಪರಂಪರೆ ಶುರುವಾದದ್ದು ಈ ಸಂದರ್ಭದಲ್ಲಿಯೆ. ೧೯೭೮ರ ಜನವರಿ ಐದರಂದು ಎಂದಿನಂತೆ ಆಸ್ಪತ್ರೆಗೆ ಹೋಗುತ್ತಿದ್ದಾಗ ಒಮ್ಮಿಂದೊಮ್ಮೆಲೆ ಮೈಯಲ್ಲಿ ಕಂಪನದ ಅನುಭವ. ಅದರೊಟ್ಟಿಗೇ ಮೈತುಂಬಾ ಚಳಿ. ಸಹಿಸಲಸಾಧ್ಯವಾದ ನೋವು. ಉಸಿರಾಡಿಸಲೂ ಕಷ್ಟವಾಗತೊಡಗಿತು. ಆಕೆಯ ಸ್ಥಿತಿಯನ್ನು ಕಂಡ ದಾರಿಹೋಕರು ಸಂಧ್ಯಾಳನ್ನು ಗ್ಲಾಸ್ಗೋದ ಡ್ಯೂಕ್ ಸ್ಟ್ರೀಟ್ ಆಸ್ಪತ್ರೆಗೆ ಸೇರಿಸಿದರು. ಹದಿ

ನೈದು ದಿನ ಅಲ್ಲಿದ್ದ ಮೇಲೆ ಮೆಲ್ಲನೆ ಅಷ್ಟಿಷ್ಟು ನಡೆಯುವಷ್ಟು ತ್ರಾಣ ಬಂತು. ಆವಳನ್ನು ಪರೀಕ್ಷಿಸಿದ ಡಾಕ್ಟರರು ದೀರ್ಘಕಾಲದ ವಿಶ್ರಾಂತಿಯ ಅಗತ್ಯವಿದ್ದುದರಿಂದ ಆಕೆ ಭಾರತಕ್ಕೆ ಹಿಂದಿರುಗಿ ಅಲ್ಲಿಯೆ ವಿಶ್ರಾಂತಿ ಪಡೆಯುವಂತೆ ಸಲಹೆ ನೀಡಿದರು.

ಸಂಧ್ಯಾ ೧೯೭೭ರ ಫೆಬ್ರುವರಿಯ ಕೊನೆಯ ವಾರದಲ್ಲಿ ಡಾರ್ಲಿಂಗ್‌ಟನ್ ಆಸ್ಪತ್ರೆಯ ಕೆಲಸಕ್ಕೆ ರಾಜೀನಾಮೆಕೊಟ್ಟು ಭಾರತಕ್ಕೆ ಬಂದು ಮಂಗೇರ್‌ದಲ್ಲಿಯ ಮೊದಲಿನ ನೌಕರಿ ಸೇರಿದಳು. ವಿಶ್ರಾಂತಿಯ ಅಗತ್ಯವಿದ್ದುದರಿಂದ ಅಲ್ಲಿ ಎರಡು ತಿಂಗಳು ರಜೆಹಾಕಿ ತಾಯಿ ಇರುತ್ತಿದ್ದ ಹಿರಿಯಣ್ಣನ ಮನೆಗೆ ಹೋದಳು. ಅಲ್ಲಿ ಕೈಕಾಲುಗಳಿಗೆ ಸೆಡವು ಬರಲು ಪ್ರಾರಂಭಿಸಿತು. ಎರಡು ಹೆಜ್ಜೆಯಿಡಲೂ ಆಗುತ್ತಿರಲಿಲ್ಲ. ಈ ಮಧ್ಯೆ ಅದು ನಿಯಮ ಬಾಹಿರವಾಗಿದ್ದರೂ ಸರಕಾರ ಸಂಧ್ಯಾ ರಜೆಯ ಮೇಲಿದ್ದಾಗಲೆ ಆವಳನ್ನು ಜಾಮತಾಡಾ ಆಸ್ಪತ್ರೆಗೆ ವರ್ಗಾಯಿಸಿತು.

ಇತ್ತ ಮನೆಯ ವಾತಾವರಣವೂ ಬದಲಾಯಿತು. ಅಣ್ಣಂದಿರಾರೂ ಸಂಧ್ಯಾಳನ್ನು ಇನ್ನಷ್ಟು ಕಾಲ ಮನೆಯಲ್ಲಿರಿಸಿಕೊಳ್ಳಲು ತಯಾರಿರಲಿಲ್ಲ. ಅಣ್ಣನಿಗೆ ಈ 'ಭಾರ ಹೊತ್ತುಕೊಳ್ಳುವ' ಮನಸ್ಸಿರಲಿಲ್ಲ. ಮಕ್ಕಳ ಆಶ್ರಯದಲ್ಲಿದ್ದ ತಾಯಿ ಕೂಡ ಅವರ ಮನಸ್ಸಿನ ವಿರುದ್ಧ ಏನೂ ಮಾಡುವಂತಿರಲಿಲ್ಲ. ಕೊನೆಗೊಂದು ದಿನ ಆಕೆ ಮನಬಿಚ್ಚಿ ಹೇಳಲೇಬೇಕಾಯಿತು: "ಸಂಧ್ಯಾ, ಕೆಲದಿನಗಳ ಮಟ್ಟಿಗಾದರೂ ನೀನು ಸರಕಾರಿ ಆಸ್ಪತ್ರೆಯಲ್ಲಿರಬೇಕಾಗುವುದು. ಅದಕ್ಕೆಲ್ಲ ನಾವು ಈಗಾಗಲೇ ವ್ಯವಸ್ಥೆ ಮಾಡಿದ್ದೇವೆ. ಅಲ್ಲಿ ನಿನಗೆ ಒಂದು ಬೆಡ್ ದೊರೆಯುವುದು. ಊಟ ಕೂಡ ಆಸ್ಪತ್ರೆಯಿಂದಲೆ ದೊರೆಯುವುದು. ನಾವು ಆಗಾಗ ಬಂದು ನಿನ್ನನ್ನು ನೋಡಿಕೊಂಡು ಹೋಗುತ್ತೇವೆ."

ಆ ಪ್ರಕಾರ ಸಂಧ್ಯಾಳನ್ನು ಆಸ್ಪತ್ರೆಗೆ ಸೇರಿಸಲಾಯಿತು. ಅಲ್ಲಿ ಆಕೆಯ ಸ್ಥಿತಿ ದಿನದಿನಕ್ಕೆ ಕೆಡುತ್ತಾ ನಡೆಯಿತು. ಒಮ್ಮೊಂದೊಮ್ಮೆಗೆ ಮೈತುಂಬಾ ಸೂಜಿಚುಚ್ಚಿದ ಹಾಗಾಗುತ್ತಿತ್ತು. ಅಲ್ಲಿನ ಡಾಕ್ಟರರಿಗೆ ರೋಗ ಯಾವುದೆನ್ನುವುದನ್ನು ಕಂಡುಹಿಡಿಯಲಾಗಲಿಲ್ಲ. ಸೂಜಿ ಚುಚ್ಚಿದ ಅನುಭವವಾಗುತ್ತಿದ್ದಾಗ ಸಂಧ್ಯಾಳಿಗೆ ಮನೆಯ ಜನ ನೆನಪಾಗುತ್ತಿದ್ದರು. ಆದರೆ ಹೇಳಿ ಕಳಿಸಿದರೂ ಯಾರೂ ಬರುತ್ತಿರಲಿಲ್ಲ.

ಆರು ತಿಂಗಳವರೆಗೆ ಪರೀಕ್ಷಿಸಿದರೂ ರೋಗ ಯಾವುದೆಂಬುದು ಗೊತ್ತಾಗದಾಗ ಡಾಕ್ಟರರು ಸಂಧ್ಯಾಳ ಅಣ್ಣನಿಗೆ ಪತ್ರ ಬರೆದು ಆವಳನ್ನು ಮನೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದರು. ಆದರೆ ಅಣ್ಣಂದಿರಾರೂ ಆಸ್ಪತ್ರೆಗೆ ಬಾರದೆ ತಾಯಿಯನ್ನು ಕಳಿಸಿದರು. ತಾಯಿ ಡಾಕ್ಟರರನ್ನು ಭೇಟಿಯಾಗಿ, "ಅಣ್ಣಂದಿರಾರೂ ಸಂಧ್ಯಾಳನ್ನು ಮನೆಗೆ ಸೇರಿಸಿಕೊಳ್ಳಲು ತಯಾರಿಲ್ಲ. ಮಗಳ ಬಗ್ಗೆ ಮಮತೆಯಿದ್ದರೂ ನಾನೇ ಆವರ ಆಶ್ರಯದಲ್ಲಿದ್ದುದರಿಂದ ನನಗೂ ಏನೂ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಆಕೆಯನ್ನು ಆಸ್ಪತ್ರೆಯಲ್ಲಿಯೇ ಇರಿಸಿಕೊಳ್ಳಬೇಕು," ಎಂದು ಹೇಳಿ ಹೊರಟುಹೋದಳು.

ಇತ್ತ ಆಸ್ಪತ್ರೆಯವರೂ ತನ್ನನ್ನು ಇಟ್ಟುಕೊ



ವಾಸ್ತವ

ನೀನು ಅಂದುಕೊಂಡಂತೆಯೇ ಎಲ್ಲ
ನಡೆಯೋದಿಲ್ಲ ಈ ಬದುಕಲ್ಲಿ
ಕರಗಿ ಕಂಡ ಕನಸುಗಳೆಲ್ಲ
ಬರೀ ಕಣ್ಣೀರೇ ಉಳಿದಾವು ಕಣ್ಣಲ್ಲಿ

-ಭಾವುಕ

ಳ್ಳಲು ಒಪ್ಪುತ್ತಿಲ್ಲ, ಅತ್ತ ಅಣ್ಣಂದಿರೂ ಮನೆಗೆ ಕರೆದುಕೊಂಡು ಹೋಗಲು ತಯಾರಿಲ್ಲ. ಇಂಥಾ ಇಬ್ಬಂದಿಯ ಸ್ಥಿತಿಯಲ್ಲಿ ತಾನೇನು ಮಾಡಬೇಕು ? ಎಂಬ ಬಗ್ಗೆ ಬಹಳ ಯೋಚಿಸಿ, ಕೊನೆಗೆ ಬಿಹಾರ ರಾಜ್ಯದ ಮೆಡಿಕಲ್ ಅಸೋಶಿಯೇಷನ್ನಿನ ಅಧ್ಯಕ್ಷರಾಗಿದ್ದ ಡಾ. ರಾಮಜನಮ ಸಿಂಹರಿಗೆ ತನ್ನ ದಯನೀಯ ಸ್ಥಿತಿಯನ್ನು ಹೇಳಿಕೊಂಡು ಪತ್ರಬರೆದು, ಹೇಗಾದರೂ ಮಾಡಿ ತನಗೊಂದು ನೆಲೆ ಒದಗಿಸಬೇಕೆಂದು ಕೇಳಿಕೊಂಡಳು.

ಪತ್ರ ಪರಿಣಾಮ ಬೀರಿತು. ಅವರು ನಾಲ್ಕಾರು ಕಿರಿಯ ವೈದ್ಯರನ್ನು ಬರ್ನಪುರಕ್ಕೆ ಕಳಿಸಿ ಸಂಧ್ಯಾಳನ್ನು ಪಾಟ್ನಾ ಕರೆಸಿಕೊಂಡು ೧೯೭೯ರ ಡಿಸೆಂಬರ್ ೨೯ ರಂದು ಪಾಟ್ನಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಸೇರಿಸಿದರು. ಅಲ್ಲಿ ಒಂದು ವರ್ಷ ಪರೀಕ್ಷಿಸಿದರೂ ರೋಗ ಯಾವುದೆಂಬುದೇ ಗೊತ್ತಾಗದಾಗ ಆಯುರ್ವೇದದಿಂದಾದರೂ ಪ್ರಯೆ[illegible] ದೊರೆಯಲಿ ಎಂದು ಅಲ್ಲಿನ ಡಾಕ್ಟರರು [illegible]ಳನ್ನು ಆಯುರ್ವೇದದ ಆಸ್ಪತ್ರೆಗೆ ಸೇರಿಸಿದರು.

ಅಲ್ಲಿ ಸಂಧ್ಯಾಳಿಗೆ ಪ್ರತ್ಯೇಕ ಕೋಣೆಯನ್ನು ಒದಗಿಸಲಾಗಿತ್ತು. ಪ್ರಾರಂಭದಲ್ಲಿ ಅಲ್ಲಿನ ವೈದ್ಯರೆಲ್ಲರೂ ಅವಳನ್ನು ಬಹಳ ಚೆನ್ನಾಗಿಯೇ ನೋಡಿಕೊಂಡರು. ಆದರೆ ಬರಬರುತ್ತ ನಿರ್ಲಕ್ಷ್ಯ ಮಾಡತೊಡಗಿದರು. ಡಾಕ್ಟರರ ಮಾತಿರಲಿ, ಕಸಗುಡಿಸುವವರೂ ಈಗ ಆಕೆಯ ಕೋಣೆಗೆ ಬರುತ್ತಿರಲಿಲ್ಲ. ಆಕೆಯ ವಿಚಿತ್ರ ರೋಗದ ಜೊತೆಗೆ ಸಂಧಿವಾತವೂ ಸೇರಿಕೊಂಡಿತು. ಆಗ ಅವಳಿಗೆ ಸರಿಯಾಗಿ ಎದ್ದು ನಿಲ್ಲಲೂ ಆಗುತ್ತಿರಲಿಲ್ಲ.

ಸತತ ಏಳುವರೆ ವರ್ಷ ಜೀವಚ್ಛವವಾಗಿಯೆ ಇದ್ದ ಸಂಧ್ಯಾಳನ್ನು ಆಸ್ಪತ್ರೆಯ ಜನ ಕೊನೆಗೊಂದು ದಿನ ಆ್ಯಂಬುಲೆನ್ಸಿನ ಮೂಲಕ ಪಾಟ್ನಾ ಮೆಡಿಕಲ್ ಕಾಲೇಜಿನ ಆವರಣದೊಳಗೆ ಸಾಗಿಸಿ ಅಲ್ಲಿ ಅವಳನ್ನು ಕೆಳಗೆ ನೂಕಿ ಹೊರಟು ಹೋದರು. ಅವರು ನೂಕಿದ ರಭಸಕ್ಕೆ ಬಿದ್ದು ಪೆಟ್ಟಾಯಿತು. ಈ ವೇಳೆಗೆ ಹೊಸ ಡಾಕ್ಟರರು

ಸೋಜಿಗ

ಬೇವು ಬದುಕಿಗೆ
ಬೆಲ್ಲವಾಗಬಹುದು
ಬೆಲ್ಲ ಕೆಲವರಿಗೆ
ಬೇವೂ ಆಗಬಹುದು!

⊙ ದೊಡ್ಡರಂಗೇಗೌಡ

ಆಸ್ಪತ್ರೆಗೆ ಬಂದದ್ದರಿಂದ ಸಂಧ್ಯಾಳನ್ನು ಗುರುತಿಸುವವರು ಯಾರೂ ಇರಲಿಲ್ಲ. ಬಟ್ಟೆಗಳೆಲ್ಲ ಹರಿದಿದ್ದವು. ಕೂದಲು ಎಣ್ಣೆ ಕಾಣದೆ ಎಷ್ಟೋ ತಿಂಗಳುಗಳೇ ಕಳೆದಿದ್ದವು. ಆಸ್ಪತ್ರೆಗೆ ಬರಹೋಗುವವರೆಲ್ಲ ಸಂಧ್ಯಾಳನ್ನು ಭಿಕ್ಷುಕಿಯೆಂದೇ ಭಾವಿಸಿದರು. ಯಾರಾದರೂ ಕನಿಕರದಿಂದ ಕೊಟ್ಟ ಅಷ್ಟಿಷ್ಟನ್ನು ತಿಂದು ಆವರಣದ ಮೂಲೆಯಲ್ಲಿ ತನ್ನ ಸ್ಥಿತಿಯನ್ನು ನೆನೆದು ಅಳುತ್ತಾ ಬಿದ್ದುಕೊಂಡಿರುತ್ತಿದ್ದಳು.

ಹೋಳಿಹಬ್ಬಕ್ಕೆ ಎರಡು ದಿನ ಬಾಕಿಯಿತ್ತು. ಸಂಜೆಯ ಸಮಯ ಆಸ್ಪತ್ರೆಯ ಸರ್ಜರಿ ವಿಭಾಗದ ವರಿಷ್ಠರಾದ ಡಾ. ಮೋತಿಲಾಲಸಿಂಹರು ಯಾವುದೋ ದೊಡ್ಡ ಆಪರೇಶನ್ ಮುಗಿಸಿ ಮನೆಗೆ ಹೊಗಲು ಕಾರನ್ನು ಹತ್ತುತ್ತಿದ್ದವರು ಮೂಲೆಯಲ್ಲಿ ಯಾರೋ ಅಳುತ್ತಿರುವುದನ್ನು ನೋಡಿ ಅಲ್ಲಿಗೆ ಹೋದಾಗ ಅವಳನ್ನು ಗುರುತಿಸಿ, "ಅರೆ ಡಾ. ಸಂಧ್ಯಾ, ನೀವು ಇಲ್ಲಿ! ಅದೂ ಇಂಥಾ ಸ್ಥಿತಿಯಲ್ಲಿ!" ಎಂಬ ಮಾತು ತಂತಾನೆ ಹೊರಬಂತು. ಡಾ. ಮೋತಿಲಾಲರೂ ಸಂಧ್ಯಾಳೂ ಕಾಲೇಜಿನಲ್ಲಿ ಸಹಪಾಠಿಗಳಾಗಿದ್ದವರು. ಅಳುತ್ತಾ ಸಂಧ್ಯಾ ಎಲ್ಲವನ್ನೂ ವಿವರಿಸಿದಾಗ ಡಾ. ಮೋತಿಲಾಲ್ ಕೂಡಲೆ ಅವಳನ್ನು ಆಸ್ಪತ್ರೆಗೆ ಸೇರಿಸಿದರು.

ತಾತ್ವಿಕವಾಗಿ ಡಾ. ಸಂಧ್ಯಾ ಇನ್ನೂ ಸರಕಾರೀ ಸೇವೆಯಲ್ಲಿಯೇ ಇದ್ದುದರಿಂದ ಮೋತಿಲಾಲರು ಅವಳಿಗೆ ಸಂಬಂಧಿಸಿದ ಎಲ್ಲ ಕಾಗದಪತ್ರಗಳನ್ನೂ ತಯಾರಿಸಿ ಆರೋಗ್ಯ ಇಲಾಖೆಗೆ ಕಳಿಸಿ ಅವಳ ನಿವೃತ್ತಿಗಾಗಿ ಪ್ರಯತ್ನಿಸಿದರು. ಇಂತಿಷ್ಟು ಹಣ ಕೊಟ್ಟರೆ ಮಾತ್ರ ಕೆಲಸವಾಗುವು

ದೆಂದು ಆ ಕಾಗದಪತ್ರಗಳನ್ನು ಒಯ್ದವರ ಮೂಲಕ ಹೇಳಿಕಳಿಸಲಾಯಿತು. ಪುಡಿಗಾಸಿಗೂ ಗತಿಯಿಲ್ಲದ ಆಕೆ ಅಷ್ಟು ಹಣವನ್ನು ಹೇಗೆತಾನೆ ಕೊಟ್ಟಾಳು !

ಇದೆಲ್ಲದರಿಂದ ರೋಸಿಹೋದ ಸಂಧ್ಯಾ ಆಗ ಆರೋಗ್ಯ ಇಲಾಖೆಯ ಸಚಿವರಾಗಿದ್ದ ದಿಲಕೇಶ್ವರರಾಮರಿಗೆ ಪತ್ರ ಬರೆದು ತನ್ನ ಸ್ಥಿತಿಯನ್ನು ವಿವರಿಸಿ, "ಕಾನೂನಿನ ಪ್ರಕಾರ ಬರಬೇಕಾದ ನಿವೃತ್ತಿ ವೇತನವನ್ನು ದಯವಿಟ್ಟು ದೊರಕಿಸಿಕೊಡಿ. ನಿಮ್ಮ ಹೆಸರನ್ನು ಹೇಳಿಕೊಂಡು ಹೊಟ್ಟೆಯ ಹಸಿವನ್ನಾದರೂ ಹಿಂಗಿಸಿಕೊಳ್ಳುತ್ತೇನೆ. ಇಲ್ಲವಾದರೆ ದೊಡ್ಡ ಮನಸ್ಸು ಮಾಡಿ ವಿಷದ ಇಂಜೆಕ್ಷನ್ನನ್ನಾದರೂ ಕೊಡಿಸಿ, ಯಾವ ಆಕ್ಷೇಪಣೆಯೂ ಇಲ್ಲದೆ ಈ ಜಗತ್ತಿನಿಂದ ನಿರ್ಗಮಿಸುತ್ತೇನೆ," ಎಂದು ಪತ್ರ ಬರೆದಳು. ಎರಡನೆಯ ಇಚ್ಛೆಯನ್ನಂತೂ ಪೂರೈಸುವ ಹಾಗೆಯೇ ಇರಲಿಲ್ಲ. ಆದರೆ ನಿವೃತ್ತಿ ವೇತನವೂ ಅವಳಿಗೆ ದೊರೆಯಲಿಲ್ಲ.

ಇದೆಲ್ಲ ನಡೆದದ್ದು ಸುಮಾರು ಏಳು ವರ್ಷಗಳ ಹಿಂದೆ. ಆಗ ಹಿಂದೀ ಪತ್ರಿಕೆಯೊಂದರಲ್ಲಿ ಬಂದ ವರದಿಯನ್ನಾಧರಿಸಿ ಆಕೆಯನ್ನು ಕುರಿತು ನಾನು ಲೇಖನ ಬರೆಯುವುದರಲ್ಲಿದ್ದಾಗ ಅವಳ ಹಾಗೆಯೇ ಇಂಗ್ಲೆಂಡಿನಲ್ಲಿ ಶಿಕ್ಷಣ ಪಡೆದ ನನ್ನ ವೈದ್ಯಕೀಯ ಮಿತ್ರರಲ್ಲಿ ಅವಳ ವಿಷಯ ಪ್ರಸ್ತಾಪಿಸಿದೆ. ಸಂಧ್ಯಾಳಿಗೆ ಏನಾದರೂ ಸಹಾಯಮಾಡಬೇಕೆಂದು ಅವರು ಪಾಟ್ನಾ ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಫೋನ್‌ಮಾಡಿದಾಗ "ಅವಳು ಇಲ್ಲ" ಎಂಬ ಉತ್ತರ ಬಂದಿತೇ ಹೊರತು ಇತರ ಯಾವ ವಿವರಗಳೂ ಲಭ್ಯವಾಗಲಿಲ್ಲ.

ಮನಸ್ಸು ಮಾಡಿದ್ದರೆ ಸಂಧ್ಯಾ ಇಂಗ್ಲೆಂಡಿನಲ್ಲಿಯೆ ಲಕ್ಷಗಟ್ಟಲೆ ಹಣಮಾಡಿಕೊಳ್ಳಬಹುದಾಗಿತ್ತು. ಆದರೆ ಬಂದ ಹಣವನ್ನೆಲ್ಲ ಅಲ್ಲಿ ಬಡವರಿಗಾಗಿ ಸುರಿದು ತನಗಾಗಿ ಏನನ್ನೂ ಉಳಿಸಿಕೊಳ್ಳಲಿಲ್ಲ. ಕಾಲೇಜಿನಲ್ಲಿ ಓದುತ್ತಿರುವಾಗ ಪ್ರೇಮಪ್ರಕರಣವೊಂದರಲ್ಲಿ ಪೆಟ್ಟುತಿಂದ ಆಕೆ ಅವಿವಾಹಿತಳಾಗಿಯೆ ಉಳಿದು ತನ್ನೆಲ್ಲ ಸಮಯವನ್ನೂ ಬಡಬಗ್ಗರಿಗಾಗಿ ವ್ಯಯಿಸಲು ನಿರ್ಧರಿಸಿದಳು. ಆದರೆ ದೈವೇಚ್ಛೆ ಬೇರೆಯೆ ಆಗಿತ್ತು.

ಈಗ ಅವಳೆಲ್ಲಿದ್ದಾಳೆ ಎನ್ನುವುದು ಗೊತ್ತಿಲ್ಲ. ಅಥವಾ ಅವಳಿನ್ನೂ ಜೀವಂತವಾಗಿ ಇದ್ದಾಳೋ ಇಲ್ಲವೋ ಎನ್ನುವುದೂ ಗೊತ್ತಿಲ್ಲ.

ಬಹುಶಃ ಅವಳ ಬಹುಕಾಲದ ಮೊರೆಯನ್ನು ಕೇಳಿಸಿಕೊಂಡ ಯಮರಾಜ ಕೊನೆಗೂ ಅವಳನ್ನು ತನ್ನ ಬಳಿ ಕರೆಸಿಕೊಂಡನೋ ಏನೋ ಯಾರಿಗೆ ಗೊತ್ತು ?

●

ವಿಚಿತ್ರ ಗೆಳೆತನ

ಸೆಕ್ರೋಪಿಯಾ ಅಲ್ಪಿಡಾ ಎಂಬ ವೈಜ್ಞಾನಿಕ ಹೆಸರುಳ್ಳ 'ಬಿಳಿ ಇರುವೆಗಳ ಮರ' ಇರುವೆಗಳಿಗೆ ತನ್ನಲ್ಲಿ ಆಶ್ರಯ ನೀಡುತ್ತದೆ. ಅದಕ್ಕೆ ಬದಲಾಗಿ ಈ ಇರುವೆಗಳು ಆ ಮರಕ್ಕೆ ರಕ್ಷಣೆ ನೀಡುತ್ತವೆ. ಹಕ್ಕಿಗಳಾಗಲಿ, ಪ್ರಾಣಿಗಳಾಗಲಿ ಈ ಮರದ ಬಳಿ ಬಂದರೆ ಇರುವೆಗಳ ಸೈನ್ಯ ಒಮ್ಮೆಗೇ ಹೊರ ಬಂದು ಅವುಗಳ ಮೇಲೆ ದಾಳಿ ಮಾಡಿ ಓಡಿಸಿ ಬಿಡುತ್ತವೆ.

ಅಲ್ಲದೆ ಈ ಇರುವೆಗಳು ಬೇರೆ ಇರುವೆಗಳು, ಬೇರೆ ಸಸ್ಯಗಳು ಈ ಮರದ ರೆಂಬೆ-ಕಾಂಡದಲ್ಲಿ ಬೆಳೆಯದಂತೆ ಅವು ನೋಡಿಕೊಳ್ಳುತ್ತವೆ. ಆದ್ದರಿಂದ ಈ ಮರ ಪರಾವಲಂಬಿ ಗಿಡಗಳಿಂದ ಮುಕ್ತವಾಗಿ ಆರಾಮವಾಗಿರುತ್ತದೆ.

⊙ *ಗಾಯತ್ರೀನಂದನ ಗಳತಗಾ*


ಕಲಾತ್ಮಕ ಬ್ಯಾಟಿಂಗಿಗೆ ಮತ್ತೊಂದು ಹೆಸರು-ವಿಜಯ ಮಾಂಜ್ರೇಕರ

೧೯೬೧-೬೨ರಲ್ಲಿ ದಿಲ್ಲಿಯಲ್ಲಿ ನಡೆದ ಭಾರತ ಮತ್ತು ಇಂಗ್ಲಂಡ್ ಟೆಸ್ಟ್ ಪಂದ್ಯವೊಂದರ ನೆನಪು. ಬ್ಯಾಟ್ಸ್‌ಮನ್‌ಗಳಿಗೆ ಪ್ರತಿಕೂಲವಾಗಿದ್ದ ಈ ಮೈದಾನದಲ್ಲಿ ಭಾರತೀಯ ಬ್ಯಾಟ್ಸಮನ್ ಒಬ್ಬ ಅಮೋಘ ಶತಕ ಬಾರಿಸಿದ್ದಲ್ಲದೆ, ತಂಡದ ಗೆಲುವಿನ ರೂವಾರಿ ಎನಿಸಿ ಈ ಪಂದ್ಯ ಅವಿಸ್ಮರಣೀಯವಾಗಿ ಉಳಿಯುವಂತೆ ಮಾಡಿದ. ಆತ ಬೇರೆ ಯಾರೂ ಅಲ್ಲ, ಭಾರತದ ಸರ್ವಶ್ರೇಷ್ಠ ಕಲಾತ್ಮಕ ಬ್ಯಾಟ್ಸಮನ್ ಎಂದು ಹೆಸರು ಮಾಡಿದ್ದ ವಿಜಯ ಮಾಂಜ್ರೇಕರ!

ವಿಜಯ ಮಾಂಜ್ರೇಕರರ ಹೆಸರು ಹಳೆಯ ತಲೆಮಾರಿನ ಕ್ರಿಕೆಟ್ ಪ್ರೇಮಿಗಳಿಗೆ ಚಿರಪರಿಚಿತ. ಈಗ ಮುಂಬೈ ರಣಜಿ ತಂಡದ ನಾಯಕರಾಗಿರುವ ಸಂಜಯ ಮಾಂಜ್ರೇಕರರ ತಂದೆ ಇವರು ಎಂದರೆ ಈಗಿನ ಕ್ರಿಕೆಟ್ ಪ್ರೇಮಿಗಳಿಗೆ ಮತ್ತಷ್ಟು ಪರಿಚಯವಾಗುವುದು.

ಸುಮಾರು ೨೦ ವರ್ಷಗಳ ಹಿಂದೆ ಕಲಾತ್ಮಕ ಬ್ಯಾಟಿಂಗಿಗೆ ಎಲ್ಲಿಲ್ಲದ ಪ್ರಾಮುಖ್ಯತೆ ಇತ್ತು. ಕ್ರಿಕೆಟ್ ಅಭಿಮಾನಿಗಳು ಈ ರೀತಿಯ ಬ್ಯಾಟಿಂಗ್ ನೋಡಿ ಆನಂದಿಸಲು ಮೈದಾನಕ್ಕೆ ಮುಗಿಬೀಳುತ್ತಿದ್ದರು. ಆಟ ನಡೆಯುವ ಸ್ಥಳಕ್ಕೆ ಬರಲಾಗದಿದ್ದವರೂ ರೇಡಿಯೋ ಕೇಳಿ ತೃಪ್ತಿಪಡುತ್ತಿದ್ದರು. ಆದರೆ ಈಗ ಒಂದು ದಿನದ ಪಂದ್ಯಗಳ ಭರಾಟೆಯಲ್ಲಿ ಕಲಾತ್ಮಕ ಬ್ಯಾಟಿಂಗ್ ಶೈಲಿ ಕೊಚ್ಚಿಕೊಂಡು ಹೋಗಿದೆ. ಹೀಗಾಗಿ ಅಪ್ಪನಂತೆಯೇ ಬ್ಯಾಟಿಂಗ್ ಶೈಲಿ ಹೊಂದಿರುವ ಸಂಜಯ ಮಾಂಜ್ರೇಕರ ಭಾರತ ತಂಡದಲ್ಲಿ ಸ್ಥಾನ ಪಡೆಯಲು ಹೆಣಗುತ್ತಿದ್ದಾರೆ.


ಕಲಾತ್ಮಕ ಬ್ಯಾಟಿಂಗ್ ಯುಗದಲ್ಲಿ ವಿಜಯ ಮರ್ಚಂಟ್, ಲಾಲಾ ಅಮರನಾಥ, ವಿಜಯ ಮಾಂಜ್ರೇಕರ, ರೋಹನ ಕನ್ಹಾಯ್, ವಿನೂ ಮಂಕಡ್, ಜಿ.ಆರ್. ವಿಶ್ವನಾಥ ಮೊದಲಾದವರು ಸಾಕಷ್ಟು ಮೆರೆದರು. ಅಂತೆಯೇ



ಕ್ರಿಕೆಟ್ ಪ್ರಭ

● ಆದಿಕೇಶವ

ಅಂದಿನ ಆಟ!
ಇಂದಿನ ನೋಟ!



ಈಗಲೂ ಕ್ರಿಕೆಟ್ ಪ್ರೇಮಿಗಳ ಮನದಲ್ಲಿ ಅವರ ನೆನಪು ಆಗಾಗ ತೇಲಿ ಬರುತ್ತಿರುತ್ತದೆ. ಆ ಕಾಲದ ಕ್ರಿಕೆಟ್ ಮಾತು ಬಂದಾಗ ಇಂಥವರೇ ಮೊದಲು ನೆನಪಾಗುತ್ತಾರೆ.

ವಿಜಯ ಮಾಂಜ್ರೇಕರ ಮೊದಲಿನಿಂದಲೂ ಉತ್ತಮ ಆರಂಭಿಕ ಬ್ಯಾಟ್ಸಮನ್. ರನ್ ಗಳಿಕೆಗೆ ಎಂದೂ ಅವರು ಆತುರ ತೋರುತ್ತಿರಲಿಲ್ಲ. ಪಿಚ್‌ನಲ್ಲಿ ನಿಂತರೆ ಸಾಕು, ರನ್‌ಗಳು ತಾವಾಗಿಯೇ ಬರುತ್ತವೆ ಎನ್ನುವ ತತ್ವ ಅವರದು. ಆ ಪ್ರಕಾರ ಅದನ್ನೂ ಸಾಧಿಸಿಯೂ ತೋರಿಸುತ್ತಿದ್ದರು ವಿಜಯ್.

೧೯೩೧ರ ಸೆಪ್ಟಂಬರ ೨೬ರಂದು ಮಧ್ಯಮ ಕುಟುಂಬವೊಂದರಲ್ಲಿ ಹುಟ್ಟಿದ ವಿಜಯ ಸಣ್ಣ ವಯಸ್ಸಿನಲ್ಲೇ ಕ್ರಿಕೆಟ್ ಗೀಳು ಅಂಟಿಸಿಕೊಂಡರು. ಕೈಯಲ್ಲಿ ಸಿಕ್ಕಿದ್ದನ್ನು ಬ್ಯಾಟ್ ಮಾಡಿಕೊಂಡು ತಮ್ಮ ಗೆಳೆಯರೊಂದಿಗೆ ದಿನ ವಿಡೀ ಕ್ರಿಕೆಟ್ ಆಡುತ್ತಿದ್ದ ಅವರು ಅಲ್ಪ ಸಮಯದಲ್ಲೇ ಪ್ರತಿಭಾವಂತ ಬ್ಯಾಟ್ಸ್‌ಮನ್ ಆಗಿ ಗಮನ ಸೆಳೆದರು.

ಕ್ರಿಕೆಟ್ ಧ್ಯಾನದೊಂದಿಗೆ ತಮ್ಮ ಎಂದಿನ ದಿನಚರಿ ಆರಂಭಿಸುತ್ತಿದ್ದ ವಿಜಯ್‌ಗೆ ೧೮ ನೇ ವಯಸ್ಸಿನಲ್ಲಿಯೇ ರಣಜಿ ಪಂದ್ಯಾವಳಿಗೆ ಪ್ರವೇಶ ದೊರೆಯಿತು. ಇಂತಹ ಸುವರ್ಣಾವಕಾಶವನ್ನು ವಿಜಯ ಮಾಂಜ್ರೇಕರ ಸದುಪಯೋಗ ಪಡಿಸಿಕೊಳ್ಳುವಲ್ಲಿ ಸಫಲರಾದರು. ಇದರ ಫಲವಾಗಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ದೊರೆಯಿತು.

೧೯೪೯-೫೦ ರಲ್ಲಿ ಮುಂಬೈ ತಂಡದ ಪರವಾಗಿ ಆಡುವ ಮೂಲಕ ರಣಜಿಗೆ ಕಾಲಿಟ್ಟ ವಿಜಯ ಮುಂದೆ ಪಶ್ಚಿಮ ಬಂಗಾಲ, ಉತ್ತರ ಪ್ರದೇಶ, ಮಹಾರಾಷ್ಟ್ರ ಹಾಗೂ ರಾಜಸ್ಥಾನದ ಪರವಾಗಿಯೂ ಆಡಿದರು. ೫೨ ರಣಜಿ ಪಂದ್ಯಗಳನ್ನಾಡಿದ ವಿಜಯ ಮಾಂಜ್ರೇಕರ ಅದರಲ್ಲಿ ಗಳಿಸಿದ್ದು ೩೬೮೬ ರನ್‌ಗಳು. ಇಷ್ಟೇ ಅಲ್ಲದೆ ದುಲೀಪ ಟ್ರೋಫಿ ಹಾಗೂ ಇರಾಣಿ ಟ್ರೋಫಿಗಳಲ್ಲಿಯೂ ಅವರು ತಮ್ಮ ಕಲಾತ್ಮಕ ಬ್ಯಾಟಿಂಗ್ ಪ್ರದರ್ಶಿಸಿ ಸೈ ಎನಿಸಿಕೊಂಡರು.

೧೯೬೧-೬೨ರಲ್ಲಿ ದಿಲ್ಲಿಯಲ್ಲಿ ಪ್ರವಾಸಿ ಇಂಗ್ಲಂಡ್ ವಿರುದ್ಧ ಟೆಸ್ಟ್ ಪಂದ್ಯವೊಂದು ನಡೆಯಿತು. ಬೌಲರ್‌ಗಳಿಗೆ ತುಂಬಾ ಅನುಕೂಲಕರವಾಗಿದ್ದ ಈ ಪಿಚ್‌ನಲ್ಲಿ ಇಂಗ್ಲಂಡ್ ಬೌಲರ್‌ಗಳು ಅತಿಥೇಯರಿಗೆ ಭಯಾನಕವಾಗಿ ಕಂಡಿದ್ದರು. ಇಂತಹ ಪರಿಸ್ಥಿತಿಯಲ್ಲಿ ಬ್ಯಾಟಿಂಗ್ ಜವಾಬ್ದಾರಿಯನ್ನು ಸಂಪೂರ್ಣವಾಗಿ ತಮ್ಮ ಹೆಗಲ ಮೇಲೆ ಹೊತ್ತುಕೊಂಡ ವಿಜಯ ಮಾಂಜ್ರೇಕರ್ ಆಕರ್ಷಕ ಅಜೇಯ ೧೮೯ ರನ್‌ಗಳನ್ನು ಬಾರಿಸಿ ಪ್ರತಿಯೊಬ್ಬರನ್ನು ದಂಗುಬಡಿಸಿದ್ದಲ್ಲದೆ ಭಾರತಕ್ಕೆ ಅನಿರೀಕ್ಷಿತ ಗೆಲುವು ತಂದುಕೊಟ್ಟಿದ್ದರು.

ಇಂಗ್ಲಂಡ್ ವಿರುದ್ಧ ತಮ್ಮ ಟೆಸ್ಟ್ ಜೀವನದ ಅತ್ಯಧಿಕ ಮೊತ್ತವನ್ನು ಈ ಪಂದ್ಯದಲ್ಲಿ ದಾಖಲಿಸಿದ ವಿಜಯ್ ಅವರನ್ನು ಅಂದು ಹೊಗಳದವರೇ ಇಲ್ಲ.

ಇಂಗ್ಲಂಡ್ ವಿರುದ್ಧ ಸಾಕಷ್ಟು ಯಶಸ್ವಿಯಾದ ವಿಜಯಗೆ ವೆಸ್ಟ್ ಇಂಡೀಸ್ ಪ್ರವಾಸದಲ್ಲಿ ನಿಜವಾದ ಪರೀಕ್ಷೆ ಎದುರಾಯಿತು. ವೇಗದ ಅಸ್ತ್ರಗಳ ದಂಡನ್ನೇ ಹೊಂದಿದ್ದ ಕೆರಬಿಯನ್ನರನ್ನು ಎದುರಿಸುವುದು ಆಗ ಸುಲಭದ ಮಾತಾಗಿರಲಿಲ್ಲ. ಆದರೆ ವಿಜಯ ಮಾಂಜ್ರೇಕರ್ ಈ ಎಲ್ಲ ಮಾತನ್ನು ಸುಳ್ಳುಮಾಡಿ ಶತಕ (೧೧೮) ಬಾರಿಸಿ ಮತ್ತೊಮ್ಮೆ ತಮ್ಮ ಬ್ಯಾಟಿಂಗ್ ಸಾಮರ್ಥ್ಯ ಸಾಬೀತುಪಡಿಸಿದರು.

ಮುಂದೆ ನ್ಯೂಜೀಲೆಂಡ್ ವಿರುದ್ಧ ೧೯೬೪-೬೫ ರಲ್ಲಿ ಮದ್ರಾಸಿನ ಕ್ರೀಡಾಂಗಣದಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ವಿಜಯ್ ಅಜೇಯ ಶತಕ (೧೦೨) ಸಂಪಾದಿಸಿ ಭಾರತಕ್ಕೆ ತಾವು ಅನಿವಾರ್ಯ ಎಂಬುದನ್ನು ತೋರಿಸಿಕೊಟ್ಟರು. ಆದರೆ ನ್ಯೂಜೀಲೆಂಡ್ ವಿರುದ್ಧ ಸರಣಿಯ ನಂತರ ಅವರ ಮುಂದಿನ ಆಸೆ ಈಡೇರಲಿಲ್ಲ. ಭಾರತ ಆಗ ಆಸ್ಟ್ರೇಲಿಯ ಪ್ರವಾಸ ಕೈಗೊಂಡಿತ್ತು. ವಿಜಯ್ ತಾವು ಈ ಪ್ರವಾಸಕ್ಕೆ ಆಯ್ಕೆ ಆಗುವ ಬಗ್ಗೆ ಯಾವ ಸಂದೇಹವನ್ನೂ ಹೊಂದಿರಲಿಲ್ಲ. ಆದರೆ ಆಯ್ಕೆಮಂಡಳಿಯವರು ಅವರನ್ನು ಪರಿಗಣಿಸಲಿಲ್ಲ. ಇದರಿಂದ ಭಾರೀ ಬೇಸರಗೊಂಡ ವಿಜಯ್ ಆಟಕ್ಕೆ ವಿದಾಯ ಹೇಳಿ ಎಲ್ಲರನ್ನೂ ದಿಗ್ಭ್ರಮೆಗೊಳಿಸಿದರು. ಆಯ್ಕೆ ಮಂಡಳಿಯ ಇಂತಹ ಕ್ರಮದಿಂದಾಗಿ ಭಾರತ ಒಬ್ಬ ಅಪ್ರತಿಮ ಆಟಗಾರನನ್ನು ಕಳೆದುಕೊಂಡಿತು.

ಕ್ರಿಕೆಟ್ ಜೀವನಕ್ಕೆ ವಿದಾಯ ಹೇಳುವ ಮುನ್ನ ೫೫ ಟೆಸ್ಟ್‌ಗಳನ್ನು ಆಡಿದ ವಿಜಯ ಮಾಂಜ್ರೇಕರ್ ಏಳು ಶತಕಗಳು ಸೇರಿದಂತೆ ೩೨೦೯ ರನ್ ಗಳಿಸಿದ್ದರು.

ವಿಜಯ ಮಾಂಜ್ರೇಕರ್ ಅವರ ಬ್ಯಾಟಿಂಗ್ ವೈಶಿಷ್ಟ್ಯವೆಂದರೆ ಎಂದಿಗೂ ಅವರು ತಮ್ಮ ಸಾಂಪ್ರದಾಯಿಕ ಆಟ ಬಿಟ್ಟು ಹೋಗಲಿಲ್ಲ. ಶತಕ ಹೊಡೆಯದಿದ್ದರೂ ಚಿಂತೆಯಿಲ್ಲ, ತಮ್ಮ ಬ್ಯಾಟಿಂಗ್ ನೋಡಲು ಬರುತ್ತಿದ್ದ ಅಭಿಮಾನಿಗಳನ್ನು ನಿರಾಶೆಪಡಿಸಬಾರದು ಎಂಬುದನ್ನು ಅರಿತುಕೊಂಡಿದ್ದ ಅವರು ಮೈದಾನದಲ್ಲಿದ್ದಾಗ ಮೂವತ್ತೇ ಓಟಗಳನ್ನು ಗಳಿಸಿದರೂ ಅದರಲ್ಲೊಂದು ಸೊಗಸು ಇರುತ್ತಿತ್ತು. ಪ್ರೇಕ್ಷಕರಿಗೆ ಕಣ್ತುಂಬ ಕಲಾತ್ಮಕ ಬ್ಯಾಟಿಂಗ್ ನೋಡಲು ಸಿಗುತ್ತಿತ್ತು.

ಈಗಿನಂತೆ ಆಗ ಒಂದು ದಿನದ ಪಂದ್ಯಗಳು ಇರಲಿಲ್ಲ. ಕ್ರೀಡಾಂಗಣ ಪ್ರೇಕ್ಷಕರಿಂದ ತುಂಬುತ್ತಿರಲಿಲ್ಲ. ಆದರೆ ಅಂತಹ ದಿನಗಳಲ್ಲೂ ಒಂದು ವರ್ಗದ ಪ್ರೇಕ್ಷಕರನ್ನು ಎಳೆದುತರುತ್ತಿತ್ತು ವಿಜಯರ ಕಲಾತ್ಮಕ ಆಟ.

ಇಂದು ದಿನೇ ದಿನೇ ಹೊಸ ಹೊಸ ಕ್ರಿಕೆಟ್ ತಾರೆಗಳು ಹುಟ್ಟುತ್ತವೆ. ಆದರೆ ೧೪ ವರ್ಷಗಳ ಹಿಂದೆ ವಿಧಿವಶರಾದ ವಿಜಯ ಮಾಂಜ್ರೇಕರ್ ಅವರಂತಹ 'ದಾಂಡಿಗರು' ಹುಟ್ಟುವುದು ಬಹಳ ಅಪರೂಪ.

ನೆನಪು ನೆರಳಿನಲ್ಲಿ

ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು. ನಮ್ಮ ಮನೆಯವರಿಗೆ ಕಾಳಿ ನದಿಯ ಸೂಪಾ ಆಣೆಕಟ್ಟು ಯೋಜನೆಯಡಿ ಭೂ ಸ್ವಾಧೀನ ಅಧಿಕಾರಿಯಾಗಿ ದಾಂಡೇಲಿಗೆ ವರ್ಗವಾಗಿತ್ತು. ಕಂದಾಯ ಇಲಾಖೆಗೆ ಸೇರಿದ ಇವರು ಮೈಸೂರ್ ಪವರ್ ಕಾರ್ಪೊರೇಶನ್ (ಈಗ ಕರ್ನಾಟಕ ವಿದ್ಯುತ್ ನಿಗಮ) ಮೂಲಕ ಹೊಸದಾಗಿ ಕಛೇರಿ ಪ್ರಾರಂಭಿಸಿ ಕೆಲಸ ನಿರ್ವಹಿಸಬೇಕಾಗಿತ್ತು.

ಆಗ ನಮಗೆ ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯವನಿಗೆ ಏಳು ವರ್ಷ, ಕಿರಿಯವನಿಗೆ ಒಂದು ವರ್ಷ. ನಮ್ಮ ಮನೆಯವರಿಗೆ ಹೆಣ್ಣುಮಕ್ಕಳೆಂದರೆ ತುಂಬಾ ಪ್ರೀತಿ. ನಮಗೊಂದು ಹೆಣ್ಣು ಮಗು ಇಲ್ಲ ಎನ್ನುವುದು ಅವರಿಗೆ ದೊಡ್ಡ ಕೊರತೆಯಾಗಿ ಕಾಣುತ್ತಿತ್ತು. ನಮಗೆ ಹೆಣ್ಣುಮಕ್ಕಳಿಲ್ಲ ಎಂಬ ಕೊರಗು ಅವರಷ್ಟು ನನಗಿರಲಿಲ್ಲವಾದರೂ ನಮಗೊಂದು ಹೆಣ್ಣು ಮಗು ಆಗಲಿ ಎಂಬ ಅವರ ಆಶೆಗೆ ನನ್ನ ವಿರೋಧವೇನೂ ಇರಲಿಲ್ಲ.

ಒಂದು ಮಧ್ಯಾಹ್ನ ನಾನು ಮಕ್ಕಳಿಬ್ಬರನ್ನೂ ಕೂರಿಸಿಕೊಂಡು ಒಂದು ಸೇಬು ಹಣ್ಣನ್ನು ಹೆಚ್ಚಿ ಅರ್ಧ ಭಾಗವನ್ನು ಹಿರಿಯ ಮಗನ ಕೈಯಲ್ಲಿಟ್ಟು ಉಳಿದರ್ಧ ಭಾಗವನ್ನು ಸಣ್ಣದಾಗಿ ಹೆಚ್ಚಿ ಕಿರಿಯ ಮಗುವಿಗೆ ತಿನ್ನಿಸತೊಡಗಿದೆ. ಹಿರಿಯವನು ತನ್ನ ಪಾಲಿಗೆ ಬಂದ ಅರ್ಧ ಹಣ್ಣನ್ನು ಕೈಯಲ್ಲಿ ಹಿಡಿದು ಅದನ್ನೇ ನೋಡುತ್ತಾ ತನಗೆ ತಾನೇ, "ಮುಂಚೆ ನಾನೊಬ್ಬನೇ ಇದ್ದೆ. ಆಗ ನನಗೆ ಇಡೀ ಹಣ್ಣು ಸಿಗ್ತಾ ಇತ್ತು. ಈಗ ಇವ್ನೊಬ್ಬ ಬಂದ. ಅರ್ಧ ಸಿಗ್ತಾ ಇದೆ. ಇನ್ನೂ ಒಬ್ಬ ಬಂದು ಬಿಟ್ರೆ ಇದೂ ಸಿಗೋದಿಲ್ವೇನೋ" ಎಂದ.

ಯಾರೋ ನನ್ನ ತಲೆಯ ಮೇಲೆ ಬಂದು ಸುತ್ತಿಗೆಯಿಂದ ಹೊಡೆದಂತಾಯಿತು. ಆ ಕ್ಷಣದಲ್ಲೇ ನಮಗೆ ಇಬ್ಬರು ಮಕ್ಕಳು ಸಾಕು ಎಂಬ ನಿರ್ಧಾರಕ್ಕೆ ಬಂದೆ. ಏಳು ವರ್ಷದ ನನ್ನ ಮಗ ತನಗೇ ತಿಳಿಯದಂತೆ ತನ್ನ ತಾಯಿಗೆ ಮಿತ ಸಂತಾನದ ಅರಿವನ್ನು ಮೂಡಿಸಿದ್ದ.

ಈಗ ದೂರದ ದೆಹಲಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ನಮ್ಮ ಮಕ್ಕಳಿಬ್ಬರ ಖರ್ಚು ವೆಚ್ಚವನ್ನು ಗಮನಿಸುವಾಗ ಮೂರನೆ ಮಗುವೊಂದು ಇದ್ದಿದ್ದರೆ ಅದನ್ನೂ ದೆಹಲಿಗೆ ಕಳುಹಿಸಿ ಸಮಾನಾಂತರದ ವಿದ್ಯಾಭ್ಯಾಸ ಕೊಡಿಸಲು ನಮ್ಮಿಂದ ಸಾಧ್ಯವಿತ್ತೆ? ಎಂಬ ವಿಚಾರ ಬಾರದಿರುವುದಿಲ್ಲ.

ಅ ಶಾಂತಾ ಎಸ್. ನಾಯಕ್

ಸುಮಾರು ಆರೇಳು ತಿಂಗಳ ಹಿಂದಿನ ಮಾತು. ನಾವು ನಮ್ಮೂರಿಂದ ಸ್ಕೂಟರ್ ಮೇಲೆ ದಾಂಡೇಲಿಗೆ ಹೊರಟಿದ್ದೆವು. ಅರಣ್ಯದ ಮಧ್ಯದ ದಾರಿಯಲ್ಲಿ ಸುಮಾರು ಐದಾರು ಕಿಲೋಮೀಟರ್ ಹೋಗಿರಬಹುದು. ರಸ್ತೆಯ ಮಧ್ಯಕ್ಕೆ ದನಗಳು ಅಡ್ಡ ಮಲಗಿವೆ, ಕುರಿಗಳು ಸ್ಕೂಟರ್ ಸಪ್ಪಳಕ್ಕೆ ಹೆದರಿ ಚೆಲ್ಲಾಪಿಲ್ಲಿಯಾಗಿ ಸರಿಯಾಗಿ ದಾರಿಯನ್ನೇ ಬಿಡುತ್ತಿಲ್ಲ. ನನ್ನವರಿಗೆ ಬಹಳ ಸಿಟ್ಟು ಬಂದು ಬಿಟ್ಟಿತು. ಸ್ಕೂಟರ್ ನಿಲ್ಲಿಸಿ ಕೆಳಗಿಳಿದರು. ನಾನೂ ಕೆಳಗಿಳಿದೆ. ದನಕಾಯುವವನಿಗಾಗಿ ಹುಡುಕತೊಡಗಿದೆವು. "ಎಲ್ಲಾ ರಸ್ತೆದಾಗ ಬಿಟ್ಟು, ಎತ್ಲಾಗ ಅರಾಂ ಆಗಿ ಮಲಗ್ಯಾನೋ ಯಾರಿಗ್ಗೊತ್ತು...." ಅನ್ನುತ್ತಾ ನನ್ನವರು ಸುತ್ತಮುತ್ತ ನೋಡತೊಡಗಿದರು.

ಸ್ವಲ್ಪ ದೂರದ ಮರದ ಕೆಳಗೆ ಸುಮಾರು ೧೧-೧೨ ವರ್ಷದ ಹುಡುಗನೊಬ್ಬ ಕುಳಿತಿದ್ದುದು ಕಾಣಿಸಿತು. ನಾವಿಬ್ಬರೂ ಆತ ಕುಳಿತಿದ್ದೆಡೆಗೆ ಹೋದರೂ ಆತನಿಗೆ ಲಕ್ಷ್ಯವೇ ಇಲ್ಲ, ಒಂದು ನೋಟಬುಕ್ ಹಾಗೂ ಪೆನ್ನು ಹಿಡಿದು ಅದೇನೋ ಬರೆಯುವುದರಲ್ಲಿ ತಲ್ಲಿನನಾಗಿದ್ದ.

"ಏಯ್ ಹುಡುಗ, ದನಾ-ಕುರಿ ಎಲ್ಲಾ ರಸ್ತೆದಾಗ ಬಿಟ್ಟು ಇಲ್ಲೇನು ಮಾಡ್ಲಿಕ್ಕೆ ಹತ್ತೀದೀ? ಒಂದು ಸೈಡು ಮೇಯಿಸಬೇಕಂತ ಗೊತ್ತಾಗೂದಿಲ್ಲೇನು....?" ಎಂದು ನನ್ನವರು ಜೋರು ಮಾಡಿದರು.

ಆ ಹುಡುಗ ಬೆಚ್ಚಿಬಿದ್ದವನಂತೆ ತಲೆಯೆತ್ತಿದ.

"ನೊಡ್ಲಿಲ್ಲ ಸ್ವಾಮಿ......ತಪ್ಪಾತು...."

"ಅಂಥಾಪರಿ ಮೈಮರೆತು ಅದೇನು ಮಾಡ್ಲಿಕ್ಕೆ ಹತ್ತೀ ನೀನು....." ಎಂದು ನಾನೂ ಕುತೂಹಲದಿಂದ ಕೇಳಿದೆ.

"ಅಮ್ಮಾ ಅವ್ರೆ, ಹೋಂ ವರ್ಕ್ ಮಾಡಾಕತ್ತೀನಿ.... ಇನ್ನೇನು ಎರಡು ದಿವಸಕ್ಕೆ ದಸರಾ ಸೂಟಿ ಮುಗೀತೈತೆ, ಅಷ್ಟೊತ್ತಿಗೆ ಎಲ್ಲಾ ಮುಗಿಸ್ಬೇಕು... ಇಲ್ದಿದ್ರ ಟೀಚರು ಹೊಡೀತಾರೆ..."

"ಏನು? ನೀನು ಸಾಲಿಗೆ ಹೋಗ್ತಿಯಾ? ಇಷ್ಟೆಲ್ಲಾ ಕೆಲ್ಸಾ ಮಾಡಿಕೊಂಡು, ನೀನು ಸಾಲೀಗೆ ಯಾವಾಗ ಹೋಗ್ತಿಯೋ"?

"ಅಮ್ಮಾರs ಸೂಟ್ಯಾಗ ದನಾಕುರಿ ಕಾಯ್ತೀನ್ರಿ.... ನಾವು ಬಡವ್ರಿ... ಇವನ್ನೆಲ್ಲಾ ಮಾಡ್ದ ಇದ್ರ, ನಮ್ಮ ಅವ್ವಾ ಸಾಲೀ ಬಿಡಿಸಿಬಿಡ್ತೀನಿಂತ ಹೇಳ್ಯಾಳ್ರಿ...ಸಾಲಿ ಇದ್ದ ದಿವಸ ಮನಿ ಮನೀಗೆ ಹೋಗಿ ಹಾಲು ಕೊಟ್ಟು ಬರೋದು, ಸಗಣೀ ತೆಗೆಯೋ ಕೆಲ್ಸ ಮಾಡ್ತೀನ್ರಿ.... ಸೂಟಿ ಒಳಗ ಇದನ್ನೆಲ್ಲಾ ಮಾಡ್ತೇನಿ... ಮನ್ಯಾಗ ಓದಾಕ ಕೊಡೊದಿಲ್ರಿ ನಮ್ಮವ್ವಾ..."

ನನಗೆ ಆ ಹುಡುಗನ ಮಾತು ಕೇಳಿ ಮತ್ತಷ್ಟು ಕುತೂಹಲ ಹಾಗೂ ಆಶ್ಚರ್ಯವಾಯಿತು.

"ಏನಪ್ಪಾ, ನಿಂಗೂ ಸಾಲೀ ಅಂದ್ರ ಅಷ್ಟು ಇಷ್ಟಾ ಏನು?"


"ಹೂಂನ್ರಿ... ನಾನು ಭಾಳ ಓದಬೇಕು, ದೊಡ್ಡ ಆಫೀಸರ್ರು ಆಗ್ಬೇಕು... ಓದಿ, ಏನು ಉದ್ಧಾರ ಆಗ್ತಿ ಅಂತ ನಮ್ಮವ್ವಾ ಅಂತಾಳ್ರಿ, ಅದಕs ಎಲ್ಲಾ ಅಭ್ಯಾಸಾನೂ ಇಲ್ಲೇ ಮಾಡಿ ಮುಗಿಸ್ತೇನ್ರಿ...."

ಆ ಹುಡುಗನ ಮಾತು, ಆತನಿಗೆ ಓದಿನಲ್ಲಿರುವ ಶ್ರದ್ಧೆ ಕೇಳಿ ನಮಗೆ ಮುಂದೇನೂ ಮಾತನಾಡಲೂ ಆಗದೇ ಬಾಯಿ ಕಟ್ಟಿ ಹೋಗಿತ್ತು. ಆತನಿಗೆ ಬೈಯಲೆಂದು ಹೋಗಿದ್ದ ನಾವು ಅವನ ಶ್ರದ್ಧೆ ಕಂಡು ಅಚ್ಚರಿಗೊಂಡೆವು. ಸಂತೋಷವೂ ಆಯಿತು.

ಎಂಥೆಂಥಾ ಅನುಕೂಲತೆ ಸೌಲಭ್ಯಗಳನ್ನು, ಮಾಡಿಕೊಟ್ಟರೂ ಓದಿನಲ್ಲಿ ಆಸಕ್ತಿ ತೋರಿಸದೇ ಇರುವ ಈಗಿನ ಕಾಲದ ಹುಡುಗರಲ್ಲಿ ಇಂತಹ ಒಬ್ಬ ವಿಶ್ವೇಶ್ವರಯ್ಯ, ನಮ್ಮಲ್ಲಿ ಇನ್ನೂ ಇರುವನಲ್ಲಾ ಎಂದು ಹೇಳಲಾರದಷ್ಟು ಖುಷಿ ಹಾಗೂ ಸಂತೋಷವೂ ಆಯಿತು.

✹ ಭಾರತೀ ಬಿ. ಕುಲಕರ್ಣಿ

ಜನ ಮರುಳೋ ಜಾತ್ರೆ ಮರುಳೋ



★ ಅರುಣ

ಉತ್ತರ ಪ್ರದೇಶದ ಒಂದು ಸಣ್ಣ ಗ್ರಾಮ ಆಲಂಪುರ. ಮಾರ್ಚ್ ೨೫, ೧೯೯೭ರಂದು ಈ ಗ್ರಾಮದಲ್ಲಿ ಭಾರೀ ಜನಸಂದಣಿ ನೆರೆದಿತ್ತು. ದೂರದೂರದ ನಗರಗಳು, ಪಟ್ಟಣ ಪ್ರದೇಶ, ಹಳ್ಳಿಗಳಿಂದ ಆಗಮಿಸಿದ ಭಕ್ತಾದಿಗಳು ಮಾತೆ ಸರಸ್ವತಿದೇವಿಯ ಜಯಘೋಷ ಮಾಡುತ್ತಾ ಮಧ್ಯಾಹ್ನ ೨ ಗಂಟೆಯಾಗುವುದನ್ನೇ ನಿರೀಕ್ಷಿಸುತ್ತಿದ್ದರು. ನೆರೆದಿದ್ದ ಎಲ್ಲ ಭಕ್ತಾದಿಗಳ ದೃಷ್ಟಿಯೂ ಮಂಟಪದಲ್ಲಿ ಕುಳಿತಿದ್ದ ಹದಿಹರೆಯದ ಹುಡುಗಿ ನೀರಜ ದೀಕ್ಷಿತಳ ಮೇಲೆ.

ಕೆಲವು ದಿನಗಳ ಹಿಂದೆ ಭಾರೀ ಅಬ್ಬರದ ಪ್ರಚಾರದಲ್ಲಿ ಘೋಷಿಸಲಾದ ಕಾರ್ಯಕ್ರಮದಂತೆ ಆ ದಿನ ಮಧ್ಯಾಹ್ನ ಕುಮಾರಿ ನೀರಜಳು ಶಿಲೆಯಾಗಿ ಪರಿವರ್ತನೆ ಹೊಂದುವವಳಿದ್ದಳು.

ಮಧ್ಯಾಹ್ನ ಎರಡು ಗಂಟೆಯಾಗಲು ಕೆಲವೇ ಸೆಕೆಂಡುಗಳು ಉಳಿದಿದ್ದವು. ಆಲಂಪುರ ಗ್ರಾಮದ ಆ ಬಯಲಲ್ಲಿ ಸುಮಾರು ಒಂದೂವರೆ ಲಕ್ಷಕ್ಕೂ ಅಧಿಕ ಜನರು ನೆರೆದಿದ್ದರು. ಈ ಮಧ್ಯೆ ರಾಜ್ಯದ ರಾಜಧಾನಿ ಲಕ್ನೋದಿಂದ ಆಗಮಿಸಿದ ವೈಜ್ಞಾನಿಕ ತಜ್ಞರ ಸಮಿತಿಯ ಸದಸ್ಯರು ಸರಸ್ವತಿಯ ಅವತಾರವೆನಿಸಿದ ನೀರಜ ದೀಕ್ಷಿತಳ ಸುತ್ತ ನೆರೆದಿದ್ದರು.

ಸಮಯ ಕ್ಷಣಕ್ಷಣಕ್ಕೂ ಉರುಳುತ್ತಿತ್ತು. ಎರಡು ಗಂಟೆ ಕಳೆದು ಮೂರಾಯಿತು, ನಾಲ್ಕಾಯಿತು. ಆದರೆ ನೀರಜಳು ಶಿಲೆಯಾಗಿ ಪರಿವರ್ತನೆ ಹೊಂದಲಿಲ್ಲ. ಮುಂಜಾನೆಯಿಂದ ನೆರೆದಿದ್ದ ಜನಸಮೂಹ ಸಂಜೆಯಾದರೂ ಕರಗಲಿಲ್ಲ. ಆದರೆ ಯಾವುದೇ ಅದ್ಭುತ ಚಮತ್ಕಾರ ಅಥವಾ ಪವಾಡ ಅಲ್ಲಿ ಜರುಗಲಿಲ್ಲ. ಈ ಮಧ್ಯೆ ಸರಸ್ವತಿ ಸೇವಾದಳದ ಅಧ್ಯಕ್ಷ ರಾಜೇಂದ್ರಸಿಂಗ್ ಧ್ವನಿವರ್ಧಕದಲ್ಲಿ ಘೋಷಿಸುತ್ತಾ, "ಮಾತೆ ಸರಸ್ವತಿ ತನ್ನ ಹಿಂದಿನ ನಿರ್ಧಾರವನ್ನು ಕೊಂಚ ಬದಲಾಯಿಸಿ ಮಾನವ ಕಲ್ಯಾಣಕ್ಕಾಗಿ ನೀರಜಳ ರೂಪದಲ್ಲಿಯೇ ಇನ್ನು ಕೆಲವು ಕಾಲವಿದ್ದು, ಅವತಾರದ ಉದ್ದೇಶ ಪೂರ್ತಿಯಾದ ಬಳಿಕ ನಶ್ವರ ದೇಹವನ್ನು ತ್ಯಜಿಸುತ್ತಾಳೆ," ಎಂದ. ಭಾರೀ ದೊಡ್ಡ ಪವಾಡವನ್ನು ತಾವಿಂದು ನೋಡಲಿದ್ದೇವೆ ಎಂದು ಆಸೆ ಇಟ್ಟುಕೊಂಡು ಬಂದ ಜನರು ನಿರಾಶೆಯಿಂದ ಹಿಂತಿರುಗತೊಡಗಿದರು.

ಉತ್ತರ ಪ್ರದೇಶದ ಜಿಲ್ಲಾ ಕೇಂದ್ರ ಉರಾಯಿಯಿಂದ ೪೭ ಕಿಲೋಮೀಟರು ದೂರದಲ್ಲಿರುವ ಜತೌನಿನ ಸಮೀಪದಲ್ಲಿ ಸುಮಾರು ೬೦೦ ಕುಟುಂಬಗಳು ನೆಲಸಿರುವ ಗ್ರಾಮ ಆಲಂಪುರ. ಈ ಗ್ರಾಮದಲ್ಲಿ ಬಹಳಷ್ಟು ಮಂದಿ ಪರಿಶಿಷ್ಟಜಾತಿಗೆ ಸೇರಿದ ತೀರಾ ಹಿಂದುಳಿದ ವರ್ಗದವರು. ಕೆಲವು ಬ್ರಾಹ್ಮಣರ ಕುಟುಂಬಗಳೂ ಇಲ್ಲಿವೆ. ಅವುಗಳಲ್ಲಿ ರಮಾಶಂಕರ ದೀಕ್ಷಿತನ ಕುಟುಂಬವೂ ಒಂದು. ಎರಡು ಎಕರೆ ಜಮೀನು ಆವನ ಪಾಲಿಗಿತ್ತು. ರಮಾಶಂಕರ ದೀಕ್ಷಿತನ ಪತ್ನಿ ಮೀರಾದೇವಿ. ರಮಾಶಂಕರನಿಗೆ

ನಾಲ್ವರು ಪುತ್ರಿಯರು, ಒಬ್ಬ ಮಗ. ಎಲ್ಲರಿಗಿಂತ ದೊಡ್ಡ ಮಗಳ ಹೆಸರು ಕಲ್ಪಾನಾದೇವಿ. ಆಕೆಯನ್ನು ಸಮೀಪದ ಸಿರಾಯಿ ಗ್ರಾಮದ ರಾಮಕುಮಾರನಿಗೆ ವಿವಾಹಮಾಡಿ ಕೊಡಲಾಗಿತ್ತು. ಅವಳಿಗಿಂತ ಕಿರಿಯವಳಾದ ಅರ್ಚನಾದೇವಿಯನ್ನು ರಾಮಸೇವಕ ಎಂಬಾತ ವಿವಾಹವಾಗಿದ್ದ.

ರಾಮಕುಮಾರ ತಂತ್ರಶಾಸ್ತ್ರದಲ್ಲಿ ಪರಿಣತನಾಗಿದ್ದ. ಹದಿನಾರರ ಹರೆಯದ ನೀರಜಳಿಗೆ ರಾಮ್‌ಜಿ ಮತ್ತು ಶಾಮ್‌ಜಿ ಇಬ್ಬರು ತಮ್ಮಂದಿರು. ಅವರಿಬ್ಬರೂ ಹೈಸ್ಕೂಲು ವಿದ್ಯಾಭ್ಯಾಸ ಮುಂದುವರಿಸುತ್ತಿದ್ದರು.

ನೀರಜ ಕುಟೋವಾದ ಪ್ರಾಥಮಿಕ ಶಾಲೆಯಲ್ಲಿ ೭ನೆಯ ತರಗತಿಯವರೆಗೆ ಕಲಿತಿದ್ದಳು. ಮಂದಬುದ್ಧಿಯ ನೀರಜಳು ತನ್ನ ಸೋದರಿಯರಿಗಿಂತಲೂ ಚೆಲುವೆಯಾಗಿದ್ದಳು. ಅವಳ ಇನ್ನೋರ್ವ ಅಕ್ಕನ ಹೆಸರು ಸಾಧನಾ. ಆಕೆಗಿನ್ನೂ ಮದುವೆಯಾಗಿರಲಿಲ್ಲ.

ರಮಾಶಂಕರ ದೀಕ್ಷಿತನ ಜೀವನ ಆರ್ಥಿಕ ಸಂಕಷ್ಟಗಳ ನಡುವೆಯೂ ಇದ್ದುದರಲ್ಲಿ ನೆಮ್ಮದಿ



ಯಿಂದ ಸಾಗುತ್ತಿತ್ತು. ಕಳೆದ ವರ್ಷ ಜುಲೈನಲ್ಲಿ ನೀರಜ ಇದ್ದಕ್ಕಿದ್ದಂತೆ ತೀವ್ರವಾಗಿ ಅನಾರೋಗ್ಯಕ್ಕೀಡಾದಳು. ಉರಾಯಿ ಸರಕಾರಿ ಆಸ್ಪತ್ರೆಯಲ್ಲಿ ನೀರಜ ಒಂದು ತಿಂಗಳು ಚಿಕಿತ್ಸೆ ಪಡೆದರೂ ಪ್ರಯೋಜನವಾಗದೆ ಕಾನ್‌ಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಿದಳು. ಅಲ್ಲಿಯೂ ಹೆಚ್ಚಿನ ಪರಿಣಾಮವಾಗಲಿಲ್ಲ.

ಈ ಮಧ್ಯೆ ದೊಡ್ಡಮಗಳು ಕಲ್ಪನಾ ತವರಿಗೆ ಬಂದಳು. ಕೆಲವು ದಿನಗಳ ಬಳಿಕ ಅವಳ ಪತಿ ರಾಮಕುಮಾರ್ ಮಾವನ ಮನೆಗೆ ಬಂದ. ಆಗ ಕಲ್ಪನಾ ತನ್ನ ಪತಿಗೆ ಸೋದರಿಯ ಕಾಯಿಲೆಯ ಬಗ್ಗೆ ತಿಳಿಸಿ ಮಂತ್ರ ತಂತ್ರ ವಿಧಾನದಿಂದಲೂ ಅವಳ ಕಾಯಿಲೆಯನ್ನು ವಾಸಿಮಾಡಲಾಗುವುದಿಲ್ಲವೆ ? ಎಂದು ಕೇಳಿದಳು. ರಾಮಕುಮಾರ್ ದೇವಿ ಉಪಾಸನೆ ಮಾಡಿ ಅದರಲ್ಲಿ ಉನ್ನತ ಹಂತಕ್ಕೆ ತಲುಪಿದ್ದನಂತೆ. ಆ ದಿನ ರಾತ್ರಿ ದೇವಿಯ ಆವಾಹನೆ ಮಾಡಿ ನೀರಜಳ ಕಾಯಿಲೆಯ ಬಗ್ಗೆ ವಿಚಾರಿಸಲು ನಿರ್ಧರಿಸಿದ.

ದೇವಿಯ ಉಪಾಸನೆ

ಆ ದಿನ ರಾತ್ರಿ ರಾಮಕುಮಾರ ತನ್ನ ಮಾವನ ಮನೆಯಲ್ಲಿ ಹವನಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲಾ ಮುಗಿಸಿ ೧ ಗಂಟೆಗೆ ಹವನ ವಿಧಿಗಳನ್ನು ಆರಂಭಿಸಿದ. ರಾಮಕುಮಾರ ಸರಾಯಿ ಕುಡಿದು ಕೋಳಿಯ ಕತ್ತು ಕತ್ತರಿಸಿ ಅದರ ನೆತ್ತರು ಕುಡಿದು. ದೇವಿಯ ಆವಾಹನೆ ಮಾಡಿದ. ಕುಡಿತದ ಅಮಲಿನಲ್ಲಿ ತೂರಾಡುತ್ತಾ, ಹುಚ್ಚಾಬಟ್ಟೆ ಕೂಗಾಡುತ್ತಾ, "ನಾನು ದೇವಿ. ನೀರಜಳ ದೇಹದಲ್ಲಿ ನನ್ನ ಗೆಳತಿ ಸರಸ್ವತಿದೇವಿ.ನೆಲಸಿದ್ದಾಳೆ. 'ಮಾತೆ ಸರಸ್ವತಿದೇವಿಗೆ ಜಯುವಾಗಲಿ, ಎಂದು ಘೋಷಿಸಿ ನೀರಜಳು ಸರಸ್ವತಿದೇವಿಯ ಅವತಾರ ಎಲ್ಲರೂ ಅವಳ ಪಾದಗಳಿಗೆ ವಂದಿಸಿ," ಎಂದು ಘೋಷಿಸಿದ. ರಮಾಶಂಕರ್, ಅವನ ಪತ್ನಿ ಮತ್ತು ಮಕ್ಕಳು ಜೋರಾಗಿ, "ತಾಯಿ ಸರಸ್ವತಿದೇವಿಗೆ ಜಯ ಜಯ" ಎಂದು • ಒಕ್ಕೊರಲಿನಿಂದ ಘೋಷಿಸುತ್ತಾ ನೀರಜಳ ಮುಂದೆ ಸಾಷ್ಟಾಂಗ ವಂದಿಸಿದರು.

ಅಚ್ಚರಿ

ಗಂಟೆಗಟ್ಟಲೆ ವಿವರಿಸಿದರೂ
ಕವನ ಅರ್ಥವಾಗದ ಹುಡುಗ
ಆ ಹುಡುಗಿಯ ಒಂದು
ಕುಡಿನೋಟದಲ್ಲೆ ನೂರಾರು
ಭಾವಗಳ ಅರಿತುಕೊಂಡ

⊙ ಕಲ್ಪನಾ

ತಾಂತ್ರಿಕ ರಾಮಕುಮಾರ ಮಹಾ ಧೂರ್ತನಾಗಿದ್ದ. ನೀರಜಳು ಸರಸ್ವತಿದೇವಿಯ ಅವತಾರವೆಂದು ಎಲ್ಲರೂ ನಂಬುವಂತೆ ಮಾಡಿ ಆಮೂಲಕ ಹಣ ಕಮಾಯಿಸುವುದೇ ಅವನ ಸಂಚಾಗಿತ್ತು. ಕ್ರಮೇಣ ಅವನ ಸಂಚಿನಲ್ಲಿ ರಾಜೇಂದ್ರ ಸಿಂಗ್ ಹಾಗೂ ದೇವೇಂದ್ರ ಉಪಾಧ್ಯಾಯರು ಶಾಮೀಲಾದರು.

``೧೯೯೬ರ ಅಕ್ಟೋಬರ್ ೬ರ ರಾತ್ರಿ ನೀರಜ ಇದ್ದಕ್ಕಿದ್ದಂತೆಯೇ ತಾನು ಸರಸ್ವತಿದೇವಿಯ ಅವತಾರ ಎಂದು ಹೇಳತೊಡಗಿದ್ದಾಳೆ. ತನ್ನನ್ನು ಗ್ರಾಮದ ಹೊರಗೆ ಕೆರೆಯಬಳಿ ಕರೆದೊಯ್ಯಿರಿ. ಅಲ್ಲಿ ತಾನು ಯೋಗ ಸಮಾಧಿ ಹೊಂದುತ್ತೇನೆ ಎಂದು ಆಕೆ ಹೇಳುತ್ತಿದ್ದಾಳೆ. ನಾವು ಆಕೆಯ ಮನ: ಪರಿವರ್ತನೆಗೆ ಬಗೆಬಗೆಯಲ್ಲಿ ಪ್ರಯತ್ನಿಸಿ ವಿಫಲರಾದೆವು. ಹೀಗಾಗಿ ಅನ್ಯ ಮಾರ್ಗವೇ ಇಲ್ಲವೆ ಗ್ರಾಮದ ಕೆರೆಯ ದಡದಲ್ಲಿ ಒಂದು ಕುಟೀರ ನಿರ್ಮಿಸಿ ಅಲ್ಲಿ ನೀರಜಳ ವಾಸಕ್ಕೂ ಅವಳ ಆಧ್ಯಾತ್ಮ ಸಾಧನೆಗೂ ವ್ಯವಸ್ಥೆ ಮಾಡಬೇಕೆಂದಿದ್ದೇವೆ. ಸರಸ್ವತಿ ದೇವಿಯ ಆಶಯ ಈಡೇರದಿದ್ದರೆ ದೇವಿಯ ಶಾಪ ಇಡೀ ಗ್ರಾಮಕ್ಕೆ ತಟ್ಟಿ ಭಾರೀ ವಿಪತ್ತು ಎದುರಾಗಬಹುದು" ಮುಂತಾಗಿ ಗ್ರಾಮದಲ್ಲಿ ರಾಮಕುಮಾರನ ಪ್ರಚಾರ ಸಾಗಿತು. ಗ್ರಾಮದ ಮುಗ್ಧ ಜನ ರಮಾಶಂಕರ ದೀಕ್ಷಿತ ಮತ್ತು ಅವರ ಕುಟುಂಬದವರ ಮಾತನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದರು. 'ಸರಸ್ವತಿ ದೇವಿ'ಗಾಗಿ

ಗ್ರಾಮದ ಕೆರೆಯ ಸಮೀಪ ಒಂದು ಕುಟೀರ ನಿರ್ಮಿಸಿ ಅದರಲ್ಲಿ ಅಲಂಕೃತ ಮಂಟಪವೊಂದ ನ್ನಿರಿಸಿ ಅಲ್ಲಿ ನೀರಜ ಉರ್ಫ್ ಸರಸ್ವತಿದೇವಿ ಯನ್ನು ಪ್ರತಿಷ್ಠಾಪಿಸುವ ನಿರ್ಧಾರ ಮಾಡಿದರು ಗ್ರಾಮಸ್ಥರು.

ಕಳೆದ ವರ್ಷ ಅಕ್ಟೋಬರ್ ತಿಂಗಳಲ್ಲಿ ದೀಪಾವಳಿಯ ದಿನ ಪ್ರಾತಃಕಾಲ ೬ ಗಂಟೆಗೆ ನೀರಜಳನ್ನು "ಸರಸ್ವತಿ ದೇವಿಗೆ ಜಯ ಜಯ" ಎಂದು ಘೋಷಿಸುತ್ತಾ ಮೆರವಣಿಗೆಯಲ್ಲಿ ಕರೆ ದೊಯ್ಯುತ್ತಾ, ಗ್ರಾಮದ ಕೆರೆಯ ಸಮೀಪದ ನಿರ್ಮಿಸಿದ ಕುಟೀರದೊಳಗಿನ ಅಲಂಕೃತ ಮಂಟಪದಲ್ಲಿ ಪ್ರತಿಷ್ಠಾಪಿಸಲಾಯಿತು.

ಆಲಂಪುರ ಮತ್ತು ಆಸುಪಾಸಿನ ಗ್ರಾಮ ಗಳ ಧರ್ಮಾಂಧರು ಈ ಪ್ರಕರಣವನ್ನು ತಮ್ಮ ಸ್ವಾರ್ಥಸಾಧನೆಗೆ ಯಥೇಚ್ಛವಾಗಿ ಬಳಸಿಕೊಂ ಡರು. "ನೀರಜ ದೀಕ್ಷಿತಳು ಸಾಕ್ಷಾತ್ ಸರಸ್ವತಿ ದೇವಿಯ ಅವತಾರವಾಗಿದ್ದಾಳೆ. ಆಕೆ ಆಹಾರ-ಪಾನೀಯ ಸ್ವೀಕರಿಸುವುದನ್ನು ನಿಲ್ಲಿಸಿದ್ದಾಳೆ. ಮಲ ಮೂತ್ರಗಳ ಬಾಧೆಯೂ ಅವಳಿಗಿಲ್ಲ. ಯಾರೇ ಆಗಲಿ ಏನನ್ನಾದರೂ ಬೇಡಿಕೊಂಡರೆ ಅದನ್ನು ಆಕೆ ಅನುಗ್ರಹಿಸುತ್ತಾಳೆ. ಕುರುಡನಿಗೆ ಕಣ್ಣು, ಮೂಕನಿಗೆ ಮಾತನಾಡುವ ಶಕ್ತಿ, ಹೆಳವ ನಿಗೆ ನಡೆದಾಡುವ ಶಕ್ತಿ ನೀಡುತ್ತಾಳೆ. ಸಂತಾನ ಹೀನ ಸ್ತ್ರೀಯರಿಗೆ ಸಂತಾನ ಭಾಗ್ಯ ಕರುಣಿಸು ತ್ತಾಳೆ. ಭಯಂಕರ ಕಾಯಿಲೆಗಳ ಪಾಶದಿಂದ ನಿಮ್ಮನ್ನು ಮುಕ್ತ ಗೊಳಿಸುತ್ತಾಳೆ....." ಹೀಗೆ ತರಹಾವರಿ ಪ್ರಚಾರ ನಡೆಯಿತು.

ಸರಸ್ವತಿ ಸೇವಾದಳ

ಏತನ್ಮಧ್ಯೆ ಜನವರಿಯಲ್ಲಿ ಗ್ರಾಮದ ಮುಖಂಡ ರಾಜೇಂದ್ರ ಸಿಂಗ್ ಸೇಂಗರ್ ಸುಮಾರು ೫೦-೬೦ ಜನ ಉತ್ಸಾಹೀ ಯುವಕ ರನ್ನು ಸಂಘಟಿಸಿ 'ಸರಸ್ವತಿ ಸೇವಾದಳ' ಎಂಬ ಸಂಘಟನೆ ಸ್ಥಾಪಿಸಿ ತಾನೇ ಅದರ ಅಧ್ಯಕ್ಷನಾದ. ಈ ಸಂಘಟನೆಯ ಸದಸ್ಯರು ತಮ್ಮ ಶರ್ಟುಗಳ ಮೇಲೆ 'ಸರಸ್ವತಿ ಸೇವಾದಳ' ಎಂಬ ಕೆಂಪು ಅಕ್ಷರಗಳ ಲಾಂಛನ ಬಿಡಿಸಿಕೊಂಡಿದ್ದರು. ಜಾತ್ರೆಯ ಮೈದಾನಿನಲ್ಲಿ ಶಿಸ್ತನ್ನು ನೋಡಿಕೊ ಳ್ಳುವುದು ಅವರ ಹೊಣೆಯಾಗಿತ್ತು. 'ಆಧುನಿಕ ಸರಸ್ವತಿದೇವಿಗೆ ಅರ್ಪಿಸಲು ಭಕ್ತರು ತಂದ ಹೂ ಹಣ್ಣು, ಧನ ಧಾನ್ಯಗಳನ್ನು ಸಂಗ್ರಹಿಸಿ ಅವನ್ನು ಜಾಗ್ರತೆಯಿಂದ ರಕ್ಷಿಸುವುದು ಹಾಗೂ ಜಾತ್ರೆಯ ಬಯಲಲ್ಲಿ ಹೊಟೇಲುಗಳು, ಅಂಗ ಡಿಗಳಿಂದ ಬಾಡಿಗೆ ಸಂಗ್ರಹಿಸುವುದು 'ದಳ'ದ ಸದಸ್ಯರ ಹೊಣೆಯಾಗಿತ್ತು.

ಸರಸ್ವತಿದೇವಿಯ 'ಪ್ರಭಾವದಿಂದ' ಸರಸ್ವತಿ ಸೇವಾದಳಕ್ಕೆ ಉತ್ತಮ ಸಂಪಾದನೆಯಾಗುತ್ತಿ ದ್ದುದು ಕಟೋವಾದ ಪೊಲೀಸ್ ಠಾಣೆಯ ವರಿಷ್ಠ ಅಧಿಕಾರಿ ಎ.ಡಿ. ಸಿಂಗ್‌ನ ಗಮನ ಸೆಳೆಯಿತು. ಆತ ನೀರಜಳ ತಂದೆಯೊಂದಿಗೆ ಗುಪ್ತ ಮಾತುಕತೆ ನಡೆಸಿ ಭಕ್ತಾದಿಗಳು ನೀಡಿದ ದಾನ, ದಕ್ಷಿಣೆ ರೂಪದಲ್ಲಿ ನಿತ್ಯ ಸಂಗ್ರಹವಾದ ಮೊತ್ತದಲ್ಲಿ ಶೇ. ೧೦ ಭಾಗ ತನಗೆ ಸಲ್ಲತಕ್ಕದ್ದು ಎಂದು ಶರತ್ತು ವಿಧಿಸಿದನಂತೆ. ಇದರೊಂದಿಗೆ 'ಸರಸ್ವತಿ ದೇವಿಯ ದರ್ಶನಕ್ಕಾಗಿ ದೂರದೂ ರದ ಗ್ರಾಮಗಳಿಂದ ವಾಹನಗಳಲ್ಲಿ ಬರುವವರಿಂ ದಲೂ ಪೊಲೀಸರು ಪ್ರತಿ ವಾಹನಗಳ ಮಾಲಿಕ ರಿಂದ ೧೦ ರೂ. ವಸೂಲು ಮಾಡತೊಡಗಿದ ರೆಂದು ಹೇಳಲಾಗುತ್ತಿದೆ. ಆಲಂಪುರಕ್ಕೆ ಪ್ರತಿದಿನ ನೂರು ವಾಹನಗಳು ಆಗಮಿಸುತ್ತಿದ್ದವು. ಒಂದೊಂದು ವಾಹನಕ್ಕೆ ತಲಾ ೧೦ ರೂಪಾಯಿ ಗಳಂತೆ ಪ್ರತಿ ದಿನ ಪೊಲೀಸರ ಜೇಬಿಗೆ ೩೦೦೦ ರೂಪಾಯಿಗಳು ಭರ್ತಿಯಾಗುತ್ತಿದ್ದವು.

ನೀರಜ ಪ್ರತಿದಿನ ಮುಂಜಾನೆ ೮ ಗಂಟೆ ಯಿಂದ ರಾತ್ರಿ ೧೦ ಗಂಟೆಯವರೆಗೆ ಭಕ್ತಾದಿಗ ಳಿಗೆ ದರ್ಶನ ನೀಡುತ್ತಿದ್ದಳು. ಅಷ್ಟು ದೀರ್ಘ ಕಾಲ ಆಕೆ ಮಂಟಪದಲ್ಲಿ 'ವೀಣಾ ಪಾಣಿ'ಯಾಗಿ ಕುಳಿತಿರುತ್ತಿದ್ದಳು. ರಾತ್ರಿ ೧೦ ಗಂಟೆಯಾದ ಬಳಿಕ ಸರಸ್ವತಿದೇವಿಯ ಮಂಟಪದ ಎದುರು ಪರದೆ ಇಳಿಸಿ ಆ ದಿನದ ದರ್ಶನ ಕಾರ್ಯಕ್ರಮ ಮುಕ್ತಾಯವಾಗುತ್ತಿತ್ತು.

೩೦ ಲಕ್ಷ ಫೋಟೋಗಳು!

೧೯೯೬ರ ಅಕ್ಟೋಬರ್ ೧೩ನೇ ದಿನಾಂಕ

ದಿಂದ ಈ ವರ್ಷ ಮಾರ್ಚ್ ೩೦ರ ವರೆಗೆ ಸ್ವಯಂ ಘೋಷಿತ ಸರಸ್ವತಿದೇವಿಯ ಉರುಫ್ ನೀರಜಳ ೩೦ ಲಕ್ಷಕ್ಕೂ ಅಧಿಕ ಭಾವಚಿತ್ರಗಳು ಮಾರಾಟವಾದವು. ಚಿತ್ರಗಳ ಮಾರಾಟದಿಂದ ೧ ಕೋಟಿ ರೂ. ಸಂಗ್ರಹವಾಯಿತು. ಅಕ್ಟೋಬರ್ ೧೩ ರಿಂದ ಮಾರ್ಚ್ ೩೦ ರ ವರೆಗೆ ಆಲಂಪುರಕ್ಕೆ ಭಕ್ತಾದಿಗಳು ಪ್ರಯಾಣಿಸುತ್ತಿದ್ದ ಕೆಲವು ವಾಹನಗಳು ಅಪಘಾತಕ್ಕೀಡಾಗಿ ೩೦ ಜನ ಸತ್ತು ನೂರಕ್ಕೂ ಹೆಚ್ಚು ಜನ ಗಾಯಗೊಂಡರು. ಹೀಗಿದ್ದರೂ 'ಸರಸ್ವತಿದೇವಿಯ ಅವತಾರ ನೋಡಲು ಆಲಂಪುರಕ್ಕೆ ಬರುವವರ ಸಂಖ್ಯೆ ದಿನೇ ದಿನೇ ವೃದ್ಧಿಸುತ್ತಿತ್ತು. ಇದಕ್ಕೆ ಮುಖ್ಯ ಕಾರಣ ಸರಸ್ವತಿ ಸೇವಾದಳದವರ ಪ್ರಚಾರ ವೈಖರಿ. "ಕಳೆದ ದೀಪಾವಳಿಯಿಂದ ಸಮಾಧಿ ಸ್ಥಿತಿಯಲ್ಲಿ ಕುಳಿತಿರುವ ನೀರಜಳು ಈ ವರ್ಷ ಮಾರ್ಚ್‌ನಲ್ಲಿ ಹೋಳಿ ಹಬ್ಬದ ಸಂದರ್ಭದಲ್ಲಿ ಶಿಲೆಯಾಗಿ ಪರಿವರ್ತನೆ ಹೊಂದುತ್ತಾಳೆ. ಅವಳ ದರ್ಶನ ಮಾಡಲು ಬಯಸುವವರು ಮಾರ್ಚ್ ೩೦ರ ಒಳಗಾಗಿ ಬಂದು ದರ್ಶನ ಪಡೆದು ತಮ್ಮ ಮನೋಭೀಷ್ಟವನ್ನು ಈಡೇರಿಸಿಕೊಳ್ಳಬಹುದು." ಈ ಪ್ರಚಾರದಿಂದ ಪ್ರಭಾವಿತರಾದ ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶದ ಧರ್ಮಭೀರು ಜನ ಆಲಂಪುರಕ್ಕೆ ತಂಡೋಪತಂಡವಾಗಿ ಬರತೊಡಗಿದರು.

ಜಿಲ್ಲಾಧಿಕಾರಿಗೆ ದೂರು

ಮಾರ್ಚ್ ೮ರಂದು ಆಲಂಪುರದ ಕೆಲವು ವಿವೇಕಿಗಳು ಜನಪ್ರತಿನಿಧಿಗಳ ತಂಡವನ್ನು ರಚಿಸಿಕೊಂಡು ಸಕ್ಸೇನಾ ಅವರನ್ನು ಭೇಟಿಯಾಗಿ ಧರ್ಮದ ಹೆಸರಿನಲ್ಲಿ ಕೆಲವು ಧರ್ಮಾಂಧರು ಸುಳ್ಳು ಪ್ರಚಾರ ನಡೆಸಿ ಮುಗ್ಧ ಜನತೆಯನ್ನು ದೋಚುತ್ತಿದ್ದಾರೆ ಎಂದು ದೂರು ಸಲ್ಲಿಸಿದರು.



'ಪ್ರತಿದಿನವೂ ೩೦-೪೦ ಸಾವಿರ ಮಂದಿ ಗ್ರಾಮಕ್ಕೆ ಬರುತ್ತಿದ್ದಾರೆ. ಸೋಮವಾರ, ಶುಕ್ರವಾರಗಳಂದು ಭಕ್ತಾದಿಗಳ ಸಂಖ್ಯೆ ಒಂದು

ಲಕ್ಷವನ್ನೂ ಧಾಟುತ್ತದೆ' ಎಂದು ಜನಪ್ರತಿನಿಧಿಗಳ ತಂಡ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ದೂರಿನಲ್ಲಿ ಸ್ಪಷ್ಟ ಪಡಿಸಲಾಗಿತ್ತು.

ಜಿಲ್ಲಾಧಿಕಾರಿಗಳು ಈ ದೂರನ್ನು ವಿವರವಾಗಿ ಪರಿಶೀಲಿಸಿ ತಕ್ಷಣ ಆಲಂಪುರಕ್ಕೆ ತೆರಳಿ ಅಲ್ಲಿನ ಪರಿಸ್ಥಿತಿಯನ್ನು ಪ್ರತ್ಯಕ್ಷ ಕಂಡು, ವಿಶ್ಲೇಷಿಸಿ ವಿವರವಾದ ವರದಿ ಸಲ್ಲಿಸಲು ಜಿಲ್ಲೆಯ ಪೊಲೀಸ್ ಮಹಾ ನಿರೀಕ್ಷಕರು ಹಾಗೂ ವರಿಷ್ಠ ವೈದ್ಯಾಧಿಕಾರಿಗೆ ಆದೇಶ ನೀಡಿದರು. ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಪ್ರಧಾನ ವೈದ್ಯಕೀಯ ಅಧಿಕಾರಿ ಡಾ. ಲೀಲಾಪ್ರಸಾದ್ ಮೂವರು ವೈದ್ಯರ ತಂಡವನ್ನು ರಚಿಸಿದರು. ಈ ತಂಡದವರು ಆಲಂಪುರ ಗ್ರಾಮಕ್ಕೆ ತೆರಳಿ ನೀರಜ ದೀಕ್ಷಿತಳ ಆರೋಗ್ಯದ ಸ್ಥಿತಿಯನ್ನು ಪರೀಕ್ಷಿಸುವ ಉದ್ದೇಶ ಹೊಂದಿದ್ದರು. ಜಿಲ್ಲಾಧಿಕಾರಿಗಳು ಇನ್ನೊಂದು ವ್ಯವಸ್ಥೆಯನ್ನೂ ಮಾಡಿದ್ದರು. ಅವರು ಲಕ್ನೋದಲ್ಲಿರುವ ವಿಜ್ಞಾನ ಸಂಶೋಧನಾ ಸಂಸ್ಥೆಯ ಅಧಿಕಾರಿಗಳಿಗೆ ಫ್ಯಾಕ್ಸ್ ಸಂದೇಶವನ್ನು ಕಳುಹಿಸಿ ಕೆಲವು ತಜ್ಞರನ್ನು ಆಲಂಪುರಕ್ಕೆ ಕಳುಹಿಸಿ ಸರಸ್ವತಿದೇವಿ ಅವತಾರದ ಸತ್ಯಾಸತ್ಯತೆಯನ್ನು ಪರಿಶೀಲಿಸಲು ನೆರವಾಗಲು ಕೇಳಿಕೊಂಡರು.

ಮರುದಿನ ಮುಖ್ಯ ವೈದ್ಯಾಧಿಕಾರಿಣಿ ಡಾ. ಮೃದುಲಾ ರಾಯ್ ಅವರ ನೇತೃತ್ವದಲ್ಲಿ ಮೂವರು ಸದಸ್ಯರ ತಂಡ ಸಂಪೂರ್ಣ ಪೊಲೀಸ್ ರಕ್ಷಣೆಯಲ್ಲಿ ಆಲಂಪುರಕ್ಕೆ ತಲುಪಿತು. ನೀರಜಳು ಕಳೆದ ನಾಲ್ಕೈದು ತಿಂಗಳಿನಿಂದ ಆಹಾರ ಸ್ವೀಕರಿಸಿರುವಳೋ ಇಲ್ಲವೋ ಎಂಬುದನ್ನು ಅವಳ ಆರೋಗ್ಯ ಪರಿಶೀಲಿಸಿ ತಿಳಿದುಕೊಳ್ಳುವುದು ಈ ತಂಡದ ಉದ್ದೇಶವಾಗಿತ್ತು.

ಜಾತ್ರೆಯ ಸ್ಥಳದಲ್ಲಿ ವೈದ್ಯರ ತಂಡ ಕಾಣಿಸಿಕೊಳ್ಳುತ್ತಲೇ ಭಾರೀ ಕೋಲಾಹಲವೆದ್ದಿತು. ನೀರಜಳ ಸುತ್ತ ನೆರೆದಿದ್ದ ಮಹಿಳೆಯರ ತಂಡವಂತೂ ಬೊಬ್ಬಾಟದಲ್ಲಿ ತೊಡಗಿತು. ನೀರಜಳ ಆರೋಗ್ಯ ತಪಾಸಣೆಗೆ ಬಂದಿದ್ದ ತಂಡ ರಮಾಶಂಕರ ದೀಕ್ಷಿತನನ್ನೂ ಇತರ ಪ್ರಮುಖರನ್ನೂ ಭೇಟಿಯಾಯಿತು. "ನಾವು ನೀರಜಳ ರಕ್ತದಲ್ಲಿ ಸಕ್ಕರೆ ಅಂಶದ ಪರಿಶೀಲನೆಗೆ ಬಂದಿರುವೆವು. ತಪಾಸಣೆ ತರುವಾಯ ರಕ್ತದಲ್ಲಿ ಸಕ್ಕರೆಯ ಅಂಶ ಶೂನ್ಯಮಟ್ಟದಲ್ಲಿದೆ ಎಂಬುದು ಸಾಬೀತಾದರೆ ನಾವು ನೀರಜಳನ್ನು ಸರಸ್ವತಿಯ ಅವತಾರವೆಂದು ಘೋಷಿಸುತ್ತೇವೆ," ಎಂದು ವೈದ್ಯಾಧಿಕಾರಿಗಳ ತಂಡದವರು ಹೇಳಿದರು.

ಆದರೆ ರಮಾಶಂಕರ ದೀಕ್ಷಿತ ಮತ್ತು ಸರಸ್ವತಿ ಸೇವಾದಳದ ಇತರರು ವೈದ್ಯರ ತಂಡ ನೀರಜಳನ್ನು ಪರೀಕ್ಷಿಸುವುದನ್ನು ಖಂಡತುಂಡವಾಗಿ ನಿರಾಕರಿಸಿದರು. ಕೊನೆಗೆ ವೈದ್ಯರ ತಂಡ ಪೊಲೀಸರ ನೆರವಿನಿಂದ ನೀರಜಳು ಕುಳಿತಿದ್ದ ಮಂಟಪದ ಸಮೀಪಕ್ಕೆ ತಲುಪಿತು. ಅವಳ ಸುತ್ತ ನೆರೆದಿದ್ದ ಮಹಿಳೆಯರು, "ನೀರಜಳನ್ನು ಮುಟ್ಟಬೇಡಿ. ಮುಟ್ಟಿದರೆ ದೇವಿಯ ಶಾಪಕ್ಕೆ ಗುರಿಯಾಗಿ ಸರ್ವನಾಶವಾಗುತ್ತೀರಿ," ಎಂದು ಕಿರಿಚತೊಡಗಿದರು. ವೈದ್ಯರ ತಂಡ ಅವರ ಕಿರಿಚಾಟವನ್ನು ಲೆಕ್ಕಿಸದೆ ಮುಂದುವರಿಯಿತು.

ವೈದ್ಯರ ತಂಡವನ್ನು ಗಮನಿಸಿ ನೀರಜಳೂ ಜೋರಾಗಿ ಕಿರಿಚತೊಡಗಿದಳು: "ನಿಮ್ಮೆಲ್ಲರನ್ನೂ ಈಗಿಂದೀಗಲೇ ಭಸ್ಮಮಾಡಿ ಬಿಡುತ್ತೇನೆ. ಸರ್ವನಾಶ ಮಾಡಿಬಿಡುತ್ತೇನೆ. ನೀವೆಲ್ಲ ತೆಪ್ಪಗೆ ಇಲ್ಲಿಂದ ಹಿಂತಿರುಗಿ. ಮನೆಗೆ ತಲುಪಿದಾಗ ಅಲ್ಲೇನಾಗಿದೆ ಎಂಬುದು ನಿಮಗೆ ಗೊತ್ತಾಗುತ್ತದೆ." ಅವಳೊಂದಿಗೆ ಇತರ ಕೆಲವು ಮಹಿಳೆಯರೂ ದನಿಗೂಡಿಸಿದರು. ಸರಸ್ವತಿ ಸೇವಾದಳದ ಕಾರ್ಯಕರ್ತರು ಧ್ವನಿವರ್ಧಕದಲ್ಲಿ ಸರಸ್ವತಿ ದೇವಿಯ ಜಯಘೋಷ ಹಾಕತೊಡಗಿದರು. ಜಯ ಘೋಷ ಕೇಳಿ ಜಾತ್ರೆ ಮೈದಾನದಲ್ಲಿ ಸೇರಿದ್ದ ೨೦ ಸಾವಿರಕ್ಕೂ ಅಧಿಕ ಮಂದಿ ಉತ್ಸಾಹಿತರಾಗಿ ಜಯಘೋಷ ಹಾಕಿದರು. ವೈದ್ಯರ ತಂಡ ನಿಸ್ಸಹಾಯಕವಾಗಿ ವಾಪಸಾಯಿತು. ಹೀಗಿದ್ದರೂ ತಂಡದವರು ಆಲಂಪುರದಲ್ಲಿ ತಾವು ಕಂಡ ವಿದ್ಯಮಾನಗಳನ್ನು ಜಿಲ್ಲಾಧಿಕಾರಿಗೆ ವರದಿ ಮಾಡಿದರು.

ನಿತ್ಯವೂ ಸರಿಯಾದ ವೇಳೆಗೆ ಆಹಾರ

ಸ್ವೀಕರಿಸುವ ವ್ಯಕ್ತಿಯ ರಕ್ತದಲ್ಲಿ ೧೩೦ ಮಿಲಿಗ್ರಾಂ ಸಕ್ಕರೆಯ ಅಂಶ ಇದ್ದೇ ಇರಬೇಕು. ಹಲವು ದಿನಗಳ ಕಾಲ ಅನ್ನ ಪಾನೀಯಾದಿಗಳನ್ನು ತ್ಯಜಿಸಿ ವ್ರತ ಆಚರಿಸುತ್ತಿದ್ದರೆ ಅಂಥಾ ವ್ಯಕ್ತಿಯ ರಕ್ತದಲ್ಲಿ ೧೦ ಮಿಲಿಗ್ರಾಂ ಸಕ್ಕರೆಯ ಅಂಶವಿರುತ್ತದೆ. ವ್ಯಕ್ತಿಯ ಶರೀರದ ರಕ್ತದಲ್ಲಿ ಸಕ್ಕರೆಯ ಅಂಶ ಇದ್ದಕ್ಕಿದ್ದಂತೆ ಶೂನ್ಯಮಟ್ಟಕ್ಕೆ ತಲುಪಿದರೆ ಅಂತಹ ವ್ಯಕ್ತಿ ಅಲೌಕಿಕ ಸಿದ್ಧಪುರುಷನೆಂದು ಭಾವಿಸಬಹುದು. ಈ ಹಿನ್ನೆಲೆಯಲ್ಲಿ ನೀರಜಳ ರಕ್ತದಲ್ಲಿ ಸಕ್ಕರೆಯ ಅಂಶವಿದೆಯೋ ಹೇಗೆ ಎಂಬುದನ್ನು ಪರಿಶೀಲಿಸಬೇಕಾದುದು ತೀರಾ ಅವಶ್ಯ. ಆ ಮೂಲಕ ಆಕೆ ಸರಸ್ವತಿಯ ಅವತಾರವೇ ಅಥವಾ ಜನರ ಕಣ್ಣಿಗೆ ಮಂಕುಬೂದಿ ಎರಚುವ ನಾಟಕ ಮಾಡುತ್ತಿದ್ದಾಳೆಯೋ ಎಂಬುದು ನಿರ್ಧಾರವಾಗುವುದು ಎಂದು ವೈದ್ಯರ ತಂಡ ವರದಿಯಲ್ಲಿ ಸೂಚಿಸಿತು.

ಆಲಂಪುರದ 'ಸರಸ್ವತಿದೇವಿ' ಎಷ್ಟೊಂದು ತೀವ್ರವಾಗಿ ಕಿರಿಚುತ್ತಿದ್ದಳೆಂದರೆ ಅವಳ ಆರೋಗ್ಯ ಉತ್ತಮ ಸ್ಥಿತಿಯಲ್ಲಿದೆ ಎಂಬುದು ದೃಢವಾಗಿದೆ. ಹಲವು ದಿನಗಳಿಂದ ಆಹಾರ ಸ್ವೀಕರಿಸದ ವ್ಯಕ್ತಿ ಇಷ್ಟು ತೀವ್ರವಾಗಿ ಕಿರಿಚಲು ಶಕ್ತವಾಗುವುದಿಲ್ಲ. ಹೀಗಾಗಿ ಆಕೆ ನಿತ್ಯ ಆಹಾರ ಸ್ವೀಕರಿಸುತ್ತಿದ್ದಾಳೆ ಎಂಬುದು ಸ್ಪಷ್ಟವಾಗುತ್ತದೆ ಎನ್ನುವುದನ್ನೂ

ತಂಡ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ವರದಿಯಲ್ಲಿ ಸ್ಪಷ್ಟಪಡಿಸಿತು.

ಆಲಂಪುರ ಗ್ರಾಮಕ್ಕೆ ವೈದ್ಯರ ತಂಡ ಭೇಟಿ ನೀಡಿ ಹೋದ ತರುವಾಯ ಗ್ರಾಮದಲ್ಲಿ ಪೋಲೀಸ್ ಪಹರೆ ಹಾಕಲಾಯಿತು. ಭಕ್ತಾದಿಗಳ ಆಗಮನವೂ ಕಡಿಮೆಯಾಯಿತು. ಇತ್ತ ತಾಂತ್ರಿಕ ರಾಮಕುಮಾರ ಹಾಗೂ ರಮಾಶಂಕರ ಹೊಸ ಹೊಸ ಉಪಾಯಗಳನ್ನು ಹೂಡತೊಡಗಿದರು. ಮಾರ್ಚ್ ೨೫ರಂದು ಮಾತೆ ಸರಸ್ವತಿ ದೇವಿ ಶಿಲೆಯಾಗಿ ಪರಿವರ್ತನೆ ಹೊಂದಲಿದ್ದಾಳೆ ಎಂದು ಭಾರೀ ಪ್ರಚಾರ ಕೈಗೊಳ್ಳಲಾಯಿತು. 'ಆಧುನಿಕ ಸರಸ್ವತಿದೇವಿಯ' ದೊಡ್ಡ ದೊಡ್ಡ ಭಾವಚಿತ್ರದ ಪೋಸ್ಟರುಗಳು ಗ್ರಾಮದಾದ್ಯಂತ ರಾರಾಜಿಸಹತ್ತಿದವು. ಇದರ ಪರಿಣಾಮವಾಗಿ ಮತ್ತೆ ಆಲಂಪುರಕ್ಕೆ ಭಕ್ತಾದಿಗಳ ಪ್ರವಾಹ ಹರಿಯತೊಡಗಿತು. ಈಗ ಜಿಲ್ಲಾ ಆಡಳಿತ ಎಚ್ಚೆತ್ತುಕೊಂಡಿತು. ನಾಲ್ಕೈದು ದಿನಗಳಲ್ಲಿ ಲಕ್ನೋದಿಂದ ವಿಜ್ಞಾನಿಗಳ ತಂಡವೊಂದು ಹಳ್ಳಿಗೆ ಆಗಮಿಸಿ ನೀರಜಳ ಆರೋಗ್ಯ ತಪಾಸಣೆ ನಡೆಸಲಿದೆ ಎಂದು ಸರಕಾರದ ವಕ್ತಾರರು ಘೋಷಿಸಿದರು.

ಸರಕಾರದ ವಕ್ತಾರರು ಘೋಷಿಸಿದಂತೆ ನಾಲ್ಕೈದು ದಿನಗಳಲ್ಲಿ ತಜ್ಞರ ತಂಡ ಲಕ್ನೋದಿಂದ ಆಲಂಪುರಕ್ಕೆ ತಲುಪಿತು. ಆ ದಿನ ೨೦,೦೦೦ಕ್ಕೂ ಅಧಿಕ ಮಂದಿ ನೀರಜಳ ಮಂಟಪದ ಸಮ್ಮುಖದಲ್ಲಿ ಮೈದಾನದಲ್ಲಿ ನೆರೆದಿದ್ದರು. ಹದಿಮೂರು ಸದಸ್ಯರನ್ನೊಳಗೊಂಡ ವಿಜ್ಞಾನಿಗಳ ತಂಡದವರು ಈ ಭಕ್ತಸಮೂಹದೊಂದಿಗೆ ಬೆರೆತು ಅವರ ಮಾತುಕತೆಗಳನ್ನು ಗಮನವಿಟ್ಟು ಆಲಿಸತೊಡಗಿದರು. ಆನಂತರ ತಂಡದ ಮುಖ್ಯಸ್ಥ ಆರ್.ಡಿ. ರಾವ್ ಅವರು ತಮ್ಮ ಸಹಯೋಗಿಗಳೊಂದಿಗೆ ನೀರಜಳ ದರ್ಶನ ಪಡೆದು ಆಕೆಗೆ ಸಾಷ್ಟಾಂಗ ನಮಸ್ಕರಿಸಿ, 'ನಾವೆಲ್ಲ ಜ್ಞಾನಾರ್ಜನೆಗಾಗಿ ಬಂದಿದ್ದೇವೆ, ನಮಗೆ ದಯವಿಟ್ಟು ಆಧ್ಯಾತ್ಮಿಕ ಮಾರ್ಗದರ್ಶನ ನೀಡಬೇಕು' ಎಂದು ಬೇಡಿಕೊಂಡರು.

ಈ ಮಧ್ಯೆ ಕುಟೊವಾದ ಪೊಲೀಸ್ ಠಾಣೆಯ ವರಿಷ್ಠ ಪೊಲೀಸ್ ಅಧಿಕಾರಿ ವಿ.ಡಿ. ಸಿಂಹ ಅವರು ಲಕ್ನೋದಿಂದ ವಿಜ್ಞಾನಿಗಳ ತಂಡ ಭಕ್ತಾದಿಗಳ ವೇಷದಲ್ಲಿ ಆಲಂಪುರಕ್ಕೆ ಬಂದಿದೆ ಎಂಬ ಸೂಚನೆಯನ್ನು ರಮಾಶಂಕರ ದೀಕ್ಷಿತ

ಉಳಿದ ಪ್ರಾಣಿಗಳಿಗೆ ಹೋಲಿಸಿದರೆ ಆನೆಗಿರುವ ವೈಶಿಷ್ಟವೇನು? ಸೊಂಡಿಲಂತೂ ಸರಿಯೆ. ಅಲ್ಲದೆ ನಾಲ್ಕು ಮೊಳಕಾಲಿರುವ ಪ್ರಾಣಿಯೆಂದರೆ ಅದೊಂದೆ. ತಿಮಿಂಗಿಲವನ್ನು ಹೊರತುಪಡಿಸಿದರೆ ಆನೆಯೊಂದೆ ಅತಿ ಭಾರವಾದ ಪ್ರಾಣಿ. ಎಂಭತ್ತರಿಂದ ತೊಂಭತ್ತು ಜನರ ತೂಕದಷ್ಟು ಅದರ ಭಾರ.

ರಿಗೆ ಕೊಟ್ಟಾಗ ಅವರು ತಮ್ಮ ಮಗಳಿಗೆ ಜಾಗರೂಕಳಾಗಲು ತಿಳಿಸಿದರು. ಸರಸ್ವತಿ ಸೇವಾದಳದ ಕಾರ್ಯಕರ್ತರೂ ಜಾಗ್ರತರಾದರು.

ಸರಸ್ವತಿದೇವಿಯ ಸಂದರ್ಶನ

ವಿಜ್ಞಾನಿಗಳ ತಂಡ ಬಹಳ ಪ್ರಯಾಸದಿಂದ ನೀರಜಳ ದರ್ಶನ ಪಡೆದು ತಮ್ಮ ಕೆಲವು ಸಂದೇಹಗಳಿಗೆ ಅವಳಿಂದ ಉತ್ತರ ಪಡೆಯಲು ಪ್ರಯತ್ನಿಸಿತು. ಆದರೆ ಧರ್ಮಗ್ರಂಥಗಳಲ್ಲಿ ಅಡಕವಾಗಿರುವ ಕೆಲವು ಗಹನವಾದ ಧಾರ್ಮಿಕ ಪ್ರಶ್ನೆಗಳಿಗೆ ಆಕೆ ಉತ್ತರಿಸಲು ಅಸಮರ್ಥಳಾದಳು. ಮರುದಿನ ಮತ್ತೆ 'ಸರಸ್ವತಿ ದೇವಿಯ' ದರ್ಶನ ಪಡೆಯುವುದಾಗಿ ಹೇಳಿ ವಿಜ್ಞಾನಿಗಳ ತಂಡ ವಾಪಸಾಯಿತು.

ಮಾರ್ಚ್ ೧೮ರಂದು ವಿಜ್ಞಾನಿಗಳ ತಂಡ ಪ್ರಾಂತೀಯ ಸಶಸ್ತ್ರ ಪೊಲೀಸ್ ದಳದ ಸಹಾಯದೊಂದಿಗೆ ಆಲಂಪುರ ಗ್ರಾಮವನ್ನು ತಲುಪಿತು. ವಿಜ್ಞಾನಿಗಳ ತಂಡ ನೇರವಾಗಿ ನೀರಜಳ ಸಮ್ಮುಖದಲ್ಲಿ ಪ್ರಶ್ನೆಗಳ ಸುರಿಮಳೆ ಆರಂಭಿಸಿತು. ಉತ್ತರಿಸುತ್ತಿರುವ ಸಂದರ್ಭದಲ್ಲಿ ಅವಳ ತುಟಿಗಳು ಭಯದಿಂದ ಕಂಪಿಸತೊಡಗಿದವು. ಆರ್.ಡಿ. ರಾಮ್ ನೀರಜಳನ್ನು ಪ್ರಶ್ನಿಸಿದರು:

"ಉಪನಿಷತ್ತುಗಳ ಸಂಖ್ಯೆ ಎಷ್ಟು?" "ವೇದಗಳ ಹೆಸರುಗಳನ್ನು ಹೇಳಿ?" ಬಹಳ ಯೋಚಿಸಿದ ಬಳಿಕ ನೀರಜಳು 'ಉಪನಿಷತ್ತುಗಳು ಎಂಟು, ಎಂದು ಉತ್ತರಿಸಿದಳು.

"ಸರಸ್ವತಿದೇವಿಯನ್ನು ಸಂತೃಪ್ತಗೊಳಿಸುವ ಮಂತ್ರ ಅಥವಾ ರಾಗ ಯಾವುದು?"

ನೀರಜಳಿಂದ ಉತ್ತರವಿಲ್ಲ.

ಧರ್ಮ ಜಿಜ್ಞಾಸೆಗೆ ಸಂಬಂಧಿಸಿದಂತೆ ಅನೇಕ ಪ್ರಶ್ನೆಗಳಿಗೆ ಉತ್ತರಿಸಲು ಆಕೆ ಅಸಮರ್ಥಳಾದಳು.

"ಉಪನಿಷತ್ತು ಅಥವಾ ವೇದಗಳನ್ನು ರಚಿಸಿದವರು ಋಷಿ-ಮುನಿಗಳು. ಅವುಗಳಿಗೂ ದೇವ ದೇವತೆಗಳಿಗೂ ಯಾವ ಸಂಬಂಧವೂ ಇಲ್ಲ. ಆದುದರಿಂದ ಅವುಗಳ ಬಗ್ಗೆ ನನಗೆ ಗೊತ್ತಿಲ್ಲ" ಎಂದಳು ನೀರಜ.

"ಸರಸ್ವತಿಯ ವಾಹನ ಯಾವುದು?" ಎಂದು ಪ್ರಶ್ನಿಸಿದಾಗ 'ಹಂಸ' ಎಂದು ಆಕೆ ಉತ್ತರಿಸಿದಳು. "ಹಾಗಾದರೆ ನಿಮ್ಮ ಹಂಸ ವಾಹನ ಎಲ್ಲಿದೆ?" ಎಂದು ಮರು ಪ್ರಶ್ನೆ ಹಾಕಿದಾಗ ಅದರ ಆವಾಹನೆ ಮಾಡಿದಾಗ ಅದು ಪ್ರತ್ಯಕ್ಷವಾಗುತ್ತದೆ ಎಂದಳು. "ನಿನ್ನ ವಯಸ್ಸೆಷ್ಟು?" ಎಂದು ಪ್ರಶ್ನಿಸಿದಾಗ "ಹತ್ತೊಂಬತ್ತು ವರ್ಷ" ಎಂದು ಉತ್ತರಿಸಿದಳು. ಹದಿನೇಳರ ಹರೆಯದಲ್ಲಿ ಸರಸ್ವತಿದೇವಿಯ ಅವತಾರವಾಗುತ್ತದೆ ಎಂದಳು. ಮತ್ತೆ ತಿರುಗಿ ವಿಜ್ಞಾನಿಗಳ ತಂಡ ವೇದ, ಮಂತ್ರ, ರಾಗಗಳ, ಬಗ್ಗೆ ಪ್ರಶ್ನಿಸಿದಾಗ ನೀರಜಾ ಕ್ರುದ್ಧಳಾದಳು. "ನೀವು ವೈಜ್ಞಾನಿಕರು, ನಿಮ್ಮ ಚಿಂತನೆಗಳೆಲ್ಲ ವೈಜ್ಞಾನಿಕ ತಳಹದಿಯಲ್ಲಿ ಮುಂದುವರಿಯುತ್ತದೆ. ನಮಗೆ ನಿಮ್ಮ ವಿಜ್ಞಾನದ ಬಗ್ಗೆ ಎಳ್ಳಷ್ಟೂ ಗೊತ್ತಿಲ್ಲ. ನಾನು ಉತ್ತರಿಸುವುದೂ ಇಲ್ಲ," ಎಂದಳು ಸಿಟ್ಟಿನಿಂದ.

ಇಷ್ಟೆಲ್ಲಾ ಆದ ಬಳಿಕ ವಿಜ್ಞಾನಿ ಆರ್.ಡಿ. ರಾಮ್ ಅವರು ಧ್ವನಿವರ್ಧಕದ ಮೂಲಕ ಅಲ್ಲಿ ನೆರೆದಿದ್ದ ಭಕ್ತಾದಿಗಳನ್ನು ಉದ್ದೇಶಿಸಿ ಮಾತನಾಡಿದರು. ಪ್ರಶ್ನೋತ್ತರಗಳು ಧ್ವನಿವರ್ಧಕದ ಮೂಲಕ ನೆರೆದಿದ್ದ ಜನ ಸಮೂಹಕ್ಕೆ ಈಗಾಗಲೇ ಪ್ರಸಾರವಾಗಿತ್ತು.

"ನೀವೆಲ್ಲರೂ ಈಗಷ್ಟೆ ನಮ್ಮ ನಡುವಣ ಪ್ರಶ್ನೋತ್ತರ ಮಾತುಕತೆಗಳನ್ನು ಆಲಿಸಿರುವಿರಿ.

ಷಾಕ್!

ಬೇಸಿಗೆಯಲ್ಲಿ ಪವರ್‌ಕಟ್
ಮಳೆಗಾಲದಲ್ಲಿ ಲೈನ್‌ಕಟ್
ಎಂದು ಗೊಣಗುತ್ತಿರುವಾಗಲೇ
ಬಂದ ಬಿಲ್ ಕಂಡು
ಉಸಿರೇ ಕಟ್!

✷ ವೆಂಕಟೇಶ ಹಾರೇಬೈಲು

ಈ ಪ್ರಶ್ನೋತ್ತರಗಳ ಆಧಾರದಿಂದ ನೀವೇ ಯೋಚಿಸಿ, ನೀರಜ ವಾಸ್ತವಿಕವಾಗಿ ಸರಸ್ವತಿಯ ಅವತಾರವೇ ಅಲ್ಲವೇ ಎಂಬುದನ್ನು ನಿರ್ಧರಿಸಿ. ನೀರಜಳಲ್ಲಿ ಯಾವುದೇ ದೈವಿಕ ಶಕ್ತಿ ಇಲ್ಲ. ಕಳೆದ ವರ್ಷ ದೀಪಾವಳಿಯಿಂದ ಈ ವರ್ಷ ಮಾರ್ಚ್ ತನಕ ಈ "ಸರಸ್ವತಿದೇವಿಗೆ ಕಾಣಿಕೆ ರೂಪದಲ್ಲಿ ಲಭಿಸಿದ ಹಣ ಒಂದು ಕೋಟಿ ಯನ್ನೂ ಮೀರಿದೆ. ೧೦ ಲಕ್ಷ ಮಂದಿ ಅವಳ ದರ್ಶನಕ್ಕಾಗಿ ಇಲ್ಲಿಗೆ ಬಂದು ಹೋಗಿದ್ದಾರೆ. ಈಗ ನಿಮ್ಮೆದುರು ಸತ್ಯ ಬಹಿರಂಗವಾಗಿದೆ. ಈಗ ನಿಮ್ಮ ಸಮ್ಮುಖದಲ್ಲಿ ನಾವು ಒಂದು ಚಮತ್ಕಾರ ಪ್ರದರ್ಶಿಸುತ್ತೇವೆ. ಇದರಿಂದ ನೀರಜ ಅನ್ನ-ಪಾನೀಯ ವರ್ಜಿಸಿದ್ದಾಳೆಂಬ ಹೇಳಿಕೆಯ ಸತ್ಯಾಂಶ ಹೊರಬರಲಿದೆ."

ವಾಂತಿಯಲ್ಲಿ ಅನ್ನದ ಅಗುಳು

ಆರ್.ಡಿ.ರಾವ್ ತಮ್ಮೊಂದಿಗಿದ್ದ ಇತರ ವೈಜ್ಞಾನಿಕ ಸಹೋದ್ಯೋಗಿಗಳಿಗೆ ಸೂಚನೆ ನೀಡಿದರು. ಅವರು ನೀರಜಳು ಕುಳಿತ ಆಸನದ ಅಕ್ಕಪಕ್ಕದಲ್ಲಿ ಕಠೋರ ವಾಸನೆಯ ಅನಿಲವನ್ನು ಹಾಯಿಸಿದರು. ಆ ಅನಿಲದ ವಾಸನೆ ಸಹಿಸಲಾರದೆ ನೀರಜ ವಾಂತಿ ಮಾಡಿಕೊಂಡಳು. ಅವಳ ವಾಂತಿಯಲ್ಲಿ ಸಾಕಷ್ಟು ಅನ್ನದ ಅಗಳುಗಳು ಕಂಡುಬಂದವು. "ಈಗ ಭಕ್ತರು ಕಣ್ಣಾರೆ ನೋಡಬಹುದು. ಹಲವು ತಿಂಗಳಿಂದ ನೀರಜಳು ಅನ್ನ ಪಾನೀಯಾದಿಗಳನ್ನು ಮುಟ್ಟಿಲ್ಲ ಎಂದಾದರೆ ಈ ವಾಂತಿಯಲ್ಲಿ ಅನ್ನದ ಅಗಳುಗಳು ಹೇಗೆ ಬಂದವು?" ಅಲ್ಲಿ ನೆರೆದಿದ್ದ ಭಕ್ತಾದಿಗಳೆಲ್ಲ ಈ ಚಮತ್ಕಾರವನ್ನು ನೋಡಿ ಚಕಿತರಾದರು. ಆರ್.ಡಿ. ರಾವ್ ಮತ್ತೆ ತಮ್ಮ ಮಾತು ಮುಂದುವರಿಸಿದರು:

"ಸ್ವಯಂ ಘೋಷಿತ ಈ ಸರಸ್ವತಿದೇವಿಯ ಕುತಂತ್ರ ಈಗ ಬಯಲಾಗಿದೆ. ಸರಸ್ವತಿದೇವಿಯ ಅವತಾರವೆಂದು ಹೇಳಿಕೊಳ್ಳುತ್ತಿರುವ ಕು. ನೀರಜ ಜನರ ಮೂಢ ನಂಬಿಕೆಗಳನ್ನು ಬಳಸಿಕೊಂಡು ಅವರ ಕಣ್ಣಿಗೆ ಮಂಕುಬೂದಿ ಎರಚಿದ್ದಾಳೆ. ಇದೊಂದು ಬಹುದೊಡ್ಡ ಮೋಸ. ಈ ಸರಸ್ವತಿದೇವಿಯ ಅಲಂಕಾರವನ್ನು ಗಮನಿಸಿದ್ದೀರಾ? ದೇವಿಯ ಹೆಸರಿನಲ್ಲಿ ಮಂಟಪದಲ್ಲಿ ಆಸೀನಳಾಗಿರುವ ನೀರಜ ತುಟಿಗಳಿಗೆ ಲಿಪ್‌ಸ್ಟಿಕ್, ಕೈ ಉಗುರುಗಳಿಗೆ ನೇಲ್ ಪಾಲಿಷ್ ಬಳಿದುಕೊಂಡಿದ್ದಾಳೆ."

ದೇವಿಯ ರಹಸ್ಯ ಬಯಲಾದ ಬಳಿಕ ಮೈದಾನದಲ್ಲಿ ನೆರೆದ ಜನ ಆಕ್ರೋಶದಿಂದ ಉರಿಯುತ್ತಾ ತಮ್ಮ ತಮ್ಮ ಮನೆಗೆ ತೆರಳಿದರು. ಇಷ್ಟೆಲ್ಲ ಆದರೂ ನೀರಜಾ ಉರುಫ್ ಸರಸ್ವತಿ ದೇವಿ ಸಾಲಂಕೃತ ಮಂಟಪದಲ್ಲಿ- ಶ್ರೀಮದ್ಗಾಂಭೀರ್ಯದಿಂದ ಕುಳಿತೇ ಇದ್ದಳು. ಇತ್ತ ವಿಜ್ಞಾನಿಗಳ ತಂಡ ಆಲಂಪುರದಲ್ಲಿ ತಾವು ಕಣ್ಣಾರೆ ಕಂಡುದನ್ನು ಜಿಲ್ಲಾಧಿಕಾರಿಗಳಿಗೆ ವರದಿ ಮಾಡಲು ಜತೌನ್‌ನತ್ತ ತೆರಳಿತು.

ಮಾರ್ಚ್ ೧೯ರ ತರುವಾಯ ಆಲಂಪುರಕ್ಕೆ ಆಗಮಿಸುವ ಭಕ್ತಾದಿಗಳ ಸಂಖ್ಯೆ ಕಮ್ಮಿಯಾಗತೊಡಗಿತು. ಆದರೆ ಮಾರ್ಚ್ ೨೭ ರಂದು ಸರಸ್ವತಿ ದೇವಿ ಶಿಲೆಯಾಗಿ ಪರಿವರ್ತನೆಯಾಗುತ್ತಾಳೆಂಬ ಪ್ರಚಾರದಿಂದ ಮತ್ತೆ ತಿರುಗಿ ಭಕ್ತರ ಸಂದಣಿ ಆಲಂಪುರದಲ್ಲಿ ನೆರೆಯತೊಡಗಿತು. ಈ ಮಧ್ಯೆ ಇನ್ನೊಂದು ಮಹತ್ವದ ಘಟನೆ ನಡೆಯಿತು. ಮಾರ್ಚ್ ೨೪ ರಂದು ರಾತ್ರಿ ಉರಾಯಿ ಪೋಲೀಸರು ಕುಟೋವಾ ನಿವಾಸಿ ಸುನಾರ ಓಂ ಪ್ರಕಾಶ ಎಂಬಾತನನ್ನು ಬಂಧಿಸಿದರು. ಪೋಲೀಸರು ಆತನನ್ನು ತನಿಖೆಗೆ ಗುರಿಪಡಿಸಿದಾಗ ಆತ ಕೆಲವೊಂದು ಮಹತ್ವದ ಸುಳಿವು ನೀಡಿದ.

ಹತ್ಯೆಗೆ ಸಂಚು

ಅವಳಿಗೆ ಸ್ವರ್ಣ ಮುಕುಟವನ್ನು ಆತನೇ ದಾನಮಾಡಿದ್ದ. ಈ ಮುಕುಟವನ್ನು ದೇವಿ ಸದಾ ಧರಿಸಿರುತ್ತಿದ್ದಳು. ದೇವಿಯ ಸ್ಮರಣಾರ್ಥವಾಗಿ ಒಂದು ವಿಗ್ರಹ ಜಯಪುರದಲ್ಲಿ ನಿರ್ಮಾಣವಾಗುತ್ತಿದ್ದು ಅದು ರಾತ್ರಿ ಆಲಂಪುರಕ್ಕೆ ತಲುಪಲಿದೆ. ೨೭ ರಂದು ರಾತ್ರಿ ನೀರಜಳನ್ನು ಸದ್ದುಸುಳಿವಿಲ್ಲದೆ ಹತ್ಯೆ ಮಾಡಿ ಅವಳ ಸ್ಥಾನದಲ್ಲಿ ಸರಸ್ವತಿದೇವಿಯ ಶಿಲಾ ವಿಗ್ರಹ ಪ್ರತಿಷ್ಠಾಪಿಸುವ



ಸಂಚು ನಡೆದಿದೆ ಎಂದು ಓಂಪ್ರಕಾಶ ತಿಳಿಸಿದ.

ಈ ರಹಸ್ಯ ಬಯಲಾದ ತಕ್ಷಣವೇ ಪೋಲೀಸ್ ಅಧಿಕಾರಿಗಳು ಜಿಲ್ಲಾಧಿಕಾರಿ ಆರ್.ಎಸ್. ಸಕ್ಸೇನಾ ಮತ್ತು ಪೊಲೀಸ್ ಮಹಾ ನಿರ್ದೇಶಕ ಸಿ.ಬಿ. ರಾಯ್ ಅವರನ್ನು ಸಂಪರ್ಕಿಸಿ ವಿಷಯ ತಿಳಿಸಿದರು.

ಮಾರ್ಚ್ ೨೭ ರಂದು ರಾತ್ರಿ ಓಂಪ್ರಕಾಶ ಸೂಚನೆ ನೀಡಿದ್ದ ಸ್ಥಳದಲ್ಲಿ ಪೊಲೀಸರು ವಿಗ್ರಹವನ್ನು ಸ್ವಾಧೀನ ಪಡಿಸಿಕೊಳ್ಳಲು ಹೊಂಚುಹಾಕುತ್ತಾ ನಿಂತಿದ್ದರು. ಆದರೆ ವಿಗ್ರಹ ಅವರ ಕೈ ಸೇರಲಿಲ್ಲ. ಅದರ ಬದಲು ರಾಮಸೇವಕ್ ಎಂಬಾತನನ್ನು ಪೋಲೀಸರು ಬಂಧಿಸಿದರು. ಈ ರಾಮಸೇವಕನಿಗೆ ಓಂ ಪ್ರಕಾಶನ ಬಂಧನವಾದುದು ಗೊತ್ತಿತ್ತು. ವಿಗ್ರಹದ ಬಗ್ಗೆ ಎಲ್ಲ ವಿಚಾರಗಳನ್ನೂ ಆತ ಪೋಲೀಸರಿಗೆ ತಿಳಿಸಿರಬಹುದೆಂಬ ಭೀತಿಯಿಂದ ಆ ವಿಗ್ರಹವನ್ನು ಆತ ಆ ದಿನ ಸಂಜೆ ಅದನ್ನು ಬಾವಿಗೆ ಎಸೆದಿದ್ದ.

ಮಾರ್ಚ್ ೨೭ನೇ ದಿನಾಂಕದ ತರುವಾಯ ಆಲಂಪುರಕ್ಕೆ ಆಗಮಿಸುವ ಭಕ್ತಾದಿಗಳ ಸಂಖ್ಯೆ ೫೦೦ಕ್ಕೆ ಕುಸಿಯಿತು. ಹೆಚ್ಚುಕಡಿಮೆ ಎಪ್ರಿಲ್ ೪ ರ ವರೆಗೆ ಇದೇ ಪರಿಸ್ಥಿತಿ ಮುಂದುವರಿಯಿತು.


ಎಪ್ರಿಲ್ ೪ರಂದು ಜಿಲ್ಲಾಧಿಕಾರಿ ಸಕ್ಸೇನಾ ಅವರಿಗೆ ವರ್ಗವಾಯಿತು. ಅವರು ಜತೌನ್‌ದಿಂದ ನಿರ್ಗಮಿಸುವ ಮೊದಲು ಸ್ವಯಂ ಘೋಷಿತ ಸರಸ್ವತಿದೇವಿಯ ಮಾಯಾ ಜಾಲವನ್ನು ಸಮಾಪ್ತಿಗೊಳಿಸುವ ಯೋಜನೆಯನ್ನು ಸಿದ್ಧಪಡಿಸಿದರು. ಆ ಹೊಣೆಯನ್ನು ಅವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಆರ್.ಪಿ. ಸಿಂಹ ಅವರಿಗೆ ಒಪ್ಪಿಸಿದರು. ಆರು ತಿಂಗಳಿನಿಂದ ಸರಸ್ವತಿದೇವಿಯ ರೂಪದಲ್ಲಿ ಸಿಂಹಾಸನದಲ್ಲಿ ಕುಳಿತಿರುವ ನೀರಜಳು ಸಾವಿನ ಅಂಚಿಗೆ ತಲುಪುವ ಸಾಧ್ಯತೆ ಇರುವುದ ರಿಂದ ಅವಳನ್ನು ಬಲಾತ್ಕಾರವಾಗಿ ಬಂಧಿಸಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸುವುದು ಉತ್ತಮ ಎಂದು ಸಕ್ಸೇನಾ ಆರ್.ಪಿ. ಸಿಂಹ ಅವರಿಗೆ ಸಲಹೆ ಮಾಡಿದರು.

ಎಪ್ರಿಲ್ ೪ರಂದು ಮಧ್ಯರಾತ್ರಿಯ ವೇಳೆಗೆ ಪೋಲೀಸ್ ಅಧಿಕಾರಿ ಮಹಾವೀರ ಪ್ರಸಾದರ ನೇತೃತ್ವದಲ್ಲಿ ಪ್ರಮುಖರ ತಂಡವೊಂದು ಆಲಂ ಪುರ ತಲುಪಿತು. ಈ ತಂಡದಲ್ಲಿ ಉರಾಯಿ ನಗರ ಮ್ಯಾಜಿಸ್ಟ್ರೇಟ್ ಸುರೇಶ ಠಾಕೂರ್, ಉರಾಯಿಯ ಸಹಾಯಕ ಜಿಲ್ಲಾಧಿಕಾರಿ ರಾಮ ವಿಶ್ವಾಸ್ ಯಾದವ್ ಒಳಗೊಂಡಿದ್ದರು. ಅವರಿಗೆ ಬೆಂಗಾವಲಾಗಿ ಪ್ರಾಂತೀಯ ಸಶಸ್ತ್ರ ಪೋಲೀಸ್ ಪಡೆಯೂ ಇತ್ತು. ಐದು ನಿಮಿಷಗಳ ತರು ವಾಯ ಜತೌನಿನ ಹೊಸ ಜಿಲ್ಲಾಧಿಕಾರಿ ಅಮಿತ್ ಮೋಹನ ಪ್ರಸಾದ ಹಾಗೂ ಪೋಲೀಸ್ ಅಧಿ ಕಾರಿ ಆರ್.ಪಿ. ಸಿಂಹ ಅವರೂ ಅಲ್ಲಿಗೆ ತಲುಪಿ ದರು.

ಪೋಲೀಸ್ ವರಿಷ್ಠಾಧಿಕಾರಿಯ ಆದೇಶ ದಂತೆ ಹನ್ನೆರಡು ಮಂದಿ ಮಹಿಳಾ ಕಾನ್ಸ್‌ಟೇಬಲ್‌ಗಳು ಮಂದಿರದ ಒಳ ನುಗ್ಗಿ ದರು. ಉಳಿದ ಪೋಲೀಸ್ ಪಡೆ ಆಲಂಪುರ ಗ್ರಾಮವನ್ನು ಸುತ್ತುವರಿಯಿತು. ನೀರಜ ದೀಕ್ಷಿತ್ ಪ್ರಾಣಾಪಾಯದ ಗಂಭೀರ ಸ್ಥಿತಿಗೆ ತಲುಪಿದ್ದಳು. ವೈದ್ಯರ ತಂಡವೊಂದು ಅವಳ ಆರೋಗ್ಯ ಪರಿಶೀಲಿಸಿ ತಕ್ಷಣ ಅವಳಿಗೆ ಸುಧಾ ರಿತ ಮಾದರಿಯ ಚಿಕಿತ್ಸೆಯ ಅಗತ್ಯವಿದೆ ಎಂದು ಸಲಹೆ ಮಾಡಿತು. ಅನಂತರ ಪೋಲೀಸರು ನೀರಜಳನ್ನು ಬಂಧಿಸಿ ಮಹಿಳಾ ಕಾನ್ಸ್‌ಟೇಬಲ್‌ಗಳ ಬೆಂಗಾವಲಲ್ಲಿ ಝಾನ್ಸಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ಸೇರಿಸಿದರು.

ಆಲಂಪುರದಲ್ಲಿ ಪೊಲೀಸರು 'ಜನ ಸಾಮಾ ನ್ಯರಲ್ಲಿ ಧಾರ್ಮಿಕ ಭಾವನೆಗಳನ್ನು ಕೆರಳಿಸಿ



ಆರ್ಥಿಕವಾಗಿ ಅವರನ್ನು ಶೋಷಿಸಲಾಗುತ್ತಿದೆ' ಎಂಬ ಆರೋಪ ಹೊರಿಸಿ ಹಲವರನ್ನು ಬಂಧಿಸಿ ದರು.

ಬಂಧಿತರಲ್ಲಿ ನೀರಜಳ ತಂದೆ ರಮಾಶಂ ಕರ್ ದೀಕ್ಷಿತ, ತಾಯಿ ಮೀರಾದೇವಿ, ಇಬ್ಬರು ತಮ್ಮಂದಿರಾದ ರಾಮ್‌ಜಿ-ಶಾಮ್‌ಜಿ ಒಳಗೊಂ ಡಿದ್ದರು. ಬಂಧಿತರನ್ನೆಲ್ಲಾ ಉರಾಯಿಗೆ ಕರೆದೊ ಯ್ಯಲಾಯಿತು. ಅಲ್ಲಿ ನೀರಜಳ ಇಬ್ಬರು ಸಹೋದರರನ್ನು ಪೋಲೀಸರು , ಬಿಡುಗಡೆ ಗೊಳಿಸಿದರು. ಉಳಿದ ಕೆಲವು ಭಕ್ತರನ್ನೂ ಬಂಧಮುಕ್ತಗೊಳಿಸಿದರು. ರಮಾಶಂಕರ್ ದೀಕ್ಷಿತ್ ಸಹಿತ ೧೩ ಮಂದಿಯನ್ನು ಉರಾಯಿ ಜೈಲಿಗೆ ಕಳುಹಿಸಿದರು.


ರಹಸ್ಯ ಬಯಲು

ಝಾನ್ಸಿ ವೈದ್ಯಕೀಯ ಕಾಲೇಜು ಆಸ್ಪತ್ರೆ ಯಲ್ಲಿ ಚಿಕಿತ್ಸೆಗಾಗಿ ಸೇರಿಸಿದ ನೀರಜಳನ್ನು ಪೋಲೀಸರು ತೀವ್ರವಾಗಿ ತನಿಖೆ ಮಾಡಿದರು. ಈ ತನಿಖೆಯ ಸಂದರ್ಭದಲ್ಲಿ ನೀರಜಳ 'ದೀರ್ಘಕಾಲದ ನಿರಶನ ವ್ರತ'ದ ರಹಸ್ಯ ಬಯ ಲಾಯಿತು. ಪ್ರತಿದಿನ ರಾತ್ರಿ ೧೧ ರಿಂದ ೧೨ ರ ಅವಧಿಯಲ್ಲಿ ಅವಳ ತಂದೆ ರಮಾಶಂಕರ ಮಗ ಳಿಗೆ ಆಹಾರ ಹಾಲು, ಹಣ್ಣು ಇತ್ಯಾದಿ ತಂದು ಕೊಡುತ್ತಿದ್ದ. ಸರಸ್ವತಿದೇವಿಯ ಮಂಟಪದ ಹಿಂಭಾಗದಲ್ಲಿ ಪ್ರತ್ಯೇಕ ಕೊಠಡಿಯೊಂದಿತ್ತು. ಈ ಕೊಠಡಿಯಲ್ಲಿ ಕಕ್ಕಸು, ಸ್ನಾನದ ವಿಭಾಗ ಪ್ರತ್ಯೇಕವಾಗಿತ್ತು. ರಾತ್ರಿ ೧೨ ಗಂಟೆಯ ಬಳಿಕ

ನೀರಜಳು ನಿತ್ಯಕರ್ಮಗಳನ್ನು ಪೂರೈಸುತ್ತಿದ್ದಳು. ಹೀಗಿದ್ದರೂ ಸ್ವಯಂಘೋಷಿತ ಸರಸ್ವತಿ ದೇವಿ ಐದಾರು ತಿಂಗಳುಗಳಿಂದ ಅನ್ನಾಹಾರ ತ್ಯಜಿಸಿರುವುದರಿಂದ ಅವಳಿಗೆ ಮಲಮೂತ್ರದ ಬಾಧೆ ಯಾವುದೂ ಕಾಡುವುದಿಲ್ಲ ಎಂದು ಪ್ರಚಾರ ಮಾಡಲಾಯಿತು.

ಎಪ್ರಿಲ್ ೭ ರಿಂದ ೯ ರ ವರೆಗೆ ನೀರಜ ಝಾನ್ಸಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಳು. ಅವಳು ನಿಯಮಿತವಾಗಿ ಆಹಾರ ಸೇವಿಸುತ್ತಿದ್ದಳು. ವೈದ್ಯರ ಚಿಕಿತ್ಸೆಯ ಪರಿಣಾಮವಾಗಿ ನೀರಜ ಪ್ರಾಣಾಪಾಯ ಸ್ಥಿತಿಯಿಂದ ಪಾರಾದಳು. ಆದರೆ ಆಕೆ ಮನೋರೋಗಿ ಎಂದು ಪರಿಗಣಿಸಿ ವೈದ್ಯರು ಆಕೆಯನ್ನು ಮಾನಸಿಕರೋಗ ಚಿಕಿತ್ಸಾಲಯಕ್ಕೆ ಸೇರಿಸಿದರು.

ಎಪ್ರಿಲ್ ೧೦ ರಂದು ಉರಾಯಿಯ ಸಹಾಯಕ ಜಿಲ್ಲಾಧಿಕಾರಿ ಯಾದವ್ ಅವರು ನೀರಜಳನ್ನು ಝಾನ್ಸಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಿಂದ ಆಗ್ರಾದ ಹುಚ್ಚಾಸ್ಪತ್ರೆಗೆ ಸೇರಿಸಲು ಆದೇಶ ನೀಡಿದರು. ಆದರೆ ಅವಳ ತಂದೆ ತಾಯಿಗಳ ಅನುಮತಿ ಇಲ್ಲದೆ ಅವಳಿಗೆ ಚಿಕಿತ್ಸೆ ನೀಡಲು ಅಲ್ಲಿನ ವೈದ್ಯರು ನಿರಾಕರಿಸಿದರು. ಕೊನೆಗೆ ಜತೌನಿನ ಜಿಲ್ಲಾ ಆಡಳಿತವು ಜೈಲಿನಿಂದ ರಮಾಶಂಕರ ದೀಕ್ಷಿತ ಹಾಗೂ ಇತರ ಹದಿಮೂರು ಮಂದಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿತು.



ಈಗ್ ಗೊತ್ತಾಯ್ತುರ್ರೀ .... ನೀವ್ಯಾಕೆ ನನ್ನನ್ನು 'ಬಂಗಾರಿ' ಅನ್ನುದೆಂದು!

ಎಪ್ರಿಲ್ ೧೨ರಂದು ರಮಾಶಂಕರ ದೀಕ್ಷಿತನ ಅನುಮತಿ ಪಡೆದು ಆಗ್ರಾ ಮಾನಸಿಕ ರೋಗ ಚಿಕಿತ್ಸಾಲಯದ ವೈದ್ಯರು ನೀರಜಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಿಕೊಂಡರು. ಚಿಕಿತ್ಸೆ ಆರಂಭವಾಯಿತು.

ಈ ಲೇಖನ ಅಚ್ಚಾಗುತ್ತಿರುವ ಸಂದರ್ಭದಲ್ಲಿ ಸ್ವಯಂ ಘೋಷಿತ ಸರಸ್ವತಿದೇವಿ ನೀರಜಳು ಆಗ್ರಾದ ಹುಚ್ಚಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ.

ಕಾಯಬೇಕಾಗಿಲ್ಲ

ಹಿಂದೆ ಬಾಲ್ಯವಿವಾಹ ಪದ್ಧತಿ ಸಾಮಾನ್ಯವಾಗಿತ್ತು ಎಂಬುದನ್ನು ತಂದೆಯವರು ತಮ್ಮ ಉದಾಹರಣೆಯಿಂದ ಹೀಗೆ ವಿವರಿಸಿದರು. ನನ್ನ ತಂದೆಗೆ ಮದುವೆಯಾದಾಗ ಅವರಿಗೆ ೧೨ ವರ್ಷ ವಯಸ್ಸಾಗಿತ್ತು, ಆಗ ನನ್ನ ತಾಯಿಗೆ ಕೇವಲ ೭ ವರ್ಷ ಪ್ರಾಯ! ಮದುವೆಯಾಗಿ ೧೨ ವರ್ಷಗಳಾದ ಮೇಲೆ ನಾನು ಹುಟ್ಟಿದ್ದು ಎಂದು ಅವರು ಹೇಳಿದರು. "ಅಬ್ಬಾ ದೇವರೆ" ಈ ಕಾಲದಲ್ಲಿ ಒಂದು ಮಗುವಿಗಾಗಿ ಅಷ್ಟು ಸಮಯ ನಾವೇನು ಕಾಯಬೇಕಾಗಿಲ್ಲ." ನನ್ನ ೧೦ ವರ್ಷದ ತುಂಟ ಮಗಳು ಉದ್ಗರಿಸಿದಳು.

⊙ ಪಡುಬಿದ್ರಿ ಪ್ರಭಾಕರರಾವ್

ಪಾಶ್ಚಾತ್ಯ ಶಿಸ್ತೇನಮ್ಮ!

★ಎಸ್.ಸಿ. ಶಿವನಂಜಪ್ಪ

ಒನ್... ಟೂ....ಟೂ ಆಂಡ್ ಎ ಹ್ಯಾಫ್..... ತ್ರೀ ಈ ಮಂತ್ರ ಮನೆಗಳಲ್ಲಿ ಅಮೆರಿಕದಲ್ಲಿರುವ ಭಾರತೀಯರ ಮನೆಗಳಲ್ಲೆಲ್ಲ ಮಕ್ಕಳಿರುವ ಕಡೆ ಸಾಧಾರಣವಾಗಿ ಕೇಳಿಬರುವುದು. ಮಗುವು ತಂದೆ ತಾಯಿ ಹೇಳಿದ ಹಾಗೆ ಕೇಳಿದರೆ ಸರಿ; ಇಲ್ಲವಾದರೆ ಪಿ.ಸಿ. *(Punishment chair)*ಯಲ್ಲಿ ಕದಲದ ಹಾಗೆ, ಮಾತನಾಡದಹಾಗೆ ೧೫ ನಿಮಿಷ ಕುಳಿತುಕೊಳ್ಳಬೇಕು. ಇಲ್ಲವಾದರೆ ಕೊಠಡಿಯಲ್ಲಿ ಒಬ್ಬಂಟಿಯಾಗಿ ೧೫ ನಿಮಿಷ ಇರಬೇಕು. ಇದೇ ತಂದೆತಾಯಿಗಳು ಮಗುವಿಗೆ ಕೊಡಬಹುದಾದ ಕಠಿಣ ಶಿಕ್ಷೆ. ನಮ್ಮಲ್ಲಿಯ ಹಾಗೆ ಬೈಯುವಂತಿಲ್ಲ, ಹೊಡೆಯುವಂತಿಲ್ಲ. ಎಲ್ಲರಿಗೂ ಹೆಚ್.ಆರ್.ಎಸ್. *(Human Resources service)* ನ ಭಯ ಭೂತವಾಗಿ ಕಾಡುತ್ತದೆ. ಮಕ್ಕಳನ್ನು ಕಠಿಣವಾಗಿ ನಡೆಸಿಕೊಳ್ಳುವುದು ಬಹುದೊಡ್ಡ ತಪ್ಪು. ಇದಕ್ಕೆ ನಿದರ್ಶನವಾಗಿ ಈ ಎರಡು ಸಂದರ್ಭಗಳು:

ಶೀಲಾ ಎಂಬಾಕೆ ತನ್ನ ಮಗು ಒಡೆದುಹಾ





ಕಿದ್ದ ಗಾಜಿನ ಕಪ್ಪುಗಳನ್ನೂ, ತಟ್ಟೆಗಳ ಚೂರುಗಳನ್ನೂ ತೆಗೆಯಬೇಕಿತ್ತು. ಅಡಿಗೆ ಮನೆ, ಫ್ಯಾಮಿಲಿ ರೂಂಗಳಲ್ಲಿ ಬಿದ್ದಿದ್ದ ನೂರಾರು ಚೂರುಗಳನ್ನು ವ್ಯಾಕ್ಯೂಮ್ ಕ್ಲೀನರ್ ಮತ್ತು ಕಸಬರಿಗೆಗಳಿಂದ ತೆಗೆಯುವುದು ತೊಂದರೆದಾಯಕವಾಗಿತ್ತು. ಆ ಸಮಯದಲ್ಲಿ ಮಗು ಅಲ್ಲಿದ್ದರೆ ಕೈಕಾಲುಗಳಿಗೆ ತಗುಲಿಸಿಕೊಂಡು ರಕ್ತ ಬರಬಹುದೆಂದು ಭಾವಿಸಿ ಮಗುವಿನ ಬಟ್ಟೆ ತೆಗೆದು (ಅದಕ್ಕೂ ಚೂರುಗಳು ಸಿಕ್ಕಹಾಕಿಕೊಂಡಿದ್ದವು) ಮನೆಯ ಮುಂದುಗಡೆ ೧೦-೧೫ ನಿಮಿಷ ಇರಲಿ ಎಂದು ನಿಲ್ಲಿಸಿದ್ದಳು. ಈಕೆ ಕೆಲಸಮಾಡುತ್ತಿರುವಾಗಲೇ ಪಕ್ಕದ ಮನೆಯಾಕೆ ಈ ವಿಚಾರಗಳೊಂದೂ ತಿಳಿಯದೆ ಬಂದು, "ಏನ್ರೀ, ಮಗುವನ್ನು ಬಿಸಿಲಿನಲ್ಲಿ ಬರಿಮೈಯಲ್ಲಿ ನಿಲ್ಲಿಸಿ ತೊಂದರೆಕೊಡುತ್ತಿದ್ದೀರಿ ? ನಾನು ಈಗಲೇ ಎಚ್.ಆರ್.ಎಸ್.ಗೆ ಫೋನ್ ಮಾಡಿ ನಿಮ್ಮ ಕ್ರೂರವರ್ತನೆ ಬಗ್ಗೆ ಕಂಪ್ಲೇಂಟ್ ಕೊಡುತ್ತೇನೆ," ಎಂದು ಕೂಗಾಡಿದಳು. ಆಕೆಗೆ ತಿಳಿಯ ಹೇಳಿ ಕಳುಹಿಸಲು ಸಾಕಷ್ಟು ಶ್ರಮವಾಯಿತು ಶೀಲಳಿಗೆ.

ಪದ್ಮ ಎಂಬಾಕೆ ತನ್ನ ಐದು ವರ್ಷದ ಮಗಳನ್ನು ಪ್ರತಿದಿನ ಶಾಲೆಗೆ ಕರೆದುಕೊಂಡು ಹೋಗಿ, ವಾಪಸ್ಸು ಕರೆದುಕೊಂಡು ಬರುತ್ತಿದ್ದಳು. ಕಾರಿನಲ್ಲಿ ೩೦ ನಿಮಿಷದ ದೂರ. ಆ ಮಗು ಬಹಳ ತುಂಟ. ಯಾವಾಗಲೂ ಏನಾದರೂ ಚೇಷ್ಟೆ ಮಾಡುತ್ತಿರುವುದೇ ಕೆಲಸ. ಮನೆಗೆಲಸಕ್ಕೆ ಅಡ್ಡಿ ಮಾಡುವುದು, ಇರುವ ಸಾಮಾನುಗಳನ್ನು ಚೆಲ್ಲಾಪಿಲ್ಲಿ ಮಾಡುವುದು, ಪುಸ್ತಕ

ಹರಿಯುವುದು, ಬೆಂಕಿಯ ಜೊತೆ ಆಟವಾಡುವುದು, ಚಾಕು ಕತ್ತರಿಗಳಿಂದ ಕತ್ತರಿಸುವುದು...... ಇತ್ಯಾದಿ ತುಂಟಾಟ ಮಾಡುತ್ತಿತ್ತು. ಒಂದು ದಿನ ಬಿಸಿಲಿನಲ್ಲಿ ತಿರುಗಾಡಿ, ವ್ಯಾಪಾರ ಮಾಡಿ ಸಾಮಾನು ತಂದು ಸುಸ್ತಾಗಿ ಕುಳಿತಿದ್ದ ತಾಯಿಗೆ ಏನೆಲ್ಲ ತೊಂದರೆಮಾಡುತ್ತಿದ್ದಳು. ಒನ್, ಟೂ....... ಗಳು ಪ್ರಯೋಜನವಾಗಲಿಲ್ಲ. ಸಿಟ್ಟಿನಿಂದ ಕೈಯಲ್ಲೇ ಒಂದೇಟು ಕೊಟ್ಟು ಸುಮ್ಮನಾಗಿರಲು ಹೇಳಿದಳು. ಹೋ ಎಂದು ಅಷ್ಟಕ್ಕೇ ಬೊಬ್ಬೆ ಹೊಡೆಯಿತು ಮಗು. ಆ ದಿನ ಸ್ಕೂಲಿಗೆ ಕರೆದುಕೊಂಡು ಹೋಗಿ ಬಿಟ್ಟಾಗ ಮಗುವಿನ ಕಣ್ಣುಗಳು ಕೆಂಪಾಗಿಯೇ ಇದ್ದವು. ಸಾಯಂಕಾಲ ವಾಪಸು ಕರೆದುಕೊಂಡು ಬಂದಮೇಲೆ ಸ್ಕೂಲಿನ ಟೀಚರ್ ಕಡೆಯಿಂದ ಫೋನ್ ಬಂತು- "ರೀ ಪದ್ಮ, ನಿಮ್ಮ ಮಗುವಿಗೆ ನೀವು ಬಹಳ ಹೊಡೆದಿರಂತೆ, ಇದು ಸರಿಯಲ್ಲವೆಂದು ತಿಳೀದಾ...? ನಾನು ಎಚ್.ಆರ್.ಎಸ್.ಗೆ ರಿಪೋರ್ಟ್ ಮಾಡುತ್ತೇನೆ. ಯಾವುದಕ್ಕೂ ಮೊದಲು ನೀವು ನಾಳೆ ಮಗುವಿನ ಜತೆಯಲ್ಲಿ ನನ್ನನ್ನು ಕಾಣಬೇಕು." ಇದೊಳ್ಳೇ ಫಜೀತಿಯಾಯಿತಲ್ಲ ಎಂದು ಆಕೆ ತನ್ನ ಮಗಳನ್ನು ಕರೆದು, "ಏನಮ್ಮಾ ಮಹಾತಾಯಿ, ನಿಮ್ಮ ಟೀಚರ್‌ಗೆ ಹೇಳಿದೆಯಾ ? ನಾಳೆ ನಾನು ನಿಮ್ಮ ಟೀಚರ್ ಹತ್ತಿರ ಹೋದಾಗ ನಿನ್ನೆ ಹೇಳಿದ್ದು ತಪ್ಪು; ನನಗೆ ಹೊಡೆಯಲಿಲ್ಲ ಎಂದು ಹೇಳಬೇಕು. ಇಲ್ಲವಾದರೆ ಕೈಕಾಲು ಮುರಿಯುವ ಹಾಗೆ ಬಡಿಯುತ್ತೇನೆ," ಎಂದು ಹೆದರಿಸಿದಳು ತಾಯಿ.

ಮಗು ನಿಜವಾಗಿಯೂ ಭಯಪಟ್ಟು ತನ್ನ ಟೀಚರ್‌ಗೆ ತನ್ನ ತಾಯಿ ಹೊಡೆಯಲಿಲ್ಲ- ಹೊಡೆಯುತ್ತೇನೆ ಎಂದು ಮಾತ್ರ ಹೇಳಿದಳು ಎಂದು



ಹೇಳಿತು; ಎಲ್ಲ ಸರಿಹೋಯಿತು.

ಈ ದೇಶದಲ್ಲಿ ವಿದ್ಯಾಭ್ಯಾಸ ಬಹಳ ದುಬಾರಿ. ಮಕ್ಕಳು ದೊಡ್ಡವರಾದ ಮೇಲೆ ಅವರನ್ನು ಓದಿಸಲು ಲಕ್ಷಾಂತರ ಡಾಲರ್ ಖರ್ಚುಮಾಡಬೇಕು. ತಂದೆತಾಯಿಗಳು ಕಷ್ಟ ಪಟ್ಟು ಓದಿಸಿಯಾದಮೇಲೆ ಆಗುವ ಪರಿಣಾಮ ವಾದರೂ ಏನು ? ಕೆಲವು ಉದಾಹರಣೆಗಳು ಇಲ್ಲಿವೆ.

ಮೂರ್ತಿಯವರ ಮನೆಗೆ ಹೋಗಿದ್ದೆ. ಅಲ್ಲಿ ಅದು ಇದು ಮಾತನಾಡುತ್ತ ಇಂದಿನ ಮಕ್ಕಳ ನಡುವಳಿಕೆ ಬಗ್ಗೆ ವಿಶ್ಲೇಷಣೆ ನಡೆಯಿತು. ಇಂದು ಕೋಲಾಹಲಕ್ಕೆ ಎಡೆಗೊಟ್ಟಿರುವ ಸಲಿಂಗರತಿಯ (Gay Marriage) ವಿಷಯವಾಗಿ ಪರ ಮತ್ತು ವಿರೋಧ ಇವೆರಡೂ ಚರ್ಚೆಯಾಯಿತು. ಆಗ ಶ್ರೀಮತಿ ಮೂರ್ತಿಯವರು ಹೇಳಿದ ಮಾತುಗಳು ಚಾಟಿ ಏಟಿನಂತಿದ್ದವು: "ನಾವು ನಮ್ಮ ಹುಡುಗರಿಗೆ ಭಾರತದಲ್ಲಿ ಹೆಣ್ಣು-ಗಂಡು ನೋಡುತ್ತಿದ್ದೇವೆ. ಆದರೆ ರಾಜು ಮತ್ತು ಕವಿತ ಅದಕ್ಕೆ ಒಪ್ಪುತ್ತಾ ಇಲ್ಲ. ನಮಗೆ ಇಷ್ಟವಾದವರನ್ನು ಮದುವೆಯಾಗ್ತೇವೆ. ನೀವು ಬಲವಂತಮಾಡಬೇಡಿ ಎಂದು ಗಲಾಟೆ ಮಾಡುತ್ತಾ ಇದ್ದಾರೆ. ಯಾವ ದೇಶದವರೋ, ಯಾವ ಬಣ್ಣದವರೋ, ಎಂತಹವರೋ ಎಂಬ ಭಯ ನಮಗೆ. ಆದರೆ ಕೊನೆಗೆ ಒಂದು ನಿರ್ಧಾರಕ್ಕೆ ಬಂದು ನಾವು ಅವರಿಗೆ ಹೇಳಿದ್ದೇವೆ. 'ನೋಡು ರಾಜು, ನೀನು ಯಾರನ್ನಾದರೂ ಮದುವೆಯಾಗು, ಆದರೆ ಒಬ್ಬ ಹುಡುಗಿಯನ್ನು ಕಟ್ಟಿಕೋ. ಕವಿತ ನೀನೂ ಅಷ್ಟೆ, ಯಾವನಾದರೂ ಒಬ್ಬ ಹುಡುಗನನ್ನು ಮದುವೆಯಾಗು. ಜಾತಿ, ಮತ, ದೇಶ, ಬಣ್ಣ ಒಂದೂ ಬೇಕಿಲ್ಲ. ಆದರೆ ಒಬ್ಬ ಹುಡುಗ ನನ್ನ ಸೊಸೆಯಾಗದಿರಲಿ ಮತ್ತು ಒಂದು ಹುಡುಗಿ ನನ್ನ ಅಳಿಯ ಆಗಿ ಬರದಿದ್ದರೆ ಸಾಕು ! ಇಷ್ಟಕ್ಕೆ ಬಂದು ನಿಂತಿದೆ."

ರಘು ಎಲ್ಲರ ಹಾಗೆ ತನ್ನ ಮಗನನ್ನು ಚೆನ್ನಾಗಿ ಓದಿಸಬೇಕೆಂದು ಒಳ್ಳೆಯ ಕಾಲೇಜಿಗೆ ಸೇರಿಸಿದ್ದಾನೆ. ಒಂದು ದಿನ ರಘು ಮತ್ತು ಆತನ ಪತ್ನಿ ಸುಧಾ ತಮ್ಮ ಮಗನಿಗೆ, "ನೋಡಪ್ಪ, ನಾವು ಎಷ್ಟು ಕಷ್ಟದಿಂದ ನಿನ್ನನ್ನು ದೊಡ್ಡ ವಿದ್ಯಾವಂತನನ್ನಾಗಿ ಮಾಡಲು ಪ್ರಯತ್ನ ಮಾಡ್ತಾ ಇದ್ದೇವೆ! ನಾಳೆ ನೀನು ದೊಡ್ಡ ಮನುಷ್ಯನಾದ ಮೇಲೆ ನಮಗೆ ಏನು ಪ್ರತಿಫಲ ಕೊಡುತ್ತೀಯಪ್ಪ ?" ಎಂದು ಕೇಳಿದರು. ಮಗ ಸ್ವಲ್ಪ ಹೊತ್ತು ಆಲೋಚಿಸಿ, "ನಾನು ನಿಮಗೆ Decent funeral, ಏರ್ಪಾಟು ಮಾಡುತ್ತೇನೆ," ಎಂದ! (ಅಮೆರಿಕದಲ್ಲಿ ಅಂತ್ಯಕ್ರಿಯೆಗೆ ಎರಡು ಎರಡೂವರೆ ಲಕ್ಷ ರೂಪಾಯಿಗಳಷ್ಟು ಖರ್ಚು ಬರುತ್ತೆ) ಇಷ್ಟೇ ತಂದೆ ತಾಯಿಗಳ ಗತಿ.

ಪ್ರಕಾಶ್ ಅವರ ಇಬ್ಬರು ಮಕ್ಕಳ ಪೈಕಿ ಸುಮ ಚಿಕ್ಕವಳು, ಏಳು ವರ್ಷ; ಅಮರ್ ಮಗ, ೧೮ ವರ್ಷ. ಮಗನನ್ನು ಕಾಲೇಜಿಗೆ ಸೇರಿಸಿದಾಗ, ೧೭ನೇ ವರ್ಷದಲ್ಲಿ ಕಾರು ಕೊಡಿಸಿದ್ದರು. (೧೬ ವರ್ಷಗಳಾದ ಮೇಲೆ ಡ್ರೈವಿಂಗ್ ಲೈಸೆನ್ಸ್ ಕೊಡುತ್ತಾರೆ). ಮಗಳು, ನನಗೂ ಡ್ರೈವಿಂಗ್ ಕಲಿಸಬೇಕು, ಕಾರು ಕೊಡಿಸಬೇಕು, ಎಂದು ಹಟ ಮಾಡುತ್ತಿದ್ದಳು. "ನೀನು ಚಿಕ್ಕವಳು; ೧೬ ವರ್ಷ ಆಗಲಿ; ಆಗ ಕೊಡಿಸೋಣ" ಎಂದು ತಂದೆತಾಯಿಗಳು ಸಮಾಧಾನ ಮಾಡುತ್ತಾ ಇದ್ದರು. ಎರಡು ಮೂರು ಬಾರಿ ಈ ರೀತಿ ಮಾತುಕತೆಯಾದ ಮೇಲೆ ಮಗಳು, "ಅಲ್ಲಿಯವರೆಗೆ ನೀನು ಜೀವಿಸಿರುತ್ತೀಯಾ ?" ಎಂದು ಕೇಳಿದಳು !

ಮಕ್ಕಳು ಮಾಡಿದ ತಪ್ಪಿಗೆ ಅವರೇ ಶಿಕ್ಷೆ ಅನುಭವಿಸುವುದು ಒಂದು ಕಡೆ. ಹೊಸ ಕಾನೂನು ಪ್ರಕಾರ ಮಕ್ಕಳ ತಪ್ಪಿಗೆ ತಂದೆ ತಾಯಿಗಳು ಜೈಲಿನ ಶಿಕ್ಷೆ ಅನುಭವಿಸಬೇಕು- "ಮಕ್ಕಳನ್ನು ನೀವು ಸರಿಯಾಗಿ ಬೆಳೆಸಿಲ್ಲ" ಎಂಬ ಕಾರಣಕ್ಕಾಗಿ. ಹೇಗಿದೆ ನೋಡಿ- "ಎಮ್ಮೆಗೆ ಜ್ವರ ಬಂದರೆ ಎತ್ತಿಗೆ ಬರೆಹಾಕಿದರು" ಎನ್ನುವಹಾಗೆ. ★

ಪ್ರತಿವರ್ಷ ಜನರ ಗಮನಕ್ಕೆ ಬರುವಷ್ಟು ಶಕ್ತಿಶಾಲಿಯಾದ ಎಷ್ಟು ಭೂಕಂಪಗಳು ಸಂಭವಿಸುತ್ತವೆ ಗೊತ್ತೆ? ಸುಮಾರು ಒಂದು ಲಕ್ಷದಷ್ಟು! ತೀರಾ ಮಂದವಾದ ಭೂಕಂಪಗಳ ಸಂಖ್ಯೆ ಇದಕ್ಕಿಂತ ಎಷ್ಟೋ ಪಟ್ಟು ಹೆಚ್ಚು!


ಸ್ವಾತಂತ್ರ್ಯ ಸ್ವರ್ಣಮಹೋತ್ಸವ
ಮೇರಾ ಭಾರತ ಮಹಾನ್



ಮರೆಗುಳಿ ಪ್ರಾಧ್ಯಾಪಕ

ಮಹಾನ್ ಗಣಿತಜ್ಞನಾಗಿದ್ದ ನಾರ್ಬರ್ಟ ವೀನರ್ ಎಂಬ ಪ್ರಾಧ್ಯಾಪಕರು ಬಹಳ ಮರೆಗುಳಿ ಸ್ವಭಾವದವರಾಗಿದ್ದರು. ಅವರು ತಮ್ಮ ಮೊದಲಿನ ಮನೆಯನ್ನು ಬದಲಾಯಿಸಿ ಬೇರೊಂದು ಮನೆಗೆ ಹೋಗುವವರಿದ್ದರು. ಅವರ ಪತ್ನಿ ಹಲವು ದಿನಗಳಿಂದ ಅವರಿಗೆ ತಾವೆಲ್ಲ ಇಂತಹ ದಿನ ಮನೆಯನ್ನು ಬದಲಾಯಿಸುವುದಿದೆ ಎಂದು ಪದೇ ಪದೇ ಜ್ಞಾಪಿಸುತ್ತಿದ್ದಳು.

ಕೊನೆಗೆ ಆ ದಿನ ಬಂದಾಗ ವೀನರರು ತಮ್ಮ ಹಳೇ ಬಾಡಿಗೆ ಮನೆಯಿಂದ ತಮ್ಮ ನಿತ್ಯದ ಕೆಲಸಕ್ಕೆ ಹೊರಡುವ ಪೂರ್ವದಲ್ಲಿ ಅವರ ಪತ್ನಿ, "ನೀವು ಸಾಯಂಕಾಲ ನಮ್ಮ ಆ ಹೊಸ ಮನೆಗೆ ಬನ್ನಿ," ಎಂದು ಜ್ಞಾಪಿಸಿದಳು.

ಆದರೆ ಸಾಯಂಕಾಲವಾದಾಗ ವೀನರರು ಬೆಳಿಗ್ಗೆ ತಮ್ಮ ಪತ್ನಿ ಹೇಳಿದ್ದನ್ನು ಮರೆತು ತಮ್ಮ ಹಳೆಮನೆಗೆ ಹೋದರು. ಆ ಮನೆಗೆ ಬೀಗ ಹಾಕಿದ್ದನ್ನು ಕಂಡಾಗಲೇ ಅವರಿಗೆ ತಾವು ಮನೆ ಬದಲಾಯಿಸಿದ್ದು ನೆನಪಾದದ್ದು. ಅವರು ಬಸ್ಸಿನಿಂದ ತಮ್ಮ ಹೊಸ ಬಡಾವಣೆಯನ್ನು ತಲುಪಿದರು. ಆದರೆ ಅವರಿಗೆ ತಮ್ಮ ಹೊಸ ಮನೆಯ ನಂಬರು ನೆನಪಾಗಲಿಲ್ಲ.

ಕೊನೆಗೆ ಅವರು ಅಲ್ಲಿ ಒಬ್ಬ ಬಾಲಿಕೆ ತಮ್ಮೆಡೆಗೇ ಬರುತ್ತಿರುವುದನ್ನು ಕಂಡು ಅವಳಿಗೆ, "ಮಗು!, ವೀನರರು ಹೊಸದಾಗಿ ಬಂದಿರುವ ಮನೆ ಎಲ್ಲಿದೆ?" ಎಂದು ಕೇಳಿದರು.

"ಓಹ್ ಬನ್ನಿ ಡ್ಯಾಡಿ! ನಾನು ನಿಮ್ಮನ್ನು ಮನೆಗೆ ಕರೆದುಕೊಂಡು ಹೋಗುತ್ತೇನೆ," ಎಂದಳು ಅವರ ಮಗಳು.

ಗೋಪಿನಾಥ ಸವಣೂರ

ವಿಚಿತ್ರ ವಿವಾಹ



ನಾನೂ ನೀನು ಜೋಡಿ?

'ನೆಲ್ಸನ್ ಡಿಲ್‌ರೋಜಾ' ಪ್ರಪಂಚದಲ್ಲೇ ಅತಿ ಕುಳ್ಳ ವ್ಯಕ್ತಿಯಾಗಿ ೧೯೮೭ರ ಗಿನ್ನಿಸ್ ಪುಸ್ತಕದಲ್ಲಿ ತನ್ನ ಹೆಸರನ್ನು ದಾಖಲಿಸಿಕೊಂಡಿದ್ದಾನೆ. ಆ ದಿನಕ್ಕೆ ಆತನ ಎತ್ತರ ೨೨ ಅಂಗುಲಗಳು!

೨೦ ಪೌಂಡ್ ಭಾರ, ಇಪ್ಪತ್ತೆಂಟೂವರೆ ಅಂಗುಲ ಎತ್ತರವಿರುವ ನೆಲ್ಸನ್‌ನನ್ನು ೨೨ ವರ್ಷದ ಐದು ಅಡಿ ಐದು ಅಂಗುಲ ಎತ್ತರವಿರುವ ಜೋಸ್‌ಲಿನ್ ಕ್ವಿಜಾಡಾ ಮದುವೆಯಾಗಿದ್ದಾಳೆ. ಅವರಿಬ್ಬರೂ ಒಬ್ಬರ ಕೈಯನ್ನೊಬ್ಬರು ಹಿಡಿದುಕೊಂಡು ನಡೆಯಬೇಕೆಂದುಕೊಂಡಾಗ ನೆಲ್ಸನ್ ಗೋಡೆಯ ಮೇಲೆ ಆಕೆಯ ಪಕ್ಕದಲ್ಲಿ ನಡೆಯಬೇಕಾಯಿತು. ಈಕೆ ಈತನನ್ನು ಮೊದಲ ನೋಟದಲ್ಲೇ ಪ್ರೀತಿಸಿ ೧೯೯೪ರ ಡಿಸೆಂಬರ್ ೨೨ ರಂದು ಮದುವೆಯಾದಳು.

ಕಂಬಳಿ ಆದವಾನಿ

ಫ್ಲಾರೆನ್ಸ್ ಮಹಾದುರಂತಗಳು

ಇಟಲಿಯಲ್ಲಿ ೧೯೬೬ರ ಒಂದು ದಿನ ಪ್ರಕೃತಿ ಭೀಕರವಾಗಿತ್ತು. ಕೇವಲ ಎರಡು ದಿನಗಳಲ್ಲಿ ಸುರಿದ ಮಳೆಯಿಂದಾಗಿ ಸುತ್ತಲಿನ ಪರ್ವತಗಳಿಂದ ಹರಿದು ವೇಗವಾಗಿ ಬರುತ್ತಿದ್ದ ನೀರು ತನ್ನೊಡನೆ ಬಂಡೆಗಳನ್ನು ಹೊತ್ತು ತರುತ್ತಿತ್ತು. ಪರ್ವತಗಳಿಂದ ಅಗಾಧ ವೇಗದಿಂದ ಬಂದ ನೀರು, ನದಿಗೆ ನುಗ್ಗಿ ದಂಡೆಗಳನ್ನೆಲ್ಲ ನಾಶಪಡಿಸಿ ದಾರಿಯಲ್ಲಿ ಅಡ್ಡ ಬಂದುದೆಲ್ಲವನ್ನೂ ಕಬಳಿಸುತ್ತ ಸಾಗಿತು. ಉಕ್ಕಿ ಬರುತ್ತಿದ್ದ ಆ ಪ್ರವಾಹದ ಎತ್ತರ ಒಂದು ಬಸ್ಸನ್ನು ಮುಳುಗಿಸುವಷ್ಟಿತ್ತು.

ಪ್ರವಾಹ ಫ್ಲಾರೆನ್ಸ್ ನಗರವನ್ನು ಆಕ್ರಮಿಸಿದಾಗ ಕಲೆ ಮತ್ತು ಸಾಂಸ್ಕೃತಿಕ ಜಗತ್ತು ಉಸಿರು ಬಿಗಿ ಹಿಡಿಯಿತು. ನಗರವನ್ನು ಸುತ್ತಿ ಹರಿಯುವ ಆರ್ನೋ ನದಿ ತನ್ನ ದಂಡೆಗಳನ್ನು ಒಡೆದು ನಗರಕ್ಕೆ ನುಗ್ಗಿತು. ಆರ್ನೋ ನದಿಯ ಪ್ರವಾಹದ ವೇಗ ಗಂಟೆಗೆ೫೦ ಮೈಲುಗಳಷ್ಟಿತ್ತು. ೧೫ ಅಡಿ ಎತ್ತರದ ನೀರಿನ ಅಲೆಗಳು ಫ್ಲಾರೆನ್ಸ್ ನಗರವನ್ನು ನಾಶಮಾಡುತ್ತ ಸಾಗಿದವು. ಯಾಜಿಪಾ ಗ್ಯಾಲರಿಯಲ್ಲಿದ್ದ ೬೦೦ಕ್ಕೂ ಹೆಚ್ಚಿನ ಕಲಾಕೃತಿಗಳು ನೀರಿನ ಅಡಿಯಲ್ಲಿ ಸೇರಿದ್ದವು. ಫ್ಲೋರೆಂಟಿನ್ ಕಲೆಯ ೧.೩೦ ಲಕ್ಷ ಛಾಯಾ ಚಿತ್ರಗಳು ನಾಶವಾದವು.

ಹದಿನಾಲ್ಕನೇ ಶತಮಾನದಿಂದ ಶೇಖರಿಸಿ ಇಟ್ಟಿದ್ದ ಐತಿಹಾಸಿಕ ದಾಖಲೆಗಳು ನೀರಿನ ಪಾಲಾದವು. ಅಮೇರಿಕಕ್ಕೆ ತನ್ನ ಹೆಸರನ್ನು ಕೊಟ್ಟ ಅಮೇರಿಗೊ ವೆಸ್ಪುಚಿಯ ವೈಯಕ್ತಿಕ ದಾಖಲೆಗಳೆಲ್ಲವೂ ನಾಶವಾದವು. ಪ್ರಪಂಚದ ಅತ್ಯುತ್ತಮ ಚಿತ್ರಗಳಲ್ಲಿ ಒಂದಾಗಿದ್ದ ೧೩ ನೇ ಶತಮಾನದ ಸಿಮಾಬ್ವೆಯ ಕ್ರಿಸ್ತನನ್ನು ಶಿಲುಬೆಗೇರಿಸುವ ಚಿತ್ರ ಸಂಪೂರ್ಣ ನಾಶವಾಯಿತು. ಅತ್ಯಂತ ಹೆಚ್ಚು ನಷ್ಟವಾಗಿದ್ದು ಗ್ರಂಥಾಲಯಗಳಿಗೆ. ೬೦ ಲಕ್ಷಕ್ಕೂ ಹೆಚ್ಚಿನ ಪುಸ್ತಕಗಳು ನೀರಿನಲ್ಲಿ ನೆನೆದು ಪುಟ ಪುಟವೂ ಬೇರ್ಪಟ್ಟವು.

ಕಲೆ ಮತ್ತು ಸಾಂಸ್ಕೃತಿಕ ವಿದ್ವಾಂಸರು ಜಗತ್ತಿನ ಎಲ್ಲೆಡೆಗಳಿಂದ ಬಂದು ಫ್ಲಾರೆನ್ಸಿನ ಕಲಾಕೃತಿಗಳನ್ನು ರಕ್ಷಿಸಲು ಟೊಂಕಕಟ್ಟಿ ನಿಂತರು. ನೀರಿನಲ್ಲಿ ನೆನೆದಿದ್ದ ಚಿತ್ರಗಳಿಗೆ ಅತ್ಯಂತ ವೇಗವಾಗಿ 'ಚಿಕಿತ್ಸೆ' ನೀಡಲಾಯಿತು.ರಾಸಾಯನಿಕಗಳನ್ನು ಬಳಸಿ ಅವುಗಳನ್ನು ಶೀಘ್ರವಾಗಿ ಒಣಗಿಸಲಾಯಿತು. ಪುಸ್ತಕಗಳ ಒಂದೊಂದು ಪುಟವನ್ನೂ ಹೋಲಿದು ಮತ್ತೆ ಮೊದಲಿನ ಆಕೃತಿಗೆ ತರಲಾಯಿತು. ಒಂದು ವರ್ಷದಲ್ಲಿ ಎಲ್ಲವನ್ನೂ ಸರಿಪಡಿಸಲಾಯಿತು- "ಪುನರುಜ್ಜೀವನ ಗೊಂಡ ಸ್ವರ್ಣನಗರ ಮತ್ತೆ ಕೋರೈಸುತ್ತಿದೆ," ಎಂಬ ವಾಕ್ಯದೊಡನೆ ಫ್ಲಾರೆನ್ಸಿನ ದ್ವಾರ ಮತ್ತೆ ತೆರೆಯಲ್ಪಟ್ಟಿತು.

ಎಂ.ಎಸ್.ಎನ್.

ಪೆಪ್ಪರ್‌ಮೆಂಟ್‌ನ ಪುದೀನಾ

ಪುದೀನಾಕ್ಕೆ ಸಂಸ್ಕೃತದಲ್ಲಿ ವ್ಯಂಜನ, ಅಜೀರ್ಣಹರ, ಸುಗಂಧಿಪತ್ರ, ರುಚಿಶ್ಯಃ, ವಾಂತಿಹಾರಿ, ರೋಚನಿ, ಶಾಖ ಶೋಭನವೆಂದೂ, ಹಿಂದಿಯಲ್ಲಿ ಪುದೀನಾ, ಫೋದೀನ ಹಾಗೂ ಇಂಗ್ಲೀಷ್‌ನಲ್ಲಿ ಸ್ಪೆಯರ್‌ಮಿಂಟ್, ಟಿಲ್ಲ ರೆಡ್‌ಮಿಂಟ್ ಎಂಬ ಹೆಸರುಗಳೂ ಇವೆ. ಪುದೀನಾದಲ್ಲಿ ಹಲವು ಜಾತಿಗಳಿದ್ದರೂ ಎಲ್ಲದರ ಗುಣಧರ್ಮ ಒಂದೇ. ಮನಸ್ಸಿದ್ದರೆ ಕೈತೋಟದಲ್ಲೇ ಸುಲಭವಾಗಿ ಬೆಳೆಸಬಹುದಾದ ಸಣ್ಣ ಗಿಡವದು. ತರಕಾರಿ ಮಾರ್ಕೆಟ್‌ನಲ್ಲಿ ಇದು ಲಭ್ಯ.

ಅದು ಕಟು, ಉಷ್ಣವೀರ್ಯ, ರೋಚಕ, ದೀಪನ; ಹಾಗೆಯೇ ವಾಯು, ಕಫ, ವಾಂತಿ, ಹೊಟ್ಟೆ ನೋವು, ಭೇದಿ ಮತ್ತು ಕ್ರಿಮಿನಾಶಕ ಗುಣವುಳ್ಳದ್ದಾಗಿದೆ.

ಉಪಯೋಗಗಳು: ಕಫಹರ, ವಾತ ಶಾಮಕ, ದುರ್ಗಂಧನಾಶಕ, ಮೂತ್ರವಿರೇಚಕ, ಗರ್ಭಾಶಯೋತ್ತೇಜಕ, ಹೃದಯೋತ್ತೇಜಕ ವಿಷಘ್ನ ಮುಂತಾದ ಗುಣಗಳಿರುವ ಪುದಿನಾವನ್ನು ಅಡುಗೆಯಲ್ಲೂ ಬಳಸಲಾಗುತ್ತಿದೆ.

ಅನೇಕ ಪೋಷಕಾಂಶವುಳ್ಳ ಪುದೀನಾ ಸೊಪ್ಪಿನ ಚಟ್ನಿಯನ್ನು ಮಾಡಿಕೊಂಡು ತಿಂದರೆ ಜೀರ್ಣಶಕ್ತಿ ಹೆಚ್ಚುವುದು. ದಿನಾಲೂ ಎಲೆಗಳನ್ನು ಜಗಿದು ತಿನ್ನುವುದರಿಂದ ನಾಲಿಗೆಯ ರುಚಿಗ್ರಹಣ ಶಕ್ತಿ ಹೆಚ್ಚಾಗುವುದಲ್ಲದೆ ಬಾಯಲ್ಲಿನ ದುರ್ಗಂಧ ನಾಶವಾಗಿ, ವಸಡು ಹಾಗೂ ಹಲ್ಲುಗಳು ಗಟ್ಟಿಯಾಗುವವು. ಪುದೀನಾ ಸೊಪ್ಪಿನ ಕಷಾಯ ಮಾಡಿಕೊಂಡು ದಿನಕ್ಕೆ ಮೂರು ಬಾರಿ ಕುಡಿಯುವುದರಿಂದ ಅಜೀರ್ಣ, ನೆಗಡಿ, ಹೊಟ್ಟೆಯುಬ್ಬರ, ಬಿಕ್ಕಳಿಕೆ, ಗಂಟಲು ಕಟ್ಟುವಿಕೆಗಳು ನಿವಾರಣೆಗೊಳ್ಳುವವು. ಅಲ್ಲದೆ ಜ್ವರದಲ್ಲಿ ಉಂಟಾಗುವ ಅರುಚಿಯ ಪರಿಹಾರ

ಇಲ್ಲಿ ಜಿರಲೆಯೂ ಔಷಧ!

ಥೈಲ್ಯಾಂಡ್‌ನ ಅನೇಕ ಗ್ರಾಮಗಳಲ್ಲಿ ಜಿರಲೆಯನ್ನು ಎಣ್ಣೆಯಲ್ಲಿ ಕರಿದು ತಿನ್ನುವ ಪದ್ಧತಿ ರೂಢಿಯಲ್ಲಿದೆ. ಏಕೆಂದರೆ ಅದರಲ್ಲಿ ಸಾಕಷ್ಟು ಪ್ರೋಟೀನ್‌ಗಳಿವೆ ಎಂದು ಅವರು ನಂಬುತ್ತಾರೆ. ಜಿರಲೆಯನ್ನು ಸಕ್ಕರೆಯೊಂದಿಗೆ ಸೇರಿಸಿ ತಿಂದರೆ ಅಲ್ಸರ್ ಹಾಗೂ ಕ್ಯಾನ್ಸರ್ ರೋಗಗಳೂ ಗುಣವಾಗುತ್ತವೆಯಂತೆ! ಅಲ್ಲದೆ ಜಿರಲೆಯಿಂದ ತಯಾರಿಸಿದ ಒಂದು ವಿಧದ ಪುಡಿಯೂ ದೊರೆಯುತ್ತದೆ. ಈ ಪುಡಿಯ ಉಪಯೋಗವೇನೆಂದರೆ ಯಾರಾದರೂ ಔತಣಕೂಟಗಳಲ್ಲಿ ಸಿಕ್ಕಾಪಟ್ಟೆ ತಿಂದು ತೊಂದರೆ ಪಡುವವರು ಈ ಪುಡಿಯೊಂದಿಗೆ ಬೆಳ್ಳುಳ್ಳಿ ಸೇರಿಸಿ ತಿಂದರೆ ತಿಂದದ್ದೆಲ್ಲಾ ಚೆನ್ನಾಗಿ ಜೀರ್ಣವಾಗುತ್ತದಂತೆ!

✷ ಎಚ್.ಆರ್. ವಸ್ತ್ರದ

ವಾಗಿ, ಮೈ ಚೆನ್ನಾಗಿ ಬೆವರುವುದು. ಪುದೀನಾ ಸೊಪ್ಪಿನ ಜೊತೆ ಸಮಪ್ರಮಾಣದಲ್ಲಿ ಹಸಿಶುಂಠಿಯನ್ನು ಸೇರಿಸಿ ತಯಾರಿಸಿದ ಕಷಾಯವು ಅಜೀರ್ಣ, ವಾಂತಿಭೇದಿಯನ್ನು ಹತೋಟಿಗೆ ತರುವುದು. ಸಕ್ಕರೆ ಸೇರಿಸಿದ ಒಂದು ಚಮಚ ಪುದೀನಾರಸವು ಹೊಟ್ಟೆಯುಬ್ಬರ, ಹೊಟ್ಟೆನೋವಿನ ಶಮನಕ್ಕೆ ಸಾಕು. ಅರಿಶಿನದೊಂದಿಗೆ ಸ್ವಲ್ಪ ಎಲೆಗಳನ್ನು ಅರೆದು ಮುಖಕ್ಕೆ ಬಳಿದು ಅರ್ಧ ಗಂಟೆಯ ನಂತರ ತೊಳೆದರೆ ಮುಖದ ಜಿಡ್ಡು-ಮೊಡವೆಗಳು ಮಾಯವಾಗುತ್ತವೆ.

ಪುದೀನಾವನ್ನು ಮೆಂಥಾಲ್ ಮತ್ತು ಪೆಪ್ಪರ್‌ಮೆಂಟ್ ತೈಲ (ಅರ್ಕ)ವನ್ನು ತೆಗೆಯುವುದಕ್ಕಾಗಿ ಉಪಯೋಗಿಸುತ್ತಾರೆ. ಹೂವಿನಿಂದ ಪೆಪ್ಪರ್‌ಮೆಂಟ್ ಅರ್ಕ ತಯಾರಿಸಿ, ಪೆಪ್ಪರಮೆಂಟ್‌ಗೆ ಉಪಯೋಗಿಸಿ, ಉಳಿದ ಭಾಗದಿಂದ ಮೆಂಥಾಲ್ ತಯಾರಿಸುತ್ತಾರೆ. ಚ್ಯೂಯಿಂಗ್‌ಗಮ್‌ನಲ್ಲೂ ಅದರ ಬಳಕೆ ಹೆಚ್ಚುತ್ತಿದೆ.

ನೋವು-ಶೂಲೆ ನಿವಾರಕ ಪುದೀನಾವನ್ನು ಚೂರ್ಣ, ಕಷಾಯ, ಚಟ್ನಿಗಳ ರೂಪದಲ್ಲಿಯೂ ಸಾಂಬಾರಪದಾರ್ಥವಾಗಿಯೂ ಬಳಸಲಾಗುತ್ತದೆ. ಕಾಲರಾ, ಅಜೀರ್ಣ ಭೇದಿಯಿದ್ದಾಗ ಅದರ ಬಳಕೆ ಪರಿಣಾಮಕಾರಿ.

⊙ *ಚಂದ್ರಕಾಂತ ಎಸ್. ಭಟ್*

ಅಪರಾಧ ಶೋಧದಲ್ಲಿ ಬಟ್ಟೆ

ಅಪರಾಧಿ ತನಗರಿವಿಲ್ಲದಂತೆ ದುಷ್ಕೃತ್ಯದ ಸುಳಿವು ಬಿಟ್ಟೇಹೋಗುತ್ತಾನೆ. ಅಪರಾಧಿಗಳನ್ನು ಕಂಡುಹಿಡಿಯುವಲ್ಲಿ ಬಟ್ಟೆಯ ಪಾತ್ರ ಅತಿ ಮಹತ್ವದ್ದೆ ಹೌದು. ಕೊಲೆಯಾದ ವ್ಯಕ್ತಿಯ ಉಡುಪು, ಕೊಲೆಗಾರ ಮರೆತು ಹೋಗಬಹುದಾದ ಕರವಸ್ತ್ರ ಹಗ್ಗ,ಹುರಿ ಇತ್ಯಾದಿಗಳು ತನಿಖೆಯಲ್ಲಿ ನಿರ್ಣಾಯಕ ಪಾತ್ರ ನಿರ್ವಹಿಸಬಲ್ಲವು. ಬಟ್ಟೆಗೆ ದ್ರವ, ಘನವಸ್ತುಗಳ ವಾಸನೆಯನ್ನು ಹೀರಿಕೊಳ್ಳುವ ಗುಣವಿದೆ. ವಸ್ತ್ರದ ಮೇಲೆ ಆಮ್ಲದಿಂದಾದ ಕಲೆ, ರಂಧ್ರಗಳ ಜಾಡನ್ನು ಹಿಡಿದು ಅದು ಆಮ್ಲ ಎರಚಿದ ಅಥವಾ ಸ್ಫೋಟಕಗಳನ್ನು ಎಸೆದ ಅಪರಾಧಕ್ಕೆ ಸಂಬಂಧಿಸಿದ ಪ್ರಕರಣ ಎಂದು ನಿರ್ಧರಿಸಬಹುದು. ಕೊಲೆಯಾದ ವ್ಯಕ್ತಿಯ ಉಡುಪಿನಲ್ಲಿ ಮಲ, ಮೂತ್ರ, ರಕ್ತ, ವಾಂತಿ, ಇಲ್ಲದೆ ಕಫದ ಕಲೆಗಳಿದ್ದರೆ ಅದು ವಿಷಪ್ರಾಶನ ಮಾಡಿಸಿ ಹತ್ಯೆಗೈಯಲಾಗಿದೆಯೆಂಬ ತೀರ್ಮಾನಕ್ಕೆ ಬರಲು ಅನುವಾಗುವುದು. ಅಂತೆಯೆ ಹಾಸಿಗೆ, ಹೊದಿಕೆ, ದಿಂಬುಗಳ ಮೇಲಿನ ರಕ್ತ, ರಾಸಾಯನಿಕ,

ಬಣ್ಣ, ಹಣ್ಣಿನ ರಸ, ಮಸಿ, ಮಾದಕ ಪಾನೀಯಗಳಿಂದಾದ ಕಲೆಗಳನ್ನು ಅಪರಾಧ ಶೋಧ ತಜ್ಞರು ಸೂಕ್ಷ್ಮ ಪರೀಕ್ಷೆಗಳಿಗೆ ಒಳಪಡಿಸಿ ಖಚಿತ ನಿರ್ಣಯಕ್ಕೆ ಬರುತ್ತಾರೆ.

ಬಟ್ಟೆಯ ಸ್ಯಾಂಪಲ್ಲನ್ನು ಸುಟ್ಟು ಆ ಬೂದಿಯನ್ನು ವರ್ಣಪಟಲ ಪರೀಕ್ಷೆಗೊಳಪಡಿಸಲಾಗುತ್ತದೆ. ಇದರಿಂದ ಅಮೂಲ್ಯ ಮಾಹಿತಿಗಳು ಲಭ್ಯವಾಗಿ ದುಷ್ಕರ್ಮಿಯನ್ನು ಪತ್ತೆ ಹಚ್ಚುವಲ್ಲಿ ನೆರವಾಗುತ್ತವೆ. ಗುಂಡೇಟಿನಿಂದ ಸತ್ತ ವ್ಯಕ್ತಿಯ ಬಟ್ಟೆಯ ಮೇಲೆ ರಂಧ್ರಗಳು ಮೂಡುವುದು ಸಹಜ. ಗುಂಡು ರಂಧ್ರಗಳ ಸುತ್ತಲೂ ಕ್ಷಾರೀಯ ಗುಣವುಳ್ಳ ಸತುವು; ನೈಟ್ರೇಟ್, ಸಲ್ಫೇಟುಗಳನ್ನು ಬಟ್ಟೆಯಲ್ಲಿ ಉಳಿಸುತ್ತದೆ. ಕೆಲವೊಮ್ಮೆ ರಂಧ್ರದ ಸುತ್ತ ಕಪ್ಪಾದ ಛಾಯೆ ಮೂಡುವುದುಂಟು. ಕೊಲ್ಲಲ್ಪಟ್ಟ ವ್ಯಕ್ತಿಯ ಷರಟು, ಪ್ಯಾಂಟುಗಳ ಕಿಸೆಗಳೂ ಅಪರಾಧಿಯ ಬಗ್ಗೆ ಸುಳಿವು ಒದಗಿಸಬಲ್ಲವು. ಅಪರಾಧ ತಜ್ಞರು ಕಿಸೆಯಲ್ಲಿನ ಧೂಳು ಕೊಳೆ, ಕಶ್ಮಲ ಮುಂತಾದವುಗಳನ್ನು ಜಾಗರೂಕತೆಯಿಂದ ಸಂಗ್ರಹಿಸಿ ರಾಸಾಯನಿಕ ಪರೀಕ್ಷೆಗೊಳಪಡಿಸುತ್ತಾರೆ. ಕಂಬಳಿ, ಜಮಖಾನೆ, ಬೆಡ್‌ಶೀಟ್‌ಗಳ ಮೇಲೆ ಮೂಡಿರಬಹುದಾದ ಅಪರಾಧಿಯ ಕೈಬೆರಳು, ಹೆಜ್ಜೆಯ ಪಡಿಯಚ್ಚನ್ನು ಪಾಲಿಥಿನ್ ಪುಡಿ ಸಿಂಪಡಿಸಿ ಪಡೆದು ಒಂದೆರಡು ಗಂಟೆಗಳಲ್ಲೇ ಸುಳಿವು ಪಡೆಯಲಾಗುವುದು.

⊙ *ಬಿಂಡಿಗನವಿಲೆ ಭಗವಾನ್*

ಅಪಾಯದ ಗಂಟೆ

ಟಿ.ವಿ.ಯ ಪ್ರಕಾಶಮಾನವಾದ ಬೆಳಕಿನಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಹಾಂಗ್‌ಕಾಂಗಿನ ಕಂಪನಿಯೊಂದು ಸಾಫ್ಟ್‌ವೇರ್ ನಿರ್ಮಾಣ ಮಾಡಿದೆ. ೧೨ ವೋಲ್ಟ್ ಡಿ. ಸಿ. ಮಾಡೆಲ್ ಅಡ್ಯಾಪ್ಟರ್ ವ್ಯವಸ್ಥೆಯೊಡನೆ ಇದನ್ನು ನಿರ್ಮಿಸಲಾಗಿದೆ. ಟಿ. ವಿ. ಪರದೆಯಿಂದ ಒಂದೂವರೆ ಮೀಟರ್ ದೂರದಲ್ಲಿ ಇದನ್ನು ಇಟ್ಟುಕೊಂಡು ನಾವು ಕೂರಬೇಕು. ಈ ಉಪಕರಣದ ಬಳಿಗೆ ಹೋದೆವಾದರೆ ಟಿ. ವಿ. ಬೆಳಕಿನಿಂದ ಕಣ್ಣಿಗೆ ತೊಂದರೆಯಾಗುತ್ತದೆ ಎಂಬುದನ್ನು ಸೂಚಿಸಲು ಏಳು ಸೆಕೆಂಡುಗಳ ವರೆಗೆ ಇದು ಗಂಟೆ ಬಾರಿಸುವುದು. ಅಷ್ಟರಲ್ಲಿ ನಾವು ದೂರ ಕೂಡದಿದ್ದರೆ ಈ ಉಪಕರಣ ಟಿ. ವಿ. ಯನ್ನೇ ಆಫ್ ಮಾಡಿಬಿಡುತ್ತದೆ.

✸ ಮಧು ಎಸ್. ಹಿರೇಮನಿ

ವಿಚಿತ್ರ ಲೆಕ್ಕಾಚಾರ

೨X೨ = ೫ !?

ಇದೇನು ಪ್ರಾಥಮಿಕ ಶಾಲೆಗಳಲ್ಲಿ ಕಲಿತದ್ದೂ ಮರೆತು ಹೋಗಿದೆಯೇನು? ಎಂದು ನೀವೇನೂ ಚಿಂತಿಸಬೇಕಾಗಿಲ್ಲ. ಬೇಕಿದ್ದರೆ ಕೆಳಗಿನ ಲೆಕ್ಕಾಚಾರವನ್ನುನೀವೇ ಮಾಡಿ ನೋಡಿ.

೧೬ - ೩೬ = ೨೫ - ೪೫ ಸರಿತಾನೆ?

ಎರಡೂ ಬದಿಗೆ ಸಮಾನ ಸಂಖ್ಯೆ $೨೦\frac{೧}{೪}$ ಅನ್ನು ಕೂಡಿಸಿ

$$೧೬ - ೩೬ + ೨೦\frac{೧}{೪} = ೨೫ - ೪೫ + ೨೦\frac{೧}{೪}$$

ಇದನ್ನೇ ಈ ಕೆಳಗಿನಂತೆ ಬರೆಯಬಹುದಲ್ಲವೇ?

$$೪^{೨} - ೨ \times ೪ \times \frac{೯}{೨} + \left(\frac{೯}{೨}\right)^{೨} = ೫^{೨} - ೨ \times ೫ \times \frac{೯}{೨} + \left(\frac{೯}{೨}\right)^{೨}$$

ನಾವೆಲ್ಲಾ ತಿಳಿದಿರುವಂತೆ $a^{೨} + b^{೨} - ೨ab = (a-b)^{೨}$ ಸರಿತಾನೆ?

$$\left(೪ - \frac{೯}{೨}\right)^{೨} = \left(೫ - \frac{೯}{೨}\right)^{೨}$$

ವರ್ಗಮೂಲ ತೆಗೆದಾಗ, *

$$೪ - \frac{೯}{೨} = ೫ - \frac{೯}{೨}$$

ಎರಡೂ ಕಡೆಗೂ $\frac{೯}{೨}$ ಕೂಡಿಸಿ

$\therefore$ ೪ = ೫

ಈ ಕಾರಣದಿಂದ ೨ x ೨ = ೫ ಸರಿತಾನೆ!?

ಇದರಂತೆ ಇಲ್ಲೊಂದು ಇನ್ನೊಂದು ವಿಚಿತ್ರವಿದೆ! ಅದೇನೆಂದರೆ ೨ = ೩ ಹೇಗೆನ್ನುವಿರಾ?

$$\text{೪} - \text{೧೦} = \text{೯} - \text{೧೫}$$

$\text{೬}\frac{\text{೧}}{\text{೪}}$ ಎರಡೂ ಬದಿಗೂ ಕೂಡಿಸಿ.

$$\text{೪} - \text{೧೦} + \text{೬}\frac{\text{೧}}{\text{೪}} = \text{೯} - \text{೧೫} + \text{೬}\frac{\text{೧}}{\text{೪}}$$

ಅಂದರೆ,

$$\text{೨}^{\text{೨}} - \text{೨} \times \text{೨} \times \frac{\text{೫}}{\text{೨}} + \left(\frac{\text{೫}}{\text{೨}}\right)^{\text{೨}} = \text{೩}^{\text{೨}} - \text{೨} \times \text{೩} \times \frac{\text{೫}}{\text{೨}} + \left(\frac{\text{೫}}{\text{೨}}\right)^{\text{೨}}$$

ಅಂದರೆ, $\left(\text{೨} - \frac{\text{೫}}{\text{೨}}\right)^{\text{೨}} = \left(\text{೩} - \frac{\text{೫}}{\text{೨}}\right)^{\text{೨}}$

ವರ್ಗಮೂಲ ತೆಗೆದಾಗ, *

$$\text{೨} - \frac{\text{೫}}{\text{೨}} = \text{೩} - \frac{\text{೫}}{\text{೨}}$$

ಎರಡೂ ಕಡೆಗೂ $\frac{\text{೫}}{\text{೨}}$ ಅನ್ನು ಕೂಡಿಸಿದರೆ,

೨ = ೩ ಸರಿಯೇ!?

ಹಾಗಾದರೆ ಮೇಲಿನ ಎರಡೂ ಲೆಕ್ಕಾಚಾರಗಳಲ್ಲಿ ನಾವು ತಪ್ಪಿದ್ದೆಲ್ಲಿ?

ಉತ್ತರ: ಎಲ್ಲಿ! ತಪ್ಪಿದ್ದೆಲ್ಲಿ ನಾವು?

* ಚಿಹ್ನೆ ಹಾಕಿದಲ್ಲೆ ನಾವು ತಪ್ಪಿದ್ದು.

$$\left(\text{೪} - \frac{\text{೯}}{\text{೨}}\right)^{\text{೨}} = \left(\text{೫} - \frac{\text{೯}}{\text{೨}}\right)^{\text{೨}}$$

ವರ್ಗಮೂಲ ತೆಗೆದಾಗ

$\text{೪} - \frac{\text{೯}}{\text{೨}} = \text{೫} - \frac{\text{೯}}{\text{೨}}$ ಇದು ಸರಿಯೇ?

$(-\text{೫})^{\text{೨}} = \text{೫}^{\text{೨}}$ ಸರಿ ಅಲ್ಲವೇ ಅಲ್ಲ. ಏಕೆ ಗೊತ್ತೇ?

ಆದರೆ $-\text{೫} \neq \text{೫}$ ಸರಿ ತಾನೆ?

ಅಂತೆಯೇ $\left(-\frac{\text{೧}}{\text{೨}}\right)^{\text{೨}} = \left(\frac{\text{೧}}{\text{೨}}\right)^{\text{೨}}$

ಆದರೆ $-\frac{\text{೧}}{\text{೨}}$ ಎಂಬುದು $\frac{\text{೧}}{\text{೨}}$ ಕ್ಕೆ ಸಮವಲ್ಲ ಅಲ್ಲವೇ?

ಆದ್ದರಿಂದ ನಾವು ವರ್ಗಮೂಲ ತೆಗೆದಲ್ಲೇ ತಪ್ಪಿದ್ದು ಅಲ್ಲವೇ? ✷ ಸಂಗ್ರಹ: ಎ.ಆರ್.

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ.

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧) ಉತ್ಸರ್ಪಿ
- (ಅ) ಮೇಲೇರುತ್ತಿರುವ
- (ಆ) ಹಾವಾಡಿಗ
- (ಇ) ಬೆಲ್ಲದ ಭಕ್ಷ
- (ಈ) ಬೆಟ್ಟ

೨) ನಿರ್ಭೀಕ
- (ಅ) ಕಪ್ಪೆಯ ಕೂಗು
- (ಆ) ಅಂಜುಬುರುಕ
- (ಇ) ಅಶಕ್ತ
- (ಈ) ಹೆದರಿಕೆ ಇಲ್ಲದ

೩) ಅಬ್ಧಿ
- (ಅ) ಕಮಲ
- (ಆ) ವರ್ಷ
- (ಇ) ನದಿ
- (ಈ) ಸಮುದ್ರ

೪) ಅಭಿರತ
- (ಅ) ದೊಡ್ಡ ತೇರು
- (ಆ) ಎದುರಾಳಿ
- (ಇ) ಸಂತೋಷದಲ್ಲಿರುವ
- (ಈ) ಇಚ್ಛೆ

೫) ಕದೀಮ
- (ಅ) ಹೆಜ್ಜೆ ಇಡುವವನು
- (ಆ) ಬರಹಗಾರ
- (ಇ) ಪಳಗಿದವನು
- (ಈ) ಪಾಪಿ

೬) ತೊಡರು
- (ಅ) ದೀಪ
- (ಆ) ಸಿಕ್ಕಿಕೊಳ್ಳು
- (ಇ) ಗೊಂಚಲು
- (ಈ) ಹೊಳೆ

೭) ರೂವಾರಿ
- (ಅ) ಶಿಲ್ಪಿ
- (ಆ) ಕುರೂಪಿ
- (ಇ) ಹಣವುಳ್ಳವ
- (ಈ) ಬೆಳ್ಳಿ

೮) ಹಳಹಳಿಸು
- (ಅ) ಹಂಗಿಸು
- (ಆ) ಬೆಳಗಿಸು
- (ಇ) ಅಲುಗಾಡಿಸು
- (ಈ) ದುಃಖಪಡು

೯) ಪ್ರವರ್ತಕ
- (ಅ) ದೊಡ್ಡ ವ್ಯಾಪಾರಿ
- (ಆ) ಪ್ರಾರಂಭ ಮಾಡಿದವ
- (ಇ) ಬದಲಾವಣೆ
- (ಈ) ಬೆಳೆಸುವವ

೧೦) ಪ್ರಮುಷ್ಟ
- (ಅ) ದುರ್ಲಭ
- (ಆ) ಬಹಳ ಬಿಸಿ
- (ಇ) ಜಿಪುಣ
- (ಈ) ಗಾಬರಿಯಾದ

೧೧) ಸೆಡವು
- (ಅ) ಮುಗ್ಗರಿಸು
- (ಆ) ಚಪ್ಪಲಿ
- (ಇ) ಎರಿಕೆ
- (ಈ) ಹೆಮ್ಮೆ

೧೨) ವೆಗ್ಗಳ
- (ಅ) ಹೊಂಡ
- (ಆ) ಹಂಬಲಿ
- (ಇ) ಧಾರಾಳ
- (ಈ) ಅಹಂಕಾರ

'ಶಬ್ದಭಂಡಾರ'ದ ಸರಿಯಾದ ಅರ್ಥಗಳು

೧. ಉತ್ಸರ್ಪಿ

(ಅ) ಮೇಲೇರುತ್ತಿರುವ, ಉಬ್ಬುತ್ತಿರುವ, ಉದಾ:- ಅವನ ಅದೃಷ್ಟ ಈಗ ಉತ್ಸರ್ಪಿಯಾಗಿದೆ. (ಸಂ. ಉತ್ =ಮೇಲೆ, ಸರ್ಪಿ= ಸರಿಯುತ್ತಿರುವ)

೨. ನಿರ್ಭೀಕ

(ಈ) ಹೆದರಿಕೆ ಇಲ್ಲದ, ಧೈರ್ಯಶಾಲಿಯಾದ, ಉದಾ:- ನಿರ್ಭೀಕ ಮನುಷ್ಯ, (ಸಂ. ನಿರ್ = ಇಲ್ಲ, ಭೀಕ = ಹೆದರಿಕೆಯುಳ್ಳವ))

೩. ಅಬ್ದ

(ಅ) ನೀರನ್ನು ಕೊಡುವ ಅರ್ಥಾತ್ ವರ್ಷ. ಉದಾ_ ಶತಾಬ್ದಗಳೇ ಸಂದವು. (ಸಂ. ಅಪ್ = ನೀರು, ದ = ಕೊಡುವಂಥದು. ನೀರು ಕೊಡುವ ಒಂದು ಮಳೆಗಾಲದಿಂದ ಇನ್ನೊಂದು ಮಳೆಗಾಲದ ವರೆಗಿನ ಅವಧಿ)

೪. ಅಭಿರತ

(ಇ) ಸಂತೋಷದಲ್ಲಿರುವ ಸಮಾಧಾನದಿಂದ ಕೆಲಸದಲ್ಲಿ ತೊಡಗಿರುವ, ಉದ್ಯೋಗ ಮಾಡುವ, ಉದಾ: ತನ್ನ ಕೆಲಸದಲ್ಲಿ ಅಭಿರತನಾದವನು, ತನ್ನ ಹೆಂಡತಿಯಲ್ಲಿ ಅಭಿರತನಾದವನು ಅಂದರೆ ಬೇರೆಯವರನ್ನು ಬಯಸದವನು. (ಸಂ. ಅಭಿ = ಎದುರು, ರತ = ಮೆಚ್ಚಿದ)

೫. ಕದೀಮ

(ಇ) ಪಳಗಿದವನು, ಹಳಬ, ಅನುಭವವುಳ್ಳವನು. ಉದಾ: ಕಳ್ಳ ಪೇಟೆ ಕದೀಮ (ಉರ್ದು).

೬. ತೊಡರು

(ಅ) ಸಿಕ್ಕಿಕೊಳ್ಳು, ಸಂಬಂಧಪಡು, ಸೇರಿಕೊಳ್ಳು, ಉದಾ- ಈ ಪಾತಕದಲ್ಲಿ ಅವನ ಹೆಸರೂ ತೊಡರಿಕೊಂಡಿದೆ. (ಕನ್ನಡ).

೭. ರೂವಾರಿ

(ಅ) ಶಿಲ್ಪಿ, ಬಡಗಿ, ಕೆತ್ತನೆ ಕೆಲಸ ಮಾಡುವವನು.

೮. ಹಳಹಳಿಸು

(ಈ) ದುಃಖಪಡು, ಪಶ್ಚಾತ್ತಾಪಪಡು, ಪ್ರಲಾಪಿಸು. ಉದಾ- ಮರಣವಾರ್ತೆ ಕೇಳಿ ಹಳಹಳಿಸಿದ. (ಸಂ. ಪ್ರಲಪ್ ಎಂಬುದರಿಂದ)

೯. ಪ್ರವರ್ತಕ

(ಅ) ಪ್ರಾರಂಭ ಮಾಡಿದವ, ಹೊರಡಿಸಿಬಿಟ್ಟವ, ಮೂಲಪುರುಷ, ಪ್ರೋತ್ಸಾಹ ಕೊಟ್ಟವ, ಉದಾ- ಧರ್ಮಪ್ರವರ್ತಕ, ಮತಪ್ರವರ್ತಕ, (ಸಂ. ಪ್ರ= ಹೆಚ್ಚಾಗಿ, ವರ್ತಕ= ತಿರುಗಿಸಿಬಿಟ್ಟವ)

೧೦. ಪ್ರಮುಷ್ಟ

(ಅ) ಕಾಣೆಯಾದ, ದುರ್ಲಭ, ಸುಲಭವಾಗಿ ಸಿಗದ, ಉದಾ- ಪ್ರಾಮಾಣಿಕತೆಯೇ ಪ್ರಮುಷ್ಟವಾಗಿ ತೋರಿದೆ. (ಸಂ. ಪ್ರ= ಬಹಳ, ಮುಷ್ಟ = ಕಳವಾಗಿ ಹೋದ, ಅಂದರೆ ಕಾಣೆಯಾದ)

೧೧. ಸೆಡವು

(ಈ) ಹೆಮ್ಮೆ ಅಹಂಭಾವ. ಉದಾ- ತಾನು ಚೆಲುವೆಯೆಂದು ಅವಳಿಗೆ ಸೆಡವು. (ಕನ್ನಡ)

೧೨. ವೆಗ್ಗಳ

(ಇ) ಧಾರಾಳ, ಯಥೇಷ್ಟ, ಬಹಳ, ಬೇಕೆಂಬಷ್ಟು, ಉದಾ:- ವೆಗ್ಗಳವಾದ ಹಣ ಅವನಲ್ಲಿದೆ. (ಕನ್ನಡ)

ನಿಮ್ಮ ಶಬ್ದ ಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಯನ್ನು ತಿಳಿಯಿರಿ.

೬-೮	ಸರಿಯಿದ್ದರೆ	ಸಾಧಾರಣ
೯-೧೦	,, ...	ಉತ್ತಮ
೧೧-೧೨	,, ...	ಅತ್ಯುತ್ತಮ

ಹರಟೆ

ಮುಜುಗರ

• ಡಾ.ಎಂ.ಆರ್. ಮಂದಾರವಲ್ಲಿ

"ಮುಜುಗರ ಅಂದರೆ ಏನೇ?" ಪರಮೇಶಿ ತನ್ನ ಹೆಂಡ್ತೀನ ಕೇಳ್ದ.

"ರಾಮರಾಮಾ, ಮುಜುಗರ ಅಂದ್ರೆ ಗೊತ್ತಿಲ್ವೆ ? ಕನ್ನಡನಾಡಿನಲ್ಲಿ ಹುಟ್ಟಿದ್ದಕ್ಕೆ ಸಾರ್ಥಕವಾಯಿತು," ಎಂದು ಹೆಂಡ್ತಿ ತಲೆ ಚಚ್ಚಿಕೊಂಡಳು.

"ನೋಡು, ಈ ಜಗತ್ತಿನಲ್ಲಿ ಹುಟ್ಟಿದಾಕ್ಷಣ ಎಲ್ಲರಿಗೂ ಎಲ್ಲ ವಿಚಾರಾನೂ ತಿಳಿದಿರ್ಲೇಬೇಕು ಅಂತಾ ಕಾನೂನೇನಾದರೂ ಇದೆಯಾ ?" ಪರಮೇಶಿ ಖಾರವಾಗಿ ಪ್ರಶ್ನಿಸಿದ.

"ಎಲ್ಲಾ ವಿಚಾರ ಅಲ್ಲ. ಕೆಲವನ್ನಾದ್ರೂ ತಿಳ್ಕೋಬೇಕಾಗುತ್ತೆ. ಅದಕ್ಕೆಲ್ಲ ಅನುಭವ ಬೇಕಾಗುತ್ತೆ," ಅವಳೂ ಸೇರಿಗೆ ಸವ್ವಾಸೇರು ಎಂಬಂತೆ ಉತ್ತರಿಸಿದಳು.

ಈ ಪತಿ-ಪತ್ನಿಯರ ಇಂಥ ಕದನ ಕೋಲಾಹಲ ನಡೀತಿದ್ದಾಗಲೇ ನಾನು ಅವರ ಮನೆಯೊಳಗೆ ಕಾಲಿಟ್ಟೆ. ನನ್ನನ್ನು ಕಂಡಾಕ್ಷಣ ಪರಮೇಶಿಗೆ ಹೊಸ ಹುರುಪು ಬಂದಂತಾಗಿರಬೇಕು. "ಬನ್ನಿ ಮೇಡಮ್, ಬನ್ನಿ, ನಿಮ್ಮ ಗೆಳತಿಗೆ ಸ್ವಲ್ಪ ಬುದ್ಧಿ ಹೇಳಿ. ಮುಜುಗರ ಅಂದ್ರೇನು ಅಂತ ಕೇಳಿದ್ರೆ ಜಗಳಕ್ಕೆ ಬರ್‍ತಿದಾಳೆ,"ಎಂದ.

"ಇದೆಲ್ಲ ಮಾಮೂಲೀನೇ, ಬಾ, ಬಾ," ಎಂದು ಸ್ವಾಗತಿಸಿದ ಗೆಳತಿ, "ಕರ್ನಾಟಕದಲ್ಲೇ ಹುಟ್ಟಿದ್ರೂ ಕನ್ನಡಿಗರೇ ಆಡೋ ಪದಗಳ ಅರ್ಥ ಇವರಿಗೆ ಗೊತ್ತಿಲ್ಲ. ಎಲ್ಲಾದಕ್ಕೂ ನಾನೇ ಅರ್ಥ ಹೇಳಬೇಕು. ಸಾಕಾಗಿಬಿಟ್ಟಿದೆ," ಎಂದು ಗೊಣಗುಟ್ಟಿದಳು.

ಇವರ ನಡುವಿನ ಮಹಾಯುದ್ಧದ ಮೂಲ ಕಾರಣ ಅರಿತ ನಾನು, ಶಾಂತಿ ಸಂಧಾನ ಮಾಡುವ ಉದ್ದೇಶದಿಂದ, "ಪರಮೇಶಿಯವರೇ, ಮುಜುಗರ ಅಂದ್ರೆ ಕಸಿವಿಸಿ,"ಎಂದೆ.

"ಇಷ್ಟೇನಾ, ನೋಡಿ ಅಷ್ಟಕ್ಕೇ ಎಷ್ಟು ಗಲಾಟೆ! ನೀವು ಬೇರೆ ಇದೇ ಹೊತ್ನಲ್ಲಿ



ಬಂದಾಗ ನನಗೆ ಸ್ವಲ್ಪ ಮುಜುಗರ ಆಯ್ತು. ಈಗ ಸರಿ ಆಯ್ತು ಬಿಡಿ," ಎಂದು ಹೊರನಡೆದ. ನಾನು ಸ್ವಲ್ಪ ಹೊತ್ತು ಅಲ್ಲಿದ್ದು ಗೆಳತಿಯ ಜೊತೆ ಮಾತನಾಡಿ ಹೊರಟೆ. ಆದರೆ ಅಲ್ಲಿಂದ ಹೊರಡುವಾಗ 'ಮುಜುಗರ'ವನ್ನೂ ಜೊತೆಯಲ್ಲಿ ತೆಗೆದುಕೊಂಡೇ ಹೊರಟಂತಾಯ್ತು.

'ಮುಜುಗರ' ಸಾರ್ವಕಾಲಿಕವಾಗಿ ಎಲ್ಲರನ್ನೂ ಒಂದಲ್ಲ ಒಂದು ಸಲ ಕಾಡುತ್ತಲೇ ಇರುತ್ತೆ. ಇದಕ್ಕೆ ಯಾರೂ ಹೊರತಲ್ಲ.

ರಸ್ತೆಯಲ್ಲಿ ಸಿಕ್ಕ ಗೆಳೆಯನನ್ನು ಕಂಡು 'ಹಾಯ್' ಎಂದು ಕೈ ಬೀಸುತ್ತೀರಿ. ಆದಕ್ಕೆ ಆತ ನಿಮ್ಮನ್ನು ಗುರುತಿಸದೇ ಮುಖನೋಡುತ್ತ ಹಾಗೆಯೇ ಮುಂದೆ ಸಾಗಿದರೆ ನಿಮಗೆ 'ಗರ' ಬಡಿದಂತಾಗುತ್ತೆ.

ನನ್ನ ಚಿಕ್ಕಪ್ಪನ ಮಗ ವಿಜಿ ಹೇಳಿ ಮಾಡಿಸಿದ ಮರಗುಳಿ. ಒಂದು ದಿನ ನನ್ನ ತಂಗಿ ರಸ್ತೆಯಲ್ಲಿ ಬರೋವಾಗ, ಗೆಳೆಯರ ಜತೆ ನಿಂತಿದ್ದ ಅವನನ್ನು ನೋಡಿ 'ಹಲೋ' ಎಂದಳಂತೆ. ಅವನು ಪ್ರತಿಕ್ರಿಯೆ ವ್ಯಕ್ತಪಡಿಸದೇ ಸುಮ್ನೆ ನಿಂತಾಗ ಇವಳಿಗೆ ಮುಜುಗರವಾಯ್ತು. "ಯಾಕೋ, ಗೊತ್ತಾಗ್ಲಿಲ್ವ ?" ಎಂದರೆ ಅವನು ನೀರಸವಾಗಿ "ಇಲ್ಲ" ಎನ್ನಬೇಕೆ ? ಜೊತೆಗಿದ್ದ ಕಿಡಿಗೇಡಿ ಗೆಳೆಯ, "ಏನ್ ಮೇಡಂ, ಈ ಚಿಕ್ಕ ವಯಸ್ನಲ್ಲೇ ಸೈಡ್ ಹೊಡಿಯೋಕೆ ಶುರು ಮಾಡಿದ್ದೀರಾ ?" ಎಂದು ಬೇರೆ ಪ್ರಶ್ನಿಸಿದಾಗ ಇವಳಿಗೆ ಹೇಗಾಗಿರ್ಬೇಡ! ಧುಮು ಧುಮು ಉರಿಯುತ್ತಾ ಅಂದು ಮನೆಗೆ ಬಂದವಳು ಮುಂದೆ ಎಷ್ಟೋ ದಿನ ಅವನೊಂದಿಗೆ ಮಾತೇ ಆಡಿರಲಿಲ್ಲ. ಅವನು ಗೋಗರೆದು ಕ್ಷಮೆ ಕೇಳಿದ ನಂತರವೇ ನನ್ನ ತಂಗಿಯ ಗಂಟು ಮುಖ ಸಡಿಲವಾಯಿತು.

ನನ್ನ ತಂಗೀ ಕಥೆ ಹೀಗಾದ್ರೆ ನನ್ನ ಕಥೇನೇ ಬೇರೆ.

ಅವತ್ತು ಬಸ್‌ಸ್ಟಾಪ್‌ನಲ್ಲಿ ನಿಂತಿದ್ದೆ. ಎಂದಿನಂತೆ ನನಗೆ ಬೇಕಾಗಿದ್ದ ಬಸ್ಸು ಬರದೇ ಸತಾಯಿಸತೊಡಗಿತ್ತು. ಆಗ ಹಿರಿಯರೊಬ್ಬರು ಬಳಿ ಬಂದು "ಏನಮ್ಮಾ ಚೆನ್ನಾಗಿದ್ದೀಯಾ ?" ಎಂದು ಆತ್ಮೀಯವಾಗಿ ಪ್ರಶ್ನಿಸಿದರು. ಅವರಾರೋ ಗೊತ್ತಿಲ್ಲ. ತಬ್ಬಿಬ್ಬಾಗಿ "ಹ್ಞೂಂ" ಎಂದೆ. ಶುರುವಾಯ್ತು ನೋಡಿ ಹಿರಿಯರ ಮಾತು.

"ಅಪ್ಪ ಹೇಗಿದಾರೆ ? ನಿಮ್ಮಕ್ಕ ಹೇಗಿದಾಳೆ ? ನಿನಗೊಂದು ಗಂಡು ನೋಡು ಅಂತ ನಿಮ್ಮಪ್ಪ ಹೇಳೇ ಹೇಳಿದ್ದ ಪಾಪ, ಅವನಿಗೂ ವಯಸ್ಸಾಯಿತು ನೋಡು. ನಿಮ್ಮಣ್ಣಂದು ಮದುವೆ ಆಯ್ತಂತೆ...." ಅವರ ಮಾತು ಹೀಗೇ ಓತಪ್ರೋತವಾಗಿ ಹರೀತಿದ್ದ ಹಾಗೆ ಅವರ ಹೆಂಡತಿ ಬಳಿ ಬಂದರು. ಅವರಿಗೆ ಇವರು ಕಿವಿಯಲ್ಲೇನೋ ಹೇಳಿದರು. ಆಕೆ, "ಓ...ನೀನಾ, ಎಷ್ಟುದ್ದ ಬೆಳೆದಿದ್ದೀಯಾ !" ಎಂದು ಶುರು ಹಚ್ಚಿದರು. ಸ್ಟಾಪಿನಲ್ಲಿ ಹತ್ತಿಪ್ಪತ್ತು ಜನರ ಗಮನ ನಮ್ಮ ಮೇಲೆ. ನನಗೋ 'ಮುಜುಗರ'. ಕೊನೆಗೆ ಧೈರ್ಯವಹಿಸಿ ಕೇಳಿಯೇ ಬಿಟ್ಟೆ: "ಅಲ್ಲಾ, ನೀವಾರು ಅಂತಾನೇ



ನನ್ಗೆ ಗೊತ್ತಾಗ್ತಾ ಇಲ್ಲ." "ಓ ! ಬಿಡು, ಬಿಡು, ನಿನ್ಗೆಲ್ಲಿ ನೆನಪು ! ಆಗ ಚೋಟುದ್ದ ಇದ್ದೆ. ನಿಮ್ಮ ತಂದೆಗೆ ಹೇಳು- ಸುಂದರಯ್ಯಂಗಾರ್ ಸಿಕ್ಕಿದ್ರೂ ಅಂತ," ಎಂದರು. ಈಗ ಅವರ ಹೆಂಡತೀ ಸರದಿ. "ಅಲ್ಲಮ್ಮಾ ನೀನ್ಯಾಕೆ ಯಾವ ಗಂಡನ್ನೂ ಒಪ್ತಾ ಇಲ್ವಂತೆ ? ನಿನಗೆ ಮೊದಲೇ ಲಕ್ಷಣ ಕಡಿಮೆ. ಹಾಗೆಲ್ಲ ಮಾಡಬಾರದು. ಹ್ಯಾಗೋ ಅಡ್ಜಸ್ಟ್ ಮಾಡಿಕೋಬೇಕಮ್ಮ. ನಮ್ಮ ಸ್ನೇಹಿತೆ ಮಗಳ್ದೂ ಹೀಗೇ ಆಗಿತ್ತು...".

ಅವರ ಮಾತನ್ನು ಮಧ್ಯದಲ್ಲೇ ತುಂಡರಿಸಿ, "ನೋಡೀಯಮ್ಮ ನನ್ಗೆ ಮದುವೆ ಆಗಿದೆ," ಎಂದೆ. ಅವರು ಗಾಬರಿಯಾದವರಂತೆ, "ಹೌದೆ ? ನೋಡ್ರೀ, ವರದಯ್ಯಂಗಾರ್ ನಮ್ಗೆ

ಹೇಳದೆ ಕೇಳದೆ ಮಗಳ ಮದುವೆ ಮಾಡಿಬಿಟ್ಟಿದ್ದಾರೆ. ಇವಳ ಮದುವೆ ಆಗಿದೆಯಂತೆ," ಎಂದು ತಮ್ಮ ಪತಿರಾಯರಿಗೆ ತಿಳಿಸಿದರು. "ಯಾವಾಗ ಆಯ್ತು? ಗಂಡು ಯಾರು? ಏನು, ಈಗಿನ ಕಾಲದೋರ ಹಾಗೆ ಲವ್ವು ಗಿವ್ವು ಅಂತ ಏನಾದರೂ ಮಾಡಿಕೊಂಡೆಯೇನೇ? ಅದಕ್ಕೇ ವರದನಿಗೆ ಮುಖತೋರಿಸಲಾಗಿಲ್ಲ," ಎಂದು ಅವರು ಹೇಳುತ್ತಿರುವಂತೆ ನನಗೆ ಭೂಮಿಬಾಯಿಬಿಡಬಾರದೆ! ಎನಿಸಿದ್ದೇನೂ ಸುಳ್ಳಲ್ಲ. ಭೂಮಿ ಬಾಯಿಬಿಡಲಿಲ್ಲ. ಆದರೆ ಬಸ್ ಬಂತು! ಓಡುತ್ತ ಬಸ್ ಹತ್ತಿದವಳೇ ಕಿಟಕಿಯಲ್ಲಿ ಮುಖ ತೂರಿಸಿ ಆ ಹಿರಿಯರನ್ನು ಕರೆದು, "ನಾನು ವರದನ ಮಗಳಲ್ಲ, ಶಂಕರನ ಮಗಳು," ಎಂದು ಹೇಳಿದಾಗ ಸ್ಟಾಪಿನಲ್ಲಿದ್ದ ಜನ ಗೊಳ್ಳನೆ ನಕ್ಕರು. ಆ ಹಿರಿಯರಿಗೆ ಬಿಟ್ಟ ಬಾಯಿ ಮುಚ್ಚಲಾಗಲಿಲ್ಲ. ನನ್ನ ಬಸ್ ಹೊರಟಿತು. ಪಾಪ! ಅವರಿಗೆ ಎಷ್ಟು 'ಮುಜುಗರ' ಆಯ್ತೇನೋ?

ಹೀಗೆಲ್ಲ 'ಗರ' ಬೀಳೋದು ಹೊಸತೇನೂ ಅಲ್ಲ. ಪುರಾಣಕಾಲದಿಂದಲೂ ಇದ್ದದ್ದೇ. ಅಪೇಕ್ಷಿಸಿದ 'ಗರ' ಬೀಳದಾದಾಗ ಗರಬಡಿದಂತಾಗಿ ಇದ್ದುದನ್ನೆಲ್ಲ ಕಳೆದುಕೊಂಡು ಕೂತವರ ಕಥೆ ಯಾರಿಗೆತಾನೆ ಗೊತ್ತಿಲ್ಲ?

ಇಂಥದೇ ಕಥೆ ನಳ-ದಮಯಂತಿಯರ ನಡುವೆಯೂ ನಡೆದುಹೋಯಿತು. ರಾಜ್ಯಭ್ರಷ್ಟನಾದ ನಳ ಪತ್ನಿಯೊಂದಿಗೆ ಅಡವಿ ಸೇರಿ, ಮುಂದೊಂದು ದಿನ ಅವಳನ್ನು ಬಿಟ್ಟು ಓಡಿಹೋದ. ದಿಗ್ಭ್ರಮೆಯಿಂದ ದಮಯಂತಿ ಕಷ್ಟಪಟ್ಟು ತಂದೆಯ ಮನೆ ಸೇರಿದಳು. ಎಷ್ಟೋ ದಿನ ಕಳೆದ ಬಳಿಕ ತನ್ನ ಪತಿ ಋತುಪರ್ಣ ರಾಜನ ಬಳಿ 'ಬಾಹುಕ'ನಾಗಿ ಸೇವೆ ಸಲ್ಲಿಸುತ್ತಿರುವುದನ್ನು ತಿಳಿದುಕೊಂಡ ದಮಯಂತಿ ಯೋಜನೆಯೊಂದನ್ನು ರೂಪಿಸಿದಳು. ತನಗೆ ನಾಳೆಯೇ ಸ್ವಯಂವರ ಎಂಬ ಸುದ್ದಿ ಋತುಪರ್ಣ ರಾಜನಿಗೆ ಮಾತ್ರ ತಿಳಿಯುವಂತೆ ಹಿಂದಿನ ದಿನ ಸಂದೇಶ ರವಾನಿಸಿದಳು. ದೂರದ ಮಗಧದಿಂದ ಅಯೋಧ್ಯೆಗೆ ಒಂದೇ ರಾತ್ರಿಯಲ್ಲಿ ಬರಲು ನಳನಂತಹ ಅಶ್ವವಿದ್ಯಾಪ್ರವೀಣನಿಗೆ ಮಾತ್ರ ಸಾಧ್ಯ ಎಂಬುದು ಅವಳಿಗೆ ಖಚಿತವಾಗಿತ್ತು. ಅವಳ ಎಣಿಕೆಯಂತೆಯೇ ಮರುದಿನ ನಸುಕಿನಲ್ಲಿಯೇ ಋತುಪರ್ಣನ ರಥ ಅಯೋಧ್ಯೆಯ ಅರಮನೆಯ ಮುಂದೆ ನಿಂತಿತ್ತು. ಸಾರಥಿ 'ಬಾಹುಕ'ನಾದ ನಳ. ರಥದಿಂದ ಇಳಿದ ರಾಜನಿಗೆ ಕಂಡಿದ್ದು ಬೋಳು ಬೋಳು ಅರಮನೆ. ಸಿಂಗಾರವಿಲ್ಲ, ತಳಿರುತೋರಣಗಳಿಲ್ಲ. ಅವನಿಗೆ ಇದನ್ನು ಕಂಡು ಅಚ್ಚರಿಯಾದರೆ, ಅಯೋಧ್ಯೆಯ ಅರಸ ಭೀಮರಾಜನಿಗೆ ಇಂತಹ ಅವೇಳೆ



ಯಲ್ಲಿ ಮಗಧ ರಾಜನನ್ನು ಕಂಡು ಅಚ್ಚರಿಯೊಂದಿಗೆ ಕುತೂಹಲ. ಏದುಸಿರು ಬಿಡುತ್ತಿದ್ದ ಸಾರಥಿ, ನೊರೆ ಕಾರುತ್ತಿದ್ದ ಕುದುರೆಗಳು.

ಬಂದವರನ್ನು ಸ್ವಾಗತಿಸಿದ ಭೀಮರಾಜ, "ಏನಿದು? ಇಷ್ಟು ಅವಸರದಲ್ಲಿ ಬಂದದ್ದೇಕೆ?" ಎಂದು ತಣ್ಣಗೆ ಪ್ರಶ್ನಿಸಿದಾಗ ಋತುಪರ್ಣನಿಗೆ ಕಣ್ಣುಕಣ್ಣು ಬಿಡುವಂತೆ ಆಗದಿದ್ದೀತೇ? ಪಾಪ! ಅವನಿಗೆ ಎಷ್ಟು 'ಮುಜುಗರ' ಆಗಿರಬಹುದು!

"ಏನಿಲ್ಲ, ತಮ್ಮನ್ನು ಕಂಡು ಕುಶಲ ವಿಚಾರಿಸಲು ಬಂದೆ," ಎಂದು ಸಾವರಿಸಿಕೊಂಡು ಋತುಪರ್ಣರಾಜ ಹೇಳಿದಾಗ ಗರ ಬಡಿವ ಸರದಿ ಭೀಮರಾಜನದು. ಕುಶಲ ವಿಚಾರಣೆಗೆ

ರಾತ್ರೋ ರಾತ್ರಿ ಓಡಿಬರುವುದೇ ? ಮುಂದಿನ ಪ್ರಶ್ನೆ ಕೇಳಲು ಅವನಿಗೂ 'ಮುಜುಗರ.' ಮುಂದೆ ನಳ-ದಮಯಂತಿ ಒಂದಾದರೆಂಬ ಕಥೆ ಬೇರೆ. ಆದರೆ ಇವರಿಬ್ಬರ ನಡುವೆ 'ಮುಜುಗರ'ಕ್ಕೆ ಒಳಗಾದವರು, ಗರ ಬಡಿದಂತೆ ಆದವರು ಭೀಮರಾಜ, ಋತುಪರ್ಣ !

ಶೀಘ್ರಕೋಪಿಯಾದ ದುರ್ವಾಸಮುನಿಗಳು ಮರ್ಯಾದಾ ಪುರುಷೋತ್ತಮ ರಾಮನಿಗೇ ಒಮ್ಮೆ 'ಮುಜುಗರ' ಉಂಟುಮಾಡಿದ ಪ್ರಸಂಗ ಗೊತ್ತಿರಬಹುದಲ್ಲ ? ತನ್ನ ಅರವತ್ತು ಸಾವಿರ ಶಿಷ್ಯಗಣದೊಂದಿಗೆ ಆಯೋಧ್ಯೆಗೆ ಬಂದ ದುರ್ವಾಸಮುನಿಯನ್ನು ರಾಮ ಭಯ-ಭಕ್ತಿ (ಶಾಪಕೊಡುವ ಋಷಿಗಳೆಂದರೆ ದೇವರಿಗೂ ಭಯ !)ಯಿಂದ, ಸೂಕ್ತ ಗೌರವದಿಂದ ಸ್ವಾಗತಿಸಿದ. "ನಮಗೆಲ್ಲ ಭೋಜನ ವ್ಯವಸ್ಥೆ ಆಗಬೇಕು" ಎಂದು ದುರ್ವಾಸ ಮುನಿ ಅಪ್ಪಣೆ ಕೊಡಿಸಿದಾಗ ರಾಮಚಂದ್ರ "ಆಗಲಿ" ಎಂದ. ಜೊತೆಗೆ, "ನಿಮಗೆ ಅಪೇಕ್ಷಿತ ಭೋಜನ ಮಾಡಿಸುತ್ತೇನೆ," ಎಂದುಬಿಟ್ಟ. ದುರ್ವಾಸಮುನಿಗೆ ಇಂತಹ ಮಾತೇ ಬೇಕಾಗಿತ್ತು. ಗಂಭೀರವಾಗಿ ಹೇಳಿದರು, "ನಮಗೆ ಬೇಕಾಗಿರುವುದು ಎಂತಹ ಭೋಜನ ಎಂದರೆ ಆಕಳು, ಕಾಳು, ಬೆಂಕಿಯ ನೆರವಿಲ್ಲದೆ ಸಿದ್ಧಪಡಿಸಿದ ಭೋಜನ!" ರಾಮಚಂದ್ರನಿಗೆ 'ಗರ' ಬಡಿದಂತಾಯಿತು. ಮುಂದೆ ಆತ ಎಂತಹ ಭೋಜನ ವ್ಯವಸ್ಥೆ ಮಾಡಿದನೆಂಬ ಮಾತಿರಲಿ, ದುರ್ವಾಸ ಮುನಿಯ ವಿಚಿತ್ರ ಇಚ್ಛೆ ತಿಳಿದ ತಕ್ಷಣ, "ಆಯ್ತು ಮುನಿವರ್ಯರೇ, ನಿಮ್ಮ ಅಪೇಕ್ಷೆ ಇದ್ದಂತಾಗಲಿ," ಎಂದು ಹತ್ತಾರು ಹುಲ್ಲು ಮೆದೆಗಳನ್ನು ತರಿಸಿ ಮುಂದೆ ಇಟ್ಟಿದ್ದರೆ ದುರ್ವಾಸ ಹಾಗೂ ಅವರ ಶಿಷ್ಯಗಣಕ್ಕೆ ಆಗುತ್ತಿದ್ದ 'ಗರ'ದ ಪ್ರಮಾಣ ಎಣಿಸಲಾದೀತೆ ?

ಈ ಎಣಿಕೆ, ಗುಣಿಕೆಗಳ ಲೆಕ್ಕಾಚಾರಕ್ಕೆ ತೊಡಗಿದರೆ ಅನೇಕ 'ವಾಣಿ'ಗಳು ಹೊರಟುಬಿಡಬಹುದು. ವಾಣಿ ಎಂದರೆ ಕಾಂತಾಪ್ರಿಯರು ಏನೇನೋ ವಿಚಾರ ಮಾಡುವ ಅವಶ್ಯಕತೆ ಇಲ್ಲ. ನಾನು ಹೇಳುತ್ತಿರುವ ಈ 'ವಾಣಿ' ಗೊಬ್ಬ ಸೋದರ, ಸ್ನೇಹಿತನಿದ್ದಾನೆ. ಅವನ ಹೆಸರು 'ಆಕಾಶ.' ಅದೇ ಸ್ವಾಮಿ 'ಆಕಾಶವಾಣಿ'. ಅದು ಅಶರೀರವಾಣಿಯೂ ಹೌದು. ಇದು ರೇಡಿಯೋ ಸಮಾಚಾರವಾಯಿತು. ಹಾಗೆನೋಡಿದರೆ ಬೀದಿ-ಬೀದಿಗಳಲ್ಲಿ ಅಶರೀರವಾಗಿ ಯಾವ ಯಂತ್ರದ ಸಹಾಯವೂ ಇಲ್ಲದೆ ಕೇಳ್ತಾನೇ ಇರುತ್ತದೆ ಅಶರೀರವಾಣಿ.

ಅದು ಹೇಗಪ್ಪಾ ಅಂದರೆ, "ಪಕ್ಕದ್ಮನೆ ಕಾಮಾಕ್ಷಮ್ಮನ ಮಗಳು ಮೀನಾಕ್ಷಿ, ಊಂ, ಅದೇ ವಯ್ಯಾರವಾಗಿ ಓಡಾಡ್ತಿರ್ಲಿಲ್ಲವೇ, ಅವಳೇ, ಮೂಲೇಮನೆ ಸಿದ್ರಾಮಯ್ಯನ ಮಗ ಮುದ್ರಾಮಯ್ಯನ ಜೊತೆ ಸ್ಕೂಟರಲ್ಲಿ ಕುಳಿತು ಬನ್ನೇರುಘಟ್ಟಕ್ಕೆ ಹೋದಳು.. " ಇತ್ಯಾದಿ. ಇಂತಹ ಅಶರೀರವಾಣಿಗಳಿಗೆ ಮಿತಿ ಇಲ್ಲ. ಒಮ್ಮೊಮ್ಮೆ ಮತಿಯೂ ಇಲ್ಲ. "ಯಾರು ನೋಡಿದ್ದಂತೆ ?" "ಯಾರೋ ನೋಡಿದವರು ಕಡೇಮನೆ ಕಮಲಕ್ಕನಿಗೆ ಹೇಳಿದ್ರಂತೆ ? ಅವರು ಇವರಿಗೆ ಹೇಳಿದ್ದನ್ನು ಕೇಳಿಸ್ಕೊಂಡು ಇವರು ನನಗೆ ಹೇಳಿದರು". ಇಂತಹ ವದಂತಿಗಳಿಗೆ ಆಧಾರಗಳುಂಟೆ ? "ನಾನೇ ನೋಡಿದ್ದು" ಎಂದು ಹೇಳುವವರಿಲ್ಲದೆ ಹರಡುವ ಇಂತಹ ಗಾಳಿಮಾತುಗಳು ಒಮ್ಮೊಮ್ಮೆ ಎಷ್ಟು 'ಮುಜುಗರ' ಉಂಟುಮಾಡುತ್ತವೆ ಎಂಬ ಅರಿವು ಈ ವದಂತಿ ಜನಕ-ಜನನಿಯರಿಗೆ ಇರುತ್ತದೆಯೆ ? ಹೀಗೇ 'ಗಣಪತಿ ಹಾಲು ಕುಡಿದ', 'ಆ ಸಿನಿಮಾ ತಾರೆ ಅವನೊಂದಿಗೆ ಮದುವೆ ಆಗ್ತಾಳಂತೆ' ಇದೆಲ್ಲ ಪಟ್ಟಣಗಳ ಅಶರೀರವಾಣಿಗಳಾಗಿ ಬಿಡುತ್ತವೆ.

ಇದು ಈ ಕಾಲದ ಮಾತು. ಆ ಕಾಲದಲ್ಲೂ 'ಅಶರೀರವಾಣಿ'ಗಳಿದ್ದೇ ಇದ್ದವು ಎಂಬುದು ಪುರಾಣಗಳನ್ನು ಅಲ್ಪಸ್ವಲ್ಪ ಬಲ್ಲವರಿಗೂ ಗೊತ್ತೇ ಇದೆಯಲ್ಲ ? ಮೊದಲೇ ದುಷ್ಟನಾಗಿದ್ದ ಕಂಸ ಮತ್ತಷ್ಟು ಕ್ರೂರಿಯಾಗಿದ್ದು ಈ ಅಶರೀರವಾಣಿಯಿಂದಲೇ ಅಲ್ಲವೇ ? ಆದರೆ ಆಗಿನ ಅಶರೀರವಾಣಿಗಳು ಈಗಿನಂತಿರದೆ 'ನಿಜ' ಹೇಳಿಬಿಡುತ್ತಿದ್ದವು ಎಂಬುದೇ ಆಚ್ಚರಿಯ ವಿಷಯ.

ಈಗಲೂ ಹಾಗೆಯೇ ಅಶರೀರವಾಣಿಗಳಾಗಿ 'ಇಂಥವರ ಸಾವು ಇಂಥವರ ಮಗನಿಂದ' ಎಂದು ಘೋಷಿಸಿಬಿಟ್ಟರೆ ಎಂಥೆಂಥ ಕೋಲಾಹಲವಾಗಬಹುದು! ಆ ತಂದೆ ತಾಯಿಗಳಿಗೆ ಎಷ್ಟೊಂದು 'ಮುಜುಗರ'ವಾಗಬಹುದು?

ಈ 'ಮುಜುಗರ'ದ ಇನ್ನೊಂದು ಮಜಕೂರು ತಿಳಿಸಿಬಿಡುತ್ತೇನೆ. ಇತ್ತೀಚೆಗೆ 'ಉಡುಗೊರೆ ಬೇಡ' ಎಂಬ ಸಂದೇಶ ಹೊತ್ತ ಮದುವೆಯ ಕರೆಯೋಲೆಗಳು ಹೆಚ್ಚಾಗತೊಡಗಿವೆ. 'ಉಡುಗೊರೆ ಬೇಡ' ಎನ್ನದೇ 'ಉಡುಗೊರೆ




ತನ್ನಿ' ಎಂದು ಘಂಟಾಘೋಷವಾಗಿ ಹೇಳಲು ಸಾಧ್ಯವೆ? ಉಡುಗೊರೆ ನಿಜಕ್ಕೂ ಬೇಡವಾಗಿದ್ದರೆ ನೂರಾರು ಜನರನ್ನು ಕರೆಯುವುದೇಕೆ? ಸರಳವಾಗಿ ವಿವಾಹಕಾರ್ಯ ಮುಗಿಸಿ, 'ಇಂಥಾ ದಿನ ಇಂಥಿಂಥವರ ಮದುವೆ ಸಮಾರಂಭ ಇಂಥಲ್ಲಿ ನಡೆಯಿತು. ನವ ದಂಪತಿಗಳಿಗೆ ನಿಮ್ಮ ಶುಭಾಶೀರ್ವಾದಗಳಿರಲಿ' ಎಂದು ಹೇಳಿಬಿಡಬಾರದೆ? ಇಷ್ಟಕ್ಕೂ ಇವರು 'ಉಡುಗೊರೆ ಬೇಡ' ಎಂದಾಕ್ಷಣ ನಾವು ಬರಿಗೈಲಿ ಹೋಗಲಾದೀತೆ!

ಆದರೆ, ಮೊದಲೊಮ್ಮೆ ಹೀಗೇ ಈ ಮಾತನ್ನು ಕಾಯಾ ವಾಚಾ ಮನಸಾ ನಂಬಿ ಮದುವೆ ಸಮಾರಂಭವೊಂದಕ್ಕೆ ಹೋಗಿದ್ದೆ. ಕಲ್ಯಾಣಮಂಟಪದೊಳಗೆ ಹೋದಾಕ್ಷಣ ಮೊದಲು ಕಂಡಿದ್ದು ಎಲ್ಲ ಅತಿಥಿಗಳ ಕೈಯಲ್ಲಿರುವ ಬಣ್ಣಬಣ್ಣದ ಪ್ಯಾಕೆಟ್‌ಗಳು! ಕೆಲ ಲಲನಾಮಣಿಗಳು ನನ್ನ ಬಳಿ ಬಂದು ಕುಶಲ ವಿಚಾರಿಸಿದಂತೆ ಮಾಡಿ, 'ನೀವೇನು ತಂದಿರಿ?' ಎಂದು ಕೇಳಿಯೇಬಿಟ್ಟರು. ನಾನು 'ಕರೆಯೋಲೆಯಲ್ಲಿ...'' ಎನ್ನುತ್ತಿದ್ದಂತೆ, 'ಅಯ್ಯೋ ಬಿಡಿ, ಅದು ಈಗ ಫ್ಯಾಶನ್. ಅದನ್ನು ನಂಬಿ ಹಾಗೇ ಬಂದಿರಾ'? ಎನ್ನುತ್ತಾ ಬೇರೊಬ್ಬಳ ಕಡೆ ಹೊರಳಿ, 'ಇವರು ಇನ್ವಿಟೇಶನ್ನಿನಲ್ಲಿ ಇದ್ದುದನ್ನು ಕಂಡು ಏನೂ ತರಲಿಲ್ಲವಂತೆ,' ಎಂದು ಪಿಸುಗುಟ್ಟಿ ಅವರಿಬ್ಬರೂ ಕಿಸಕ್ಕನೆ ನಕ್ಕಾಗ ನನಗಾದ 'ಮು..ಜು..ಗ....ರ'!

ಇದಕ್ಕಿಂತ ದೊಡ್ಡ 'ಮುಜುಗರ' ಒಂದಿದೆ. ಒಂದು ವಿಶ್ವವಿದ್ಯಾಲಯದಲ್ಲಿ ಹಿರಿಯ ವ್ಯಕ್ತಿಯೊಬ್ಬರು ರಿಟೈರ್ ಆದಾಗ ಅವರಿಗಾಗಿ ಆತ್ಮೀಯ ಬೀಳ್ಕೊಡುಗೆ ಏರ್ಪಡಿಸಲಾಗಿತ್ತು. ಮಾತನಾಡಿದವರೆಲ್ಲ ಇವರ ಗುಣಗಾನ ಮಾಡಿದರು. ಹಾಡಿ ಹೊಗಳಿದರು. ಕೊನೆಯಲ್ಲಿ ವಿಶ್ವವಿದ್ಯಾಲಯದ ಪರವಾಗಿ ಇವರಿಗೊಂದು ಫ್ಯಾಕ್ಸ್ ಯಂತ್ರವನ್ನೇ ಉಡುಗೊರೆಯಾಗಿ ನೀಡಿದರು. ಇಷ್ಟು ವರ್ಷ ದುಡಿದಿದ್ದಕ್ಕೆ ಸಾರ್ಥಕ ಕೊಡುಗೆ ಎಂದು ಎಲ್ಲರೂ ಭಾವಿಸಿದರು. ಅದನ್ನು ಅವರು ಮನೆಗೆ ತಂದರು. ನೆರೆಹೊರೆಯವರು ಬಂದರು, ನೋಡಿದರು. ಬಂಧು-ಬಳಗ ಬಂದಿತು, ನೋಡಿತು. ಹಲವರಿಗೆ ಸಂತೋಷ, ಕೆಲವರಿಗೆ ಆಶ್ಚರ್ಯ, ಇನ್ನುಳಿದವರಿಗೆ ಹೊಟ್ಟೆ ಉರಿ ಆಗಿರಲೂಬಹುದು. ಮಾರು ದಿನವೇ ಆಘಾತ ಕಾದಿತ್ತು. "ವಿಶ್ವವಿದ್ಯಾಲಯ ಖರೀದಿಸಿದ ಯಂತ್ರವನ್ನು ಒಬ್ಬ ವ್ಯಕ್ತಿಗೆ ನೀಡಲು ಹೇಗೆ ಸಾಧ್ಯ?" ಎಂದು ಆಕ್ಷೇಪ ಬಂದಾಗ ಮತ್ತೊಮ್ಮೆ ಸಭೆ ಸೇರಿದ ವಿಶ್ವವಿದ್ಯಾಲಯ ಸಮಿತಿ, "ದಯವಿಟ್ಟು ಉಡುಗೊರೆಯನ್ನು ಹಿಂತಿರುಗಿಸಿ," ಎಂದು ಮನವಿ ಮಾಡಿಕೊಂಡಾಗ ಆ ಹಿರಿಯ ವ್ಯಕ್ತಿಗೆ ಆದ 'ಮುಜುಗರ'ದ ಪ್ರಮಾಣ ಊಹಿಸಲೂ ಸಾಧ್ಯವೆ?

ಈ ಜಗತ್ತಿನಲ್ಲಿ ಇಲ್ಲಿಯ ವರೆಗೆ ಎಷ್ಟು ಮಂದಿ ಹುಟ್ಟಿರಬಹುದು ? ಅಂದರೆ ಮನು ಕುಲ ಉದ್ಭವಿಸಿದಂದಿನಿಂದ ಇಲ್ಲಿಯವರೆಗೆ ಮಾನವರ ಒಟ್ಟು ಸಂಖ್ಯೆ ಎಷ್ಟಾಗಿರಬಹುದು ?

ಅಮೆರಿಕದ ಮೆಸಾಚುಸೆಟ್ಸ್ ರಾಜ್ಯದ ಆ್ಯಮ್‌ಹರ್ಸ್ಟನ ಹ್ಯಾಂಪ್‌ಷೈರ್ ಕಾಲೇಜಿನ ಆರ್ಥರ್ ವೆಸ್ಟಿಂಗ್‌ರವರು ಕ್ರಿ.ಪೂ. ೨,೯೮,೦೦೦ ದಿಂದೀಚೆಗೆ (ಕ್ರಿ.ಶ. ೧೯೯೫ಕ್ಕೆ



ಅಂದಾಜು ೩ ಲಕ್ಷ ವರ್ಷಗಳು ಎನ್ನಿ) ಸುಮಾರು ೫೦ ಶತಕೋಟಿ ಮಾನವರು ಹುಟ್ಟಿ ಸತ್ತಿದ್ದಾರೆ (ಕೆಲವರು ಇನ್ನೂ ಬದುಕಿದ್ದಾರೆ) ಎಂದು ಲೆಕ್ಕಾಚಾರ ಹಾಕಿದ್ದಾರೆ. ಇವರಲ್ಲಿ ಶೇಕಡಾ ೮೦ ರಷ್ಟು ಜನ (ಅಂದರೆ ೪೦ ಶತಕೋಟಿ) ಮುದ್ರಣಯಂತ್ರವನ್ನು ಕಂಡು ಹಿಡಿಯುವ ಮೊದಲೇ (ಕ್ರಿ.ಶ. ೧೪೫೦) ತೀರಿಕೊಂಡರು. ಈಗ ಬದುಕಿರುವವರು ಆ ೫೦ ಶತಕೋಟಿಯ ಶೇಕಡಾ ೧೦ ಭಾಗ (ಅಂದರೆ ೫ ಶತಕೋಟಿ) ಮಾತ್ರ.

ಆರ್ಥರ್ ವೆಸ್ಟಿಂಗ್ ಈ ತೀರ್ಮಾನಕ್ಕೆ ಬಂದದ್ದು ಹೇಗೆ ? ಇದಕ್ಕೆ ಅವರು ಮಾನವನ ಇತಿಹಾಸವನ್ನು ಏಳು ಕಾಲಖಂಡಗಳನ್ನಾಗಿ ವಿಂಗಡಿಸಿದರು. ಪ್ರತಿಯೊಂದು ಅವಧಿಯಲ್ಲೂ ಮಾನವರ ಸಂಖ್ಯೆಯ ಘಾತಸೂಚಿ ಬೆಳವಣಿಗೆಯನ್ನು ಊಹಿಸಿದರು. ಜೊತೆಗೆ ಆರಂಭದ ಇತಿಹಾಸದಲ್ಲಿ ಮಾನವನ ಸರಾಸರಿ ಆಯುರ್ಮಾನ ೨೦ ವರ್ಷಗಳೆಂದೂ ಮತ್ತು ಇತ್ತೀಚಿನ ವರ್ಷಗಳಲ್ಲಿ ೫೦ ವರ್ಷಗಳೆಂದೂ ಪರಿಗಣಿಸಿ ಲೆಕ್ಕಾಚಾರ ಮಾಡಿದರು.

ಈ ಶತಮಾನದ ಅಂತ್ಯಕ್ಕೆ ಪ್ರಪಂಚದ ಜನಸಂಖ್ಯೆ ೬ ಶತಕೋಟಿಯನ್ನು ಮುಟ್ಟಿದರೆ ಅಲ್ಲಿಯವರೆಗೆ (ಅಂದರೆ ೩ ಲಕ್ಷ ವರ್ಷಗಳ ಕೊನೆಗೆ) ಭೂಮಿಯಲ್ಲಿ ಅವತರಿಸಿದ ೫೧ ಶತಕೋಟಿ ಮನುಷ್ಯರಿರುತ್ತಾರೆ. ಅವರಲ್ಲಿ ನಾವು ನೀವೆಲ್ಲರೂ ಸೇರಿಕೊಂಡು ೬ ಶತಕೋಟಿ (ಅಂದರೆ ಶೇಕಡ ೧೨ ರಷ್ಟು) ಮಂದಿ ಜೀವಂತವಾಗಿರುತ್ತಾರೆ ಎಂದಂತಾಗುತ್ತದೆ !

ಅಷ್ಟರೊಳಗಾಗಿ ಮಾನವನ ಸರಾಸರಿ ಆಯುರ್ಮಾನ ೫೦ ವರ್ಷದಿಂದ ೭೫ಕ್ಕೋ ಅಥವಾ ೧೦೦ಕ್ಕೋ ಏರಿತೆಂದರೆ ಮನುಕುಲದ ಜೀವಂತ ಕುಡಿಗಳ ಸಂಖ್ಯೆ ಶೇಕಡಾ ೧೨ ಕ್ಕಿಂತ ಇನ್ನೂ ಹೆಚ್ಚಾಗಿರುತ್ತದೆ !

ಜಗತ್ತಿನಲ್ಲಿ ಮೊದಲ ಮಾನವನ ಪಾದಾರ್ಪಣೆಯು ಈಥಿಯೋಪಿಯಾದಲ್ಲಿ ೪ ಅಥವಾ

• ಎ. ನರಹರಿ



೫ ಕೋಟಿ ವರ್ಷಗಳ ಹಿಂದೆಯೇ ಆಯಿತೆಂದು ಭಾವಿಸಿದರೆ ಹಾಗೂ ಅಲ್ಲಿಂದ ಹಿಡಿದು ಕ್ರಿ.ಪೂ. ೨,೯೮,೦೦೦ ವರ್ಷಗಳಷ್ಟು ಹಿಂದಿನವರೆಗೆ ಸಂದು ಹೋದ "ಎಂದುರೋ ಮಹಾನುಭಾವುಲು"ಗಳ ಲೆಕ್ಕವನ್ನೂ ತೆಗೆದುಕೊಂಡರೆ ಅದು ಇನ್ನೆಷ್ಟೋ ಶತಕೋಟಿಯಾದೀತು. ಪ್ರಾಯಶಃ ಆರ್ಥರ್ ವೆಸ್ಲಿಂಗ್ ಸಾಪೇಕ್ಷವಾಗಿ "ನಾಗರಿಕ" ಮಾನವರನ್ನಷ್ಟೇ ಗಣನೆಗೆ ತೆಗೆದುಕೊಂಡರೋ ಏನೋ!

೨,೫೦೦ ವರ್ಷಗಳಷ್ಟು ಹಳೆಯ ಸಮಸ್ಯೆ:

ಏಸು ಕ್ರಿಸ್ತನ ಜನನಕ್ಕೂ ಐನೂರು ವರ್ಷಗಳ ಹಿಂದೆ ಜೆನೋ ಎಂಬ ಇಟಲಿಯವ ಗ್ರೀಸ್ ದೇಶಕ್ಕೆ ಬಂದು ಅಲ್ಲಿನ ಜಾಣರಿಂದ ವಿದ್ಯೆಯನ್ನು ಕಲಿತ. ಬಲು ಚೂಟಿಯಾಗಿದ್ದ ಆತ ಮುಂದೆ ತನ್ನ ಕಾಲದ ಗಣಿತ ತಜ್ಞರಿಗೆ ನಾಲ್ಕು ಪ್ರಶ್ನೆಗಳನ್ನು ಕೇಳುತ್ತಿದ್ದನಂತೆ. ಅವನ್ನು ಈ ಕಾಲದವರಿಗೂ ಕೇಳಿದಂತಿದೆ. ಅವುಗಳಲ್ಲಿ ಒಂದು ಪಂದ್ಯದ ಓಟಕ್ಕೆ ಸಂಬಂಧಿಸಿದ್ದು. ಅವನ ಪ್ರಶ್ನೆ ಹೀಗಿದೆ:

"ಇಬ್ಬರು ಓಟಗಾರರಲ್ಲಿ ನಿಧಾನ ಗತಿಯ ಓಟಗಾರನು ಮೊದಲೇ ಓಡಲು ಶುರುಮಾಡಿದರೆ ಹೆಚ್ಚು ವೇಗದ ಓಟಗಾರನು ಅವನನ್ನು ಹಿಂದೆಹಾಕಲು ಸಾಧ್ಯವೇ ಇಲ್ಲವೇಕೆ ?"

ನಿಧಾನ ಓಟಗಾರನು ಒಂದು ಸ್ಥಳವನ್ನು ಬಿಟ್ಟನಂತರವೇ ಶೀಘ್ರ ಓಟಗಾರನು ಅದನ್ನು ತಲುಪುತ್ತಾನೆ. ಆದ್ದರಿಂದ ನಿಧಾನ ಓಟಗಾರನು ಸದಾ ಮುಂದೆಯೇ ಓಡುತ್ತಿರುತ್ತಾನೆ ಎಂದು ಜೆನೋ ವಿವರಿಸುತ್ತಿದ್ದ.

ಈ ಸಮಸ್ಯೆಯನ್ನು ಇಲಿಯಡ್ ಗ್ರಂಥದ ಗ್ರೀಕ್ ವೀರ ಅಖಿಲಿಸ್ ಮತ್ತು ಆಮೆಯೊಂದರ

ನಡುವಣ ಪಂದ್ಯದೋಟವಾಗಿ ಸರಳೀಕರಿಸೋಣ. ಆತ ಆರುವರ್ಷದ ಬಾಲಕನಾಗಿದ್ದಾಗಲೇ ಜಿಂಕೆಯುನ್ನು ಹಿಂದೆ ಹಾಕಿ ಓಡುತ್ತಿದ್ದನಂತೆ. ಇಂತಹ ಅಖಿಲಿಸ್‌ನಿಗೂ ಮತ್ತು ಅತ್ಯಂತ ನಿಧಾನ ಚಲನೆಯ ಆಮೆಗೂ ನಡುವೆ ಓಟದ ಪಂದ್ಯ ಏರ್ಪಟ್ಟಿತೆಂದು ಊಹಿಸಿಕೊಳ್ಳಿ. ಅಖಿಲಿಸ್‌ನು ಆಮೆಯ ವೇಗಕ್ಕಿಂತ ಹತ್ತು ಪಟ್ಟು ಹೆಚ್ಚು ವೇಗವಾಗಿ ಓಡಬಲ್ಲವ ಎಂದುಕೊಳ್ಳೋಣ. ಪಂದ್ಯದಲ್ಲಿ ಮೊದಲು ಆಮೆಗೇ ಓಡಲು ಬಿಡೋಣ. ಅದು ೧೦೦೦ ಮೀಟರ್ ಕ್ರಮಿಸಿದಾಗ ಅಖಿಲಿಸ್ ತನ್ನ ಓಟವನ್ನು ಪ್ರಾರಂಭಿಸುತ್ತಾನೆ ಎನ್ನಿ.

ಆತನು ೧೦೦೦ ಮೀಟರ್ ಮುಗಿಸುವಾಗ ಆಮೆಯು ೧೦೦ ಮೀಟರ್ ಮುಂದೆ ತೆವಳಿರುತ್ತದೆ. ಅಖಿಲಿಸ್ ಆ ೧೦೦ ಮೀಟರನ್ನೂ ಮುಗಿಸುವಾಗ ಆಮೆ ಹತ್ತು ಮೀಟರಿನಷ್ಟು ಮುಂದೆ ಸರಿದಿರುತ್ತದೆ. ಆ ಹತ್ತು ಮೀಟರನ್ನೂ ಆತ ಕ್ರಮಿಸಿದಾಗ ದುರ್ಬಲ ಆಮೆ ಒಂದು ಮೀಟರಿನಷ್ಟು ಮುನ್ನಾಗಿರುತ್ತದೆ. ಅದನ್ನೂ ಆತ ದಾಟಿದಾಗ ಆಮೆಯೂ ಹತ್ತು ಸೆಂಟಿಮೀಟರಿನಷ್ಟು ಮುಂದೆಯೇ ಇರುತ್ತದೆ! ಆ ದೂರ (!)ವನ್ನೂ ಆತ ಓಡಿದಾಗ ಆಮೆಯು ೧ ಸೆಂಟಿಮೀಟರಿನಷ್ಟು ಮುಂದೆಯೇ ಇರುತ್ತದೆ! ಆ ೧ ಸೆಂಟಿಮೀಟರನ್ನೂ ಆತ ಓಡಿದಾಗ (!) ಆಮೆಯು ಇನ್ನೂ ೦.೧ ಸೆಂಟಿಮೀಟರಿನಷ್ಟು ಮುಂದಿದೆ! ಛೇ! ಅದನ್ನೂ ಆತ ದಾಟಿದನೆನ್ನಿ. ಆಮೆಯು ೦.೦೧ ಸೆಂಟಿಮೀಟರಿನಷ್ಟು ಮುಂದೆಸಾಗಿದೆ! ಅಖಿಲಿಸ್ ಅದನ್ನೂ ಕ್ರಮಿಸಿದರೆ ಆಮೆಯು ೦.೦೦೧ ಸೆಂಟಿಮೀಟರು ಮುಂದೆಯೇ.......ಇತ್ಯಾದಿ, ಇತ್ಯಾದಿ! ಎಲಾ ಆಮೆ! ಈ ಲೆಕ್ಕದ ಪ್ರಕಾರ ಅಖಿಲಿಸ್ ಬಡ ಆಮೆಯುನ್ನು ಹಿಂದೆ ಹಾಕುವಂತೆಯೇ ಇಲ್ಲ! ಪಂದ್ಯದಲ್ಲಿ ಆಮೆಗೇ ಜಯ!!

ಈ ಸಮಸ್ಯೆಯ ಬಗೆಗೆ ಕಳೆದ ೨೫ ಶತಮಾನಗಳಲ್ಲಿ ಬೇಕಾದಷ್ಟು ಬರೆಯಲಾಗಿದೆ. ಅನೇಕ ಗಣಿತ ಪರಿಹಾರಗಳನ್ನೂ ಮುಂದೊಡ್ಡಲಾಗಿದೆ. ಈ ಸಮಸ್ಯೆಯು ಇನ್ನೇನನ್ನು ಸಾಧಿಸದಿದ್ದರೂ ದಿನನಿತ್ಯದ ಸಮಸ್ಯೆಗಳನ್ನು ಗಣಿತದ ಅಭ್ಯಾಸಗಳನ್ನಾಗಿ ಪರಿಗಣಿಸಿದಾಗ ತೋರಬೇಕಾದ ಎಚ್ಚರಿಕೆಯನ್ನಂತೂ ತೋರಿಸುವಂತಾಯಿತು.

'ಜುನೋವಿನ ಬಾಣ' ಎಂಬ ಇದೇ ತರಹದ ಇನ್ನೊಂದು ತರ್ಕವಿದೆ. ಜುನೋ ಎಂಬುವನ ಬಿಲ್ಲಿನಿಂದ ಹೊರಟ ವೇಗದ ಬಾಣವು ತನ್ನ ದಾರಿಯಲ್ಲಿ ಯಾವುದೇ ಒಂದು ಬಿಂದುವಿನಲ್ಲಿ ಅದು ಕ್ಷಣವಾದರೂ ನಿಂತಿರಬೇಕಲ್ಲವೆ? ಮುಂದಿನ ಕ್ಷಣದಲ್ಲಿ ಅದು ಸ್ವಲ್ಪ ಮುಂದಿನ ಸ್ಥಾನದಲ್ಲಿ ನಿಂತಿರಬೇಕಲ್ಲವೆ? ಹೀಗೆಯೇ ವಾದವನ್ನು ಮುಂದುವರೆಸಿದರೆ ಬಾಣದ ದಾರಿಯು ಅಸಂಖ್ಯ ನಿಲುಗಡೆಗಳ ಒಂದು ಸರಣಿಯೇ ಆಗಿಬಿಡುವುದು ತಾನೆ?

ಇಲ್ಲಿ ಆಗಿರುವ ಸ್ವಾರಸ್ಯವಿಷ್ಟೇ: ಗಣಿತಜ್ಞರು ಈ ಪಂದ್ಯವನ್ನು ಅನೇಕ ಚಿಕ್ಕ ಚಿಕ್ಕ ಪಂದ್ಯಗಳೆಂಬಂತೆ ಪರಿಗಣಿಸಿದರು. ಮೊದಲನೆಯದು ೧೦೦೦ ಮೀ, ಎರಡನೆಯದು ೧೦೦ಮೀ, ಮುಂದೆ ೧ ಮೀ, ಇತ್ಯಾದಿ. ಈ ಪಂದ್ಯಗಳಲ್ಲಿ ಅಖಿಲಿಸ್ ಆಮೆಯನ್ನು ದಾಟಿ ಹೋಗುವುದಿರಲಿ, ತಲುಪುವುದೇ ಇಲ್ಲ.

ಜರ್ಮನ್ ಪ್ರೊಫೆಸರನೊಬ್ಬ ತನ್ನ ದೇಶದ ರಾಣಿಗೆ ಈ ಸಮಸ್ಯೆಯ ಅವಧಿಯು ಹಂತ ಹಂತಗಳಲ್ಲಿ ತೋರಿಸುವ ಸಣ್ಣತನವನ್ನು ದೀರ್ಘವಾಗಿ ವಿವರಿಸಿದನಂತೆ. ಆಕೆಗೆ ಬೇಸರವಾಗಿ ಸಣ್ಣತನದ ಬಗೆಗೆ ತನಗೆ ಗೊತ್ತೆಂದೂ, ಆಸ್ಥಾನಿಕರು ಮತ್ತು ರಾಜಕಾರಣಿಗಳನ್ನು ದೀರ್ಘಕಾಲದಿಂದ ಕಂಡಿರುವುದಾಗಿಯೂ ಹೇಳಿದಳಂತೆ!

ಆದರೆ ಗಣಿತಜ್ಞರು ಲೆಕ್ಕಾಚಾರ ಹಾಕಿದಂತೆ ಯಾವ ಓಟಗಾರನೂ ತುಂಡು ತುಂಡಾಗಿ, ಪ್ರತ್ಯೇಕ ಪ್ರತ್ಯೇಕವಾಗಿ ಓಡುವುದಿಲ್ಲವಲ್ಲ! ಪಂದ್ಯಾರಂಭದಿಂದ ಅಂತ್ಯದ ವರೆಗೆ ಓಟ ನಿರಂತರವಲ್ಲವೆ? ಈ ಗಣಿತಜ್ಞರನ್ನು ನೆಚ್ಚಿ ಕುಳಿತರೆ (ಓಡಿದರೆ!) ಯಾವ ಪಂದ್ಯವನ್ನೂ ಗೆಲ್ಲುವಂತೆಯೇ ಇಲ್ಲ. ಇಲ್ಲಿ ನಮ್ಮ ನೆರವಿಗೆ ಬರಬೇಕಾದುದು ಸಾಮಾನ್ಯಜ್ಞಾನವೇ ಹೊರತು ಬಿಡಿಬಿಡಿ

ಯಾಗಿ ತೋರಿಸುವ ಗಣಿತವಲ್ಲ. ಗಣಿತಕ್ಕೆ ಸೋಲಾದರೂ ಚಿಂತೆಯಿಲ್ಲ, ಪಂದ್ಯದಲ್ಲಿ ಆಖಿಲಿಸ್‌ನೇ (ಅಥವಾ ನೀವೇ ಆಗಿದ್ದರೂ) ಗೆಲ್ಲುವುದಂತೂ ನಿಜ!

ಕಾಗದ ಹರಿಯುವುದರಲ್ಲೂ ಲೆಕ್ಕಾಚಾರ!

ಬರೆಯಲು ಬಳಸುವ ಒಂದು ಫುಲ್‌ಸ್ಕೇಪ್ ಹಾಳೆಯನ್ನು ಬರಿಗೈಯಿಂದ ಅಡ್ಡಡ್ಡವಾಗಿ ಮಧ್ಯದಲ್ಲಿ ಎರಡಾಗಿ ಸೀಳಿ. ಇದನ್ನು ಸುಲಭವಾಗಿ ಮಾಡುತ್ತೀರಿ. ಈಗ ಎರಡೂ ತುಂಡುಗಳನ್ನು ಒಂದರ ಮೇಲೊಂದಿಟ್ಟು ಹಿಂದಿನಂತೆ ಮಧ್ಯದಲ್ಲಿ ಹರಿಯಿರಿ. ಇದೇನೂ ಕಷ್ಟವಲ್ಲ. ಈ ಎರಡೆರಡು ತುಂಡುಗಳನ್ನು ಒಂದರ ಮೇಲೊಂದಿಟ್ಟು ನಾಲ್ಕು ಹಾಳೆಗಳಾಗಿ ಮಾಡಿ ಮತ್ತೆ ಮಧ್ಯದಲ್ಲಿ ಸೀಳಿ. ಇದನ್ನೂ ಮಾಡಬಲ್ಲಿರಿ. ಈಗ ಸಿಕ್ಕಿದ ಎಂಟೂ ತುಂಡುಗಳನ್ನು ಮತ್ತೆ ಒಂದರ ಮೇಲೊಂದಿರಿಸಿ ಮತ್ತೆ ನಡುವಿನಲ್ಲಿ ಹರಿಯಿರಿ. ಸ್ವಲ್ಪ ಕಷ್ಟವೇ ಆದರೂ ಹರಿಯಬಲ್ಲಿರಿ. ಮುಂದೆ ೧೬ ತುಂಡುಗಳನ್ನೂ ಒಂದರ ಮೇಲೊಂದಿರಿಸಿ ಎಲ್ಲವನ್ನೂ ಒಟ್ಟಿಗೇ ನಡುವಿನಲ್ಲಿ ಎರಡು ಭಾಗವಾಗಿ ಹರಿಯಲೆತ್ನಿಸಿ. ಅಬ್ಬಾ! ಎಷ್ಟು ಕಷ್ಟವಾಯಿತು ಅಲ್ಲವೆ? ಇದನ್ನೂ ಸಾಧಿಸಿದಿರಿ ಎಂದುಕೊಳ್ಳೋಣ. ಮತ್ತೆ ಸಿಕ್ಕಿದ ಚಿಕ್ಕಗಾತ್ರದ ೩೨ ತುಂಡುಗಳನ್ನೂ ಒಂದರ ಮೇಲೊಂದಿರಿಸಿ (ಹಾಳೆಗಳನ್ನು ಹಿಂದೆ ಮುಂದೆ ಜಾರಿಸಿ ತೆಳುವಾಗಿ ಮಾಡದೆ) ಎರಡು ತುಂಡಾಗಿ ಹರಿಯಲೆತ್ನಿಸಿ. ಅವಡುಕಚ್ಚಿ, ಉಸಿರುಗಟ್ಟಿ, ಬಲು ಕಷ್ಟಪಟ್ಟು ಕೊನೆಗೂ ಪರ್ ಎಂದು ಹರಿದು ಬಿಟ್ಟಿರಿ. ಭೇಷ್! ಆಮೇಲೆ ಎರಡೂ ಕಡೆಯಿಂದ ಸಿಕ್ಕಿದ ೩೨+೩೨ = ೬೪ ಚಿಕ್ಕ ಚಿಕ್ಕ ಕಾಗದದ ತುಂಡುಗಳನ್ನು ಒಟ್ಟು ಜೋಡಿಸಿ, ಮತ್ತೆ ಮಧ್ಯದಲ್ಲಿ ಹರಿಯಲು ಯತ್ನಿಸಿ. "ಊಹುಂ. ಸಾಧ್ಯವಿಲ್ಲಪ್ಪಾ" ಎನ್ನುತ್ತೀರಿ. ಬರೀ ನೀವೇನು, ಪೈಲ್ವಾನರಿಗೂ ಇದು ಅಸಾಧ್ಯವಾದೀತು.

ಅಸಾಧ್ಯವೇ ಆಗಬೇಕು. ಏಕೆಂದರೆ ಕಾಗದವನ್ನು ಅದೆಷ್ಟು ತೆಳು ಎಂದುಕೊಂಡರೂ ಅದು ಹಲವು ಪದರು ಪದರಾಗಿ ಸೇರಿಕೊಂಡಾಗ ದಪ್ಪವಾಗುತ್ತಾ ಹೋಗುತ್ತದೆ. ಒಂದು ಹಾಳೆಯ ದಪ್ಪ ೦.೦೧ ಸೆಂಟಿಮೀಟರ್ ಎಂದುಕೊಳ್ಳಿ. ಅದನ್ನು ಮಧ್ಯೆ ಹರಿದು ೨ ಹಾಳೆಯಾಗಿ ಮಾಡಿದಾಗ ಅದರ ದಪ್ಪ ೦.೦೨ ಸೆಂಟಿಮೀಟರು ಆಗುತ್ತದೆ. ನಾಲ್ಕು ಹಾಳೆಗಳಾಗಿ ಹರಿದಾಗ ೦.೦೪ ಸೆಂ.ಮೀ. ಆಗುತ್ತದೆ. ೮ ಹಾಳೆಗಳಾದಾಗ ೦.೦೮ ಸೆಂ. ಮೀ., ೧೬ ಹಾಳೆಗಳಾದಾಗ ೦.೧೬ ಸೆಂ. ಮೀ., ೩೨ ಹಾಳೆಗಳಿಗೆ ೦.೩೨

ಸುಧಾರಣೆ

ಆದಷ್ಟು ಬೇಗನೆ
ಬಡತನದ ರೇಖೆಗಿಂತ
ಮೇಲೆತ್ತಬೇಕಾಗಿದೆ
ಭಾರತೀಯರನ್ನು
ಅದಕ್ಕೆಂದೇ
ಆದರದ ಆಮಂತ್ರಣದೊಂದಿಗೆ
ಬರ ಮಾಡಿಕೊಂಡಿದ್ದೇವೆ
ಬಹುರಾಷ್ಟ್ರೀಯರನ್ನು!

✸ -ಸಂಜೀವ ಹಲವಾಯಿ



ಸೆಂ. ಮೀ. ಮತ್ತು ೬೪ ಹಾಳೆಗಳಿಗೆ ೦.೬೪ ಸೆಂ.ಮೀ. (ಅಂದರೆ ಅರ್ಧ ಸೆಂ.ಮೀ.ಗೂ ಹೆಚ್ಚು) ದಪ್ಪವಾಗಿಬಿಡುತ್ತದೆ.

ಇಷ್ಟು ದಪ್ಪದ ಅಂದರೆ ಏಳು ಪಟ್ಟು ತುಂಡು (ಅಥವಾ ಮಡಿಕೆ) ಮಾಡಿದ ಹಾಳೆಯ ಕಟ್ಟನ್ನು ಬರಿಗೈಯಲ್ಲಿ ಹಿಡಿಯುವುದು ಅಸಾಧ್ಯ. ಜೊತೆಗೆ ಕಾಗದಗಳ ಪದರುಗಳು ಮತ್ತು ತುಂಡುಗಳು ಚಿಕ್ಕದಾಗುತ್ತ ಬರುವುದೂ ಇದನ್ನು ಅಸಾಧ್ಯವಾಗಿಸುತ್ತದೆ. ಹೋಗಲಿ ಬಿಡಿ. ಆನೆಯಿಂದಲೂ ಸೂಜಿಯನ್ನು ಡೊಂಕಿಸುವುದು ಸಾಧ್ಯವಿಲ್ಲವಲ್ಲ!

ಘನಾಕೃತಿಯ ದುಪ್ಪಟ್ಟಿನ ಸವಾಲು

ಕ್ರೀಟ್ ಸಾಮ್ರಾಜ್ಯದ ಪ್ರಸಿದ್ಧರಾಜ ಮಿನೋಸ್‌ನಿಗೆ (ಕಾಲ, ಕ್ರಿ.ಪೂ. ಎರಡೂವರೆ ಶತಮಾನಕ್ಕೂ ಹಿಂದೆ) ಗ್ಲೌಕಸ್ ಎಂಬ ಒಬ್ಬ ಮಗನಿದ್ದ. ಈ ತುಂಟ ಬಾಲಕ ಒಮ್ಮೆ ಚೆಂಡಾಡುತ್ತಿದ್ದಾಗ (ಹೆಗ್ಗಣವನ್ನು ಅಟ್ಟಿಸಿಕೊಂಡು ಹೋಗುತ್ತಿದ್ದಾಗ ಎಂದೂ ಹೇಳುತ್ತಾರೆ.) ಜೇನುತುಪ್ಪದ ಪೀಪಾಯಿಗೆ ಬಿದ್ದು (ಸಿಹಿಯಾದ!) ಸಾವನ್ನಪ್ಪಿದ. ರಾಜನು ತನ್ನ ಆಸ್ಥಾನ ಜ್ಯೋತಿಷಿಯನ್ನು ಕರೆಸಿ ಮಗನನ್ನು ಬದುಕಿಸುವಂತೆಯೂ ಇಲ್ಲದಿದ್ದರೆ ಆತನನ್ನು ಮಗನೊಂದಿಗೇ ಸಜೀವ ಸಮಾಧಿಮಾಡುವುದಾಗಿಯೂ ಆದೇಶಿಸಿದ. ರಾಜಕುಮಾರನನ್ನು ಬದುಕಿಸಲಾಗದ ಜ್ಯೋತಿಷಿಯನ್ನು ಅವನೊಂದಿಗೇ ಗೋರಿಗೆ ಕಳುಹಿಸಲಾಯಿತು. ಗೋರಿಯಲ್ಲಿ ರಾಜಕುಮಾರನು ಸತ್ತಿರಲಿಲ್ಲವೆಂಬುದನ್ನೂ ಕೇವಲ ಮೂರ್ಛೆ ಹೋಗಿದ್ದನೆಂಬುದನ್ನೂ ಜ್ಯೋತಿಷಿಯು ಕಂಡು, ಹೇಗೋ ಹೊರಬಂದು ಜೀವಂತ ರಾಜಕುಮಾರನನ್ನು ತಂದೆಗೊಪ್ಪಿಸಿ ಬಚಾವಾದ.

ಈ ಕತೆಯು ಮಿನೋಸ್‌ಗೆ ಸಾವಿನ ಬಗೆಗೆ ಚಿಂತಿಸುವಂತೆ ಮಾಡಿತೆ? ಎಂದೇನೂ ಹೇಳುವುದಿಲ್ಲ. ಆದರೆ ತನ್ನ ಮಗ ಬದುಕಿಬಂದ ಕೂಡಲೇ ತನಗಾಗಿಯೇ ಒಂದು ಗೋರಿಯನ್ನು ಸಿದ್ಧಪಡಿಸಲು ಅಪ್ಪಣೆ ಮಾಡಿದ ಎನ್ನುತ್ತದೆ ಕತೆ. ಆ ಸಮಾಧಿ ರಚನೆಯು ಘನಾಕೃತಿ (ಉದ್ದ, ಅಗಲ, ಎತ್ತರಗಳು ಒಂದೇ ಅಳತೆಯವು)ಯಲ್ಲಿರಬೇಕೆಂದು ಆತ ಆದೇಶಿಸಿದ. ಅದರ ರಚನೆಯಾದ ಮೇಲೆ ರಾಜನು ಪರಿಶೀಲಿಸಲು ಬಂದ. ಸಮ್ರಾಟನ ಗೋರಿಗೆ ಆ ಸಮಾಧಿಯು ಬಲು ಚಿಕ್ಕದಾಯಿತು ಎಂದವನಿಗೆ ಅನಿಸಿರಬೇಕು. ಕೂಡಲೇ ಆ ಘನಾಕೃತಿಯನ್ನು ಕರಾರುವಾಕ್ಕಾಗಿ ದುಪ್ಪಟ್ಟು ಮಾಡಲು ಅಪ್ಪಣೆಯಿತ್ತ!

ಆದರೆ ಸಮಾಧಿಯ ಉದ್ದ, ಅಗಲ, ಎತ್ತರಗಳೆಲ್ಲವನ್ನೂ ಎರಡೆರಡು ಪಟ್ಟು ಮಾಡಿದರೆ ಎಂಟು ಪಟ್ಟು ಘನಾಕೃತಿಯಾಗಿಬಿಡುತ್ತದೆ ಎನ್ನುವುದನ್ನು ಗಾರೆಯುವರು ಕಂಡುಕೊಂಡರು. ಆದರೆ ರಾಜಾಜ್ಞೆಯು ಆಕಾರವನ್ನು ಕೆಡಿಸದೆ ಘನಾಕೃತಿಯನ್ನು ಇಮ್ಮಡಿ ಮಾಡಬೇಕೆಂದಿತ್ತು. ಅದೇ ಗಾತ್ರದ ಮತ್ತೊಂದು ಘನಾಕೃತಿಯನ್ನು ಮೊದಲಿನದರ ಮೇಲಿಟ್ಟೋ, ಪಕ್ಕದಲ್ಲಿಟ್ಟೋ ರಚಿಸುವುದೂ ಅಲ್ಲ; ಇಷ್ಟಕ್ಕೂ ಹಾಗೆ ಮಾಡಿದರೆ ದುಪ್ಪಟ್ಟಾದರೂ ಆಕಾರ ಕೆಡುತ್ತದಲ್ಲ.

ಸರಿ, ಅವರು ಆ ಕಾಲದ ಜಾಣರನ್ನು ಸಲಹೆ ಕೇಳಿದರು. ಆಗಿನ ಕಾಲದ ತತ್ತ್ವಜ್ಞಾನಿಗಳೂ ಜ್ಯಾಮಿತಿಯ ಅಧ್ಯಯನದಲ್ಲಿ ಅತ್ಯಂತ ಆಸಕ್ತರಾಗಿದ್ದರು. ಅದರ ಅಧ್ಯಯನವು ತಾತ್ವಿಕವಾಗಿಯಷ್ಟೆ ಅಲ್ಲ, ಪ್ರಾಯೋಗಿಕವಾಗಿಯೂ ಇತ್ತು. ಕೇವಲ ಅಡಿಕಡ್ಡಿ ಮತ್ತು ಕೈವಾರಗಳನ್ನು ಬಳಸಿ ಜ್ಯಾಮಿತಿಯ ವಿಧಾನಗಳಿಂದ ಸಮಸ್ಯೆಗಳನ್ನು ಪರಿಹರಿಸಲು ತುಂಬಾ ಆಸಕ್ತಿಯನ್ನು ತೋರಿಸುತ್ತಿದ್ದರು. ಆ ಜಾಣರಿಗೆ ತಾವು ಬಳಸುತ್ತಿದ್ದ ವಿಧಾನಗಳಿಂದ ಈ ಸಮಸ್ಯೆಗೆ ತೃಪ್ತಿಕರ ಉತ್ತರವನ್ನು ಕೊಡಲಾಗಲಿಲ್ಲ. ಅವರಿರಲಿ, ಅಲ್ಲಿಂದೀಚೆಗೆ ಪ್ರತಿಯೊಬ್ಬ ಗಣಿತಜ್ಞರೂ ಜ್ಯಾಮಿತಿಯ ವಿಧಾನಗಳನ್ನು ಮಾತ್ರ ಬಳಸಿ ಸಮಸ್ಯೆಗಳನ್ನು ಬಗೆಹರಿಸಲೆತ್ನಿಸಿದರೂ ಈ ಘನ ಕಾರ್ಯ ಸಾಧ್ಯವಾಗಿಲ್ಲ.

(ಘನಾಕೃತಿಯ ಉದ್ದ ಎತ್ತರಗಳನ್ನು ೧.೨೫ ಗೆ ಹಿಗ್ಗಿಸಿದರೆ ೧.೨೫x೧.೨೫x೧.೨೫=೧.೯೫೩೧೨೫

ದೊರಕುತ್ತದೆ. ಪೂರ್ಣ ದುಪ್ಪಟ್ಟಾಗುವುದಿಲ್ಲ. ೧.೩ಗೆ ಹಿಗ್ಗಿಸಿದರೆ ಅದು ೨.೧೯೭ ಆಗಿಬಿಟ್ಟು ದುಪ್ಪಟ್ಟಿಗೂ ಹೆಚ್ಚಾಗಿಬಿಡುತ್ತದೆ. ಆದ್ದರಿಂದ ೧.೨೫ ಮತ್ತು ೧.೩ ರ ನಡುವಿನ ಯಾವುದೋ ಒಂದು ನಿಖರವಲ್ಲದ ಚಿಲ್ಲರೆ ಸಂಖ್ಯೆ ದೊರಕೀತು).

ಘನಾಕೃತಿಯನ್ನು ಎರಡು ಪಟ್ಟು ಹಿಗ್ಗಿಸುವ ಸಮಸ್ಯೆಯನ್ನೊಳಗೊಂಡ ಮತ್ತೊಂದು ಕತೆ ಇದೆ. ಗ್ರೀಸ್ ದೇಶದಲ್ಲಿ ಒಮ್ಮೆ ಪ್ಲೇಗ್ ರೋಗ ಹರಡಿತಂತೆ. ಸರಿ, ಗ್ರೀಕ್ ನಾಯಕರೆಲ್ಲ ಡೆಲ್ಫಿಯಲ್ಲಿದ್ದ ಅಪೊಲೋ ದೇವತೆಯ ದೇವಾಲಯಕ್ಕೆ ಹೋಗಿ ಅರ್ಚಕಳೊಬ್ಬಳ ಮೂಲಕ ದೇವತೆಗೆ ಸಮಸ್ಯೆಯ ಪರಿಹಾರಕ್ಕೆ ದೇವವಾಣಿಯನ್ನು ಅನುಗ್ರಹಿಸಬೇಕೆಂದು ಕೋರಿದರು. ಅಪೊಲೋ ದೇವರು ದೇವವಾಣಿಯ ಮೂಲಕ ಪ್ಲೇಗ್ ರೋಗವನ್ನು ಹಿಂತೆಗೆದುಕೊಳ್ಳುವುದಾಗಿಯೂ, ಆದರೆ ಅದಕ್ಕಾಗಿ ಅವರು ದೇವಾಲಯದಲ್ಲಿದ್ದ ವೇದಿಕೆಯನ್ನು ಅದೇ ಆಕಾರದಲ್ಲಿ ಇಮ್ಮಡಿ ಮಾಡಿಸಬೇಕೆಂದೂ ಶರತ್ತು ಹಾಕಿದ.

ದೇವಾಲಯದ ವೇದಿಕೆಯು ಘನಾಕೃತಿಯಲ್ಲಿತ್ತು. ಆದರ ಗಾತ್ರವನ್ನು ಆಕಾರ ಕೆಡಿಸದೆ ಎರಡು ಪಟ್ಟು ಹಿಗ್ಗಿಸುವುದು ಹೇಗೆಂದು ಯಾರಿಗೂ ಹೊಳೆಯಲಿಲ್ಲ. ನಿರಾಶರಾಗಿ ಕೊನೆಗೆ ಅವರು ತಮ್ಮ ದೇಶದ ಅತ್ಯಂತ ಜಾಣನಾದ ಪ್ಲೇಟೋವಿನ ಸಲಹೆ ಕೇಳಿದರು.

ಆತ ಹೇಳಿದನಂತೆ, "ಹುಚ್ಚಪ್ಪಗಳಿರಾ! ಜ್ಯಾಮಿತಿಯ ಅತ್ಯುತ್ತಮ ಕೌಶಲವನ್ನೊಳಗೊಂಡ ಕಾರ್ಯದಲ್ಲಿ ನೀವು ತೊಡಗಿ ಎಂದೇನೂ ಅಪೊಲೋ ಹೇಳಿದ್ದಲ್ಲ. ಅಥವಾ ಈಗಿರುವ ವೇದಿಕೆಗಿಂತ ಎರಡು ಪಟ್ಟು ದೊಡ್ಡದಾದ ವೇದಿಕೆಯನ್ನು ನೀವು ಕಟ್ಟಿರೆಂದು ದೇವರು ವಿಶೇಷವಾಗಿ ಅಪೇಕ್ಷಿಸಿದ್ದೂ ಅಲ್ಲ. ದೇವವಾಣಿಯ ಮೂಲಕ ಆತ ಹೇಳಿದ್ದೇನೆಂದರೆ ನೀವು ಜ್ಯಾಮಿತಿಯನ್ನು ಹಿಂದೆಂದಿಗಿಂತ ಇನ್ನೂ ಹೆಚ್ಚು ಕಷ್ಟ ಪಟ್ಟು ಕಲಿಯಿರಿ ಎಂದು."

ಹೌದು. ತನ್ನ ಪ್ರಸಿದ್ಧವಾದ ಶಾಲೆಯ ಬಾಗಿಲಿನ ಮೇಲೆ, "ಜ್ಯಾಮಿತಿ ತಿಳಿಯದವರು ಒಳಗೆ ಪ್ರವೇಶಿಸದಿರಲಿ" ಎಂದು ಬರೆಸಿದ್ದ ಘನಂಧಾರಿ ಪ್ಲೇಟೋ ಹಾಗಲ್ಲದೆ ಬೇರಿನ್ನೇನು ತಾನೆ ಹೇಳಿಯಾನು!

೧೯೨೪ರ ಡಿಸೆಂಬರ್‌ನಲ್ಲಿ ಎಣ್ಣೆಯ ಟ್ಯಾಂಕರ್ 'ವಾಟರ್ ಟೌನ್' ಪನಾಮಾ ಕಾಲುವೆಯಲ್ಲಿ ಸಾಗುತ್ತಿರುವಾಗ ಅಪಘಾತಕ್ಕೊಳಗಾಯಿತು. ಕಾರ್ಗೋ ಟ್ಯಾಂಕನ್ನು ಶುಚಿಗೊಳಿಸುತ್ತಿದ್ದ ಜೇಮ್ಸ್ ಕೋರ್ಟ್ನಿ ಹಾಗೂ ಮೈಕೇಲ್ ಮೀಹನ್ ಅನಿಲದ ಜ್ವಾಲೆಗಳಿಗೆ ಸಿಕ್ಕಿ ಸತ್ತರು. ಅವರಿಬ್ಬರನ್ನೂ ಡಿಸೆಂಬರ ನಾಲ್ಕರಂದು ಸಮುದ್ರದಲ್ಲಿ ಸಮಾಧಿಮಾಡಲಾಯಿತು.

ಮರುದಿನ ಈ ದುರ್ದೈವಿ ನೌಕರರಿಬ್ಬರ ಶರೀರವಿಲ್ಲದ ಮುಖಗಳು ಮಾತ್ರ ಟ್ಯಾಂಕರನ್ನೇ ಹಿಂಬಾಲಿಸಿ ಬರುತ್ತಿರುವುದು ನೌಕಾ ಕ್ಯಾಪ್ಟನ್ ರೀತ್ ಟ್ರೇಸಿ ಹಾಗೂ ಇತರ ನೌಕರವರ್ಗದವರಿಗೆ ಪ್ರಯಾಣದುದ್ದಕ್ಕೂ ಕಾಣಿಸುತ್ತಿತ್ತು. ಕ್ಯಾಪ್ಟನ್ ಟ್ರೇಸಿ ನ್ಯೂ ಆರ್ಲಿಯನ್ಸ್‌ನಲ್ಲಿ ಲಂಗರುಹಾಕಿ, ಈ ವಿಚಿತ್ರ ಘಟನೆಯನ್ನು ತನ್ನ ಮುಖ್ಯ ಕಛೇರಿಗೆ ತಿಳಿಸಿದ. ಕಛೇರಿಯ ಆದೇಶದಂತೆ ತೆಗೆದ ಫೋಟೋಗಳ ಐದು ಪ್ರತಿಗಳಲ್ಲಿ ಅಸಾಮಾನ್ಯವಾದದ್ದೇನೂ ಕಾಣದಿದ್ದರೂ ಆರನೆಯದರಲ್ಲಿ ಎರಡು ಮುಖಗಳು ಆತುರಾತುರವಾಗಿ ಹಡಗನ್ನು ಹಿಂಬಾಲಿಸುತ್ತಿರುವಂತೆ ಕಾಣುತ್ತಿತ್ತು. ೧೯೩೪ರಲ್ಲಿ ಕಂಪನಿಯ ಪತ್ರಿಕೆ 'ಸರ್ವಿಸ್'ನಲ್ಲಿ ಆ ಫೋಟೋಗಳು ಅಚ್ಚಾಗಿದ್ದವು!

✸ ಟಿ.ಎಸ್. ಲಲಿತ

ಇರುವೆಗಳೂ ಗೌರಜ್ಜಿಯೂ

• ನಿರಂಜನ ವಾನಳ್ಳಿ

ಕಳ್ಳಗಿಂಡಿಯ ಮೂಲಕ ಇಣುಕಿ ಬರುತ್ತಿದ್ದ ವೈರಿಗಳನ್ನು ಒನಕೆಯಿಂದ ಹೊಸಕಿ ಹಾಕಿದ ಓಬವ್ವನ ಹಾಗೆ ಗೌರಜ್ಜಿ, ಕಂಬದ ಬುಡದಿಂದ ಹೊರಬರುತ್ತಿದ್ದ ಇರುವೆಗಳನ್ನು 'ಇಲ್ಲಿ'ವಾಗಿಸಿದ್ದಳು.

ನಾವು ಅವರ ಮನೆಗೆ ಹೋಗಿದ್ದು ಆಕಸ್ಮಿಕವಾಗಿ. ಪಶ್ಚಿಮ ಘಟ್ಟಕ್ಕೆ ಕೊರೆದಿರುವ ಹೊಸ ದಾರಿಯೊಂದನ್ನು ನೋಡಲು ಹೋಗಿದ್ದವರು ಏದುಸಿರುಬಿಡುತ್ತಾ ಘಟ್ಟಹತ್ತಿ ಬಂದಾಗ ಮಧ್ಯಾಹ್ನ ಎರಡು ಗಂಟೆಯಾಗಿತ್ತು. ಹೊಟ್ಟೆ- ಚುರುಗುಡುತ್ತಿತ್ತು. ಸನಿಹದಲ್ಲಿದ್ದುದು ಅದೊಂದೇ ಮನೆ. ಉಪಾಯಗಾಣದೆ ಆ ಮನೆಗೆ ನುಗ್ಗಿದೆವು.

ಮಲೆನಾಡಿನ ಮನೆಗಳಿಗೆ ಎಷ್ಟೇ ಹೊತ್ತಿಗೆ ಹೋಗಲಿ, ಅನ್ನ ಅರಸಿ ಬಂದವರಿಗೆ ನಿರಾಶೆಯಾಗದು. ನಾವು ಹೋದ ಮನೆಯಲ್ಲಿ ಮನೆಯೊಡೆಯನಿರಲಿಲ್ಲ. ಮಗಳ ಮದುವೆ ನಿಶ್ಚಯವಾಗಿದ್ದು ಅದರ ಸಂಬಂಧವಾಗಿ ಪೇಟೆಗೆ ಹೋಗಿದ್ದ. ಮನೆಯೊಡತಿ ನಮ್ಮನ್ನು ಒಳಕರೆದವರೇ ಲಗುಬಗೆಯಿಂದ ಅಡಿಗೆ ಮಾಡತೊಡಗಿದರು. 'ನೀವು ಒಂದು ಚೆಂಬು ಮಿಂದು ಬನ್ನಿ; ಅಷ್ಟೊತ್ತಿಗೆ ಊಟಕ್ಕೆ ಆಗುತ್ತದೆ,' ಎಂದು ಒತ್ತಾಯಿಸಿದರು.

ಬಚ್ಚಲಲ್ಲಿ ಹಂಡೆ ತುಂಬ ಬಿಸಿಬಿಸಿ ನೀರು. ಸುಖ ಎಂದರೆ ಇದೇ ಅಲ್ಲವೆ? ನಗರದ ಕಿಷ್ಕಿಂಧೆಯಂಥ ಸ್ನಾನದ ಮನೆಯಲ್ಲಿ ಚಿಕ್ಕ ಡ್ರಮ್ಮಿನಲ್ಲಿ ಕಾಯಿಸಿದ ಎರಡೇ ಎರಡು ಚೆಂಬು ನೀರಲ್ಲಿ ಸ್ನಾನ ಪೂರೈಸಿ ಬರುವುದು ಅಭ್ಯಾಸ ಮಾಡಿಕೊಂಡಿರುವ ನಮಗೆ ಈ ಸ್ವಾತಂತ್ರ್ಯ ಪರಮ ಸುಖವೆನಿಸಿದ್ದು ಸಹಜವೇ. ಮನಸೋ ಇಚ್ಛೆ ಮಿಂದೆವು.

ಮಲೆನಾಡಿನ ಅಂದಿನ ಸ್ನಾನವಷ್ಟೇ ನೆನಪಿನಲ್ಲಿ ಉಳಿಯುವುದಿಲ್ಲ, ಊಟ ಕೂಡ. ಗೊಜ್ಜು-ತಂಬುಳಿ-ಅಪ್ಪೆ ಮಲೆನಾಡಿನ ಊಟ. ಗೌರಜ್ಜಿಯ ಅಪ್ಪೆಹುಳಿಯ ಬೋನಸ್ಸು! ಹೊಟ್ಟೆ ಬಿರಿಯುವ ಹಾಗೆ ಉಂಡು ಎದ್ದಾಗ ಎಲ್ಲಿಂದ ಬಂತೋ ನಿದ್ದೆ!

ನಿದ್ದೆಮಾಡಿ ಎದ್ದು, ಚಹ ಕುಡಿದು ಮನೆಯವರನ್ನು ಬೀಳ್ಕೊಂಡು ಊರತ್ತ ಹೊರಟಾಗ ಗೋಧೂಳಿ ಸಮಯ. ಇಷ್ಟಾಗಿ ಅವರ ಮನೆಯಲ್ಲಿ ಬಹಳ ಸೆಳೆದವಳು, ಮತ್ತೆ ಮತ್ತೆ ನೆನಪಾಗುವವಳು ಎಲ್ಲರ ಪ್ರೀತಿಯ ಗೌರಜ್ಜಿ.

ಮನೆಯಲ್ಲಿ ಎರಡನೇ ಮೊಮ್ಮಗಳ ಮದುವೆಯ ತಯಾರಿ ನಡೆದಿದೆಯೆಂದರೆ ಗೌರಜ್ಜಿಗೆ ಎಪ್ಪತ್ತು ದಾಟಿರಬೇಕು. ಶ್ವೇತವಸನಧಾರಿ ಅಜ್ಜಿಯ ಮೈಯೂ ಬಿಳಿ, ತಲೆಯೂ ಬಿಳಿ. ಫಳಫಳ ಹೊಳೆಯುವ ತಲೆಯ ತುಂಬ ಚಿಕ್ಕ ಚಿಕ್ಕ ಬೆಳ್ಳಿ ಕೂದಲು. ಬಹಳ ಕಾಲ ಮೊಮ್ಮಗಳಿಗೆ ಮದುವೆಯಾಗಿಲ್ಲವೆಂಬ ಕೊರಗು ಅಜ್ಜಿಗಿತ್ತಂತೆ. ಈಗ ತಿಂಗಳ ಹಿಂದೆಯಷ್ಟೆ ಹಿರಿಯ ಮೊಮ್ಮಗಳ ಮದುವೆಯಾಗಿದೆ. ಈಗ

ಎರಡನೆಯವಳಿಗೂ ನಿಶ್ಚಯವಾಗಿದೆ. ಹೀಗಾಗಿ ಅಜ್ಜಿಯ ಖುಷಿಗೆ ಪಾರವೇ ಇಲ್ಲ. 'ಏನು ದೇವರ ಆಟ!'ಎಂದು ಗೌರಜ್ಜಿ ಬೊಚ್ಚು ಬಾಯಿ ಅಗಲಿಸಿ ನಗುವುದೇ ಚಂದ.

ಗೌರಜ್ಜಿಯ ಅಪ್ಪೆಹುಳಿ ಆ ಭಾಗಕ್ಕೆಲ್ಲ ಪ್ರಸಿದ್ಧವಂತೆ. ಅದು ಅಪ್ಪೆಹಣ್ಣಿನ ಗುಣವೋ ಅಜ್ಜಿ ಹಾಕುವ ಒಗ್ಗರಣೆಯ ಪರಿಣಾಮವೋ ಅಂತೂ ಗೌರಜ್ಜಿಯ ಅಪ್ಪೆಹುಳಿ ಉಂಡವರು ಅದನ್ನೆಂದೂ ಮರೆಯುವುದಿಲ್ಲ. ಅಡುಗೆ ಮಾಡುವುದಕ್ಕೂ ಕಲಾವಿದನ ಚಾತುರ್ಯ ಬೇಕು ಎನ್ನುವುದಕ್ಕೆ ಗೌರಜ್ಜಿಯೇ ಸಾಕ್ಷಿ.

ಈ ಹಳೆಯ ಜನಗಳೇ ಹಾಗೆ. ಅವರ ಕೈಗೆ ಮಾಡಲೊಂದು ಕೆಲಸ ಯಾವಾಗಲೂ ಇರಲೇಬೇಕು. ಕೆಲಸವಿಲ್ಲದಿದ್ದರೆ ನಮ್ಮ ಈಗಿನ ಹುಡುಗರ ಹಾಗೆ ಕೆಲಸಕ್ಕಾಗಿ ಊರೂರು ಅಲೆಯುವದಿಲ್ಲ. ಏನಾದರೂ ಹುಡುಕಿ ಮಾಡುತ್ತಾರೆ. ಕವಳ ಕುಟ್ಟುತ್ತಾ, ದುಪಟಿ ಹೊಲಿಯುತ್ತಾ (ಹರಕು ಬಟ್ಟೆಗಳ ತುಂಡು ಸೇರಿಸಿ ಕಲಾತ್ಮಕವಾಗಿ ಮಾಡಿದ ಹೊದಿಕೆ) ದಿನ ಕಳೆಯಬಲ್ಲ ಈ ಅಜ್ಜಿಯರು 'ತಡೆ, ಇದೊಂದು ಮುಗಿಸಿ ಬರುತ್ತೇನೆ' ಎಂದು ಪ್ರತಿಬಾರಿಯೂ ಯಮದೂತನಿಗೆ ಹೇಳುವುದರಿಂದ ನಮ್ಮಲ್ಲಿ ಹಳೆಯಜ್ಜಿಯರು ಬಹುಕಾಲ ಉಳಿಯುತ್ತಾರೆ. ಅವರಿಗೆ ಸಾಯಲು ಪುರುಸೊತ್ತೇ ಇರುವುದಿಲ್ಲ!

ಹಾಗೆ ಈ ಗೌರಜ್ಜಿ ಇಂದು ತೊಡಗಿಸಿಕೊಂಡ ಕೆಲಸ ಬಹಳ ಮುಖ್ಯವಾದದ್ದು. ನಾವು ಮಧ್ಯಾಹ್ನ ಮಲಗಿದಾಗಲೂ ಗೌರಜ್ಜಿ ಹಾಗೇ ಇದ್ದಳು. ಎದ್ದಾಗಲೂ ಅದನ್ನೇ ಮಾಡುತ್ತಿದ್ದಳು. ಏನಂಥ ಧಾವಂತದ ಕೆಲಸ?

ನುಣುಪಾದ ಚಪ್ಪಟೆ ಕಲ್ಲೊಂದನ್ನು ಅಜ್ಜಿ ಹಿಡಿದುಕೊಂಡಿದ್ದಾಳೆ. ಅಡಿಕೆ ಅಟ್ಟಕ್ಕಾಗಿ ಹಾಕಿದ ಕಂಬದ ಬುಡದಲ್ಲಿ ಕುಳಿತಿದ್ದಾಳೆ. ಇದೇ ಕಂಬದ ಬುಡದಿಂದ ಕೆಂಪಿರುವೆಗಳು ಎದ್ದು ಬರುತ್ತಾ ಇವೆ. ಕಚ್ಚಿದರೆ ಬಾಯಿ ಬಾಯಿ ಹೊಡೆದುಕೊಳ್ಳುವಷ್ಟು ಉರಿಯಾಗುವ ಈ ಇರುವೆಗಳನ್ನು ನಾವು ದಕ್ಷಿಣ ಕನ್ನಡದವರು 'ಕಟ್ಟೇರ' ಎನ್ನುತ್ತೇವೆ. ಅಪ್ಪಿ ತಪ್ಪಿ ನಾವು ಹಾಕಿಕೊಂಡ ಬಟ್ಟೆಯೊಳಗೆ ಈ ಕಟ್ಟೇರ ಸೇರಿಕೊಂಡರಂತೂ ಮುಗಿದೇಹೋಯಿತು. ಆ ಕಷ್ಟ ಅನುಭವಿಸುವವನೇ ಬಲ್ಲ. ಗೌರಜ್ಜಿ ಈ ಕೆಂಪಿರುವೆ ಹೊರಬಂದಹಾಗೆಲ್ಲ ಚಪ್ಪಟೆ ಕಲ್ಲಿನಿಂದ ನೆಲಕ್ಕೆ ಸವರಿ ಬಿಡುತ್ತಿದ್ದಳು. ಅವು ಒಂದರ ಹಿಂದೆ ಒಂದರಂತೆ ನೆಲದಾಳದಿಂದ ಎದ್ದು ಬರುತ್ತವೆ, ಬಂದಹಾಗೆಲ್ಲ ಈ ಅಜ್ಜಿ ಅವುಗಳನ್ನು ಮುಗಿಸುತ್ತಿದ್ದಾಳೆ. ಅಜ್ಜಿಯ ಕಾರ್ಯವನ್ನು ಕಂಡಾಗ ಒನಕೆ ಓಬವ್ವ ತಟ್ಟನೆ ನೆನಪಾದಳು. ಕಳ್ಳಗಿಂಡಿಯ ಮೂಲಕ ಇಣುಕಿ ಬರುತ್ತಿದ್ದ ವೈರಿಗಳನ್ನು ಒನಕೆಯಿಂದ ಹೊಸಕಿಹಾಕಿದ ಓಬವ್ವನ ಹಾಗೆ ಗೌರಜ್ಜಿ ಕಂಬದ ಬುಡದ ಕುಣಿಯಿಂದ ಹೊರಬರುತ್ತಿದ್ದ ಇರುವೆಯನ್ನು ಒಂದೊಂದಾಗಿ ಇಲ್ಲವಾಗಿಸುತ್ತಿದ್ದಳು.

ಆದರೆ ಗೌರಜ್ಜಿಯ ಕೆಲಸಕ್ಕೆ ಕೊನೆಯೇ ಇಲ್ಲ. ಕಂಬದ ಬುಡದಿಂದ ಇರುವೆಗಳು ಹೊರಬರುತ್ತಲೇ ಇರುತ್ತವೆ, ಗೌರಜ್ಜಿ ಒಂದೇ ಸಮನೆ ಹೊಸಕುತ್ತಲೇ ಇರುತ್ತಾಳೆ. 'ಹಾಗೇ ಬಿಟ್ಟರೆ ಮನೆಯ ಮಕ್ಕಳಿಗೆ ಕಚ್ಚುತ್ತವೆ. ಅವುಗಳನ್ನು ನಿರ್ನಾಮ ಮಾಡುತ್ತೇನೆ' ಎನ್ನುತ್ತಾಳೆ ಗೌರಜ್ಜಿ. ಹಗಲು-ರಾತ್ರಿ ಇರುವೆಗಳು ಬರುವುದಕ್ಕೂ ಗೌರಜ್ಜಿಯ ಕೆಲಸಕ್ಕೂ ಕೊನೆಯುಂಟೆ?

ಇರುವೆಗಳೂ ಗೌರಜ್ಜಿಯೂ ಎಲ್ಲ ಕಾಲಗಳಲ್ಲೂ ಎಲ್ಲ ದೇಶಗಳಲ್ಲೂ ಇರುವವರೇ. ಅವರು ಸಾವಿಲ್ಲದ ಜೀವಿಗಳು, ಅನಂತ ಪಥದ ಯಾತ್ರಿಗಳು.

ಮನ (ಸು) ಸುಮನವಾಗಲಿ!

ಆರೋಗ್ಯದ ನಿಯಮಗಳನ್ನು ಕಡೆಗಣಿಸಿ ನಾವಾಗಿಯೆ ರೋಗ ರುಜಿನಗಳನ್ನು ತಂದುಕೊಳ್ಳುತ್ತೇವೆ. ಅವಿವೇಕದಿಂದಲೋ, ಅಜಾಗರೂಕತೆಯಿಂದಲೋ ವರ್ತಿಸಿ ಕಷ್ಟ ನಷ್ಟಗಳಿಗೆ ಗುರಿಯಾಗುತ್ತೇವೆ. ಬಾಳಿನಲ್ಲಿನ ಒಳಿತು ಕೆಡಕುಗಳ ಬಹಳಷ್ಟು ಭಾಗಕ್ಕೆ ನಮ್ಮ ಮನಸ್ಸು ಹೊಣೆಯಾಗಿದೆಯೆ ಹೊರತು ಹೊರಗಣ ದೈವವಲ್ಲ; 'ಶನಿಕಾಟ' ಗುರುಬಲದ ಅಭಾವ; ಶನಿಮಂಗಳಯುತಿ ಯಂತಹ ಗ್ರಹನಕ್ಷತ್ರಾದಿಗಳ ಪೀಡೆಯಲ್ಲ; ನಮಗಾಗದವರು ಪ್ರಯೋಗಿಸುವ ಮಂತ್ರ, ಮಾಟ, ಮದ್ದು ಮೊದಲಾದವುಗಳಲ್ಲ.

ಮಾನವನ ಮನಕ್ಕಿರುವ ಅಗಾಧಶಕ್ತಿ ಎಂತಹದು ಎಂಬುದು ಗೀತೆಗೆ ಚೆನ್ನಾಗಿ ಗೊತ್ತು. ಸಂಸಾರ ಸಾಗರದ ಸೆಳವಿಗೆ ಸಿಲುಕಿದ ವ್ಯಕ್ತಿಯನ್ನು ಅವನ ಮನವು ತೇಲಿಸಬಲ್ಲದು, ಮುಳುಗಿಸಲೂಬಲ್ಲುದು. ಗೀತೆ ಸ್ಪಷ್ಟವಾದ ಶಬ್ದಗಳಲ್ಲಿ ಇಂತು ಸಾರುತ್ತದೆ:, 'ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ'. ಪ್ರಪಂಚಕ್ಕೆ ಕಟ್ಟಿಹಾಕಿ, ತಾಪತ್ರಯಗಳಲ್ಲಿ ಸಿಲುಕಿಸಿ, ಮನುಷ್ಯನನ್ನು ವಿಲಿವಿಲಿ ಒದ್ದಾಡುವಂತೆ ಮಾಡುವಲ್ಲಿ ಅವನ ಮನವೇ ಕಾರಣ. ಆದರೆ ಅದೇ ಮನಸ್ಸು ಆತನನ್ನು ಆವರಿಸಿದ ಅಜ್ಞಾನವೆಂಬ ತಿಮಿರದ ಪರದೆಯನ್ನು ದೂರಸರಿಸಿ ಪರಮ ಪದವನ್ನು ದೊರಕಿಸಲೂ ನೆರವಾಗಬಲ್ಲುದು.

ಮನಸ್ಸು ಮೂಲತಃ ಸ್ಫಟಿಕದಂತೆ ನಿರ್ಮಲ, ಪಾರದರ್ಶಕ. ಹಾಗಿರುವುದೇ ಅದರ ಪ್ರಕೃತಿ. ಹಸುಳೆಯ ಎಳೆಯ ಮನಸ್ಸು ಇದಕ್ಕೆ ನಿದರ್ಶನ. ಪಕ್ಕದಲ್ಲಿರಿಸಿದ ಕೆಂಪು ದಾಸವಾಳ ಹೂವಿನ ಸಂಯೋಗದಿಂದ ಸ್ಫಟಿಕವು ರಕ್ತವರ್ಣವನ್ನು ತಳೆಯುವಂತೆ ಮನವೂ ಕೂಡ ಸಂಸ್ಕಾರದ ಬಲದಿಂದ ಒಳ್ಳೆಯದೋ ಕೆಟ್ಟದ್ದೋ ಆಗುವುದು. ಒಂದೇ ತಾಯಿಯ ಹೊಟ್ಟೆಯಿಂದ ಹುಟ್ಟಿದ ಎರಡು ಗಿಳಿಮರಿಗಳು ನಡೆದುಕೊಳ್ಳುವ ರೀತಿ ಅದೆಷ್ಟು ವಿಭಿನ್ನ! 'ಬನ್ನಿ, ಕುಳಿತುಕೊಳ್ಳಿ, ವಿಶ್ರಮಿಸಿ, ಫಲಾಹಾರ ಸೇವಿಸಿ' ಎಂದು ಒಂದು ಮರಿ ವಿನಮ್ರವಾಗಿ ಉಲಿಯುತ್ತಿದ್ದರೆ, ಇನ್ನೊಂದರ ಒರಟು ಉದ್ಗಾರವೇ ಬೇರೆ- 'ಹಿಡಿಯಿರಿ, ಹೊಡೆಯಿರಿ, ಕೊಲ್ಲಿರಿ,' ಎಂದು. ನಮ್ಮ ನಡೆ-ನುಡಿ ಕೂಡ ರೂಪುಗೊಳ್ಳುವುದು ನಮ್ಮ ಮನಸ್ಸಿಗೆ ದೊರಕುವ ಸಂಸ್ಕಾರದ ಪರಿಣಾಮ.

ಮನಸ್ಸಿಗೆ ತನ್ನದೆನ್ನುವುದು ಏನೊಂದು ಇಲ್ಲವೆಂದೇ ಹೇಳಬೇಕು. ಇಂದ್ರಿಯಗಳ ಮುಖಾಂತರ ಹೊರಗಣ ವಸ್ತುಗಳಿಂದ ಭಿನ್ನ ಭಿನ್ನವಾದ ಭಾವನೆಗಳನ್ನು ಎರವಲು ಪಡೆದುಕೊಂಡು ಅದು ಹಲವು ಬಗೆಯಾಗಿ ನಡೆದುಕೊಳ್ಳುತ್ತದೆ. ಬಾಹ್ಯ ವಸ್ತುಗಳ ಸಂಸ್ಪರ್ಶದಿಂದ ಉಂಟಾಗುವ ಶೀತ-ಉಷ್ಣ, ಸುಖ-ದುಃಖ, ಮಾನ-ಅಪಮಾನ, ನಿಂದಾ-ಸ್ತುತಿಗಳಂತಹ ಅನಿಸಿಕೆಗಳೆಲ್ಲ ಒಮ್ಮೆ ಬರುತ್ತವೆ, ಮತ್ತೊಮ್ಮೆ ತೆರಳುತ್ತವೆ. ಅವೆಲ್ಲ ಅಸ್ಥಿರವಾದವುಗಳು. ವಿವೇಕವಂತನು ಅವುಗಳನ್ನೆಲ್ಲ ಸಮತ್ವದಿಂದ ಸಹಿಸಿಕೊಳ್ಳಲು ಸಮರ್ಥವಾಗುವಲ್ಲಿ ಆತನ ಚಿತ್ತವೇ ಪ್ರಧಾನ ಪಾತ್ರವನ್ನು ವಹಿಸುತ್ತದೆ. ಎಂತಲೆ ಮಾನವನಿಗೆ ಮನವೇ ಮಿತ್ರ; ಮನವೇ ಶತ್ರು!

ಋಗ್ವೇದದ ಹೆಸರಾಂತ ಪುರುಷಸೂಕ್ತದಲ್ಲಿ 'ಸಾಸಿರ ಶಿರಗಳ, ಸಾಸಿರ ಕಂಗಳ, ಸಾಸಿರ ಚರಣಂಗಳ' ಆದಿ ಪುರುಷನ ಮನದಿಂದ ಚಂದ್ರನು ಉದಿಸಿ ಬಂದನೆಂದು ಬಣ್ಣಿಸಲಾಗಿದೆ. 'ಚಂದ್ರಮಾ ಮನಸೋ ಜಾತಶ್ಚಕ್ಷೋಃ

ಸೂರ್ಯೋ ಜಾಯತ' ಚಂದಿರನು ತನ್ನ ಶೀತಲ ಕಾಂತಿಯನ್ನು ಆ ವಿಶ್ವಪುರುಷನ ಮಹಾಮನಸ್ಸಿನಿಂದ ಪಡೆದಿರಬೇಕು. ಆವನಲ್ಲಿದೆ ಎನ್ನಲಾಗುವ 'ಅಮೃತ ಕುಂಭ'ವು ಆ ವಿಶ್ವಾತ್ಮನ ಮನವೆಂಬ ತಿಳಿಗೊಳದಿಂದ ಹೊರಹೊಮ್ಮಿರಲು ಸಾಕು.

ನಮ್ಮ ಮನವೂ ಅಂತಹ ತಿಳಿಗೊಳದಂತಿರಬೇಕು. ಸುತ್ತೆಲ್ಲ ಆಹ್ಲಾದಕರವಾದ ಶೀತಲ ಕಾಂತಿಯನ್ನು ಸೂಸುವಂತಿರಬೇಕು. ಚಂದ್ರಮನಲ್ಲಿರುವ ಸುಧೆಯನ್ನು ಸೇವಿಸಿ ಸುರಗಣ ಸಂತಸ ಪಡುವಂತೆ ನಮ್ಮ ಮನ ಕೂಡ ತನ್ನ ಅಮೃತ ಸಮಾನವಾದ ಸುವಿಚಾರದಿಂದ ಸುತ್ತಣ ಜನಕ್ಕೆ ತಣಿಯನ್ನು ಉಣಿಸುವಂತಿರಬೇಕು. ಈ ತೆರನಾಗಿ ಅಂತರಂಗ-ಬಹಿರಂಗಗಳೆರಡರಲ್ಲೂ ಶುಚಿತ್ವ ಸಾಧಿಸಿದಾಗಲೆ ನಮ್ಮ 'ದೇಹವೇ ದೇಗುಲ'ವಾಗಬಲ್ಲುದು. ಆಗತಾನೆ ಹೃದಯ 'ಈಶ್ವರ ನಿಲಯ'-ವಾಗಲು ಅರ್ಹವಾಗುವುದು.

ದುಡಿದ ದೇಹೇಂದ್ರಿಯಗಳಿಗೆ ನಿದ್ರಿಸಿ ದಣಿವಾರಿಸಿಕೊಳ್ಳುವ ಹವಣಿಕೆ, ಮನಕ್ಕೂ ವಿಶ್ರಮಿಸುವ ಬಯಕೆ. ಆದರೆ ಅದು ನಿದ್ದೆ ಹೋದರೂ ಅದರ ಒಂದು ಭಾಗ ಕೆಲಸ ಮಾಡುತ್ತಲೇ ಇರುತ್ತದೆ. ಅನುದಿನ ಕಂಡುದುದನ್ನು, ತನ್ನ ಕೋಶದಲ್ಲಿ ಕೂಡಿಟ್ಟುದನ್ನು ನೆನಪಿಸಿಕೊಂಡು ಹಲವು ಸಾದೃಶ್ಯಗಳೊಂದಿಗೆ, ವೈಷಮ್ಯಗಳೊಂದಿಗೆ, ಕನಸಿನ ಲೋಕದಲ್ಲಿ ವಿಹರಿಸುತ್ತದೆ. ''ತಿರುಕನೋರ್ವನೂರ ಮುಂದೆ ಮುರುಕು ಧರ್ಮಶಾಲೆಯಲ್ಲಿ ಒರಗಿರುತ್ತಲಿರಲು'' ಒಂದು ಕನಸು ಕಂಡನಂತೆ. ಸತ್ತುಹೋದ ಪುರದ ರಾಜನಿಗೆ ವರಕುಮಾರರಿಲ್ಲದಿರಲು ಪಟ್ಟದಾನೆ ಆ ತಿರುಕನ ಕೊರಳಿಗೆ ಮಾಲೆ ಹಾಕಿತಂತೆ. ಊರ ದೊರೆಯಾಗಿ ಪರಿಪರಿಯ ಐಸಿರಿಯ ಮೆರೆಯುವಷ್ಟರಲ್ಲಿಯೇ ಕನಸು ಒಡೆಯುತ್ತದೆ. ಹಾಯ್! ಮತ್ತೆ ಮುರುಕು ಧರ್ಮಶಾಲೆಯಲ್ಲಿ ತಾನು! ಹತ್ತಿರವಿದ್ದ ತಿರುಪೆಯ ಪಾತ್ರೆ ಕಂಡು ಮರುದಿನ ಭಿಕ್ಷೆ ಬೇಡಲು ಹೋಗಬೇಕಲ್ಲ-ಎಂದು ನೆನೆದು ಒಂದೆಡೆ ವ್ಯಥೆ, ಇನ್ನೊಂದೆಡೆ ನಾಚಿಕೆ! ಸ್ವಪ್ನ ಸುಖದ ಅನುಭವವೇ ಇಂಥದು.

ಒಮ್ಮೊಮ್ಮೆ ಕನಸು ನನಸಾಗುವುದು; ಅದೇನು ಕಾಕತಾಲೀಯವೋ? ಬಯಕೆಯ ಬಲವತ್ತರ ಪರಿಣಾಮವೊ? ತಲೆ-ಕಾಲಿಲ್ಲದ ಕನಸುಗಳೇ ಹೆಚ್ಚು. ಕನಸು ಕಾಣುವಾಗ ಮಾತ್ರ ವಾಸ್ತವಿಕ ಲೋಕದಲ್ಲಿದ್ದಂತೆಯೇ ಅನಿಸಿಕೆ. 'ಸ್ವಪ್ನಗಜ' ಎಂಬುದು ಪ್ರಾತಿಭಾಸಿಕ ಸತ್ಯ ತಾನೆ! ಮನಸ್ಸಿನ ಸಾಮರ್ಥ್ಯಕ್ಕೆ ಇದೊಂದು ನಿದರ್ಶನವಷ್ಟೆ.

ಇರುಳು ಕಾಣುವ ಕನಸಷ್ಟೇ ಸಾಲದೆನ್ನುವಂತೆ ಹಗಲುಗನಸು ಕಾಣುವ ಚಪಲ ಈ ಮನಸ್ಸಿಗೆ. ಕಲ್ಪನೆಯ ಗರಿಗೆದರಿ ಎಲ್ಲೆಲ್ಲಿಗೋ ಹಾರುತ್ತದೆ. ಎಂಥೆಂಥದೋ ವೈಭವದಲ್ಲಿ ಮೆರೆಯುತ್ತಿದ್ದ ಶೇಖ ಮಹಮ್ಮದ ವಾಸ್ತವ ಲೋಕಕ್ಕೆ ಇಳಿದುದು ತಾನೇ ತನ್ನ ಕಾಲಿನಿಂದ ಒದೆದ ಪಿಂಗಾಣಿ ಪಾತ್ರೆಗಳು 'ಫಡಲ್ ಭಡಲ್ ಎಂದು ಪುಡಿ ಪುಡಿಯಾದಾಗಲೆ. ತನ್ನ ಮೂರ್ಖತನಕ್ಕಾಗಿ ಪರಿತಪಿಸುವುದೊಂದೇ ಬಾಕಿ ಅವನಿಗೆ. ಹಗಲುಗನಸು ಗೈದ ಹಗರಣ ಇದಲ್ಲ!

ಹಾಲು ಮಾರಲೆಂದು ತಲೆಯ ಮೇಲೆ ಹಾಲಿನ ಕೊಡ ಹೊತ್ತು ನಡೆಯುತ್ತಿದ್ದಂತೆಯೆ ತನ್ನ ಚೆಲುವಿಕೆಗೆ ಮನಸೋತು ಮದುವೆಯಾಗಲು ಹಾತೊರೆಯುವ ತರುಣರಿಗೆ ಕಲ್ಪನಾ ಲೋಕದಲ್ಲಿ 'ಒಲ್ಲೆ! ಒಲ್ಲೆ!!' ಎನ್ನುವ ಭರದಲ್ಲಿ ನಿಜಕ್ಕೂ ಕತ್ತು ಅಲ್ಲಾಡಿಸಬೇಕೆ ಆ ಗವಳಗಿತ್ತಿ ರಾಧೆ? ಪರಿಣಾಮ-ಕೊಡ ಹಾಲು ಹುಡಿಯ ಪಾಲು! ಆಸೆಯ ಕುದುರೆಯನ್ನು ಲಂಗುಲಗಾಮಿಲ್ಲದೆ ಸವಾರಿ ಮಾಡುವ ಮನಸ್ಸು ಎಂತಹ ಅನಾಹುತಕ್ಕೆ ಔತಣ ನೀಡಿತಲ್ಲವೆ! ಸಂಸ್ಕೃತದಲ್ಲಿ 'ಸು' ಎಂಬ ಪ್ರತ್ಯಯ ಸಾಧುತ್ವದ ಸಂಕೇತ. ಅದನ್ನು ಸೇರಿಸಿದ ಶಬ್ದಕ್ಕೆ ಒಳ್ಳೆಯತನದ ಪದವಿ. 'ಮುಹೂರ್ತ'ವು 'ಸುಮುಹೂರ್ತ'ವಾಗಿ ಜನರು 'ಸುಜನ'ರಾಗಿ 'ಉಕ್ತಿ' (ನುಡಿ) 'ಸೂಕ್ತಿ'ಯಾಗಿ ಪ್ರಶಸ್ತಿಯ ಪಟ್ಟವೇರುತ್ತವೆ. ಹಾಗೆಯೆ 'ಮನ'ವು 'ಸುಮನ'ವಾಗಿ ಹೂವನ್ನು ಹೋಲುತ್ತದೆ. ಪರಿಮಳ ಸೂಸುವ ಹೂವು ರಸಗ್ರಾಹಿಯಾದ ದುಂಬಿಗೆ ಔತಣವಿತ್ತು, ಸುಮಧುರ ಮಕರಂದವನುಣಿಸಿ ತಣಿವು ನೀಡುತ್ತದೆ. 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ ' ಎಂಬ ಭವಭೂತಿಯ ನುಡಿಯಂತೆ ಶ್ರೀರಾಮನಂತಹ .ಲೋಕೋತ್ತರ ಮನಸ್ಸು ವಜ್ರಕ್ಕಿಂತ ಕಠೋರ, ಮತ್ತೊಮ್ಮೆ ಹೂವಿಗಿಂತ ಮೃದು. ಹೂವಿಗಿಂತ ಹಗುರಾಗಬಲ್ಲ ಮನದ ಮಹಿಮೆಯನ್ನು ಅರಿಯುವುದು ಹಗುರಾದ ಮಾತಲ್ಲ.

• ಶ್ರೀನಿವಾಸ ತೋಫಖಾನೆ

ನೀಳ್ಗತೆ

ರಜನಿ ಕೊಟ್ಟ ಮಂಗಳೂರು ಮಲ್ಲಿಗೆ

• ಶಾಂತಾರಾಮ ಸೋಮಯಾಜಿ



ಕೆಲ ವರ್ಷಗಳ ಹಿಂದೆ, ಒಂದು ಬೇಸಿಗೆ ರಜೆಯಲ್ಲಿ, ನಾನು ನಮ್ಮ ಇಬ್ಬರು ಮಕ್ಕಳನ್ನು ಕಟ್ಟಿಕೊಂಡು ತವರು ಮನೆಗೆ ಹೋಗಿದ್ದೆ. ಆನಂದನಿಗೆ ಏಳೋ ಎಂಟೋ ವರ್ಷ ಇದ್ದಿರಬೇಕು. ಗೀತಾ ಅವನಿಗಿಂತ ಮೂರುವರ್ಷ ಎರಡು ತಿಂಗಳಿಗೆ ಚಿಕ್ಕವಳು.

ಅಪ್ಪ ಸಾಲ ಮಾಡಿ ಕಟ್ಟಿಸಿ, ನನ್ನ ಹೈಸ್ಕೂಲಿನ ಕೊನೇ ವರ್ಷದಲ್ಲಿ ಒಕ್ಕಲು ಮಾಡಿಸಿದ ಮನೆ; ಒಂದು ಪಕ್ಕಿ ಗೂಡಿನಷ್ಟೇ ಚಿಕ್ಕದಾದರೂ ನನ್ನ ಪರಿವಾರಕ್ಕೆ ಒಂದು ರೂಮು ಯಾವಾಗಲೂ ಖಾಲಿಯಿದ್ದೇ ಇರುತ್ತಿತ್ತು. ನುಸಿಬಲೆಯಿಂದ ಹಿಡಿದು ತಲೆ ಬಾಚಲು ಬಾಚಣಿಕೆ, ಕನ್ನಡಿಯವರೆಗೆ ಎಲ್ಲವನ್ನೂ ಅಮ್ಮ ರೂಮಿನೊಳಗೆ ಸಿಲ್ಕ್ ಸೀರೆಯಂಗಡಿಯಂತೆ ಸುಂದರವಾಗಿ ಜೋಡಿಸಿಟ್ಟಿರುತ್ತಿದ್ದಳು. ಕಿಟಕಿಯ ಪರದೆಯನ್ನು ಸ್ವಚ್ಛ ಮಾಡಿ, ಜೇಡರ ಬಲೆಗಳನ್ನು ಒರೆಸಿ ತೆಗೆದು,

ಮಕ್ಕಳನ್ನು ದೇವರಂತೆ ನೋಡಿಕೊಳ್ಳುತ್ತಿದ್ದ ರಜನಿಗೆ ಮದುವೆಯೆ ಇಲ್ಲವೆಂದರೆ! ದೇವರು ಹೀಗೂ ಮಾಡಬಹುದೆ? ಅದು ನ್ಯಾಯವೆ?

ಅವಳೇ ಕಸೂತಿ ಮಾಡಿದ, ಹಾಲಿನಂತೆ ಬಿಳಿ ಮೈಯ ತಲೆದಿಂಬನ್ನು ಗೀತಾಳಿಗೆಂದೇ ಪ್ರತ್ಯೇಕವಾಗಿ ಬೆಡ್‌ಮೇಲೆ ಇಟ್ಟಿರುತ್ತಿದ್ದಳು.

ಮನೆಯ ಬಲದಿಕ್ಕಿನ ದೊಡ್ಡ ಮನೆಯಲ್ಲಿರುತ್ತಿದ್ದುದು ಮಕ್ಕಳ ಡಾಕ್ಟರು. ಅವರ ಹೆಸರು ಚಂದ್ರಶೇಖರ ಅಥವಾ ರಾಜಶೇಖರ ಇವೆರಡರಲ್ಲಿ ಒಂದಾಗಿರಬೇಕು. ಆದರೂ ನಾವೆಲ್ಲಾ ಅವರನ್ನು ಕರೆಯುತ್ತಿದ್ದುದು ಡಾಕ್ಟರ್ ಮಾವನೆಂದೇ. ಅಗಲ ಕಂಬಗಳ ಅವರ ಪೋರ್ಟಿಕೋದಲ್ಲಿ ಯಾವಾಗಲೂ ಒಂದು ಹಸಿರು ಬಣ್ಣದ ಅಂಬಾಸಿಡರ್ ಕಾರು ನಿಂತಿರುತ್ತಿತ್ತು. ಅವರದನ್ನು ಉಪಯೋಗಿಸುತ್ತಿದ್ದುದು ಬಹಳ ಕಡಿಮೆ ಏಕೆಂದರೆ ತಮ್ಮ ಕ್ಲಿನಿಕ್‌ಗೆ ಅವರು ಹೋಗಿ ಬರುತ್ತಿದ್ದುದು ಸಾಮಾನ್ಯವಾಗಿ ಸ್ಕೂಟರ್ ಮೇಲೆಯೆ.

ಆ ದಿನ ನಾನೂ ಮಕ್ಕಳೂ ರೇಲ್ವೆ ಸ್ಟೇಶನ್ನಿನಿಂದ ಆಟೋದಲ್ಲಿ ಕೂತು ಮನೆ ಮುಂದೆ ಇಳಿದಾಗ, ಬಾಯನ್ನು ಆಕಳಿಸಿಕೊಳ್ಳುತ್ತಾ, ಕಣ್ಣನ್ನು ಉಜ್ಜಿಕೊಳ್ಳುತ್ತಾ ಆಟೋಗೆ ತಾಗಿ ನಿಂತುಕೊಂಡ ಆನಂದ, ಡಾಕ್ಟರ್ ಮಾವನ ಮನೆ ಕಡೆ ನೋಡಿ, "ಅದು ಡಾಕ್ಟರ್ ಮಾಮನ ಮನೆಯಲ್ವಾ?" ಎಂದು ಕೇಳಿದ. "ನೆನಪುಂಟಾ ಇನ್ನೂ ನಿಂಗೆ?" ಎಂದು ಕೇಳಿದೆ. ನಾವು ವರ್ಷಕ್ಕೊಮ್ಮೆಯೋ ಎರಡು ವರ್ಷಕ್ಕೊಮ್ಮೆಯೋ ಊರಿಗೆ ಬರುತ್ತಿದ್ದರೂ ಆನಂದನ ಪುಟ್ಟ ಹೃದಯದ ಮೇಲೆ ಡಾಕ್ಟರ್ ಮಾವ ಮತ್ತು ಅವರ ಮನೆ ತುಂಬಾ ಪ್ರಭಾವ ಬೀರಿತ್ತು. ಅದಲ್ಲದೆ ಆನಂದನಿಗೆ ಗೀತಾಳಿಗಿಂತ ಹೆಚ್ಚು ನೆನಪಿನ ಶಕ್ತಿ, ಓದು ಬರಹದಲ್ಲಿ ಆಲಸಿಯಾದರೂ ಅವ ಕಂಡದ್ದನ್ನು ಕೇಳಿದ್ದನ್ನು ಎಂದಿಗೂ ಮರೆಯಲಾರ.

ಅಷ್ಟರಲ್ಲಿ ಗೀತಾ ಕೇಳಿದಳು- "ಚಾಕಲೇಟ್ ತಂಬಿಗೆ ಉಂಟಾ?" ನಾನು ನಗುತ್ತಾ ತಲೆಯಾಡಿಸಿದೆ.

ಡಾಕ್ಟರ್ ಮಾವನ ಲಿವಿಂಗ್ ರೂಮಿನಲ್ಲಿ ಬೇಕಾದಷ್ಟು ಫರ್ನಿಚರ್‌ಗಳಿರುತ್ತಿದ್ದುವು. ಫರ್ನಿಚರ್‌ಗಳು, ಟೀವಿ, ರೇಡಿಯೋ, ಹೂ ಗಿಡ, ಬುಕ್ ಶೆಲ್ಫ್, ಪೈಂಟಿಂಗ್, ಮಾಲೆ ಹಾಕಿದ ಈಶ್ವರನ ಚಿತ್ರ..... ಇವಲ್ಲದೆ, ಮಕ್ಕಳ ಕೈಗೆಟುಕುವಷ್ಟು ಎತ್ತರದ ಕಪ್ಪು ಮರದ ಶೆಲ್ಫಿನ ಮೇಲೆ, ಒಂದು ಬೆಳ್ಳಿ ತಂಬಿಗೆಯೊಳಗೆ ಯಾವಾಗಲೂ ಚಾಕಲೇಟ್ ಇಟ್ಟಿರುತ್ತಿದ್ದರು. ಯಾರೂ, ಯಾವಾಗಲಾದ್ರೂ ಕೈ ಹಾಕಿ ಚಾಕಲೇಟ್ ತೆಗೆದು ನಾಲಿಗೆಗೆ ಅಂಟಿಸಬಹುದಿತ್ತು. ಚಾಕಲೇಟ್‌ನ ಬಣ್ಣದ ರ್‍ಯಾಪರ್ ಬಿಸಾಡಲು ಅಲ್ಲೇ ಮೂಲೆಯಲ್ಲಿ ಒಂದು ಚಿಕ್ಕ ಹಿತ್ತಾಳೆ ಬಾಲ್ದಿ ಇಟ್ಟಿರುತ್ತಿದ್ದರು.

ಇನ್ನೂ ಅದೇ ಮನೆಯನ್ನು ನೋಡುತ್ತಾ ನಿಂತಿದ್ದ ಆನಂದ ಕೇಳಿದ- "ಫಿಶ್‌ಟ್ಯಾಂಕ್ ಉಂಟಾ ಮಾಮೀ?"

ಡಾಕ್ಟರ್ ಮಾವನ ಲಿವಿಂಗ್‌ರೂಮಿನ ಒಂದು ಕೊನೆಯಲ್ಲಿ, ಕಿಟಕಿಯ ಕೆಳಗೆ, ಸುಮಾರು ಐದಡಿ ಅಗಲದ ಫಿಶ್‌ಟ್ಯಾಂಕ್ ಇರುತ್ತಿತ್ತು. ಡಾಕ್ಟರ್ ಮಾವ ಕ್ಲಿನಿಕ್‌ನಿಂದ ಮನೆಗೆ ಬಂದಾಗಲೆಲ್ಲಾ ಮಕ್ಕಳ ಕೈಯಿಂದ ಹಳದಿ, ಕೆಂಪು ಮೀನುಗಳಿಗೆ ಊಟ ಹಾಕಿಸುತ್ತಿದ್ದರು.

"ಇರ್ಬೇಕು"ಎಂದು ಉತ್ತರಿಸಿದ ನಾನು, ಆ

ಮನೆ ಕಡೆ ತಿರುಗಿ ನೋಡಿದರೆ, ಪೋರ್ಟಿಕೋದಲ್ಲಿರ ಬೇಕಾಗಿದ್ದ ಹಳೆ ಅಂಬಾಸಿಡರ್ ಕಾರು ಕಂಡುಬರಲಿಲ್ಲ. ಅದರ ಹಿಂದಿನ ಅಗಲ ಚಾವಡಿಯಲ್ಲಿ ಹುತ್ತದಂತೆ ತುಂಬಿಕೊಂಡಿರುತ್ತಿದ್ದ ಹೂಗಿಡಗಳೂ ಹಸಿರು ಗಿಡಗಳೂ ಮಾಯವಾಗಿ ಅದರ ಬದಲು ಒಂದು ಹಳೆ ಬೆತ್ತದ ಕುರ್ಚಿ ಕಂಡುಬಂತು.

ಅಷ್ಟರಲ್ಲಿ ನಮ್ಮ ಮನೆಯ ಮೆಟ್ಟಿಲ ಮೇಲೆ ಬಂದು ನಿಂತುಕೊಂಡ ಅಮ್ಮ "ಬಾರೇ ಗೀತಾ, ಇನ್ನೂ ನಿದ್ದೆಯಾ?" ಎಂದು ಕೇಳಿದಾಗ, ನನ್ನ ಚೂಡಿದಾರಕ್ಕೆ ಮೈ ಒರೆಸಿಕೊಂಡು ನಿಂತುಕೊಂಡ ಗೀತಾ ನಾಚಿಕೆಯಿಂದ ತಲೆಯಾಡಿಸಿಕೊಂಡು, ಒಂದು ಕೈಯನ್ನು ಬಾಯಲ್ಲಿಟ್ಟುಕೊಂಡು ಮುಂದೆ ಹೋದಳು.

ಮನೆಯೊಳಗೆ ಬರುತ್ತಿದ್ದಂತೆ ನಾನು ಅಮ್ಮನಲ್ಲಿ ಕೇಳಿದೆ-

"ಡಾಕ್ಟರ್ ಮಾವ ಇಲ್ವಾ?"

"ಹೋ, ನಿಂಗೆ ಬರೀಲಿಕ್ಕೆ ಮರ್ತೇ ಹೋಯ್ತು ನೋಡು, ಲಕ್ಷ್ಮಿ ಆಂಟಿಗೆ ಸೌಖ್ಯವಿಲ್ಲ. ಅದಕ್ಕೆ ಗಂಡ-ಹೆಂಡ್ತಿ ಇಬ್ರು ಮಗನ ಮನೆಗೆ ಹೋಗಿ ಅಲ್ಲೇ ಇದ್ದಾರೆ."

ಡಾಕ್ಟರ್ ಮಾಮನ ಹೆಂಡತಿಯ ಹೆಸರು ಲಕ್ಷ್ಮಿ. ತುಂಬಾ ಗಂಭೀರ ವ್ಯಕ್ತಿತ್ವ. ಮಾತು ತುಂಬಾ ಕಡಿಮೆ. ಮುಖದಲ್ಲಿ ಬಿಗಿ. ಡಾಕ್ಟರರ ಹೆಂಡತಿ ಎಂಬ ಅಹಂಕಾರವೂ ಇದ್ದುದರಿಂದ ನಾವು ಅವರಲ್ಲಿ ಬೆರೆಯುತ್ತಿದ್ದುದು ತುಂಬಾ ಕಡಿಮೆ.

ನಾನು ಮತ್ತೆ ಅಮ್ಮನಲ್ಲಿ ಕೇಳಿದೆ- "ಎಲ್ಲಿಗೆ, ಭುವನೇಶ್ವರಕ್ಕಾ?"

"ಹೌದು, ರೈಲಿನಲ್ಲಿ ಕಷ್ಟ ಆಗ್ತದಂತ ವಿಮಾನದಲ್ಲೇ ಮಗ ಕರೆದುಕೊಂಡು ಹೋದ."

ಡಾಕ್ಟರ ಮಾಮನ ಇಲ್ಲಿನ ಕ್ಲಿನಿಕ್‌ಅನ್ನು ಬೇರೆ ಯಾರಿಗೋ ವಹಿಸಿಕೊಟ್ಟು ಅವರಿಲ್ಲಿಂದ ಹೊರಟು ಹೋದುದಾಗಿ ಅಮ್ಮ ಹೇಳಿದಳು. "ಮತ್ತೆ ಈ ಮನೆ?" ಎಂದು ನಾನು ವಿಚಾರಿಸಿದಾಗ, ಉಡುಪಿ ಕಡೆಯವರೊಬ್ಬರು ಬಂದು ಬಾಡಿಗೆಗೆ ಇರುವುದಾಗಿ ತಿಳಿಸಿದಳು. ಮನೆಯನ್ನು ಬಾಡಿಗೆ ಹಿಡಿದು ಎರಡು ಮೂರು ತಿಂಗಳಾಯ್ತು; ಮನೆಯಲ್ಲಿರುವುದು ತಂದೆ, ಮಗ, ಮತ್ತು ಮಗಳು ಮಾತ್ರ; ಮಗಳು ಮನೆಯಲ್ಲೇ ಇರುವುದು; ಪ್ರಾಯ ಆಗಿದೆ ಅವಳಿಗೆ; ಮಗ ಇಲ್ಲಿ ಇಂಜಿನಿಯರಿಂಗ್ ಕಾಲೇಜಿಗೆ ಹೋಗ್ತಿದ್ದಾನೆ; ತಾಯಿ ತೀರಿ ಹೋಗಿ ಸ್ವಲ್ಪ ವರ್ಷ ಆಯ್ತಂತೆ. ಮಗಳದ್ದು ಮದ್ವೆ ಮಾತ್ರ ಇನ್ನೂ ಆಗ್ಲಿಲ್ಲ.... ಎಂದೆಲ್ಲಾ ವಿವರಿಸಿದಳು ಅಮ್ಮ.

"ತಂದೆ ಏನು ಮಾಡ್ತಿದ್ದಾರೆ?" ಎಂದು ನಾನು ಪ್ರಶ್ನೆ ಹಾಕಿದಾಗ, "ಈಗಷ್ಟೆ ರಿಟೈರ್ಡ್ ಆಗಿ ಬಂದಿದ್ದಾರಂತೆ ಕಾಣ್ತದೆ, ಹೊನ್ನಾವರದಲ್ಲೋ ಎಲ್ಲೋ ಲೆಕ್ಚರರ್ ಆಗಿದ್ರಂತೆ ಕಾಣ್ತದೆ, ಮಗನ ಕಾಲೇಜು ವಿದ್ಯಾಭ್ಯಾಸಕ್ಕಂತೆ ಇಲ್ಲಿಗೆ ಬಂದಿದ್ದಂತೆ," ಎಂದು ಹೇಳಿದಳು.

ಅಷ್ಟರಲ್ಲಿ ಮಕ್ಕಳ ನಿದ್ದೆಯೆಲ್ಲಾ ಮಾಯವಾಗಿ, ಪೈಪಿನ ತುದಿಯನ್ನು ಕೈಯಲ್ಲಿ ಆಡಿಸಿಕೊಂಡು ತೆಂಗಿನ ಮರಗಳ ಬುಡಕ್ಕೆ ನೀರು ಬಿಡುತ್ತಿದ್ದ ಅಪ್ಪನ ಹಿಂದೆ ಅವರಿಬ್ಬರೂ ಹೋದರು. ನಾನು ಟಾಯ್‌ಲೆಟ್‌ಗೆ ನಡೆದೆ. ಆಮೇಲೆ ಸ್ನಾನ ಮುಗಿಸಿ, ಅಮ್ಮ ಹೊಸದಾಗಿ ತಂದಿರಿಸಿದ್ದ ಪಾಂಡ್ಸ್ ಪೌಡರನ್ನು ಬೆನ್ನಿಗೂ ತೋಳಿಗೂ ಸವರಿ, ಅಡಿಗೆ ಕೋಣೆಗೆ ಬಂದು, "ಏನಾದ್ರೂ ಮಾಡ್ಬೇಕಾ," ಎಂದು ತಿಂಡಿ ತಯಾರಿಗೆ ಸಹಾಯ ಬೇಕೋ ಎಂದು ವಿಚಾರಿಸಿದೆ, ಅಮ್ಮನಲ್ಲಿ. "ಎಂತದೂಬೇಡ, ಅವುಗಳಿಗೆ ಟಾಯ್‌ಲೆಟ್‌ಗೆ ಬೇಕಿದ್ರೆ ಕರಕೊಂಡು ಹೋಗು," ಎಂದು ಅಮ್ಮ ಹೇಳುತ್ತಿರುವಂತೆ, ನಾಟಕದ ಪರದೆ ಸರಿಸಿ ಬರುವ ಪಾತ್ರಧಾರಿಗಳಂತೆ, ಗೀತಾ, ಆನಂದ ಇಬ್ಬರೂ ಹಿಂದಿನ ಬಾಗಿಲಿಂದ ಮನೆಯೊಳಗೆ ಬಂದರು.

ಇಬ್ಬರ ಮುಖಗಳೂ ಸೂರ್ಯಕಾಂತಿಯಂತೆ ಅರಳಿಕೊಂಡಿದ್ದವು. ಬಾಯನ್ನು ಚೂರೇ ಅಗಲಿಸಿಕೊಂಡು, ಕಣ್ಣನ್ನು ಓರೆಮಾಡಿಕೊಂಡು ಹೆಮ್ಮೆಯಿಂದ ಒಳಗೆ ಕಾಲಿಟ್ಟ ಇಬ್ಬರ ಕೈಮುಷ್ಟಿಯೊಳಗೆ ಏನೋ ಭದ್ರವಾಗಿ ಹಿಡಿದುಕೊಂಡಂತೆ ಕಂಡಿತು. ಬೇಡುವವರಂತೆ ಕೈ ಮುಂದೆ ಹಿಡಿದು, ಲೋಕವನ್ನೆ ಗೆದ್ದವರಂತೆ ಹರ್ಷಪಡುತ್ತಾ ಇಬ್ಬರೂ ನನ್ನ ಮತ್ತು ಅಮ್ಮನ ಪಕ್ಕ ಬಂದು ನಿಂತುಕೊಂಡ ಮೇಲೆ ಗೀತಾ ಹೇಳಿದಳು- "ನೋಡು ಮಾಮೀ ನೋಡು, ಎಷ್ಟು ಚಂದವುಂಟಲ್ವಾ, ಚಂದ........"

** ** **

ಅವಳು ಚಂದ ಎಂದು ರಾಗ ಎಳೆಯುವುದನ್ನು ಕೇಳಿ ಅಚ್ಚರಿಯಿಂದ ನೋಡಿದೆ. ಅವರಿಬ್ಬರ ಕೈಯೊಳಗಿದ್ದುದು, ತೆಂಗಿನ ಹಸಿರು ಗರಿಗಳನ್ನು ನೇಯ್ದು ಮಾಡಿದ ಪುಟ್ಟ ಗಿಳಿ. ಗಿಳಿಯ ಕೊಕ್ಕಿಗೆ ಲಿಪ್‌ಸ್ಟಿಕ್ ಹಚ್ಚಲಾಗಿದ್ದು ಅದು ಕೆಂಪಗೆ ಹೊಳೆಯುತ್ತಿತ್ತು. ಕಣ್ಣುಗಳಿಗೆ ಕಪ್ಪು ಬಿಂದಿಯನ್ನು ಅಂಟಿಸಲಾಗಿತ್ತು. ಅಮ್ಮ ಕೇಳಿದಳು-

"ಯಾರು, ರಜನಿ ಆಂಟಿ ಮಾಡಿದ್ದಾ?" ಮಕ್ಕಳು ತುಂಬಾ ಹೆಮ್ಮೆಯಿಂದ ತಲೆಯಾಡಿಸಿಕೊಂಡು ಹೌದೆಂದು ಹೇಳುತ್ತಾ, ಕೈಯಿಂದ ಗಿಳಿಯನ್ನು ಹಾರಿಬಿಡುವಂತೆ ನಟನೆ ಮಾಡುತ್ತಾ ಹೊರಗೆ ಹೊರಟಾಗ ನಾನು ಅಮ್ಮನಲ್ಲಿ ಕೇಳಿದೆ-

"ಯಾರು, ರಜನಿ ಅಂದ್ರೆ?"

"ಅವಳೇ, ಪಕ್ಕದ ಬಿಡಾರದವರ ಮಗಳು, ಅವಳ ಹೆಸರು ರಜನಿ," ಎಂದು ಹೇಳಿದಳು ಅಮ್ಮ. ನಾನು, "ಏನು ಮಾಡ್ತಿದ್ದಾಳೆ?" ಎಂದು ಪ್ರಶ್ನೆ ಹಾಕಿದಾಗ, "ಹೇಳಿದ್ದಲ್ವಾ, ಏನಿಲ್ಲ, ಮನೆಯಲ್ಲೇ ಇದ್ದಾಳೆ. ಅಪ್ಪನಿಗೆ, ತಮ್ಮನಿಗೆ ಅಡಿಗೆ ಮಾಡಿ ಹಾಕುವುದು, ಅಷ್ಟೆ. ಪ್ರಾಯ ತುಂಬಾ ಆಗಿದೆ. ಮದ್ವೆ ಆಗಿಲ್ಲ ಇನ್ನೂ, ಪಾಪದ್ದು" ಎಂದು ಹೇಳಿದಳು. "ಎಷ್ಟು ಪ್ರಾಯ?" ಎಂದು ನಾನು ಕೇಳಿದ್ದಕ್ಕೆ "ಮೂವತ್ತೆರಡಾ ಏನಾ, ಒಟ್ಟು ಮೂವತ್ತಕ್ಕೆ ಮೇಲೆ, ಹಾಗೇ ಕಾಣ್ತಾಳೆ ನೋಡ್ಲಿಕ್ಕೆ" ಎಂದು ಉತ್ತರ ಕೊಟ್ಟಳು ಅಮ್ಮ.

"ಏನು, ನೋಡ್ಲಿಕ್ಕೆ ಚಂದ ಇಲ್ವಾ?" ಎಂದು ನಾನು ಕುತೂಹಲ ಪ್ರದರ್ಶಿಸಿದಾಗ, "ಹಾಗೇನೂ ಇಲ್ಲ, ಸಾಧಾರಣ ಇದ್ದಾಳೆ. ಒಳ್ಳೆ ರೂಪ ಅಂತ ಏನೂ ಅಲ್ಲ, ಆದ್ರೆ ತೆಗೆದುಹಾಕುವ ಹಾಗಿಲ್ಲ. ಬಿಳಿಯಿದ್ದಾಳೆ. ಹುಡುಗಿ ಉದ್ದ, ನಿನಗಿಂತಲೂ ಉದ್ದ, ಮೈ ಸಪೂರ. ತಲೆಯಲ್ಲಿ ಕೂದಲು ಕಮ್ಮಿ. ಕಿವಿ ಸ್ವಲ್ಪ ದೊಡ್ಡದು. ಹಣೆ ಇಷ್ಟೆ ಸಣ್ಣದು.... ಆದ್ರೆ ಚಿಂತಿಲ್ಲ ಹುಡುಗಿ," ಎಂದಳು ಅಮ್ಮ. "ಮತ್ತೇನು ಹಾಗಾದ್ರೆ?" ಎಂದು ನಾನು ಪ್ರಶ್ನೆ ಹಾಕಿದ್ದಕ್ಕೆ "ಎಂಥದಾ? ಹುಡುಗಿಯತ್ರ ಕೇಳಿದ್ರೆ, ಜಾತಕ ಸರಿಯಿಲ್ಲಾಂತ ಕಾಣ್ತದೆ ಆಂಟಿ ಅಂತ ಏನೋ ಹೇಳ್ತದೆ. ಜಾತಕ ಸರಿಯಿಲ್ಲದೆ ಏನು? ಅವಳು ಮದ್ವೆಯಾಗಿ ಹೋಗುವುದು ಅದರ ಅಪ್ಪನಿಗೆ ಇಷ್ಟ ಇಲ್ಲಾಂತ ಕಾಣ್ತದೊ", ಎಂದು ಹೇಳಿದಳು.

"ಅದ್ಯಾಕೆ? ಮನೆಯಲ್ಲಿ ಬೇರೆ ಯಾರೂ ಇಲ್ಲ ಅಂತಲಾ?" ಎಂದು ನಾನು ಕೇಳಿದಾಗ ಅಮ್ಮ- "ಹೌದು. ಅವಳು ಹೋದ್ರೆ ಮನೆಯಲ್ಲಿ ಅನ್ನ ಮಾಡಿ ಹಾಕುವುದು ಯಾರು? ಆ ಗಂಡಸಿಗೆ ಮೈ ಬಗ್ತದಾ?" ಎಂದು ಮುಖದಲ್ಲಿ ಅಸಹ್ಯ ತೋರಿಸಿದಳು. ಆ ಗಂಡಸಿನ ಮೇಲೆ ಅಮ್ಮನಿಗೆ ಗೌರವ ಇದ್ದಂತಿರಲಿಲ್ಲ. "ಯಾಕೆ, ಅವ್ರಿಗೇ ಅಡಿಗೆ ಮಾಡ್ಲಿಕ್ಕಾಗುವುದಿಲ್ವಾ? ರಿಟೈರ್ ಆಗಿ ಮನೆಯಲ್ಲಿ ಕೂತ್ಕೊಂಡು ಇಡೀ ದಿನ ಎಂತ ಮಾಡುವುದು ಅವರು?" ಎಂದು ನಾನು ಕೇಳಿದೆ. "ಹೌದು, ಅವ್ರೆಂತ ಮಾಡ್ತಾರೆ? ಇಡೀ ದಿನ ಈಜಿ ಚೇರಲ್ಲಿ ಮುಂಡುಮೇಲೆ ಮಾಡಿ ಕುತ್ಕೊಂಡು ಕಿಟಕಿಯಿಂದ ಹೊರಗೆ ನೋಡ್ತಾ ಇರ್ತದೆ ಪ್ರಾಣಿ. ತರಕಾರಿ ತರ್ಲಿಕ್ಕೂ ಅವ್ಳೇ ಹೋಗ್ಬೇಕು. ಮನೆಗುಡಿಸುವುದು, ಬಟ್ಟೆ ಒಗೆಯುವುದು, ಅಡಿಗೆ ಮಾಡುವುದು, ಪಾತ್ರೆ ತೊಳೆಯುವುದು...........ಎಲ್ಲಾ ಕೆಲಸ ಹುಡುಗೀದ್ದೆ" ಎಂದು ಅಮ್ಮ ಪುನಃ ಮುಖವನ್ನು ವಿಕಾರ ಮಾಡಿದಳು.

ಅಷ್ಟರಲ್ಲಿ ಹೊರಗಿಂದ ಅಪ್ಪನ ಸ್ವರ ಕೇಳಿಸಿತು- "ಏನೇ, ಇನ್ನೂ ಆಗ್ಲಿಲ್ವಾ ತಿಂಡಿ? ಎಷ್ಟು ಹೊತ್ತು?" ಅಮ್ಮ ನನ್ನನ್ನು ನೋಡುತ್ತಾ- "ಆಯ್ತು ಹೇಳು ಅವ್ರಿಗೆ. ಹಸಿವಾಗ್ತದಂತೆ ಕಾಣ್ತದೆ. ಏನು ಅವಸರ ಇವ್ರಿಗೆ? ಒಂದು ಐದು ನಿಮಿಷ ಹಸಿವು ತಡಕೊಳ್ಳಿಕ್ಕೂ ಆಗುವುದಿಲ್ಲ" ಎಂದು ಹೇಳಿದಾಗ, ನಾನು ನಿಂತಲ್ಲಿಂದಲೇ, "ಆಯ್ತಪ್ಪಾ ಆಯ್ತು. ಎರಡೇ ಮಿನಿಟು," ಪ್ಲೇಟು ತೆಗೆಯುತ್ತಿರುವಂತೆ ಅಮ್ಮ ಹೇಳಿದಳು- "ಆದ್ರೆ ಹುಡುಗಿ ಮಾತ್ರ ತುಂಬಾ ಒಳ್ಳೆಯವಳು. ಮಕ್ಕಳಂದ್ರೆ ಆಯ್ತು. ಅಷ್ಟು ಪ್ರೀತಿ. ಮನೆಗೆ ಬೇಡುವವರ ಮಕ್ಕು ಬಂದ್ರೂ ಸಹ ಮಾತಾಡಿಸದೆ ಕಳುಹಿಸುವುದಿಲ್ಲ ಅವಳು. ಈಗ ಆನಂದ-ಗೀತಾ ಬಂದದ್ದು ನೋಡಿ ತುಂಬಾ ಖುಷಿಯಾಗಿರಬೇಕು ಅವಳಿಗೆ.... ಆದ್ರೆ ಮದ್ವೆ ಆಗ್ಲಿಲ್ಲ ನೋಡು ಇನ್ನೂ, ಪಾಪ. ಅವಳನ್ನು ನೋಡಿದ್ರೆ ಬೇಜಾರಾಗ್ತದೆ." ಅವಳು ಅಷ್ಟು ಹೇಳಿ ಮುಗಿಸುತ್ತಿರುವಂತೆ ಅಪ್ಪನ ಸ್ಲಿಪ್ಪರ್‌ನ ಸಪ್ಪಳ ಹಿಂದಿನ ಬಾಗಿಲ ಆಚೆಯಿಂದ ಕೇಳಿಬಂತು.

** ** **

ಅದೇ ದಿನ ಬೆಳಿಗ್ಗೆ ನಾನು ರಜನಿಯನ್ನು ಭೇಟಿಯಾದೆ. ಬೆಳಿಗ್ಗೆ ತಿಂಡಿ ತಿಂದು ಮುಗಿಯುತ್ತಿದ್ದಂತೆ ಮಕ್ಕಳಿಬ್ಬರೂ ರಜನಿ ಆಂಟಿ ಮನೆಗೆ ಹೋಗ್ತೇವೆ ಎಂದು ಹಟ ಮಾಡತೊಡಗಿದವು. ನನ್ನ ಅಮ್ಮ ಆಗ, "ರಜನಿ ಮನೆಗೆ ಹೋಗ್ಬೇಕಾದ್ರೆ ಮೊದ್ಲು ಸ್ನಾನ ಮಾಡ್ಬೇಕು. ಟ್ರೈನಲ್ಲಿ ಬಂದದ್ದಲ್ವಾ, ಮೈಮೇಲೆ ಎಷ್ಟು ಕೊಳೆಯುಂಟು ನೋಡಿದ್ದೀಯಾ, ಛೀ ವಾಸ್ನೆ, ಬೇಗ ಸ್ನಾನ ಮಾಡಿ ಮತ್ತೆ ಬೇಕಾದ್ರೆ ಹೋಗಿ," ಎಂದು ಹೇಳಿದಾಗ ಅವರಿಬ್ಬರೂ ತಲೆ ಬಗ್ಗಿಸಿಕೊಂಡು ಸ್ನಾನಕ್ಕೆ ರೆಡಿಯಾದರು. ಸ್ನಾನ ಮಾಡಿಸಿ ಡ್ರೆಸ್ ಉಡಿಸಿಯಾದ ಮೇಲೆ, ಗೀತಾ ನನ್ನ ಚೂಡಿದಾರದ ತುದಿಯೆಳೆಯುತ್ತಾ, "ನೀನೂ ಬಾ ಮಾಮೀ, ರಜನಿ ಆಂಟಿಯ

ಲ್ಲಿಗೆ," ಎಂದು ರಾಗ ಎಳೆದಾಗ, ನಾನು ಅಮ್ಮನ ಮುಖ ನೋಡಿದೆ. "ಹೋಗಿ ಬಾ. ಹೋಗಿ ಮಾತ್ನಾಡಿಸಿ ಬಾ," ಎಂದು ಅಮ್ಮ ಹೇಳಿದಾಗ ನಾನು ಆ ಮನೆ ಕಡೆ ಹೊರಟೆ.

ಬೋಳು ಬೋಳು ಕಂಡುಬರುತ್ತಿದ್ದ ಪೋರ್ಟಿಕೋದ ನೆಲದ ಮೇಲೆ ತುಂಬಾ ಬಿಸಿಲು ಬೀಳುತ್ತಿತ್ತು. ಅದರ ಹಿಂದಿನ ಚಾವಡಿಯ ನಡುವೆ ಬಣ್ಣ ಕಳೆದುಕೊಂಡು ಕುಳಿತಿದ್ದ ಬೆತ್ತದ ಉದ್ದ ಕುರ್ಚಿ ಒಂದು ತರ ಅಸಹ್ಯವಾಗಿ ಕಂಡುಬರುತ್ತಿತ್ತು. ಮಕ್ಕಳು ನನಗಿಂತ ಮೊದಲೇ ಒಳಗೆ ಓಡಿದ ಮೇಲೆ ನಾನು ತೆರೆದ ಬಾಗಿಲೆದುರು ನಿಂತುಕೊಂಡೆ. ಒಳಗಿನ ಲಿವಿಂಗ್ ರೂಮಿನ ನಡುವೆ ಬಟ್ಟೆಯ ಈಜಿ ಚೇರ್‌ನಲ್ಲಿ ಒಬ್ಬರು ಮುಂಡುಟ್ಟ, ಬೋಳು ತಲೆಯ, ಕನ್ನಡಕ ಹಾಕಿದ್ದ ದಪ್ಪ ಹುಬ್ಬಿನ ಗಂಡಸೊಬ್ಬರು ಕುಳಿತಿದ್ದರು. ನನ್ನನ್ನು ಕಂಡ ಕೂಡಲೇ ಎದ್ದು ನಿಂತು, ಕನ್ನಡಕ ಸರಿಪಡಿಸಿಕೊಂಡು, ಮುಂಡನ್ನು ಕೆಳಗೆ ಹಾಕಿ- "ಬನ್ನಿ, ಒಳಗೆ ಬನ್ನಿ, ರಜನಿ ಬರ್ತಾಳೆ," ಎಂದು ಹೇಳಿದವರೇ ಮುಂಡಿನ ತುದಿಯನ್ನು ಕೈಯಲ್ಲಿ ಹಿಡಿದುಕೊಂಡು ಮನೆಯೊಳಗೆ ನಡೆದರು. ಅವರ ಒರಟು ಮೀಸೆ ಬಾಯನ್ನೆಲ್ಲಾ ಮುಚ್ಚಿದಂತಿದೆಯಲ್ಲಾ ಎಂದು ನಾನು ಯೋಚಿಸುತ್ತಿದ್ದೆ.

ಹಿಂದೊಮ್ಮೆ ಮ್ಯೂಸಿಯಂಥರ ಕಂಡು ಬರುತ್ತಿದ್ದ ಲಿವಿಂಗ್ ರೂಮು ಈಗ ಕಾಂಡ ತುಂಡಾದ ತೆಂಗಿನ ಮರದಂತೆ ಬೇಸರ ತರಿಸುತ್ತಿತ್ತು. ಎರಡು ಕುರ್ಚಿ, ಒಂದು ಹಳೆ ಮೇಜು, ಮೇಜಿನ ಮೇಲೆ ಹರಡಿಕೊಂಡ ಕೆಲವು ಪುಸ್ತಕಗಳು, ಈಜಿಚೇರ್, ಅದರ ಹತ್ತಿರ ನೆಲದ ಮೇಲೆ ಬಿದ್ದಿದ್ದ ನ್ಯೂಸ್ ಪೇಪರ್ ಮತ್ತು ಬೋಳು ಬೋಳು ಗೋಡೆಗಳು..... ನಾನು ಹಾಗೇ ನಿಂತುಕೊಂಡು ಎದುರಿನ ಕಿಟಕಿಗೆ ತಾಗಿಕೊಂಡು ಇರುತ್ತಿದ್ದ ಫಿಶ್‌ಟ್ಯಾಂಕನ್ನು ನೆನಪಿಸಿಕೊಳ್ಳತೊಡಗಿದೆ.

ಅಷ್ಟರಲ್ಲಿ ಗೀತಾಳ ಕೈ ಹಿಡಿದುಕೊಂಡು, ನನಗಿಂತ ಎರಡು ಮೂರಿಂಚಾದರೂ ಉದ್ದದ, ಸಪೂರ ದೇಹದ ರಜನಿ, ಮನೆಯೊಳಗಿಂದ ಈಚೆ ಬರುತ್ತಾ ಹೇಳಿದಳು "ಬನ್ನಿ, ಒಳಗೆ ಬನ್ನಿ, ಯಾಕಲ್ಲಿ ನಿಂತುಕೊಂಡದ್ದು?" ಅವಳು ನೆಲದಲ್ಲಿ ಬಿದ್ದ ಪೇಪರನ್ನು ಎತ್ತಿಕೊಳ್ಳುತ್ತಿರುವಂತೆ ನಾನು ಒಳಗೆ ನಡೆದು ಕುರ್ಚಿಯನ್ನು ಈಚೆ ಎಳೆದು ಕೂತುಕೊಂಡೆ. ಗೊತ್ತಿದ್ದರೂ ಸಹ, "ರಜನಿಯಲ್ವಾ?" ಎಂದು ನಾನು ಪ್ರಶ್ನೆ ಹಾಕಿದಾಗ, ಅವಳಿಗೆ ತಾಗಿಯೇ ನಿಂತುಕೊಂಡ ಗೀತಾ, ಹಲ್ಲುಕಿರಿಯುತ್ತಾ ರಜನಿಯಲ್ಲಿ ಹೇಳಿದಳು- "ಅದು ನನ್ನ ಅಮ್ಮ" "ಹೌದಾ, ನಂಗೆ ಗೊತ್ತೇ ಇಲ್ಲ", ಎಂದು ತಮಾಷೆ ಮಾಡುತ್ತಾ ರಜನಿ ನಕ್ಕಾಗ, ಅವಳ ಕೆನ್ನೆಗಳು ಸೆಟೆದು ನಿಂತು, ಇವಳ ಮುಖ ಥೇಟ್ ಮಗು ವಿನಹಾಗಿದೆ ಎಂದುಕೊಂಡೆ. ಅದೇ ಶುಭ್ರ ಚರ್ಮ, ಸಂಕೋಚ. ನಾಚಿದಂತೆ ಮುಖ, ಉರುಟು ಗಲ್ಲ, ಕುಣಿಯುವ ಕಣ್ಣುಗಳು. ಇಂಪು ದನಿ ಮುಗ್ಧ ನಡವಳಿಕೆ.....

** ** **

ಮರುದಿನ ಬೆಳಿಗ್ಗೆ ಸುಮಾರು ಒಂಭತ್ತು ಗಂಟೆಗೆ, ತೊಳೆದ ಬಟ್ಟೆಯನ್ನು ಹೊರಗೆ ಆರಿಸಲಿಕ್ಕೆ ಹಾಕಿ ನಾನು ಮನೆಯೊಳಗೆ ಬರುತ್ತಿದ್ದಂತೆ, ರಜನಿಯ ಮನೆಯಿಂದ ಓಡಿಕೊಂಡು ಬಂದ ಮಕ್ಕಳು ನನ್ನೆದುರು ಕುಣಿಯುತ್ತಾ ಕೇಳಿದವು- "ಮಾಮೀ, ನಾವು ರಜನಿ ಆಂಟಿಯೊಟ್ಟಿಗೆ ಮಾರ್ಕೆಟಿಗೆ ಹೋಗಿ ಬರ್ತೇವೆ ಆಯ್ತಾ?"

"ಏನು ಮಾರ್ಕೆಟಿಗಾ?" ಎಂದು ಆಶ್ಚರ್ಯವಾಯ್ತು. 'ಮಾರ್ಕೆಟಿಗೆ ಹೋಗಿ ಬರುವಾ,' ಎಂದು ನಾನೇನಾದರೂ ಕರೆಯಲಿಕ್ಕೆ ಹೋದರೆ ಇಷ್ಟು ದೊಡ್ಡ ಮುಖ ಮಾಡುತ್ತಿದ್ದ ಮಕ್ಕಳು ಈಗ, ಮದುವೆಗೆ ಡ್ರೆಸ್ ಮಾಡಿ ಹೊರಟವರ ಥರ, ಹರ್ಷಪಡುವುದನ್ನು ನೋಡಿ, ಏನಪ್ಪಾ ಹೀಗೆ? ಎಂದು ನನ್ನನ್ನೇ ಪ್ರಶ್ನಿಸಿಕೊಂಡೆ. ಅವರಿಬ್ಬರನ್ನೇ ರಜನಿಯೊಟ್ಟಿಗೆ ಕಳುಹಿಸುವುದು ಹೇಗೆ? ನಿನ್ನೆಯಷ್ಟೇ ಪರಿಚಯವಾದವಳು! ಅದಲ್ಲದೆ ದಾರಿಯಲ್ಲಿ ಮಕ್ಕಳೇನಾದರೂ ಗಲಾಟೆ ಮಾಡಿದರೆ? ಅವರಿಬ್ಬರೊಳಗೆ ಜಗಳ ಶುರುವಾದರೆ? 'ಬೇಡ ಬೇಡ' ಎಂದು ಹೇಳಬೇಕೆಂದು, ಆದರೆ ಯಾವ ರೀತಿ ಹೇಳಿದರೆ ಮಕ್ಕಳಿಗೆ ದುಃಖ ಕಡಿಮೆಯಾದೀತೆಂದು ನಾನು ಯೋಚಿಸುತ್ತಿರುವಂತೆಯೆ ಹಿಂದಿನ ಬಾಗಿಲಲ್ಲಿ ಏನೋ ಸದ್ದಾಯಿತು.

ನಿಂತಲ್ಲಿಂದ ತಿರುಗಿ ನೋಡಿದೆ. ಅಲ್ಲಿ, ಹಸಿರು ಬಾರ್ಡರಿನ ಚೂಡಿದಾರ್ ಮತ್ತು ಶಾಲು ಉಟ್ಟುಕೊಂಡು, ತಲೆಗೂದಲನ್ನು ಸೈಡಿಗೆ ಬಾಚಿ, ಕಿವಿ ಬದಿ ಕೂದಲನ್ನು ಬಳ್ಳಿಯಂತೆ ಹಾರಲು ಬಿಟ್ಟು, ಮೋಹಕವಾಗಿ ನಿಂತುಕೊಂಡಿದ್ದಳು ರಜನಿ. ನಿನ್ನೆ ನಾನು ನೋಡಿದ್ದಕ್ಕಿಂತಲೂ ಎತ್ತರ ಕಂಡುಬರುತ್ತಿದ್ದಳು. ಮುಖದಲ್ಲಿನ ನಗು, ಚಿತ್ರದಲ್ಲಿ ಬಿಡಿಸಿದಂತಿತ್ತು. ಯಾವುದೋ ಹೊಸ ಪೌಡರಿನ ಪರಿಮಳ ತೇಲಿ

ಬಂದು, "ಯಾವ ಪೌಡರ್ ಆಗಿರಬಹುದು?" ಎಂದು ನಾನು ಯೋಚಿಸುತ್ತಿರುವಂತೆ ಅವಳು ಕೇಳಿದಳು-

"ಆಗ್ಬಹುದಾ? ಮಕ್ಕಳು ನನ್ನೊಟ್ಟಿಗೆ ಬರಬಹುದಾ?"

"ಯಾಕೆ, ನಿಂಗೆ ಸುಮ್ನೆ ಟ್ರಬಲ್" ಎಂದು ಸಂಕೋಚಪಡುತ್ತಾ ಹೇಳಿದೆ.

ಮಾರ್ಕೆಟ್ ಅಲ್ಲಿಂದ ತುಂಬಾ ದೂರವೇನೂ ಇಲ್ಲ. ಸುಮಾರು ಹತ್ತು ನಿಮಿಷದ ಹಾದಿ. ಆದರೂ ಮಕ್ಕಳನ್ನು ಅವಳೊಟ್ಟಿಗೆ ಕಳುಹಿಸಲು ಏನೋ ಒಂದು ತರದ ಭಯ. ಅವಳು ಹೇಳಿದಳು- "ಯಾಕೆ ಟ್ರಬಲ್? ಮಕ್ಕಳು ಯಾವಾಗ್ಲೂ ಟ್ರಬಲ್ ಅಂತ ಆಗುವುದೇ ಇಲ್ಲ."

ಅಷ್ಟರಲ್ಲಿ ಅಡಿಗೆ ಕೋಣೆಯಿಂದ ಹೊರಗೆ ಬಂದ ಅಮ್ಮ ರಜನಿಯನ್ನು ನೋಡುತ್ತಾ ಹೇಳಿದಳು- "ಎಂತದ್ದಕ್ಕೆ ಇವರದ್ದು ಸಂತೆ ನಿನಗೆ?"

ಬಾಯಿ ಅಗಲಿಸಿ ನಗುತ್ತಾ ರಜನಿ ಹೇಳಿದಳು- "ನೋ ಆಂಟಿ. ಒಳ್ಳೇ ಮಕ್ಕಳು ಇಬ್ರೂ." ಮತ್ತೆ ನನ್ನ ಕಡೆಗೆ ತಿರುಗಿ ಅಮ್ಮ ಹೇಳಿದಳು- "ನೀನೂ ಮಾರ್ಕೆಟಿಗೆ ಹೋಗಿ ಬಾ ಅವರೊಟ್ಟಿಗೆ. ಏನಾದ್ರೂ ತರಕಾರಿ ಉಂಟಾ ಅಂತ ನೋಡಿ, ಇದ್ರೆ ತಕ್ಕೊಂಡು ಬಾ. ಚೀಲ ಕೊಡ್ತೇನೆ."

"ಸರಿ" ಎಂದುಕೊಳ್ಳುತ್ತಾ ನಾನೂ ಹೊರಡಲು ತೀರ್ಮಾನಿಸಿ, "ಆಯ್ತು, ನಾನು ಬರ್ತೇನೆ. ಒಂದು ಐದು ನಿಮಿಷದಲ್ಲಿ ಡ್ರೆಸ್ ಚೇಂಜ್ ಮಾಡಿ ಬರ್ತೇನೆ," ಎಂದು ಹೇಳಿ ರೂಮಿಗೆ ನಡೆದೆ.

ಹತ್ತು ನಿಮಿಷದ ನಂತರ ರೂಮಿನಿಂದ ಹೊರಗೆ ಬಂದಾಗ, ರಜನಿಯ ಕೈ ಹಿಡಿದುಕೊಂಡ ಗೀತಾ ಗೇಟಿನವರೆಗೆ ಹೋದಾಗಿತ್ತು. ಆನಂದ, ನಾನು ಹೊರ ಬರುವುದನ್ನೇ ಕಾಯುತ್ತಾ ಬಾಗಿಲ ಹೊರಗೆ ನಿಂತುಕೊಂಡು ನೋಡುತ್ತಿದ್ದ.

ಸ್ವಲ್ಪ ದೂರ ನಾನೂ ರಜನಿಯೂ ಮಾತನಾಡದೆ ನಡೆದೆವು. ಆಕೆಯೊಂದಿಗೆ ಹೆಜ್ಜೆ ಹಾಕುತ್ತಿರುವಂತೆ ನಾನು ತುಂಬಾ ಕುಳ್ಳಗಿರುವಂತೆ ಭಾಸವಾಗುತ್ತಿತ್ತು. ಅದಲ್ಲದೆ ಅವಳ ಸಪೂರ ದೇಹಕ್ಕೆ, ನನ್ನ ಐವತ್ತೆಂಟು ಕೇಜಿ ತೂಕದ ದೇಹದ ಹೋಲಿಕೆ ತನ್ನಿಂದ ತಾನೇ ಮನಸ್ಸಲ್ಲಿ ಹುಟ್ಟಿಕೊಂಡು ಒಂದು ಥರಾ ಅನಿಸುತ್ತಿತ್ತು. ಸುಮಾರು ಏಳೆಂಟು ವರ್ಷಗಳ ಹಿಂದೆ ನಾನೂ ಅವಳ ಥರಾನೇ ಇದ್ದೆ ಎಂಬುದೊಂದೇ ಸಮಾಧಾನ.

ಆಕೆಯ ಹುಬ್ಬು ಸಪೂರ ಕಾಡಿಗೆ ಗೆರೆಯಂತೆ ಸ್ಪಷ್ಟವಾಗಿತ್ತು. ಟ್ರಿಮ್ ಮಾಡಿರಬಹುದೇನೋ ಎಂದುಕೊಂಡೆ. ಆಕೆಯುಟ್ಟುಕೊಂಡ ಚೂಡಿದಾರ ಸಾಮಾನ್ಯದ್ದು. ಮಾರ್ಗದ ಬದಿ ಮಾರುವವರಲ್ಲಿ ಕೊಂಡಿರಬಹುದೆಂದು ಯೋಚಿಸುತ್ತಿದ್ದೆ. ಆದರೆ ಅದು ಆಕೆಯ ಸಪೂರ ದೇಹಕ್ಕೆ ಬಳ್ಳಿಯಂತೆ ಹರಡಿ ಚೆನ್ನಾಗಿ ಒಪ್ಪಿಕೊಂಡಿತ್ತು.

ಮೌನವಾಗಿ ಹೆಜ್ಜೆ ಹಾಕುವುದು ಇಷ್ಟವಾಗದೆ, ಏನಾದರೂ ಮಾತನಾಡಬೇಕೆಂದು ಅನಿಸಿದರೂ, ಏನು ಹೇಳುವುದೆಂದು ತಿಳಿಯದೆ ಚಡಪಡಿಸತೊಡಗಿದೆ.

ಕೊನೆಗೆ ಕೇಳಿದೆ- "ನಿನ್ನ ತಮ್ಮ ಇಂಜನಿಯರ್ ಕಲೀತಿದ್ದಾನಾ?"

ತಲೆಯಾಡಿಸಿಕೊಂಡು ಆಕೆ ಮುಖ ಮೇಲೆತ್ತಿ ನನ್ನ ಕಡೆ ನೋಡಿ ನಕ್ಕಳು. ಮಾತಾಡಿಸಿದ್ದಕ್ಕೆ ಥ್ಯಾಂಕ್ಸ್ ಹೇಳುವಂತಿತ್ತು ಅವಳ ನಗು. ನನ್ನ ಹಾಗೇ ಅವಳೂ ಚಡಪಡಿಸುತ್ತಿದ್ದಿರಬೇಕು. ಮತ್ತೆ ಹೇಳಿದಳು-

"ಹೌದು..... ಇಲೆಕ್ಟ್ರಿಕಲ್."

"ಯಾವ ಈಯರ್?"

"ಈಗ ಥರ್ಡ್ ಈಯರ್. ಅದು ಮುಗಿದ ಮೇಲೆ ವನ್ ಈಯರ್ ಉಂಟು."

"ಆಮೇಲೆ? ಇಲ್ಲೇ ಇರ್ತೀರಾ?"

"ಏನೋ ನೋಡ್ಬೇಕಷ್ಟೇ. ಅವನಿಗೆ ಎಲ್ಲಿ ಕೆಲ್ಸ ಸಿಗ್ತದೋ ಅಲ್ಲಿಗೆ ಹೋಗ್ಬೇಕಾಗ್ತದೆ. ಅಪ್ಪ ಹಾಗೇ ಹೇಳ್ತಾರೆ."

"ಆದ್ರ ಮೊದ್ಲು ನಿಂಗೆ ಮದ್ವೆ ಆದ್ರೆ?"

ಕೇಳುವುದನ್ನು ಕೇಳಿಬಿಟ್ಟೆ. ಆದರೆ ಆಮೇಲೆ ಅಷ್ಟು ಸಲುಗೆ ಬೇಡವಾಗಿತು ಎಂದು ಕಂಡಿತು. ಅವಳು ಸ್ವಲ್ಪ ಹೊತ್ತು ಮೌನವಾಗಿ ಹೆಜ್ಜೆ ಹಾಕಿದಳು. ಗೀತಾ ಅವಳ ಕೈ ಬಿಟ್ಟು ಮುಂದಿನಿಂದ ಕುಣಿಯುತ್ತಾ ನಡೆಯುತ್ತಿದ್ದಳು. ರಜನಿ ಹೇಳಿದಳು-

"ಏನೋ. ನೋಡ್ಬೇಕು."

ಆಕೆ ಕೊಟ್ಟ ಉತ್ತರದಲ್ಲಿ ಉತ್ಸಾಹವಿದ್ದಂತಿರಲಿಲ್ಲ. ಆದರೆ ಅದನ್ನು ಬಚ್ಚಿಡುವಂತೆ ಬಾಯಿ ಅಗಲಿಸಿ ನಕ್ಕಳು. ನಾನು ಕೇಳಿದೆ- "ಯಾಕೆ, ಮದ್ವೆ ಇಷ್ಟ ಇಲ್ವಾ?"

ನಾನು ಕೇಳಿದ ಪ್ರಶ್ನೆ ತೀರಾ ಅಸಂಬದ್ಧ ಎಂದುಕೊಂಡಳಾ ಎಂಬ ಪ್ರಶ್ನೆ ಬಂತು ನನ್ನಲ್ಲಿ. ಮದುವೆಯನ್ನು ಇಷ್ಟಪಡದ ಹುಡುಗಿಯರಿರಬಹುದಾ? ನನ್ನನ್ನು ಪರೀಕ್ಷೆ ಮಾಡಿ ಹೋದ ಹದಿಮೂರನೇ ವರ ನನ್ನನ್ನು ಒಪ್ಪಿಕೊಂಡ ಸುದ್ದಿಯನ್ನು ಅಪ್ಪ ಬಂದು ಹೇಳಿದ ಗಳಿಗೆ ನೆನಪಿಗೆ ಬಂತು. ತಲೆಯನ್ನು ಸಂಪೂರ್ಣ ಒತ್ತಿ ಹಿಡಿದ ಅರೆಯುವ ಕಲ್ಲಿನ ಭಾರ ಆ ಗಳಿಗೆಯಲ್ಲಿ ಮಿಂಚಿನಂತೆ ಮಾಯವಾದಂತೆನಿಸಿದ್ದು ಕಣ್ಣೆದುರು ಕುಣಿಯಿತು. ಮದುವೆ, ಆಭರಣ, ಗಂಡ-ಹೆಂಡತಿ ಜೇನಿನಂಥ ಜೀವನ, ಸ್ವಂತ ಮನೆ, ಮಕ್ಕಳು.....ಇವೆಲ್ಲದರ ಬಗ್ಗೆ ಹಗಲುಗನಸು ಕಾಣದ ಹುಡುಗಿಯರಿರಬಹುದಾ? ಇರಬಹುದೋ ಏನೋ.

ರಜನಿ ಹೇಳಿದಳು- "ಹಾಗೇನೂ ಇಲ್ಲ, ಇಷ್ಟವಿಲ್ಲ ಅಂತ ಏನೂ ಇಲ್ಲ. ಆದ್ರೆ ಟೈಂ ಬರಬೇಕಲ್ವಾ?"

"ಟೈಂ ಬರಬೇಕಾದ್ರೆ ಪ್ರಯತ್ನ ಮಾಡಬೇಕಲ್ವಾ. ಈಗಿನ ಕಾಲದಲ್ಲಿ ಸುಮ್ನೇ ಮನೆಯಲ್ಲಿ ಕೂತುಕೊಂಡಿದ್ರೆ ಮದ್ವೆ ಆಗುವುದು ಕಷ್ಟ ನೋಡು."

ನಾನು ಹಾಗೆ ನಿಷ್ಠುರವಾಗಿ ಮಾತನಾಡಿದ್ದು ಅವಳ ತಂದೆಯ ಬಗ್ಗೆ. ಅವರ ಬಗ್ಗೆ ನನಗೇನೂ ತಿಳಿದಿರದಿದ್ದರೂ, ಅಮ್ಮ ಹೇಳಿದ ವಿಚಾರಗಳಿಂದ ಅವರ ಬಗ್ಗೆ ಒಂದು ರೀತಿಯ ತಿರಸ್ಕಾರ ಭಾವನೆ ನನ್ನ ಮನಸ್ಸಲ್ಲಿ ಹುಟ್ಟಿಕೊಂಡಿತ್ತು. ಆದರೆ ಅವರ ಬಗ್ಗೆ ನೇರವಾಗಿ ದೂರಲು ನನಗಾವ ಅಧಿಕಾರವೂ ಇರಲಿಲ್ಲ. ಅದೇನಿದ್ದರೂ, ನನ್ನಲ್ಲಿ ಅವರ ಬಗ್ಗೆ ಅಷ್ಟೇನೂ ಉತ್ತಮ ಅಭಿಪ್ರಾಯ ಇಲ್ಲ ಎಂದು ರಜನಿಗೆ ತಿಳಿಸುವುದು ನನಗೆ ಮುಖ್ಯವಾಗಿತ್ತು. ಅದನ್ನು ಆ ಕೂಡಲೇ ಅರಿತವಳಂತೆ, ಅಲ್ಲದೆ ಅಷ್ಟೇ ಜೋರಾಗಿ ತನ್ನ ತಂದೆಯನ್ನು ಸಮರ್ಥಿಸಿಕೊಳ್ಳುವವಳಂತೆ, ರಜನಿ ಹೇಳಿದಳು- "ಟ್ರೈ ಮಾಡ್ತಾ ಇದ್ದಾರೆ ಅಪ್ಪ. ತುಂಬಾ ಟ್ರೈ ಮಾಡ್ತಿದ್ದಾರೆ."

"ಹೌದಾ ಮತ್ತೇನು?"

"ಏನೂಂತ ಹೇಳುವುದು? ಎಷ್ಟು ಟ್ರೈ ಮಾಡಿದ್ರೂ ಸಾಲದು ಈಗಿನ ಕಾಲದಲ್ಲಿ. ಹಣದ ಬಲ ಬೇಕು. ಅಥವಾ ಕೆಲಸದಲ್ಲಿದ್ರೆ ಅದಾದ್ರೂ ಪರವಾಯಿಲ್ಲ. ಕೆಲವರಿಗೆ ಸಣ್ಣ ಪ್ರಾಯದವರೇ ಬೇಕು. ಕೆಲವರು ನಂದು ಹೈಟ್ ಜಾಸ್ತಿಯಾಯ್ತೂಂತ ಹೇಳ್ತಾರೆ. ಹಾಗೆಲ್ಲಾ ಇರುವಾಗ! ಆದ್ರೆ ಪ್ರಯತ್ನ ಮಾಡ್ತಾ ಇರ್ತಾರೆ ಅಪ್ಪ."

ತನ್ನ ತಂದೆಯಲ್ಲಿ ಏನೂ ಕುಂದು ಕಾಣದಿರುವವಳಂತಿತ್ತು ಅವಳ ಮಾತು. ಅಭಿಮಾನವೋ ಗೌರವವೋ ಪ್ರೀತಿಯೋ....ಅಥವಾ?

ಅಥವಾ ಭಯವೋ? ಅದೇನಿದ್ದರೂ ಇನ್ನೊಬ್ಬರಲ್ಲಿ ತಪ್ಪು ಕಂಡುಹಿಡಿಯದ ಅವಳ ವ್ಯಕ್ತಿತ್ವವನ್ನು ನಾನು ಮೆಚ್ಚಿಕೊಂಡೆ. ಅವಳ ತಂದೆಯ ಬಗ್ಗೆ ಏನೂ ತಿಳಿಯದೆಯೂ, ಕೆಟ್ಟ ಭಾವನೆಯನ್ನು ತಾಳಿದುದಕ್ಕೆ ನಾನೇ ತಪ್ಪುಗಾರಳಾಗಿಬಿಟ್ಟೆ ಎಂದು ಅನಿಸಿತು. ಅವರ ಬಗ್ಗೆ ನನ್ನ ಅಮ್ಮನಲ್ಲಿದ್ದ ಅಭಿಪ್ರಾಯ ತಪ್ಪಾಗಿರಬಹುದಾ? ಅಥವಾ, ಹೆತ್ತವರನ್ನು ದೇವರಂತೆ ಆರಾಧಿಸಿಕೊಂಡು ಬರುತ್ತಾ ಅವರಲ್ಲಿ ಯಾವ ಕುಂದುಕೊರತೆಯನ್ನೂ ಕಾಣಲಿಷ್ಟಪಡದ ರಜನಿಯೇ ತಪ್ಪುಮಾಡುತ್ತಿದ್ದಾಳಾ?

ನನ್ನ ಮನಸ್ಸಲ್ಲಾಗುತ್ತಿದ್ದ ಕೋಲಾಹಲಕ್ಕೆ ಇನ್ನಷ್ಟು ಬಣ್ಣ ಹಚ್ಚುವಂತೆ ರಜನಿ ಹೇಳಿದಳು- "ಅವ್ರಿಗೆ ನಂದು ಮದುವೇದೇ ಯೋಚನೆಯಾಗಿದೆ. ಯಾರತ್ರಾದ್ರೂ ಕೇಳ್ಳಿಕ್ಕೆ ಹೋದ್ರೆ, ಪ್ರಾಯವಾಗಿದೆಯಲ್ವಾ ಹುಡುಗಿಗೆ ಅಂತ ಹೇಳ್ತಾರಂತೆ. ಏನು ಮಾಡುವುದಂತ ಗೊತ್ತಾಗುವುದಿಲ್ಲ ನಂಗೆ. ನನ್ನಿಂದಾಗಿ ಅವರ ಮನಸ್ಸಿಗೆ ಚೂರೂ ಶಾಂತಿಯಿಲ್ಲ."

** ** **

ನಾನಲ್ಲಿದ್ದ ಎರಡು ವಾರಗಳಲ್ಲಿ ರಜನಿ ಇನ್ನಷ್ಟು ಹತ್ತಿರದವಳಾದಳು. ಯಾರ ಬಗ್ಗೆಯೂ ಏನೂ ದೂರು ಹೊರಿಸದ, ಯಾರಲ್ಲೂ ತಪ್ಪು ಕಾಣದ, ಮಿತ ಮಾತಿನ, ಸದಾ ಮುಗುಳ್ನಗು ಹೊರಚೆಲ್ಲುವ ರಜನಿಯನ್ನು ನಾನು ತುಂಬಾ ಮೆಚ್ಚಿಕೊಂಡೆ. ನಮ್ಮಿಬ್ಬರ ವ್ಯಕ್ತಿತ್ವದಲ್ಲಿ ತುಂಬಾ ವ್ಯತ್ಯಾಸವಿದೆ. ನಾನು ಜಗಳಗಂಟಿ. ನಾನು ಹೇಳಿದ್ದು ಸರಿಯಲ್ಲ ಎಂದು ಒಪ್ಪಿಕೊಳ್ಳುವುದು ನನ್ನಿಂದ ಬಹಳ ಕಷ್ಟ. ನೆಮ್ಮದಿ ಕಮ್ಮಿ ನನ್ನಲ್ಲಿ. ನನಗೆ ವ್ಯತಿರಿಕ್ತವಾಗಿ ಮಾತನಾಡಿದವರನ್ನು ನಾನು ಮೆಚ್ಚಿಕೊಳ್ಳುವುದೇ ಇಲ್ಲ, ದೂರುವುದು, ಗದರುವುದು, ಪಿರಿ ಪಿರಿ ಹೊರಡಿಸುವುದು, ಇವೆಲ್ಲಾ ನನ್ನಲ್ಲಿ ಚಿಕ್ಕಂದಿನಿಂದಲೂ ಬೆಳೆದುಬಂದಿದೆ. ಮಕ್ಕಳಾದ ಮೇಲಂತೂ ಜಾಸ್ತಿಯೇ.

ರಜನಿ ಸಮೀಪದಲ್ಲಿದ್ದಾಗ ನಾನೇನಾದರೂ ಮಕ್ಕಳನ್ನು ಗದರಿಸಿದರೆ ಆಕೆ ಏನೂ ಹೇಳದೆ, ಕೈಯಲ್ಲಿ ಚೂಡಿದಾರದ ಅಂಚು ಹಿಚುಕಿಕೊಂಡು ಸುಮ್ಮನಿರುತ್ತಿದ್ದಳು. ಮಕ್ಕಳಿಗೆ ಗದರಿಸುವುದು, ಪೆಟ್ಟು ಕೊಡುವುದನ್ನೆಲ್ಲಾ ಅವಳು ಇಷ್ಟಪಡುವುದಿಲ್ಲವೆಂದು ಅವಳನ್ನು ಆ



ಸಮಯ ನೋಡಿದ ಯಾರೂ ಅರ್ಥಮಾಡಿಕೊಳ್ಳಬಹುದಾಗಿತ್ತು. ಆದರೆ ಆ ಬಗ್ಗೆ ನನ್ನಲ್ಲಿಂದೂ ಆಕೆ ಬಾಯಿ ಬಿಟ್ಟಿದ್ದಿಲ್ಲ. ಬೈಗಳು ಮುಗಿದು, ಮಕ್ಕಳು ಕಲ್ಲಿನಂತೆ ಸುಮ್ಮನಾಗಿ, ನನ್ನ ಪ್ರೆಶರ್ ಕಡಿಮೆಯಾಗುವ ತನಕ ಅವಳು ಮೌನವಾಗಿರುತ್ತಿದ್ದಳು. ಮತ್ತೆ ನಿಧಾನವಾಗಿ ಕೇಳುತ್ತಿದ್ದಳು: "ಒಂದು ಹತ್ತು ನಿಮಿಷ ನಾನು ಮಕ್ಕಳನ್ನು ಕರಕೊಂಡು ಹೋಗಲಾ?" ಅವಳು ಕೇಳುವ ಧಾಟಿಗೆ, 'ಬೇಡ' ಎಂದು ಹೇಳುವುದೂ ಅಸಾಧ್ಯವಾಗುತ್ತಿತ್ತು ನನಗೆ. ನನ್ನ ಜೋರಿಗೆ ದೊಡ್ಡ ಮುಖ ಮಾಡಿದ ಆನಂದ ಮತ್ತು ಗೀತಾ ಮಾತನಾಡದೆ, ಕುದುರೆಯಂತೆ ತಲೆ ಕೆಳಗೆ ಹಾಕಿಕೊಂಡು ಇಲಿಯಂತೆ ಸದ್ದು ಹೊರಡಿಸದೆ ರಜನಿಯ ಹಿಂದೆ ಹೋಗುತ್ತಿದ್ದರು.

ಕಾಲು-ಅರ್ಧ ಗಂಟೆಯ ನಂತರ ಅವರು ಹಿಂದೆ ಬಂದಾಗ, ರಾತ್ರೆ ಕಳೆದು ಸೂರ್ಯೋದಯವಾದಂತೆ ಮುಖದಲ್ಲಿ ಹುಮ್ಮಸ್ಸು ತುಂಬಿಕೊಂಡು, ಹಕ್ಕಿಗಳಂತೆ ಚಿಲಿಪಿಲಿ ಹೊರಡಿಸಿಕೊಂಡು ಹೊಸಬರಂತೆ ಕಂಡು ಬರುತ್ತಿದ್ದರು. ನಾನು ಅಚ್ಚರಿಯಿಂದ ಅವರನ್ನೇ ನೋಡುತ್ತಿದ್ದೆ. ಯಾಕೆ ಬೈದುಬಿಟ್ಟೆನೋ ಎಂದು ನನಗೇ ಪ್ರಶ್ನೆ ಹಾಕಿಕೊಳ್ಳುತ್ತಿದೆ. ಮಕ್ಕಳ ಪಾಲಿಗೆ ರಜನಿಯೊಬ್ಬಳು ಮಾಟಗಾತಿಯೆಂದೇ ಹೇಳಬಹುದಿತ್ತು. ಕೊಳೆಯಾದ ಕರ್ಚೀಫಿನಿಂದ ಬಿಳಿ ಪಾರಿವಾಳಗಳನ್ನು ಸೃಷ್ಟಿ

ಮಾಡುವ ಮ್ಯಾಜಿಶಿಯನ್, ಆಕೆಗೆ ಬೇಗನೇ ಮದುವೆಯಾಗಿ, ಮುದ್ದು ಮಾಡುವಂತಹ ಮಕ್ಕಳಾಗಲಿ ಎಂದು ನಾನು ಗುಟ್ಟಲ್ಲಿ ಬೇಡುತ್ತಿದ್ದೆ.

ಒಂದು ಸಂಜೆ ನಾನು ಪೈಪ್ ಹಿಡಿದುಕೊಂಡು ತೆಂಗಿನ ಮರದ ಬುಡಕ್ಕೆ ನೀರು ಬಿಡುತ್ತಿದ್ದಂತೆ ಮಕ್ಕಳೊಂದಿಗೆ ಬಂದು ನಿಂತಳು ರಜನಿ. ಪೇರಳೆ ಮರದ ಬುಡದಲ್ಲಿನ ಇರುವೆ ಸಾಲನ್ನು ನೋಡುತ್ತಾ ನಿಂತವು ಮಕ್ಕಳು. ನಾನು ರಜನಿಯಲ್ಲಿ ಕೇಳಿದೆ- "ನಿಂದು ಮದ್ವೆ ಆದ್ಮೇಲೆ..... ಆ ಮೇಲೆ ಎಷ್ಟು ಮಕ್ಕಳು ಬೇಕು ನಿನಗೆ?"

"ಮದ್ವೆ ಆಗ್ಬೇಕಲ್ಲಾ ಮೊದಲು?"

"ಆಗ್ತದೆ ರಜನಿ, ಖಂಡಿತಾ ಆಗ್ತದೆ. ನಿನ್ನನ್ನು ಹೆಂಡತಿಯಾಗಿ ಪಡೆಯುವವ ನಿಜಕ್ಕೂ ಲಕ್ಕಿ."

"ಸುಮ್ನೆ ಯಾಕೆ ತಮಾಷೆ ಮಾಡ್ತೀರಿ?"

"ತಮಾಷೆಯಲ್ಲ. ನಿಜಕ್ಕೂ ಸೀರಿಯಸ್. ನಿಂಗೆ ತುಂಬಾ ಪೇಶನ್ಸ್ ಉಂಟು. ಗಂಡ, ಮನೆ, ಮಕ್ಕಳು ಎಲ್ಲವನ್ನೂ ಚೆನ್ನಾಗಿ ನೋಡಿಕೊಳ್ತಿ ನೀನು, ನಂಗೆ ಗೊತ್ತುಂಟು."

"ಏನೋ."

"ಹೇಳು, ಎಷ್ಟು ಮಕ್ಕಳು ಬೇಕೂಂತ ಆಶೆ ನಿಂಗೆ?"

"ಎಷ್ಟು ಸಾಧ್ಯವೋ ಅಷ್ಟು."

"ಹಾಗಂದ್ರೆ? ಒಂದು ಡಜನ್ ಸಾಕಾ? ಅಥವಾ ಇನ್ನೂ ಜಾಸ್ತಿಯಾ?"

"ಛೇ.... ಒಂದು ಡಜನ್ನಾ? ಬೇಡಪ್ಪಾ. ಅದು ಜಾಸ್ತಿ."

"ಮತ್ತೆ ಅರ್ಧ ಡಜನ್?"

"ಏನೋ. ನಾನು ಅದನ್ನೆಲ್ಲಾ ಯೋಚ್ನೆ ಮಾಡ್ಲಿಲ್ಲ. ಮೂರು ನಾಲ್ಕಾದ್ರೂ ಇದ್ರೆ ಒಳ್ಳೇದಂತ ಕಾಣ್ತದೆ."

"ನಂಗೆ ಈ ಎರಡು ಮಕ್ಕಳನ್ನು ಸುಧಾರಿಸುವುದೇ ಸಾಕಾಗ್ತದೆ. ಈಗ ನೋಡಿದ್ರೆ ಒಂದೇ ಸಾಕಿತ್ತಂತ ಕಾಣ್ತದೆ."

"ಯಾಕೆ ಹಾಗೆ ಹೇಳ್ತೀರಿ? ಇಬ್ರೂ ತುಂಬಾ ನೈಸ್ ಮಕ್ಕಳು,. ರಗಳೆಯೇ ಇಲ್ಲ."

"ನೀನು ಹಾಗೆ ಹೇಳ್ತಿ. ನಿನ್ನ ಹತ್ರ ಅವರು ಅಷ್ಟು ನೈಸಾಗಿರ್ತಾರೆ. ಯಾಕಂತೆ ನಂಗೆ ಗೊತ್ತಿಲ್ಲ. ನಿನ್ನ ಪರ್ಸನಾಲಿಟಿಯೇ ಅದೇ ತರ. ಅದಕ್ಕೇ ಇರ್ಬೇಕು, ನೀನು ಹೇಳಿದ ಹಾಗೆ ಕೇಳ್ತಾರೆ. ಆದ್ರೆ ನನ್ನ ಹತ್ರ ಇಡೀ ದಿನ ಜಗಳ ಆಡಿಕೊಂಡೇ ಇರ್ತಾರೆ."

"ಸುಮ್ನೇ ಹೇಳ್ತೀರಿ ನೀವು. ಒಳ್ಳೇ ಮಕ್ಕಳು ಇಬ್ರೂ."

"ನಿಂಗೆ ಹೆಣ್ಣುಮಕ್ಕಳಂದ್ರೆ ಇಷ್ಟಾಂತ ಕಾಣ್ತದೆ ಅಲ್ವಾ?"

"ಹೌದು. ಹುಡುಗೀರಾದ್ರೆ ಚೆನ್ನಾಗಿ ಮೇಕಪ್ ಮಾಡ್ಬಹುದು. ಬೇರೆ ಬೇರೆ ಹೇರ್‌ಸ್ಟೈಲ್ ಮಾಡ್ಬಹುದು. ಯಾವ ಯಾವ ತರದ್ದು ಡ್ರೆಸ್ ಹೊಲಿಸಬಹುದು.ಅಲ್ವಾ?"

"ನೀನು ಹಾಗೆ ಹೇಳ್ತಿ. ನಿಂಗಾದ್ರೆ ಒಳ್ಳೇ ಪೇಶನ್ಸ್ ಉಂಟು. ನಂಗೆ, ಗೀತಾಳನ್ನು ಕೂಡ್ರಿಸಿ ತಲೆಗೊಂದು ಗಂಟು ಹಾಕುವುದರಲ್ಲಿ ಸಾಕಾಗಿಬಿಡ್ತದೆ."

"ನಾನು ತಲೆಬಾಚಲಿಕ್ಕೆ ಕರೆದ್ರೆ ಸುಮ್ನೇ ಬಂದು ಕೂತ್ಕೊಳ್ತಾಳೆ. ತಲೆಬಾಚಿ ಮುಗಿಸುವ ವರೆಗೆ ಸುಮ್ನೇ ಇರ್ತಾಳೆ."

"ಅದಕ್ಕೇ ಹೇಳಿದ್ದು. ನಿನ್ನನ್ನು ಕಂಡ್ರೆ ಮಕ್ಕಳಿಗೆ ಏನೋ ಒಂದು ಸಲಿಗೆಯೋ ಪ್ರೀತಿಯೋ ಏನೂಂತ ಗೊತ್ತಿಲ್ಲ."

** ** **

ಆಮೇಲೆ ನಾನು ಮಕ್ಕಳನ್ನು ಕರೆದುಕೊಂಡು ಮನೆಯವರೊಟ್ಟಿಗೆ ಊರಿಗೆ ಬಂದದ್ದು ಎರಡು ವರ್ಷ ಕಳೆದ ಮೇಲೆ. ಆ ನಡುವೆ, ಚಿಕ್ಕಮ್ಮನ ಮಗಳ ಮದುವೆಗಂತ ಧಾರವಾಡಕ್ಕೆ ಒಂದು ದಿನದ ಮಟ್ಟಿಗೆ ನಾನೊಬ್ಬಳೇ ಬಂದಿದ್ದೆ. ಊರಿಂದ ಅಪ್ಪ-ಅಮ್ಮ ಇಬ್ಬರೂ ಬಂದಿದ್ದರು. ಹಾಗೆ ಹೀಗೆ ಮಾತು ಬಂದು, "ರಜನಿ ಯಾವಾಗ್ಲೂ ನಿನ್ನನ್ನು, ಮಕ್ಕಳನ್ನು ಕೇಳ್ತಾ ಇರ್ತಾಳೆ," ಎಂದು ಹೇಳಿದ್ದಳು ಅಮ್ಮ. "ನೀನು ಮೊನ್ನೆ ಕಳಿಸಿದ ಮಕ್ಕಳ ಫೋಟೋ ತೋರಿಸಿದೆ. ಗೀತಾಳದ್ದು ಮುಖ ಉರುಟುರುಟಾಗ್ತಾ ಬರ್ತಾ ಉಂಟಂತ ಹೇಳಿದ್ಳು." "ಹೌದಾ ನಂಗೆಂತದೂ ಗೊತ್ತಾಗುವುದಿಲ್ಲ?" ಅಂತ ಹೇಳಿದೆ. ಇನ್ನು ಒಂದೆರಡು ವರ್ಷದಲ್ಲಿ ಅವಳು ಅಮ್ಮನ ತರಾನೇ ಕಾಣ್ತಾಳೆ ಅಂತ ನಂಗೆ ಕಾಣ್ತದೆ ಅಂತ ಹೇಳಿದ್ಳು," ಎಂದು ವಿವರಿಸಿದ್ದಳು ಅಮ್ಮ.

ನನ್ನಹಾಗೆ ಗೀತಾ ಕಂಡುಬರುವುದು ನನಗೆ

ಇಷ್ಟವೇ ಇಲ್ಲ, ಪೇರಳೆಯಂತೆ ನೇತಾಡುವ ಕೆನ್ನೆ, ಚಪ್ಪಟೆ ತಲೆ, ಜಜ್ಜಿ ಹೋದಂತೆ ಕಂಡುಬರುವ ಮೂಗು, ಸಣ್ಣ ಕುತ್ತಿಗೆ..... ಛೀ ಛೀ ಬೇಡಪ್ಪಾ ಬೇಡ ಅಂತ ಅಂದುಕೊಂಡಿದ್ದೆ ಆ ಸಮಯ. ಆದರೆ ದಿನ ಹೋದಂತೆ ರಜನಿ ಹೇಳಿದ್ದೇ ಸರಿ ಎಂದು ನನಗೂ ತೋಚುತ್ತಿತ್ತು. ಹುಡುಗಿಯ ಹಟಮಾರಿತನ, ಜಗುಪ್ಸೆ ಮಾತು, ಪಿರಿ ಪಿರಿ ರಾಗ ಎಲ್ಲಾ ಯೋಚಿಸಿದರೆ ಅವಳು ನನ್ನ ಮಗಳೇ ಸರಿ. ಅವಳ ತಲೆ ಬಾಚುವಾಗ ಲಂತೂ ಆ ಚಪ್ಪಟೆ ತಲೆಯ ಸಿಕ್ಕು ಬಿಡಿಸುವಾಗ ನನ್ನದೇ ತಲೆ ಎದುರು ಕಾಣುತ್ತಿತ್ತು.

"ರಜನಿದ್ದು ಮದುವೆ ಸುದ್ದಿಯುಂಟಾ?" ಎಂದು ಕೇಳಿದ್ದೆ ಅಮ್ಮನಲ್ಲಿ. "ಎಂತದು, ಮದುವೆಯಾ? ಎಂತ ಹೇಳ್ತಿ ನೀನು? ಆ ಒಂದು ಗಂಡಸು ಮನೆಯಲ್ಲಿರುವವರೆಗೆ ಅವಳಿಗೆ ಮದುವೆ ಆಗುವಹಾ ಗಿಲ್ಲ" ಎಂದು ರಜನಿಯ ತಂದೆಯ ಬಗ್ಗೆ ಕೀಳಾಗಿ ಮಾತನಾಡಿದ್ದಳು ಅಮ್ಮ 'ಅವರು ಅಷ್ಟೇನೂ ಕೆಟ್ಟವ ರಾಗಿರಲಾರರು,' ಎಂದು ಅಮ್ಮನಲ್ಲಿ ಹೇಳಬೇಕೆಂದು ಅನಿಸಿತ್ತು. ಆದರೆ ಬರೀ ಕೆಲವೇ ದಿನಗಳ ಒಡನಾಟ ದಿಂದ ನಾನು ತಳೆದ ಅಭಿಪ್ರಾಯವೇ ಸರಿ ಎಂದು ಅಮ್ಮನಲ್ಲಿ ವಾದ ಮಾಡುವುದು ನಿಷ್ಪ್ರಯೋಜಕ ವೆಂದೂ ತಿಳಿದಿತ್ತು ನನಗೆ. ಅಷ್ಟೆಲ್ಲಾ ಸುಲಭವಾಗಿ ತಪ್ಪೊಪ್ಪಿಕೊಳ್ಳುವವಳಲ್ಲ ನನ್ನ ಅಮ್ಮ

ಊರಿಗೆ ಬಂದಾಗ ಅಚ್ಚರಿ ಕಾದಿತ್ತು. ಮಕ್ಕಳು, 'ರಜನಿ ಆಂಟಿ' ಮನೆಗೆ ಹೊರಡಲು ಉತ್ಸಾಹ ತೋರಿಸುತ್ತಿದ್ದರು. ಆಕೆಗೆ ತೋರಿಸಲೆಂದೇ ತಾನು ಕ್ಲಾಸಿನ ಪ್ರಾಜೆಕ್ಟ್‌ಗೆಂದು ಎರೆಹುಳಗಳ ಬಗ್ಗೆ ಬರೆದ ರಿಪೋರ್ಟನ್ನು ತಂದಿದ್ದ ಆನಂದ. ಅವನಿಗೆ ರಜನಿಯ ನೆನಪು ಚೆನ್ನಾಗಿತ್ತು. ಅದಲ್ಲದೆ ಆಕೆ ಅವನಿಗಾಗಿಯೇ ಬಿಡಿಸಿಕೊಟ್ಟ ಬಣ್ಣ ಬಣ್ಣದ ಚಿತ್ರವೊಂದನ್ನು ಮನೆ ಯಲ್ಲಿ ರೂಮಿನ ಬಾಗಿಲಿಗೆ ಅಂಟಿಸಿದ್ದ. ಅದರೊಳಗಿನ ಮೋಡ, ಸೂರ್ಯ, ತಾವರೆ ಹೂ, ನೀಲಿನೀರು, ನೀರು ಮತ್ತು ಆಕಾಶದ ನಡುವೆ ನಿಂತ ಚಿಟ್ಟೆ.... ಇವನ್ನೆಲ್ಲಾ ಅವನು ತುಂಬಾ ಮೆಚ್ಚಿಕೊಂಡಿದ್ದ. ಮನೆಗೆ ಬಂದ ಅವನ ಕ್ಲಾಸ್‌ಮೇಟ್‌ಗಳಿಗೆಲ್ಲಾ, "ಇದು ರಜನಿ ಆಂಟಿ ಮಾಡಿದ್ದು, ಅವರು ಮೈಸೂರಲ್ಲಿದ್ದಾರೆ. ನಮ್ಮ ಗ್ರಾಂಡ್ ಫಾದರಿದ್ದು ನೇಬರ್," ಎಂದು ಹೆಮ್ಮೆಯಿಂದ ಹೇಳುತ್ತಿದ್ದ. ಗೀತಾ ಕೂಡ, "ನಂಗೂ ರಜನಿ ಆಂಟಿದ್ದು ನೆನಪುಂಟು," ಎಂದು ಹೇಳಿದ್ದರೂ ಆ ಮಾತಿನ ಮೇಲೆ ಅಷ್ಟೇನೂ ನಂಬಿಕೆಯಿರಲಿಲ್ಲ ನನಗೆ.

ಅಮ್ಮನ ಮನೆ ತಲುಪಿದ್ದ ಕೆಲವೇ ನಿಮಿಷಗಳಲ್ಲಿ 'ರಜನಿ ಆಂಟಿ' ಮನೆಗೆ ಮಕ್ಕಳು ಹೊರಡಲು ತಯಾರಾಗುತ್ತಿದ್ದಾಗಲಷ್ಟೆ ಅಮ್ಮ ಹೇಳಿದಳು, "ನಿಂಗೆ ಹೇಳ್ಳಿಕ್ಕೆ ಮರ್ತೇ ಹೋಯ್ತು ನೋಡು ನಂಗೆ, ಅವರಿಲ್ಲ ಆ ಮನೆಯಲ್ಲಿ. ಅವರೆಲ್ಲಾ ಆ ಮನೆ ಬಿಟ್ಟು ಹೋಗಿ ಸುಮಾರು ಎರಡು ತಿಂಗಳಾಯ್ತು ಅಂತ ಕಾಣ್ತದೆ. ಹೌದು, ನಾಡಿದ್ದು ಹುಣ್ಣಿಮೆಗೆ ಎರಡು ತಿಂಗಳು."

ಅಮ್ಮನ ಮಾತು ಕೇಳಿ ಮಕ್ಕಳು ಮುಖ ನೇತಾಡಿಸಿಕೊಂಡು, ಲಿವಿಂಗ್ ರೂಮಿನ ಸೋಫಾ ದಲ್ಲಿ ಅದಕ್ಕೆ ಅಂಟಿದವರಂತೆ ಕೂತುಬಿಟ್ಟರು. ಭಾರೀ ಬೇಸರ. ಅಮ್ಮ ಹೇಳಿದಳು- "ಏನು ಮಾಡ್ಲಿಕ್ಕಾಗ್ತದೆ ಹೇಳು? ಹೋಗ್ಲೇಬೇಕಾಯ್ತು ರಜನಿ ಆಂಟಿಗೆ. ಬೇರೆ ಉಪಾಯ ಇರ್ಲಿಲ್ಲ. ಪಾಪದವಳು....."

"ಯಾಕೆ, ಏನಾಯ್ತು?" ಅಂತ ನಾನು ಕೇಳಿದ್ದಕ್ಕೆ- "ಒಟ್ಟು ಆ ಹುಡುಗಿದ್ದು ಹಣೆಬರಹ, ಅಷ್ಟೆ. ಅದರ ಅವಸ್ಥೆ ನೋಡಿದ್ರೆ ಪಾಪಾ ಅಂತ ಕಾಣ್ತದೆ," ಎಂದು ಉತ್ತರ ಕೊಟ್ಟಳು.

ಮತ್ತೆ ನಿಧಾನವಾಗಿ ವಿಷಯ ತಿಳಿಯಿತು.

ಕೆಲ ತಿಂಗಳ ಹಿಂದೆ, ರಜನಿಯ ತಮ್ಮ ಡಿಗ್ರಿ ಮುಗಿಯುತ್ತಲೇ, ತನ್ನ ಕ್ಲಾಸ್‌ಮೇಟ್ ಒಬ್ಬಳನ್ನು ರಿಜಿಸ್ಟ್ರ ಮದುವೆಯಾದ. ಅವಳು ಮರಾಠಿ ಹುಡುಗಿ. ಪೂನಾದವಳು. ಅವಳ ತಂದೆ ತುಂಬಾ ಸ್ಥಿತಿವಂತರು. ದೊಡ್ಡ ಇಂಡಸ್ಟ್ರಿಯಲಿಸ್ಟ್ ಅಂತೆ. ಮದುವೆಯಾದದ್ದೇ ತಡ, ರಜನಿಯ ತಮ್ಮ ತನ್ನ ಹೆಂಡತಿಯೊಟ್ಟಿಗೆ ಪೂನಾಕ್ಕೆ ಹೊರಟುಹೋದ. ತಂದೆ ಮತ್ತು ಅಕ್ಕ ಇಲ್ಲೇ. ಅಷ್ಟು ಕಷ್ಟಪಟ್ಟು ಕಾಲೇಜು ಕಲಿಸಿದ ತಂದೆ ಇಲ್ಲಿ, ಇನ್ನೂ ಮದುವೆಯಾಗದೆ ಇಡೀ ದಿನ ತಮ್ಮನ ಚಾಕರಿ ಮಾಡಿ ಅಡಿಗೆ ಮಾಡಿ ಬಡಿಸುತ್ತಿದ್ದ ಅಕ್ಕ ಇಲ್ಲೇ. ಅವನಿಗೇನು? ತನ್ನ ದುಡ್ಡಿದ್ದ ಹೆಂಡತಿಯೊಟ್ಟಿಗೆ ಪೂನಾದಲ್ಲಿ ಗಮ್ಮತ್ತಿನಲ್ಲಿದ್ದಾನೆ. ಅವನಿಗೆ ತಂದೆ-ಅಕ್ಕ ಯಾರೂ ಬೇಡ. ಹೇಗೋ ಹೆಂಡತಿ ಮತ್ತು ಭಾರಿ ಕಾಸಿದ್ದ ಮಾವ ಇದ್ದಾರಲ್ಲಾ. ಇನ್ನು ಬೇರೆ ಯಾರು ಬೇಕು? ಅಕ್ಕನಿಗೆ ಮದುವೆಯಾಗದಿದ್ದರೇನಾಯ್ತು? ಇನ್ನು ತನ್ನ ತಂದೆ ಒಬ್ರೆ ಇರಬೇಕಲ್ಲಾಂತ ಅವನಿಗೇನಾ ದರೂ ಬೇಜಾರು ಉಂಟಾ? ತಂದೆಗೆ ಬೇಜಾರು ಉಂಟು. ಆದ್ರೆ ಅವನಿಗೆ ಕ್ಯಾರೇ ಇಲ್ಲ.

ರಜನಿ ಮತ್ತು ಅವಳ ಅಪ್ಪ ದುಃಖಪಡುತ್ತಾ ಇಲ್ಲೇ

ಕೆಲಸಮಯ ಇದ್ದರಂತೆ. ಇಲ್ಲಿ ಎಷ್ಟು ದಿನಾಂತ ಇರುವುದು? ಇಲ್ಲಿ ತಂದೆ-ಮಗಳು ಕೂತ್ಕೊಂಡು ಏನು ಮಾಡುವುದಂತ ಯೋಚನೆ ಮಾಡಿ ಊರಿಗೆ ಹೊರಟುಹೋದರಂತೆ. ಪುತ್ತೂರಿನ ಕಾಲೇಜಿನ ಹತ್ತಿರ ಅವರಿಗೊಂದು ಸಣ್ಣ ಜಾಗ ಮತ್ತು ಒಂದು ಸಣ್ಣ ಮಟ್ಟದ್ದು ಹೆಂಚಿನ ಮನೆ ಉಂಟಂತೆ. "ಅಲ್ಲಿಗೇ ಹೋಗಿ ಇರ್ತೇವೆ. ಇನ್ನು ಇಲ್ಲಿದ್ದು ಏನು ಮಾಡುವುದು ಆಂಟಿ? ಅಷ್ಟು ಬಾಡಿಗೆ ಕೊಟ್ಟು ಇರ್ಲಿಕ್ಕಾಗ್ತದಾ ಇಲ್ಲಿ?" ಎಂದು ಹೇಳಿದಳಂತೆ ರಜನಿ ಅಮ್ಮನಲ್ಲಿ. "ಯಾಕೆ, ಅವನಿಗೆ ಹಣ ಕಳುಹಿಸಲಿಕ್ಕಾಗುವುದಿಲ್ವಾ? ಮತ್ತೆ ಇಷ್ಟು ವರ್ಷ ಕಷ್ಟಪಟ್ಟು ಓದಿಸಿದ್ದಂತದಕ್ಕೆ? ಎಂದು ವಿಚಾರಿಸಿದಳಂತೆ ಅಮ್ಮ.

"ಅವಂದು ಒಂದು ಪೈಸೆ ಕೂಡಾ ನಂಗೆ ಬೇಡ. ನನ್ನ ಕರ್ತವ್ಯ ಮಾಡಿದೆ. ಇನ್ನು ನನ್ನ ಕಾಲಮೇಲೆ ನಾನಿರ್ತೇನೆ ಅಂತ ಹೇಳ್ತಾರೆ ಅಪ್ಪ. ತುಂಬಾ ಬೇಜಾರಾಗಿದೆ ಅವ್ರಿಗೆ" ಎಂದು ಹೇಳಿದಳಂತೆ ರಜನಿ. "ಛೇ.... ಅವನು ಹೀಗೂ ಮಾಡುವುದಾ? ಹೇಗೆ ಮನಸ್ಸು ಬಂತು ಅವನಿಗೆ" ಅಂತ ಅಮ್ಮ ಕೇಳಿದ್ದಕ್ಕೆ, "ಏನು ಮಾಡ್ಲಿಕ್ಕಾಗ್ತದೆ ಆಂಟಿ. ನಮ್ಮ ಹಣೆಬರಹ ಅಷ್ಟೇ, ಅವನನ್ನು ದೂರಿ ಏನು ಪ್ರಯೋಜನ," ಅಂತ ಉತ್ತರ ಕೊಟ್ಟಳಂತೆ ರಜನಿ. "ಎಂತವನಾ ಅವನು ಇನ್ನೂ ಮದುವೆಯಾಗದೆ ಇದ್ದಾಳೆ ಅಕ್ಕ ಮನೆಯಲ್ಲಿ, ಅವಳಿಗೆ ಮೊದ್ಲು ಮದ್ವೆಯಾಗ್ಬೇಕೂಂತ ಅವನ ಮನಸ್ಸಿಗೆ ಕಾಣ್ಲಿಲ್ಲ ನೋಡು. ಅಂಥಾ ಮಕ್ಳು ಇದ್ರೇನು, ಇಲ್ಲದಿದ್ರೇನ್ರು?" ಅಂತ ಹೇಳಿದಳಂತೆ ಅಮ್ಮ. "ಅವನನ್ನು ಯಾಕೆ ದೂರಬೇಕು ಆಂಟಿ? ನಂದು ಮದ್ವೆ ಆಗ್ಲಿಲ್ಲಾಂತ ಅವನನ್ನು ಕಾಯಿಸುವುದು ಸರಿಯಂತ ನಂಗೆ ಕಾಣುವುದಿಲ್ಲ, ಒಟ್ಟು ಅವ ಸಂತೋಷವಾಗಿದ್ರೆ ಸಾಕು," ಅಂತ ಸಮಾಧಾನ ಹೇಳಿದಳಂತೆ ರಜನಿ.

"ನಿನ್ನ ಅಪ್ಪನಿಗೆ ಯಾರಾದ್ರೊಬ್ಬರು ಸರೀ ಹೇಳ್ಬೇಕು, ನಾನೇ ಹೇಳಿಬಿಡುವಾಂತ ಕಾಣ್ತದೆ ನಂಗೆ," ಎಂದಳಂತೆ ಅಮ್ಮ. "ಏನು ಹೇಳುವುದು ಆಂಟಿ?" ಎಂದು ಕೇಳಿದಳಂತೆ ರಜನಿ. "ಪ್ರಾಯ ಬಂದ ಮಗಳ ಮದುವೇದ್ದು ಚೂರೂ ಜವಾಬ್ದಾರಿ ತಕ್ಕೊಳ್ಳದೆ ಹಾಗೇ ಸುಮ್ಮಗೆ ಇದ್ದಾರಲ್ಲಾ, ಅದು ಸರಿಯಾ? ಅದು ಅವರಿಗೆ ಗೊತ್ತಾಗಬೇಕು. ಕೆಲವರಿಗೆ ಬೇರೆಯವರು ಹೇಳಿದ್ರೆ ಮಾತ್ರ ಗೊತ್ತಾಗುವುದು. ಇಲ್ಲದಿದ್ರೆ ಗೊತ್ತಾಗುವುದೇ ಇಲ್ಲ," ಎಂದು ಖಾರವಾಗಿ ನುಡಿದಳಂತೆ ಅಮ್ಮ. "ನೀವು ಯಾಕೆ ಹಾಗೆ ಎಣಿಸಿಕೊಳ್ತೀರಿ ಆಂಟಿ? ನಂಗಿನ್ನೂ ಮದ್ವೆ ಆಗಿಲ್ಲಾಂತ ಅಪ್ಪನಿಗೆ ಎಷ್ಟು ದುಃಖ ಉಂಟೂಂತ ನನಗೊಬ್ಬಳಿಗೇ ಗೊತ್ತು. ಬಾಯಿ ಬಿಚ್ಚಿ ಹೇಳುವುದಿಲ್ಲ ಅವರು. ಆದರೆ ಗೊತ್ತುಂಟು ನಂಗೆ. ತುಂಬಾ ಬೇಸರ ಮಾಡಿಕೊಂಡಿರ್ತಾರೆ. ಏನು ಮಾಡುವುದು? ಆಗಬೇಕಾದ ಸಮಯಕ್ಕೆ ಆಗಲಿಲ್ಲ. ಈಗ ಪ್ರಾಯ ಆಗಿದೆಯಲ್ವಾ ಅಂತ ಹೇಳ್ತಾರೆ ಕೇಳಿದವರೆಲ್ಲಾ. ಏನು ಮಾಡುವುದಂತ ಗೊತ್ತಾಗುವುದಿಲ್ಲ" ಎಂದು ಕಣ್ಣೀರು ಹಾಕಿದಳಂತೆ ರಜನಿ. ಅಮ್ಮ ಅವಳನ್ನು ಸಮಾಧಾನ ಮಾಡುತ್ತಾ- "ಧೈರ್ಯ ತಕ್ಕೋ. ಖಂಡಿತಾ ಆಗ್ತದೆ. ಆಗಿಯೇ ಆಗ್ತದೆ. ಈ ವರ್ಷ ಮುಗಿಯುವದರೊಳಗೆ ಆಗ್ತದೆ. ನಾನು ಹೇಳಿದ್ದು ನೆನಪಿಟ್ಟುಕೋ. ನಮ್ಗೆಲ್ಲಾ ಮದ್ವೆ ಇನ್ವಿಟೇಶನ್ ಕಳಿಸಲೇಬೇಕು ನೀನು. ನಾವು ಖಂಡಿತಾ ಬರ್ತೇವೆ. ಪುತ್ತೂರು ನೋಡಿದ ಹಾಗಾಯ್ತು. ಅಲ್ಲಿಗೆ ಬಂದು ಹಾಗೇ ಧರ್ಮಸ್ಥಳ ಎಲ್ಲಾ ನೋಡಿ ಬರಬೇಕು," ಎಂದು ಹೇಳಿದಳಂತೆ. ರಜನಿ ಕಣ್ಣು ಒರೆಸಿಕೊಳ್ಳುತ್ತಾ ಹಿಂದೆ ಹೋದಳಂತೆ. ಆಗ ಅವಳ ಗಂಟಲು ಕಟ್ಟಿತ್ತಂತೆ.

** ** **

ಊರಲ್ಲಿ ಆ ಸಮಯ ಆನಂದ ಮತ್ತು ಗೀತಾ ಇಬ್ಬರೂ ತುಂಬಾ ಸಂಕಟಪಟ್ಟರು. ನೆರೆಕರೆಯಲ್ಲಿ ಪರಿಚಯದ ಮಕ್ಕಳು ಯಾರೂ ಇರಲಿಲ್ಲ. ಆನಂದ, ಗೀತಾ ಇಬ್ಬರನ್ನೂ ದೇವರಂತೆ ನೋಡಿಕೊಳ್ಳುತ್ತಿದ್ದ ರಜನಿಯ ಮನೆ ಬಾಗಿಲಿಗೆ ಬೀಗ. ಬಾಲ ಅರ್ಧ ತುಂಡಾದ ಬೀದಿನಾಯಿಯೊಂದು ಯಾವಾಗಲೂ ಆ ಪೋರ್ಟಿಕೋದಲ್ಲಿ ಬಿದ್ದುಕೊಂಡಿರುತ್ತಿತ್ತು.

ಬೇಸರಪಡುತ್ತಾ, ಪಿರಿ ಪಿರಿ ಮಾಡುತ್ತಾ, ಜಗಳ ತೆಗೆಯುತ್ತಾ ಇಡೀ ದಿನ ಕಳೆಯುತ್ತಿದ್ದರು ಇಬ್ಬರೂ. ನಾನೇನಾದರೂ, "ಬನ್ನಿ, ಮಾರ್ಕೆಟಿಗೆ ಹೋಗಿ ಬರುವಾ" ಎಂದು ಕರೆದರೆ, ಬರುವುದೇ ಇಲ್ಲ ಎಂದು ಹಟ ಹಿಡಿದು ಕೂತುಕೊಳ್ಳುತ್ತಿದ್ದರು. "ಹೋಗಿ, ಅಜ್ಜನೊಟ್ಟಿಗೆ ನಡಕೊಂಡು ಟ್ರೈನ್ ಸ್ಟೇಶನ್ನಿಗೆ ಹೋಗಿ ಬನ್ನಿ," ಎಂದು ಅಮ್ಮ ಸಲಹೆ ಕೊಟ್ಟರೆ, "ನಾ ಹೋಗುವುದಿಲ್ಲ, ನೀನು ಹೋಗು," ಎಂದು ಅವಳೂ, "ನಾ ಹೋಗುವುದಿಲ್ಲ, ಬೇಕಿದ್ರೆ ನೀನೇ ಹೋಗು," ಎಂದು ಅವನೂ ಸೋಫಾದಲ್ಲಿ ಕಲ್ಲಿನಂತೆ ಕುಳಿತುಕೊಳ್ಳುತ್ತಿದ್ದರು. ಲೈಬ್ರರಿಯಿಂದ ಪುಸ್ತಕ ತಂದಿಟ್ಟರೆ, ಎರಡೇ ಗಂಟೆಯಲ್ಲಿ ಎಲ್ಲಾ ಓದಿ ಮುಗಿಸಿ ಮತ್ತೆ ಬೆಪ್ಪರಂತೆ ಕುಳಿತುಕೊಳ್ಳುತ್ತಿದ್ದರು.

ಅಂತೂ ಊರಿಗೆ ಹೋಗಿ ಬಂದದ್ದು ನನ್ನ ಪಾಲಿಗೂ ಮಕ್ಕಳ ಪಾಲಿಗೂ ಏನೂ ಸುಖಕರವಾಗಿರಲಿಲ್ಲ. ರಜನಿಯ ಮದುವೆಯ ಕುರಿತು ನಾನೂ ಆತಂಕಪಡುತ್ತಿದ್ದೆ. ಆ ಬಗ್ಗೆ ಅಮ್ಮ ಇಟ್ಟ ಭರವಸೆ ಸತ್ಯವಾಗಲಿ ಎಂದು ನಾನೂ ಬೇಡುತ್ತಿದ್ದೆ. ಮದುವೆಯಾಗುವುದಿದ್ದಲ್ಲಿ ನನಗೆ ಇನ್ವಿಟೇಶನ್ ಕಳುಹಿಸಿಯಾಳೆಂದು ನಾನು ನಂಬಿದ್ದೆ. ಆಮಂತ್ರಣ ಪತ್ರಿಕೆ ಬಂದರೆ ನಾನು ಖಂಡಿತ ಹೋಗುವವಳಿದ್ದೆ. ಮೈಸೂರಿಗೆ ಹೋಗಿ ಆಮೇಲೆ ಅಮ್ಮ-ಅಪ್ಪನೊಟ್ಟಿಗೆ ಮದುವೆಗೆ ಹೋಗಿಬರುವುದೆಂದು ಪ್ಲಾನ್ ಮಾಡಿಕೊಂಡಿದ್ದೆ.

ಆದರೆ ಪುತ್ತೂರಿನಿಂದ ಯಾವ ಇನ್ವಿಟೇಶನ್ ಕೂಡಾ ಬರಲಿಲ್ಲ, ಮತ್ತೆ ಸ್ವಲ್ಪ ಸಮಯದ ನಂತರ ರಜನಿಯ ನೆನಪು ನನ್ನಿಂದ ದೂರವಾಗತೊಡಗಿತು. ಮಕ್ಕಳ ರೂಮಿನ ಬಾಗಿಲ ಮೇಲೆ ಅಂಟಿಸಿದ್ದ ರಜನಿ ಬರೆದ ಚಿತ್ರ, ಕೆಲಸದವಳ ಅಜಾಗರೂಕತೆಯಿಂದ ಒಂದು ಬೆಳಿಗ್ಗೆ ಎರಡು ತುಂಡಾಗಿ ಬಿತ್ತು. ಅದನ್ನು ಮುದ್ದೆ ಮಾಡಿ ಕಸದ ಬುಟ್ಟಿಗೆ ಹಾಕಿದೆ. ಆನಂದನಿಗೆ ಅವನ ಪ್ರಾಯದ ಸ್ನೇಹಿತರೇ ಜಾಸ್ತಿಯಾಗತೊಡಗಿದರು. ಅಮ್ಮ ಅಪ್ಪ, ತಂಗಿ ಎಲ್ಲರೊಟ್ಟಿಗೆ ಅವನು ಬೆರೆಯುವುದು ಕಡಿಮೆಯಾಗತೊಡಗಿತು. ಹೆಚ್ಚಿನ ಮಟ್ಟಿಗೆ ಮನೆಯಲ್ಲಿ ಅವನು ಮೌನವಾಗೇ ಇರುತ್ತಿದ್ದ. ಏನಾದರೂ ವಿಚಾರಿಸಿದರೆ ಚುಟುಕು ಉತ್ತರ ಬರುತ್ತಿತ್ತು. ಗೀತಾ ಹತ್ತು ಪ್ರಶ್ನೆ ಕೇಳಿದರೆ ಒಂದಕ್ಕೆ ಬೇಕೋ ಬೇಡವೋ ಎಂಬಂತೆ ಉತ್ತರ ಕೊಡುತ್ತಿದ್ದ.

ಬೆಳೆಯುತ್ತಾ ಬಂದಹಾಗೆ, ಗೀತಾ ನನ್ನ ಹಾಗೇ ಕಂಡುಬರತೊಡಗಿದಳು. ನೋಟದಲ್ಲೂ ವ್ಯವಹಾರದಲ್ಲೂ ವ್ಯಕ್ತಿತ್ವದಲ್ಲೂ ನಾನೇ... ನಂದೇ ಸಿಡುಕು ಮುಖ. ಸಿಟ್ಟಿನಲ್ಲಿ ನನಗಿಂತಲೂ ಮೇಲು. ಪಟ್ ಪಟ್ ಮಾತು, ಉತ್ತರ. ಯಾರ ಹಂಗೂ ಇಲ್ಲ ಯಾರನ್ನು ನೋಯಿಸಲೂ ಅಡ್ಡಿಯಿಲ್ಲ. ಅವಳು ಹೇಳಿದ್ದೇ ಆಗಬೇಕು. ಅದೇ ಸರಿ. ಅವಳೇನಾದರೂ ತನ್ನಿಂದ ಸಾಧ್ಯವಿಲ್ಲ ಎಂದು ಹೇಳಿದರೆ, ಮತ್ತೆ ಏನು ಮಾಡಿದರೂ ಅವಳು ಮನಸ್ಸು ಬದಲಾಯಿಸುವುದು ಅಸಾಧ್ಯ. ಉಪವಾಸ ಇಡಿ, ಜೋರು ಮಾಡಿ, ಶಾಲೆಗೆ ಕಳಿಸದೆ ಮನೆಯಲ್ಲಿರಿಸಿ..... ಏನು ಮಾಡಿದರೂ ಒಂದೇ. ಬರೀ ಸ್ವಾರ್ಥಿ. ಯಾರಿಗೆ ಏನೇ ದುಃಖವಾದರೂ ಅವಳಿಗೆ ಚಿಂತೆಯಿಲ್ಲ. ಅವಳು ಹೇಳಿದ್ದು ಆಗಲೇಬೇಕು.....

ನಮ್ಮೊಂದಿಗೆ ಬೆರೆಯಲಾರದ ಆನಂದ ಮತ್ತು ಹಟಮಾರಿ ಗೀತಾ ಇವರಿಬ್ಬರಿಂದ ನನಗೆ ಸಾಕೋ ಸಾಕಾಗುತ್ತಿತ್ತು. ಯಾಕಪ್ಪಾ ಈ ಮಕ್ಕಳು ನನ್ನ ಜೀವ ತೆಗೀಲಿಕ್ಕೆ ಹುಟ್ಟಿಬಂದಿವೆ ಎಂದು ನನ್ನನ್ನೇ ಬೈದುಕೊಳ್ಳುತ್ತಿದ್ದೆ. ಮನಸ್ಸಿಗೆ ಶಾಂತಿ-ಉಲ್ಲಾಸ ಕೊಡುವ ಮಕ್ಕಳಿದ್ದರೆ ಅದು ಬೇರೆ. ಜೀವನ ಸುಖಕರವಾದೀತು. ಮನಸ್ಸು ಹರ್ಷಗೊಂಡೀತು. ಹೆಮ್ಮೆಯೆನಿಸೀತು. ಆದರೆ ಇವುಗಳಾ! ಆನಂದನಿಗೆ ಅವನ ಅಪ್ಪ, ಅಮ್ಮ ತಂಗಿ ಎಲ್ಲಾ ಇದ್ದರೂ ಒಂದೇ, ಇರದಿದ್ದರೂ ಒಂದೇ. ಹೋಟೇಲಲ್ಲಿ ರೂಮು ಮಾಡಿಕೊಂಡು ಇರುವವರ ತರ ಇರ್ತಾನೆ ಆನಂದ, ಮನೆಯಲ್ಲಿ, ಊಟ ತಿಂಡಿಗೆ ಮಾತ್ರ ಮುಖ ತೋರಿಸ್ತಾನೆ. ಗೀತಾಳನ್ನು ಹೇಗೆ ಮಾತನಾಡಿಸುವುದಂತಲೇ ಗೊತ್ತಾಗುವುದಿಲ್ಲ ನನಗೆ. ಒಂದು ದಿನವಾದ್ರೂ ಅವಳು ನೆಮ್ಮದಿಯಿಂದ ಇದ್ದದ್ದು ಗೊತ್ತಿಲ್ಲ ನನಗೆ. ಯಾವಾಗಲೂ ಕಿರಿಕಿರಿ. ಅದು ಸರಿಯಾಗ್ಲಿಲ್ಲ, ಇದು ಬೇಡ, ನಾನು ದಡ್ಡಿ, ನಂಗೆ ಸಾಧ್ಯವಿಲ್ಲ.... ಇಂತಹದೇ ಮಾತು.

ಅಂತಹ ಬೇಸರದ ಸಮಯದಲ್ಲಿ ಒಮ್ಮೊಮ್ಮೆ ರಜನಿಯ ನೆನಪು ಬರುತ್ತಿತ್ತು. "ಇಬ್ರೂ ನೈಸ್ ಮಕ್ಕಳೂ," ಎಂದವಳು ಹೇಳುತ್ತಿದ್ದುದು ನೆನಪಾಗುತ್ತಿತ್ತು, ರಜನಿಯಂಥವರು ಯಾವ ತರದ ಮಕ್ಕಳನ್ನಾದರೂ ನೋಡಿಕೊಂಡಾರು. ಎಂಥವರೊಟ್ಟಿಗೂ ಹೊಂದಿಕೊಂಡು ನಡೆಯುವುದು ಅವಳಂಥವಳಿಗೆ ತಿಳಿದಿರುತ್ತದೆ. ಒಂದು ಡಜನ್ ಮಕ್ಕಳಿದ್ರೂ ಅವಳು ಸಂತೋಷದಿಂದ ದಿನ ಕಳೆದಾಳು. ಎಲ್ಲರಿಗೂ ಸಮನಾಗಿ ಪ್ರೀತಿ ಹಂಚಿಯಾಳು. ಎಲ್ಲರಿಂದಲೂ ಪ್ರೀತಿ ಗಳಿಸಿಯಾಳು. ಮಕ್ಕಳು ಯಾವ ರೀತಿ ನಡೆದುಕೊಂಡರೂ ತಾಳ್ಮೆಯಿಂದ ಜೀವನ ದೂಡಿಯಾಳು.

ಆದರೆ ನನ್ನಂಥವಳಿಗೆ ಒಂದು ಮಗುವನ್ನು ಬೆಳೆಸುವುದೂ ಕಷ್ಟ. ಮಕ್ಕಳಿರದಿದ್ದರೂ ನಡೆಯುತ್ತದೆ. ದೇವರು ನನ್ನಂಥವಳಿಗೆ ಎರಡೋ ಮೂರೋ ಅಥವಾ ಇನ್ನೂ ಜಾಸ್ತಿ ಮಕ್ಕಳನ್ನು ಕೊಟ್ಟು ದಿನವಿಡೀ ಕಿರುಕುಳ ಕೊಡುತ್ತಿರುತ್ತಾನೆ. ಆದರೆ ರಜನಿಯಂಥವರು ಮಕ್ಕಳನ್ನು ಬೆಳೆಸಲು ಎಷ್ಟೋ ಅರ್ಹತೆ ಪಡೆದಿದ್ದರೂ ಮದುವೆಯನ್ನು ನಿಧಾನ ಮಾಡುತ್ತಾನೆ. ಅಥವಾ ಮದುವೆಯ ಅದೃಷ್ಟವನ್ನೇ ಕೊಡುವುದಿಲ್ಲ. ಎಂಥಾ ದೇವರು! ಯಾಕೆ ಹೀಗೆ ಮಾಡುತ್ತಾನೋ! ಅವನೇ ಆ ಗುಣ, ಯೋಗ್ಯತೆ ಕೊಟ್ಟ ಮೇಲೆ ಅದಕ್ಕೆ ತಕ್ಕಂತೆ ಅದೃಷ್ಟ ಕೊಡುವುದು ಬೇಡವಾ!

** ** **

ಹೋದ ಸಪ್ಟೆಂಬರಿನಲ್ಲಿ, ನನ್ನವರ ಸೋದರಮಾವನ ಮಗಳಿಗೆ ಪುತ್ತೂರಿನ ಹುಡುಗಿಯೊಂದಿಗೆ ಮದುವೆ ನಿಶ್ಚಯವಾಯ್ತು. ಅಲ್ಲಿನ ವಕೀಲರೊಬ್ಬರ ಮಗಳಂತೆ. ಖಂಡಿತಾ ಬರಲೇಬೇಕು ಎಂದು ಆ ಮಾವನಿಂದ ಕಾಗದ ಬಂತು. ಯಜಮಾನರು, ನನಗೆ ರಜೆ ಸಿಗುವುದಿಲ್ಲ, ನಂಗೆ ಹೋಗ್ಲಿಕ್ಕೆ ಆಗುವುದಿಲ್ಲ ಎಂದುಬಿಟ್ಟರು. ಎಂಟ್ರೆನ್ಸ್ ಪರೀಕ್ಷೆಗೆ ಕೋಚಿಂಗ್ ಕ್ಲಾಸಿಗೆ ಸೇರಿಕೊಂಡಿದ್ದ ಆನಂದನನ್ನು ಕರೆದುಕೊಂಡು



ಹೋಗುವುದು ಅಸಾಧ್ಯವಾಗಿತ್ತು. ಹೊಸ ಡ್ರೆಸ್ ತಕ್ಕೊಂಡು ಬರ್ತೇನೆ, ಬಾ ಎಂದು ಒತ್ತಾಯಮಾಡಿದ ಮೇಲೆ ಗೀತಾ ಒಪ್ಪಿಕೊಂಡಳು.

ನಾನೂ ಗೀತಾ ಮದುವೆಗೆ ಹೊರಟೆವು.

ನಮ್ಮ ಪ್ಲಾನ್ ಪ್ರಕಾರ ಮೈಸೂರಿಗೆ ಬಂದು ಅಲ್ಲಿಂದ ಅಪ್ಪ-ಅಮ್ಮನೊಟ್ಟಿಗೆ ಪುತ್ತೂರಿಗೆ ಹೋಗುವುದಾಗಿತ್ತು. ಆದರೆ ನಾವು ಮೈಸೂರಿಗೆ ಮುಟ್ಟಿದ ದಿನವೇ ಅಪ್ಪನಿಗೆ ವಿಪರೀತ ಜ್ವರ. ಕಾಲು ನೋವು ಬೇರೆ. "ನಾನು ಹೋಗುವುದಿಲ್ಲ, ನೀನು ಏನು ಬೇಕಿದ್ರೂ ಮಾಡು," ಎಂದರು ಅಪ್ಪ, ಅಮ್ಮನಲ್ಲಿ. ಮದುವೆಗೆ ಹೊಸ ಸೀರೆ, ಚಿನ್ನ ಎಲ್ಲಾ ಬ್ಯಾಗಲ್ಲಿ ತುಂಬಿಸಿ ರೆಡಿಯಾಗಿದ್ದ ಅಮ್ಮನಿಗೆ ನಿರಾಶೆ. "ಇಷ್ಟು ದಿನ ಆರೋಗ್ಯವಾಗಿದ್ದವರಿಗೆ ಈಗ ಹೊರಡುವ ಸಮಯ ಹೀಗಾಗಬೇಕಾ," ಅಂತ ಬೇಸರ ವ್ಯಕ್ತಪಡಿಸಿದಳು. "ಅವರನ್ನು ಈ ಅವಸ್ಥೆಯಲ್ಲಿ ಹಾಗೆ ಬಿಟ್ಟು ನಾನು ಬರುವುದು ಸರಿಯಾಗ್ತದಾ? ಒಂದು ವೇಳೆ....? ಹೇಗೆ ಹೇಳುವುದು?" ಎಂದುಬಿಟ್ಟಳು.

ನಾನು ಮತ್ತು ಗೀತಾ ರಾತ್ರಿ ಬಸ್ಸು ಹಿಡಿದು ಮಂಗಳೂರಿಗೆ ತಲುಪಿ, ಮನೆಯವರ ಮಾವನ ಮನೆಯಿಂದ ದಿಬ್ಬಣದೊಟ್ಟಿಗೆ ಪುತ್ತೂರಿಗೆ ಹೋದೆವು.

ಮುಹೂರ್ತ ಮುಗಿದು ಇನ್ನೇನು ಊಟಕ್ಕೆ ಎಲೆ ಹಾಕುತ್ತಾರೆ ಎಂದುಕೊಳ್ಳುತ್ತಿರುವಂತೆ, ಬೇರೆ ಯಾರೋ ಅವಳದೇ ಪ್ರಾಯದವಳೊಂದಿಗೆ ಆಚೆ ಗೆಲ್ಲೋ ಹೋಗಿದ್ದ ಗೀತಾ ನನ್ನ ಬಳಿ ಬಂದು, ತನ್ನ ಚೂಡಿದಾರದ ಕೆಂಪು ಶಾಲಿನ ತುದಿಯನ್ನು ಬೆರಳಿಂದ ಒತ್ತುತ್ತಾ ಹೇಳಿದಳು-

"ಮಾಮಿ, ಅಲ್ಲೊಂದು ಹೆಂಗ್ಸು ಏನೋ ಕೇಳ್ತಾ ಇತ್ತು."

ಏನು ಹೇಳುತ್ತಾಳೆ ಇವಳು, ಯಾರು ಹೆಂಗಸಂದರೆ, ಎಂದುಕೊಳ್ಳುತ್ತಾ ನಾನು ಕೇಳಿದೆ "ಹೆಂಗ್ಸಾ? ಯಾರು?"

"ನಂಗೇನು ಗೊತ್ತು? ನೀನು ಗೀತಾ ಅಲ್ವಾ ಅಂತ ಕೇಳಿತು."

"ನೀವು ಯಾರೂಂತ ಕೇಳಿದಿಯಾ?"

"ಇಲ್ಲ."

"ಕೇಳ್ಬೇಕಿತ್ತು. ಮತ್ತೇನು ಕೇಳಿದ್ರು?"

"ಆನಂದ ಬಂದಿದ್ದಾನಾ, ಅಮ್ಮ ಬಂದಿದ್ದಾರಾಂತ ಕೇಳಿತು. ಅದು ಯಾರು ಮಮ್ಮಿ?"

"ಯಾರೋ. ನಿನ್ನ ಡ್ಯಾಡಿ ಕಡೆಯವರಿರಬೇಕು, ಹೇಗಿದ್ದಾರೆ ನೋಡ್ಲಿಕ್ಕೆ?"

"ಉದ್ದಕ್ಕಿದ್ದಾರೆ. ಹಳೆ ಸೀರೆ ಉಟ್ಕೊಂಡಿದ್ದಾರೆ. ಅಲ್ಲಿ ಕುಕ್ ಮಾಡ್ತಾರಲ್ವಾ, ಅಲ್ಲಿ ನಿಂತುಕೊಂಡಿದ್ರು. ಕೆಲ್ಸದವರೋ ಏನೋ?"

ಕೆಲಸಕ್ಕೆ ಬಂದವರಾ? ಇರಬಹುದೋ ಏನೋ. ಅವರಿಗೆ ನಮ್ಮ ಕುರಿತು ಹೇಗೆ ಗೊತ್ತು? ಹೇಗೋ!

ಸ್ವಲ್ಪ ಹೊತ್ತಿನ ನಂತರ ಆ ವಿಷಯ ಮರೆತು-ಹೋಗುವುದರಲ್ಲಿದ್ದಾಗ, ಚಪ್ಪರದ ಒಂದು ಕಂಬಕ್ಕೆ ತಾಗಿ ನಾನು ನಿಂತಲ್ಲಿಗೆ ವೇಗವಾಗಿ ಬಂದ ಗೀತಾ, "ಮಾಮೀ" ಎಂದು ಕರೆದಾಗ ತಿರುಗಿ ನೋಡಿದೆ. ಗೀತಾಳ ಹಿಂದಿನಿಂದ ಸುಮಾರು ನಲವತ್ತು ನಲವತ್ತೈದು ವರ್ಷ ಪ್ರಾಯದ ಹೆಂಗಸು ನಡೆದುಕೊಂಡು ಬರುತ್ತಿತ್ತು. ಅಲ್ಲಿ ಸುತ್ತಲೂ ನಿಂತ ಹೆಂಗಸರೆಲ್ಲರಿಗಿಂತ ಉದ್ದ ದೇಹ. ಬೆವರಿಂದಲೋ ಏನೋ ಹಣೆ ಮೇಲೆಲ್ಲಾ ತಲೆಗೂದಲು ಅಸಹ್ಯವಾಗಿ ನೇತಾಡುತ್ತಿತ್ತು. ಉಟ್ಟದ್ದು ಸಾಮಾನ್ಯ ಕಾಟನ್ ಸೀರೆ. ನನಗೆ ಹತ್ತಿರವಾಗುತ್ತಿದ್ದಂತೆ ತಲೆಯೆತ್ತಿ ನೋಡಿತು ಹೆಂಗಸು. ಬಾಯನ್ನು ಅಗಲಿಸಿ ನಕ್ಕಿತು. ಕುಪ್ಪಸದ ಭುಜಗಳು ಬೆವರಿಂದ ಒದ್ದೆಯಾಗಿ ಮೈಗಂಟಿಕೊಂಡಿತ್ತು. ನನ್ನ ಬಳಿ ಬಂದು ಕೈಯಿಂದ ಹಣೆಯ ಮೇಲಿನ ಬೆವರು ಒರೆಸಿ, ನೆರೆಯಲು ಶುರುವಾದ ಕೂದಲನ್ನು ಹಿಂದಕ್ಕೆ ತಳ್ಳಿತು. ಅರೇ, ಯಾರಿದು ಎಂದುಕೊಂಡೆ. ಎಲ್ಲೋ ನೋಡಿದ ಹಾಗಿದೆಯಲ್ಲಾ. ಕುತ್ತಿಗೆಯ ಒಂದೆಳೆ ಸರವನ್ನು ಹಿಂದೆ ನೋಡಿದ ಹಾಗಿದೆ. ಎಲ್ಲಿ? ಕಿವಿಗಳಲ್ಲಿ ಚಿಕ್ಕ ಕೆಂಪು ಕಲ್ಲಿನ ಆಭರಣ. ಇನ್ನೂ ಬಾಯಿ ಅಗಲಿಸಿ ನಗುತ್ತಾ ಇದೆ. ಕಣ್ಣುಗಳಲ್ಲಿ ಮುಗ್ಧತೆಯಿದೆ.

"ನಂದು ನೆನಪುಂಟಾ?" ಸ್ವರ ಕೇಳಿದ ಕೂಡಲೇ ಮಿಂಚಿನಂತೆ ನೆನಪು ಉಕ್ಕಿಬಂತು. ರಜನಿ. ರಜನಿಯಲ್ವಾ? ಹೌದು ರಜನಿಯೇ. ಮೊದಲಿಗಿಂತ ದಪ್ಪಗಾಗಿದ್ದಾಳೆ. ಸಪೂರ ಮೈಯ ಚೂಡಿದಾರದ ಬದಲು ಬಣ್ಣ ಮಾಸಿದ ಕಾಟನ್ ಸೀರೆ. ಮಗುವಿನಂತಹ ಕೆನ್ನೆಗಳು ದಪ್ಪಗಾಗಿ ಜೋತಾಡುತ್ತಿವೆ. ತಲೆಕೂದಲು ಸಣ್ಣದಾಗಿ ಹಣ್ಣಾಗಿವೆ. ಆದರೆ ಇದು ರಜನಿಯೇ.

"ರಜನಿಯಲ್ವಾ?" ಎಂದು ಕೇಳಿದೆ.

"ಹೌದು, ಆನಂದ ಬರ್ಲಿಲ್ವಾ?"

"ಇಲ್ಲ. ಆಗ್ಬಹುದು ನೀನು,. ಇನ್ನೂ ಎಲ್ಲನ್ನೂ ನೆನಪಿಟ್ಟುಕೊಂಡಿದ್ದೀಯಲ್ಲಾ."

"ಅಷ್ಟು ಬೇಗ ಮರೀಲಿಕ್ಕಾಗ್ತದಾ?"

ನನ್ನ ಹಿಂದೆ ಓರೆಯಾಗಿ ನಿಂತುಕೊಂಡ ಗೀತಾ ಳನ್ನು ನೋಡುತ್ತಾ ಹೇಳಿದೆ-

"ಯಾರೂಂತ ಗೊತ್ತಾಯ್ತಾ! ರಜನಿ ಆಂಟಿ."

ಒಂದು ಸಾಮಾನ್ಯ ಹೆಂಗಸಿನ ಹಾಗೆ ಅಥವಾ ಕೆಲಸದವಳ ಹಾಗೆ ಕಂಡುಬರುವವ ಳನ್ನು 'ಆಂಟಿ' ಎಂದು ಕರೆದದ್ದು ಗೀತಾಳಿಗೆ ಹಿಡಿಸಲಿಲ್ಲ ಎಂದು ಅವಳ ಮುಖವೇ ಹೇಳುತ್ತಿತ್ತು. ಮುಖವನ್ನು ಒಂದು ಥರಾ ಮಾಡಿ ತಲೆ ತಿರುಗಿಸಿಕೊಂಡು ಗೀತಾ ಹೇಳಿದಳು-"ನಂಗೊತ್ತಿಲ್ಲ" ಅವಳನ್ನು ಪ್ರೋತ್ಸಾಹಿಸು ವಂತೆ ಹೇಳಿದೆ- "ಮೈಸೂರಲ್ಲಿ ನಮ್ಮ ನೇಬರ್ ಆಗಿದ್ರು, ನೆನಪಾಗ್ತದಾ?" ಯಾವುದೇ ಉತ್ಸಾಹ ತೋರಿಸದೆ ಇಲ್ಲ ಎಂಬಂತೆ ತಲೆಯಾಡಿಸಿದಳು. ಒಂದು ವೇಳೆ ನೆನಪಾದರೂ ಅದನ್ನು ಒಪ್ಪಿಕೊಳ್ಳುವಂ ತಿರಲಿಲ್ಲ ಅವಳು. ಅದನ್ನು ಮೆಚ್ಚದ ನಾನು ಅವಳನ್ನೇ ದಿಟ್ಟಿಸುತ್ತಿದ್ದಂತೆ, ಸಮಾಧಾನ ಸ್ವರದಲ್ಲಿ ರಜನಿ ಹೇಳಿ ದಳು- "ಬರೀ ಸಣ್ಣವಳಿದ್ದಳಲ್ಲಾ. ಅವಳಿಗೆ ನೆನಪಿರಲಿ ಕ್ಕಿಲ್ಲ."

ನನ್ನಲ್ಲಿ ಕೋಪ ತುಂಬಿಕೊಂಡಿತ್ತು. ಅದನ್ನು ದೂರವಿಡಲು ನಾನು ಕೇಳಿದೆ ರಜನಿಯಲ್ಲಿ- "ನೀನು.....ಹುಡುಗಿ ಕಡೆಯಿಂದಲಾ?". ಅವಳುಟ್ಟ ಸೀರೆ ನೋಡಿ, ನಾನು ಕೇಳಿದ ಪ್ರಶ್ನೆಯ ಮೇಲೆ ನನಗೇ ಸಂಶಯವಿದ್ದರೂ ಬೇರೆ ಯಾವ ರೀತಿಯ ಪ್ರಶ್ನೆ ಹಾಕಲಾಗದೆ ಹಾಗೆ ಕೇಳಿಬಿಟ್ಟೆ. ಆಗ ರಜನಿ ಹೇಳಿ ದಳು-

"ಹಾಗೇನಿಲ್ಲ. ಅಡಿಗೆಯವರೊಟ್ಟಿಗೆ ಬಂದದ್ದು ನಾನು."

ಆಮೇಲೆ ರಜನಿಯ ವಿಷಯ ಇನ್ನಷ್ಟು ತಿಳಿದು ಬಂತು. ಮೂರು ವರ್ಷದ ಹಿಂದೆ ರಜನಿಯ ತಂದೆ ತೀರಿಕೊಂಡರಂತೆ. ಆ ಸಮಯ ಒಂದು ನಾಲ್ಕು ದಿನಕ್ಕೆ ಬಂದು ಹೋದ ಅವಳ ತಮ್ಮ ಮತ್ತೆ ಈ ವರೆಗೂ ಬಂದಿಲ್ಲವಂತೆ. ತನ್ನ ಜೀವನಕ್ಕೇನಾದರೂ ಮಾಡಬೇ ಕಲ್ವಾ ಎಂದು ಯೋಚನೆಯಾಗಿತ್ತಂತೆ. ಅವಳ ಅಮ್ಮನ ಸಂಬಂಧಿಕರೊಬ್ಬರು ಅಡಿಗೆ ಕಾಂಟ್ರಾಕ್ಟು ವಹಿಸಿಕೊಳ್ಳು ತ್ತಾರೆ. "ನಮ್ಮೊಟ್ಟಿಗೆ ನೀನೂ ಬಾ, ನಮ್ಗೆ ಸಹಾಯಕ್ಕೆ ಬೇಕಾಗ್ತದೆ," ಎಂದು ಕರೆದರಂತೆ. ಆ ಮೇಲಿಂದ ಹೀಗೇ ಅವರು ಕರೆದಲ್ಲಿ ಹೋಗಿ ಬರ್ತಾಳಂತೆ.

ಮತ್ತೆ ಮದುವೆ? "ಇನ್ನೆಂಥಾ ಮದ್ವೆ!" ಎಂದಳು. "ಅಪ್ಪ ಇರುವಾಗ ಅವ್ರಿಗೆ ಅದೇ ಚಿಂತೆ. ಚಿಂತೆ ಮಾಡಿಕೊಂಡೇ ಇರ್ತಿದ್ರು. ಏನು ಮಾಡು ವುದು, ಆ ಚಿಂತೆ ಇಲ್ಲದಿರುತ್ತಿದ್ರೆ ಇನ್ನೂ ಸ್ವಲ್ಪ ವರ್ಷ ಬದುಕುತ್ತಿದ್ರೋ ಏನೊ," ಎಂದಳು. ಆಯಿತಲ್ವಾ, ಇನ್ನೆಂಥಾ ಮದ್ವೆ? ಅದರ ವಿಷಯವೇ ಮರ್ತು ಬಿಡ್ಬೇಕು ಇನ್ನು ಎಂದು ಹೇಳಿದಳು.

"ಯಾಕೆ?" ಎಂದು ವಿಚಾರಿಸಿದೆ. "ಮತ್ತೇನು, ಪ್ರಾಯ ನಲವತ್ತೂರಾಯ್ತಲ್ವಾ, ಇನ್ನು ನನ್ನನ್ನು ಯಾರು ಮದ್ವೆ ಆಗ್ತಾರೆ?" ಎಂದು ಹೇಳಿದಳು ಮುಖದಲ್ಲಿ ಯಾವ ದುಃಖವನ್ನು ವ್ಯಕ್ತಪಡಿಸದೆ. ಛೆ, ಇದು ನ್ಯಾಯವಾ ಎಂದು ನಾನು ಎಣಿಸಿಕೊಂಡೆ. "ನಲವ ತ್ತೂರಾದ್ರೇನು, ಪ್ರಯತ್ನ ಬಿಡಬಾರ್ದು," ಅಂತ ಹೇಳಿದೆ. "ಮೂವತ್ತರಲ್ಲಿ ಮದ್ವೆ ಆಗದವಳಿಗೆ ನಲವ ತ್ತೂರಕ್ಕೆ ಆಗುವುದು ಸಾಧ್ಯವಾ? ಇನ್ನು ಜಾಸ್ತಿ ಜಾಸ್ತಿ ಪ್ರಾಯ ಆಗುವುದಲ್ದೆ ಕಡಿಮೆಯಾಗ್ತದಾ?" ಎಂದು ಪ್ರಶ್ನೆ ಹಾಕಿದಳು. ಹಾಸ್ಯದ ಮಾತಾಗಿ ಹೇಳಿದ್ದರೂ ಅವಳ ಹೃದಯದಲ್ಲಿ ದುಃಖ ಇದ್ದೇಇದೆ ಎಂದು ಕೊಂಡೆ.

ಅವಳು ಕೇಳಿದ ಪ್ರಶ್ನೆಗೆ ನನ್ನಲ್ಲಿ ಉತ್ತರವಿರಲಿಲ್ಲ.

ಮದುವೆಯೇ ಇಲ್ಲದ ಮೇಲೆ ಇನ್ನು ಮಕ್ಕಳ ಕುರಿತು ವಿಚಾರಿಸುವುದು ಹೇಗೆ? ಹಿಂದೆ ಅವಳು, "ಹೆಣ್ಣು ಮಕ್ಕಳಾದ್ರೆ ಚೆನ್ನಾಗಿ ಅಲಂಕಾರ ಮಾಡ್ಬ ಹುದು." ಎಂದು ನನ್ನಲ್ಲಿ ಹೇಳಿದ ಮಾತು ನೆನಪಿಗೆ ಬಂತು. ಮಕ್ಕಳನ್ನು ದೇವರಂತೆ ನೋಡಿಕೊಳ್ಳುತ್ತಿದ್ದ ರಜನಿಗೆ ಮದುವೆಯೇ ಇಲ್ಲವೆಂದರೆ! ಅದು ನ್ಯಾಯವಾ! ದೇವರು ಹೀಗೂ ಮಾಡಬಹುದಾ? ಎಂಥಾ ದೇವರೋ ಅವನು! ಜಗತ್ತಿನಲ್ಲಿ ಅನ್ಯಾಯ ಸಹಿಸದ ಅವನು ಹೀಗೆ ದುರ್ಬಲರಿಗೆ ಅನ್ಯಾಯ ಮಾಡಬಹುದಾ?

ಹಿಂದೊಮ್ಮೆ ಮಗುವಿನ ಮುಖದಂತೆ ಕಂಡುಬ ರುತ್ತಿದ್ದ ರಜನಿಯ ಕಣ್ಣುಗಳ ಕೆಳಗೆ ದಪ್ಪ ದಪ್ಪ ಕಪ್ಪು ಮಾಂಸದ ಪದರುಗಳನ್ನು ನಾನು ನೋಡುತ್ತಾ ಬೇಸರ ಪಡುತ್ತಿರುವಂತೆ, ಸೊಂಟಕ್ಕೆ ಜರಿಶಾಲು ಸುತ್ತಿಕೊಂಡ ಕೆಲವು ಗಂಡಸರು ರಭಸದಿಂದ ಹೆಜ್ಜೆ ಹಾಕುತ್ತಾ ನಮ್ಮ ಕಡೆ ನುಗ್ಗಿ ಬಂದು ಏರಿದ ಸ್ವರದಲ್ಲಿ ಹೇಳಿದರು- "ಆಚೆ

ಹೋಗಿ, ಆಚೆ ಹೋಗಿ.... ಎಲೆ ಹಾಕ್ಲಿ ಕ್ಯಾಯ್ತು....ಎಲ್ರೂ ಆಚೆ ಹೋಗಿ."

** ** **

ಮದುವೆ ಮನೆಯಿಂದ ಗಂಡಿನ ಕಡೆಯವರೆಲ್ಲಾ ಬಸ್ಸಿಗೆ ಹೊರಡುತ್ತಿರುವಂತೆ ನಾನು ಗೀತಾಳನ್ನು ಕರೆದುಕೊಂಡು ಅಡಿಗೆ ಚಪ್ಪರದ ಕಡೆ ಹೊರಟೆ. ಸೆಗಣಿ ಸಾರಿಸಿದ ನೆಲದ ಮೇಲೆ ಕೂತುಕೊಂಡು ತೆಂಗಿನ ಸಿಪ್ಪೆಗಳನ್ನು ಎತ್ತಿ ಎತ್ತಿ ಬುಟ್ಟಿಗೆ ಹಾಕುತ್ತಿದ್ದ ರಜನಿಯನ್ನು ನೋಡಿ- "ನಾವಿನ್ನು ಬರ್ತೇವೆ," ಎಂದೆ.

ಕಸ ತುಂಬಿದ ಕೈಯನ್ನು ಸೆರಗಿನ ತುದಿಯಿಂದ ಉಜ್ಜಿ ರಜನಿ ಎದ್ದುನಿಂತಳು. ಉದ್ದ, ಮತ್ತೀಗ ನನಗಿಂತಲೂ ದಪ್ಪಗಾದ ಅವಳ ದೇಹದೆದುರು ನಾನು ಚಿಕ್ಕವಳಾದಂತೆ ಅನಿಸುತ್ತಿತ್ತು.

ಸೆರಗಿನ ತುದಿಯಿಂದ ಹಣೆ, ಕೆನ್ನೆ ಒರೆಸಿ ರಜನಿ ಹೇಳಿದಳು-

"ಅಡಿಗೆ ಹೇಗಿತ್ತು?"

"ತುಂಬಾ ಚೆನ್ನಾಗಿತ್ತು. ಸಾರು, ಹುಳಿ.......ಎಲ್ಲಾ ರುಚಿಯಾಗಿತ್ತು."

"ಹೌದಾ? ರಾಮಭಟ್ರು ತುಂಬಾ ಚಂದ ಮಾಡ್ತಾರೆ. ಒಳ್ಳೇ ಕೈ ಅವರದ್ದು."

ರಾಮಭಟ್ರ ಪರಿಚಯ ನನಗಿರಲಿಲ್ಲ. ಏನು ಉತ್ತರ ಹೇಳುವುದೆಂದು ತಿಳಿಯದೆ ಅವಳನ್ನೇ ನೋಡಿದೆ. ಒಂದು ವೇಳೆ ಮದುವೆ ಆಗುತ್ತಿದ್ದಲ್ಲಿ, ಮದುವೆಯಾಗಿ ಮಕ್ಕಳಾಗುತ್ತಿದ್ದಲ್ಲಿ ಅವಳು ಹೇಗೆ ಕಂಡು ಬರಬಹುದಿತ್ತೆಂದು ನನ್ನ ಮನಸ್ಸಲ್ಲಿ ಯೋಚನೆಗಳು ಹೊರಡುತ್ತಿದ್ದವು. ಆಗ ಈ ರಾಮಭಟ್ರ ಅಡಿಗೆ ನೈಪುಣ್ಯದ ಕುರಿತು ಮಾತು ಬರುತ್ತಿರಲಿಲ್ಲವೇನೋ! ಅವಳ ಮುಖ ಈಗಲೂ ಮಗುವಿನಂತಿರುತ್ತಿತ್ತೇನೋ! ಅವಳೆದುರು ನನ್ನ ದಪ್ಪ ಮೈ ಅಸಹ್ಯವಾಗಿ ಕಂಡು ಬರುತ್ತಿತ್ತೇನೋ!


ಚಪ್ಪರಕ್ಕೆ ಓರೆಯಾಗಿ ತಾಗಿ ನಿಂತ ಗೀತಾಳ ಹತ್ತಿರ ಹೇಳಿದೆ- "ರಜನಿ ಆಂಟಿಗೆ ಟಾಟಾ ಹೇಳು."

ಇಷ್ಟವಿಲ್ಲದವರಂತೆ ಬಿಗಿದ ಬಾಯನ್ನು ಚೂರೇ ಚೂರು ಅಗಲಿಸಿ, ನೆಲದಲ್ಲಿ ಕಣ್ಣು ನೆಟ್ಟು ಅವಳು ತನ್ನಲ್ಲೇ ಎಂಬಂತೆ ಹೇಳಿದಳು- "ಟಾ ಟಾ."

ಅವಳು ಹೇಳಿದ್ದು ನನಗೂ ಕೇಳಿಸಲಿಲ್ಲ.'ಆಂಟಿ' ಎಂದು ಬಾಯಿಬಿಟ್ಟು ಹೇಳಲು ಏನು ಅಹಂಕಾರವಪ್ಪಾ ಹುಡುಗಿಗೆ ಎಂದುಕೊಂಡೆ.

"ಇನ್ನು ಯಾವಾಗ ಈ ಕಡೆಗೆ?" ಎಂದು ಕೇಳಿದಳು ರಜನಿ.

"ಗೊತ್ತಿಲ್ಲ," ಎಂದು ಹೇಳಿದೆ. ಮದ್ವೆ ಇನ್ವಿಟೇಶನ್ ಕಳುಹಿಸು; ಖಂಡಿತಾ ಬರ್ತೇವೆ ಎಂದು ನಾನೂ ಅಮ್ಮನೂ ಹೇಳಿದ್ದು ನೆನಪಿಗೆ ಬಂತು. ಅದನ್ನೇ ಪುನಃ ಹೇಳುವುದಕ್ಕೆ ಆಸ್ಪದವಿರಲಿಲ್ಲ. ಅದು ಸರಿಯೂ ಅಲ್ಲ.



ಅಷ್ಟರಲ್ಲಿ ಬಸ್ಸಿನ ಹಾರ್ನಿನ ಸದ್ದು ಕೇಳಿ ಗೀತಾ ಹೇಳಿದಳು- "ಮಾಮೀ, ಕಮಾನ್, ಬಸ್ಸು ಹೊರಟಾಯ್ತು, ಕಮಾನ್, ಹಾಗೆ ಹೇಳಿದವಳೇ ಮುಂದೆ ಹೆಜ್ಜೆ ಹಾಕತೊಡಗಿದಳು. ಉಪಾಯವಿರದೆ ಅವಳ ಹಿಂದೆ ಹೊರಟೆ. ಮದುವೆ ಚಪ್ಪರದ ಹೊರಗೆ ಬರುತ್ತಿರುವಂತೆ ಗೀತಾ ಹೇಳಿದಳು-

"ಸಿಕ್ಕಿದವರನ್ನೆಲ್ಲಾ ಆಂಟಿ ಆಂಟಿ ಅಂತ ಕರೇಲಿಕ್ಕೆ ಹೇಳ್ಬೇಡ ನೀನು." ಹಾಗೆ ಹೇಳಿದವಳೇ ನನಗೆ ಉತ್ತರ ಕೊಡಲಿಕ್ಕೂ ಅವಕಾಶ ಕೊಡದೆ ಬಸ್ಸಿನ ಕಡೆಗೆ ಓಡತೊಡಗಿದಳು. ಬರೀ ಸಾಮಾನ್ಯ ಹೆಂಗಸಿನಂತೆ ಕಂಡು ಬರುತ್ತಿದ್ದ ರಜನಿಯನ್ನು 'ಆಂಟಿ' ಎಂದು ಕರೆಯುವುದು ತನ್ನ ಅಂತಸ್ತಿಗೆ ಒಗ್ಗದು ಎಂದು ಹೇಳುತ್ತಿದ್ದಾಳಾ ಇವಳು? ಹಿಂದೊಮ್ಮೆ ರಜನಿಗೆ ಭೂಮಿಯಂತೆ ಅಂಟಿಕೊಂಡಿರುತ್ತಿದ್ದ ಗೀತಾಳ ಕಣ್ಣುಗಳಿಗೆ ಈಗ ರಜನಿ ಕೀಳಾಗಿ, ಅಸಹ್ಯವಾಗಿ ಕಂಡು ಬರುತ್ತಿದ್ದಾಳಾ?

ನಾನು ಬಸ್ಸೇರಿ ಕುಳಿತುಕೊಂಡೆ. ಬಸ್ಸು ಹೊರಡಬೇಕೆನ್ನುವಷ್ಟರಲ್ಲಿ ಮದುವೆ ಚಪ್ಪರದಿಂದ ರಜನಿ ರಭಸದಿಂದ ಈಚೆ ಬರುವುದು ಕಂಡಿತು. ಅವಳ ಮುಖ, ಕೈಗಳಿಗೆ ಅಂಟಿಕೊಂಡ ಬೆವರ ಹನಿಗಳು ಬಿಸಿಲಿಗೆ ಹೊಳೆಯುತ್ತಿದ್ದವು. ನನಗಾಗೇ ಬರುತ್ತಿರಬೇಕು ಎಂದುಕೊಂಡು ಕಿಟಕಿಯಿಂದ ಮುಖ ಹೊರ ಹಾಕಿದೆ. ಬಸ್ಸಿನ ಬದಿಗೆ ಬಂದು ತನ್ನ ಕೈಯೆತ್ತಿ ಹಿಡಿದು ಹೇಳಿದಳು: "ಎರಡು ಮಾಲೆ ಉಂಟು. ಒಂದು ಗೀತಾಳಿಗೆ ಕೊಡಿ. ಅವಳು ತಲೆಗೆ ಹೂ ಮುಡಿದುಕೊಂಡ್ರೆ ಇನ್ನೂ ಚಂದಾಗಿ ಕಾಣ್ತಾಳೆ." ಅವಳ ಕೈಯಲ್ಲಿ, ಬಾಳೆ ಎಲೆ ತುಂಡಿನೊಳಗೆ ಕಟ್ಟಿದ ಮಂಗಳೂರು ಮಲ್ಲಿಗೆಯ ಎರಡು ಮಾಲೆಗಳಿದ್ದುವು. ನನ್ನ ಚಾಚಿದ ಕೈಗೆ ಅವು ಸೇರುತ್ತಿರುವಂತೆ ಅವಳ ಕೈಬೆರಳುಗಳು ಒಂದು ಗಳಿಗೆ ನನ್ನ ಬೆರಳುಗಳಿಗೆ ಒತ್ತಿ ಹಿಡಿದವು. ಒಂದೇ ಕ್ಷಣ. ಆ ಕೂಡಲೇ ಕೈ ಹಿಂದಕ್ಕೆಳೆದುಕೊಂಡಳು. ನಾನು ಏನಾದರೂ ಹೇಳಿಬಿಡಬೇಕೆನ್ನುವ ಮೊದಲೇ ಅವಳು ಹೇಳಿದಳು- "ಆಂಟಿಯನ್ನೂ ಆನಂದನನ್ನೂ ಕೇಳಿದೆ ಅಂತ ಹೇಳಿ. ಅವನಿಗೆ ಒಳ್ಳೇ ಸ್ಟಡಿ ಮಾಡ್ಲಿಕ್ಕೆ ಹೇಳಿ."

"ಆಯ್ತು. ಹೇಳ್ತೇನೆ," ಎಂದು ಹೇಳಿ ನಾನು ಕೈಬೀಸುತ್ತಿರುವಂತೇ ಬಸ್ಸು ಹೊರಟಿತು. ನನ್ನ ಮುಂದಿನ ಸೀಟಿನಲ್ಲಿ ಕುಳಿತಿದ್ದ ಗೀತಾಳ ಹೆಗಲು ತಟ್ಟಿ ಹೇಳಿದೆ- "ಇಕೋ. ರಜನಿ ಆಂಟಿ ಕೊಟ್ಟಿದ್ದು. ತಲೆಗೆ ಮುಡಿಬೇಕಂತೆ."

ನನ್ನ ಕೈಯಲ್ಲಿ ಪ್ರೀತಿಯಂತೆ ಕಂಪು ಬೀರುತ್ತಾ ಅರಳಿಕೊಂಡಿದ್ದ ತಾಜಾ ಬಿಳಿ ಮಲ್ಲಿಗೆಯ ಮಾಲೆಯನ್ನು ಸತ್ತ ಇಲಿಯಂತೆ ಅಸಹ್ಯವಾಗಿ ನೋಡುತ್ತಾ, ತನ್ನ ಎಡಗೈಯಿಂದ ನನ್ನ ಕೈಯನ್ನು ಹಿಂದಕ್ಕೆ ತಳ್ಳಿ ಗೀತಾ ಹೇಳಿದಳು- "ನಂಗೆ ಬೇಡ.... ಶ್ಶಿ..ಶ್ಶಿ... ನಂಗೆ ಬೇಡ, ನೀನೇ ಇಟ್ಟುಕೋ."

ಒಂದು ಮಾಲೆಯನ್ನು ಬಿಡಿಸಿ ನನ್ನ ಮೂರಿಂಚು ಉದ್ದದ ಜಡೆಗೆ ತುರುಕಿ, ಇನ್ನೊಂದನ್ನು ಬಾಡದ ಹಾಗೆ ಜೋಪಾನವಾಗಿ ನನ್ನ ಕಪ್ಪು ಪರ್ಸಿನೊಳಗಿಟ್ಟು ಅದರ ಜಿಪ್ಪನ್ನು ಅರ್ಧ ಮಾತ್ರ ಮುಚ್ಚಿದೆ.

ಬಿಲ್

ಡಾಕ್ಟರ್ ರಂಗಪ್ಪನಿಗೆ ಹೇಳಿದರು- "ನೋಡು ರಂಗಪ್ಪ, ನಿನಗೆ ಸಿಹಿಮೂತ್ರ ರೋಗ ಇದೆ. ಇದು ವಂಶಪಾರಂಪರ್ಯವಾಗಿ ಬಂದಿರುವ ಕಾಯಿಲೆ. ಅಜ್ಜನಿಂದ ಅಪ್ಪನಿಗೆ, ಅಪ್ಪನಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಹೀಗೆ ಇದ್ದೇಇರುತ್ತೆ. ಸುಲಭವಾಗಿ ವಾಸಿಯಾಗೋಲ್ಲಾ".


"ಹೌದಾ ಡಾಕ್ಟ್ರೇ, ಹಾಗಿದ್ರೆ ಹೀಗೆ ಮಾಡಿ. ನಮ್ಮಜ್ಜನಂತೂ ಬದುಕಿಲ್ಲ. ಆದ್ರಿಂದ ನಿಮ್ಮ ಬಿಲ್ ಅನ್ನು ನಮ್ಮ ಅಪ್ಪನಿಗೇ ಕಳಿಸಿಬಿಡಿ," ಎಂದ ರಂಗಪ್ಪ.

★ ಎಂ. ಶಾರದಾ ನಾಗಭೂಷಣ

ಎಲ್ಲಿ ಹೋದವು ಆ ದಿನಗಳು?

ನಳಪಾಕದ ನೆನಪುಗಳು

— ಡಿ. ಗುಂಡೂರಾವ್ —



ಈ ಕಾಲದಲ್ಲಿ ಹೋಟೆಲಿಗೆ ಹೋಗದವರೇ ಇಲ್ಲ. ಮನೆಯಲ್ಲಿ ಎಷ್ಟೇ ಚೆನ್ನಾಗಿ ಮಾಡಿದರೂ ಹೋಟೆಲ್ ತಿಂಡಿಯ ರುಚಿ ಅದಕ್ಕೆ ಬರುವುದಿಲ್ಲ. ಸಾಯಂಕಾಲ ವಾಕಿಂಗ್ ಹೋದಾಗ ಹೋಟೆಲಿನಲ್ಲಿ ಚೆನ್ನಾಗಿ ತಿಂದು ಬಂದರೆ ಮನೆಯ ಯಜಮಾನಿ "ಹೋಟ್ಲಲ್ಲಿ ಚೆನ್ನಾಗಿ ಗದುಗಿಕೊಂಡು ಬಂದುಬಿಡ್ತಾರೆ. ಇಲ್ಲಿ ಅನ್ನ ಮಿಕ್ಕಿ ಹೋಗುತ್ತೊ," ಎಂದು ಗೊಣಗದೆ ಇರುವುದಿಲ್ಲ. ಅದು ನಮ್ಮ ತಪ್ಪಲ್ಲ, ಉಡುಪಿಮಾವನ ತಪ್ಪು. ಅವನೇಕೆ ಅದನ್ನು ಅಷ್ಟು ರುಚಿಕಟ್ಟಾಗಿ ಮಾಡಬೇಕು ? ಹೋಟೆಲ್ ತಿಂಡಿ ವಾರಾಂಗನೆಯಿದ್ದಂತೆ. ಥಳಕು-ಬೆಳಕು ಜಾಸ್ತಿ. ಮನೇ ತಿಂಡಿ ಬೆಡಗು ಬಿನ್ನಾಣವನ್ನರಿಯದ ಸುಶೀಲೆಯಾದ ಗೃಹಿಣಿಯಿದ್ದಂತೆ.

ಈಗ ೭೫ ವರ್ಷಗಳ ಹಿಂದಿನ ಮಾತು. ಆ ಕಾಲ ಹೋಟೆಲುಗಳ ಸ್ವರ್ಣಯುಗ. ಪದಾರ್ಥಗಳು ತೀರಾ ಅಗ್ಗವಾಗಿದ್ದವು. ಅದರ ಮೇಲೆ ನುರಿತ ಬಾಣಸಿಗರ ಕೈಚಳಕ ಬೇರೆ. ಆ ಬಗ್ಗೆ ಇನ್ನೂ ಜೀವಿಸಿರುವ ಹಿರಿಯರನ್ನು ಕೇಳಿದರೆ, "ಓ, ಅದಾ! ನಳಪಾಕ! ನಳಪಾಕ!" ಎಂದು ಉದ್ಗರಿಸುವರು. ದುರದೃಷ್ಟವೆಂದರೆ ಆ ಕಾಲದಲ್ಲಿ ದುಡ್ಡಿಗೇ ಕ್ಷಾಮ!

ಆಗ ಮಸಾಲೆ ದೋಸೆಗೆ ಬಹಳ ಡಿಮಾಂಡು (ಈಗಲೂ ಅಷ್ಟೇ). ಕೇವಲ ಒಂಭತ್ತು ಕಾಸಿಗೆ ಒಂದು ಮೊಳದುದ್ದ ಮಸಾಲೆ ದೋಸೆ. ಅದನ್ನು ತಿನ್ನಲು ಎಲ್ಲರಿಗೂ ಚಪಲ. ಬಡವರು ಮೂರು ಕಾಸಿಗೆ ಪಲ್ಯವನ್ನು ಕೊಂಡು ಮಸಾಲೆ ದೋಸೆಯನ್ನು ತಿಂದೆವೆಂದು ಸಮಾಧಾನಪಟ್ಟುಕೊಳ್ಳುತ್ತಿದ್ದರು. ಆ ಪಲ್ಯದಲ್ಲಿ ಒಂದೊಂದು ಆಲೂಗಡ್ಡೆ ಒಂದೊಂದು ನಿಂಬೆ ಹಣ್ಣಿನ ಗಾತ್ರದ್ದಿರುತ್ತಿತ್ತು. ಆರು ಕಾಸಿಗೆ ಕಾಫಿ. (ಒಂದು ಪೌಂಡ್ ಕಾಫಿಪುಡಿಗೆ ಒಂಭತ್ತಾಣೆ). ಬೀದಿಯಲ್ಲಿ ಹೋಗುತ್ತಿದ್ದಾಗ ಮಸಾಲೆ ದೋಸೆಯ ಘಮ ಘಮ ನಮ್ಮನ್ನು ಕೈಬೀಸಿ ಕರೆಯುತ್ತಿತ್ತು. ನನಗೆ ಇನ್ನೂ ಚೆನ್ನಾಗಿ ಜ್ಞಾಪಕವಿದೆ. ನಮ್ಮ ತಂದೆ ಹೋಟೆಲಿಗೆ ಹೋದಾಗಲೆಲ್ಲ ನನಗೂ ದೋಸೆ ಕೊಡಿಸುತ್ತಿದ್ದರು. ನಮ್ಮ ತಂದೆ ಒಳ್ಳೆಯ ರಸಿಕರು. ಹನ್ನೆರಡು ಮಸಾಲೆ ತಿಂದು, ನಾಲ್ಕು ಕಪ್ ಕಾಫಿ ಕುಡಿಯುತ್ತಿದ್ದರು. ನನಗೋ ಒಂದು ದೋಸೆ ತಿನ್ನುವಷ್ಟರಲ್ಲಿ ಬೆವರು ಕಿತ್ತುಕೊಂಡು ಬರುತ್ತಿತ್ತು.



ಆಗ ಹೋಟೆಲಿಗೆ ಭೇಟಿ ಕೊಡುತ್ತಿದ್ದವರೆಲ್ಲಾ ಮಸಾಲೆ ದೋಸೆಯ ಭಕ್ತರೇ. ಅದು ಉಡುಪಿಮಾವನ ಟ್ರಂಪ್ ಕಾರ್ಡು. ಆದರೆ ಇದಕ್ಕೆ ವಿನಾಯತಿ ಎಂಬಂತೆ ಜಗನ್ಮೋಹನ ಅರಮನೆಯ ಎದುರು ರಸ್ತೆಯಲ್ಲಿ 'ವಿದ್ಯಾರ್ಥಿ ಭವನ' ಅಂತ ಒಂದು ಹೋಟೆಲು ಇತ್ತು. ಅಲ್ಲಿ ಮಾತ್ರ ಮಸಾಲೆಯನ್ನು ಕೇಳುವವರೇ ಇರುತ್ತಿರಲಿಲ್ಲ. ಅದು ಸಾದಾ ದೋಸೆಗೆ ಪ್ರಸಿದ್ಧವಾದ ಹೋಟೆಲು. ಅಲ್ಲಿ ಬಡವರಾದ ವಿಧವೆಯರಿಂದ ಹಿಟ್ಟನ್ನು ರುಬ್ಬಿಸಿ ಮಾಡುತ್ತಿದ್ದರು. ಆ ದೋಸೆಯನ್ನು ನೋಡುವುದೇ ಒಂದು ಖುಷಿ. ಬೆಳ್ಳಗೆ ಬಿಳೀ ತೂತಿನಿಂದ ಕೂಡಿದ್ದು ಬಾಯಲ್ಲಿ ನೀರು ತರಿಸುತ್ತಿತ್ತು. ಅದಕ್ಕೆ ಹುರಿಗಡಲೆ ಚಟ್ನಿ, ಅದರ ಮೇಲೆ ಮರಳು ಮರಳಾಗಿರುವ ಹಳ್ಳಿಯ ತುಪ್ಪ. ಆ ಚಟ್ನಿಗೂ ಆ ತುಪ್ಪಕ್ಕೂ ಒಳ್ಳೇ ಕಾಂಬಿನೇಷನ್ನು. ಜೊತೆಗೆ ನಂಜಿಕೊಳ್ಳುವುದಕ್ಕೆ ಮಾಂತ್ರಿಕ ರುಚಿಯ ಈರುಳ್ಳಿ-ಆಲೂಗಡ್ಡೆಯ ಪಲ್ಯ. ಆ ಸಾದಾ ದೋಸೆಯ ಖ್ಯಾತಿ ಎಷ್ಟಿತ್ತೆಂದರೆ ಅದನ್ನು ತಿನ್ನಲು ಹತ್ತಿರದ ನಂಜನಗೂಡು, ಶ್ರೀರಂಗಪಟ್ಟಣ, ಎಡತೊರೆ ಅಲ್ಲಿಂದೆಲ್ಲ ಗಿರಾಕಿಗಳು ಬರುತ್ತಿದ್ದರು. ಅಲ್ಲಿ ಯಾವಾಗ ನೋಡಿದರೂ ಸೀಟೇ ಸಿಗುತ್ತಿರಲಿಲ್ಲ. ತಾಳ್ಮೆಯಿಂದ ಕಾಯ್ದವರಿಗೆ ಮಾತ್ರ ತಿಂಡಿ ಲಭ್ಯ. ಅಲ್ಲಿ ತುಂಬಾ ಬೇಡಿಕೆಯಿದ್ದ ಮತ್ತೊಂದು ತಿನಿಸು ಎಂದರೆ ರವೆ ವಡೆ. ಅದನ್ನು ಬಿಸಿ ಬಿಸಿಯಾಗಿ, ಚಟ್ನಿಯಲ್ಲಿ ಹೊರಳಿಸಿಕೊಂಡು ತಿನ್ನಬೇಕು. ಬಾಯಲ್ಲಿಟ್ಟೊಡನೆಯೇ ಬೆಣ್ಣೆಯಂತೆ ಕರಗಿ ಹೋಗುತ್ತಿತ್ತು. ಅದನ್ನು ಎಷ್ಟು ತಿಂದರೂ ತೃಪ್ತಿಯೇ ಆಗುತ್ತಿರಲಿಲ್ಲ. ಒಂದು ದಿನ ನನ್ನ ಪಕ್ಕದಲ್ಲಿ ಕೂತಿದ್ದ ಧಾಂಡಿಗನೊಬ್ಬ ನಲವತ್ತು ವಡೆ ತಿಂದುಬಿಟ್ಟ. ಮಾಣಿ ಕೈ ಬಿಡುವಿಲ್ಲದೇ ತಂದು ಹಾಕುವುದು, ವಡೇ ಪ್ರಿಯ ತಿಂದು ಹಾಕುವುದು. ಆ ಬಕಾಸುರನಿಗೆ ಅಷ್ಟು ಸಾಲಲಿಲ್ಲ. ಅದರ ಮೇಲೆ ಮೂವತ್ತು ಸಾದಾ ವಡೆ ತಿಂದು, ಹದಿನಾರು ಲೋಟ ಕಾಫಿ ಕುಡಿದು ಎದ್ದ. ಈ ಮನುಷ್ಯ ಸತ್ತರೆ ಎಷ್ಟು ಜನ ಬೇಕಾಗುತ್ತೋ ಹೊರೋಕೆ ಎಂದುಕೊಂಡೆ, ಮನಸ್ಸಿನಲ್ಲಿ!

ಮೈಸೂರು ಆಗ ಬದನೇಕಾಯಿಗೆ ಬಹಳ ಪ್ರಸಿದ್ಧವಾಗಿತ್ತು. ಈರನಗೆರೆ ಬದನೆಕಾಯಿ ಬಲು ರುಚಿ. ಆದರಿಂದ ಎಣ್ಣೆಗಾಯಿ ಮಾಡುತ್ತಿದ್ದರು. ಬದನೆಕಾಯಿಯನ್ನು ನಾಲ್ಕು ಸೀಳಾಗಿ ಹೆಚ್ಚಿ ಮಧ್ಯೆ ಮೆಣಸಿನಪುಡಿಯನ್ನು ತುಂಬಿಸಿ ಎಣ್ಣೆಯಲ್ಲಿ ಬಾಡಿಸುತ್ತಿದ್ದರು. ಅದರ ರುಚಿ ಯಾವುದಕ್ಕೂ ಬರುತ್ತಿರಲಿಲ್ಲ. ಮೈಸೂರಿಗೆ ಭೇಟಿ ಕೊಟ್ಟವರೆಲ್ಲ ತಮ್ಮ ಊರಿಗೆ ಹೋಗುವಾಗ ಎರಡು ಬುಟ್ಟಿ ಬದನೇಕಾಯಿ, ನಾಲ್ಕು ಕುಚ್ಚು "ಮೈಸೂರು ಮಲ್ಲಿಗೆ" ತೆಗೆದುಕೊಳ್ಳದೆ ಹೋಗುತ್ತಿರಲಿಲ್ಲ; ಆಗ ಒಂದು ದೊಡ್ಡ ಬುಟ್ಟಿ ಬದನೇಕಾಯಿಗೆ ನಾಲ್ಕಾಣೆ. ಇಂಥ ಸದವಕಾಶವನ್ನು ನಮ್ಮ ಉಡುಪಿ ಬಂಧುಗಳು ಬಿಟ್ಟಾರೆಯೆ? ಬದನೇಕಾಯಿ (ವಾಂಗೀ) ಭಾತು ಮತ್ತು ಇನ್ನಿತರ ಬದನೇಕಾಯಿ ಖಾದ್ಯಗಳಿಂದ ದುಡ್ಡನ್ನು ಕೊಳ್ಳೇ ಹೊಡೆಯುತ್ತಿದ್ದರು.

ಆಗ ಮೈಸೂರು ವಿಶ್ವವಿದ್ಯಾಲಯದ ಆವರಣದಲ್ಲಿ ಒಂದು ಹೋಟೆಲಿತ್ತು. ರಾಮಯ್ಯರ್-

ಕೃಷ್ಣ ಆಯ್ಯರ್ ಎಂಬ ಆಯ್ಯರ್‌ದ್ವಯರು ಅದರ ಮಾಲೀಕರು. ಯೂನಿವರ್ಸಿಟಿ ಪ್ರೊಫೆಸರುಗಳು, ಅಧ್ಯಾಪಕರು, ವಿದ್ಯಾರ್ಥಿಗಳು ಅದರ ಕಾಯಂ ಗಿರಾಕಿಗಳು. ನಮ್ಮ ಹಾಸ್ಯ ಸಾಹಿತಿಗಳೂ ಕಾಲೇಜಿನ ಅಧ್ಯಾಪಕರೂ ಆಗಿದ್ದ ನಾ. ಕಸ್ತೂರಿಯವರು ದಿನಾಲು ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿಯ ಮಸಾಲೆ ದೋಸೆಗೆ ನ್ಯಾಯ ದೊರಕಿಸುತ್ತಿದ್ದರು. ಇಷ್ಟಕ್ಕೂ ಗುಣೈಕ ಪಕ್ಷಪಾತಿಗಳಲ್ಲವೇ, ನಮ್ಮ ಗುರುಗಳು! ಅಲ್ಲಿಯ ದೋಸೆಗೆ ವಶೀಕರಣದ ವಿದ್ಯೆ ಗೊತ್ತಿತ್ತು. ಒಂದು ಸಲ ಅದರ ರುಚಿಯನ್ನು ನೋಡಿದವರು ಬೇರೆ ಯಾವ ಹೋಟೆಲಿಗೂ ಹೋಗುತ್ತಿರಲಿಲ್ಲ.

ಆಗ ಈ ಪಾಲ್‌ಘಾಟ್ ಆಯ್ಯರುಗಳು ಒಂದು ಊಟದ ಹೋಟೆಲನ್ನೂ ನಡೆಸುತ್ತಿದ್ದರು. ಅದರ ರುಚಿಯನ್ನು ನಾನು ಏನೆಂದು ವರ್ಣಿಸಲಿ! ಊಟದ ನಂತರ ಆಗುತ್ತಿದ್ದ ತೃಪ್ತಿಯೇ ಅದಕ್ಕೆ ಸರಿಯಾದ ಸರ್ಟಿಫಿಕೇಟು. ಅಲ್ಲಿ ತಿಂಗಳೂಟಕ್ಕೆ ಹತ್ತೂವರೆ ರೂಪಾಯಿ; ಬೇರೆ ಕಡೆ ಎಂಟು ರೂಪಾಯಿ. ಆದರೆ ಅಲ್ಲಿಯ ಸ್ವಾದ ಎಲ್ಲಿಯೂ ಬರುತ್ತಿರಲಿಲ್ಲ. ರಾತ್ರಿಯ ಹೊತ್ತು ಊಟವಾದ ನಂತರ ಯಾವುದಾದರೂ ಒಂದು ಹಣ್ಣು ಕೊಡುತ್ತಿದ್ದರು. ಭಾನುವಾರದ ದಿನಗಳಲ್ಲಿ ಏನಾದರೂ ಸ್ಪೆಷಲ್ ಇರುತ್ತಿತ್ತು. ಆ ಹೋಟೆಲನ್ನು ಜನ 'ಹೆಲ್ತ್ ಕಿಚನ್' ಎಂಬ ಅನ್ವರ್ಥನಾಮದಿಂದ ಕರೆಯುತ್ತಿದ್ದರು. ಆಯ್ಯರುಗಳ ಟ್ರೇಡ್‌ಮಾರ್ಕ್ ಆದ ಅವಿಲ್ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಪರವೂರಿನಿಂದ ಬಂದವರು, "ಇಲ್ಲಿ ಹೆಲ್ತ್‌ಕಿಚನ್ ಅಂತ ಇದೆಯಂತಲ್ಲ; ಅದು ಎಲ್ಲಿದೆ? ಹೇಗೆ ಹೋಗಬೇಕು ಅದಕ್ಕೆ?" ಎಂದು ವಿಚಾರಿಸಿಕೊಂಡು ಹೋಗುತ್ತಿದ್ದರು. ಅಷ್ಟು ಪ್ರಖ್ಯಾತವಾಗಿತ್ತು ಆ ನಳಪಾಕ. ಪಳಿದ್ಯ, ಉಪ್ಪೇರಿ ಭಾನುವಾರ ಇದ್ದೇ ಇರುತ್ತಿದ್ದವು. ಉಪ್ಪೇರಿಗೆ ಲಿಮಿಟ್ ಇರಲಿಲ್ಲ. ನೀವು ಎಷ್ಟು ಬೇಕಾದರೂ ತಿನ್ನಬಹುದಾಗಿತ್ತು! ಇದನ್ನರಿತ ಇಬ್ಬರು ಕಾಲೇಜು ಹುಡುಗರು ಒಮ್ಮೆ ಬಾಜಿಕಟ್ಟಿ ಅಲ್ಲಿದ್ದ ಉಪ್ಪೇರಿಯನ್ನೆಲ್ಲಾ ತಿಂದು



ಹಾಕಿ ಮಾಲೀಕರಿಗೆ ಕಿರಿಕಿರಿಯನ್ನುಂಟುಮಾಡಿದ್ದರು.

ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಎನ್.ಎಸ್. ಸುಬ್ಬರಾಯರು ರಿಟೈರ್ ಆದಾಗ ಅವರ ಗೌರವಾರ್ಥವಾಗಿ ಆಯ್ಯರ್‌ದ್ವಯರು ಒಂದು ಭೋಜನಕೂಟವನ್ನು ಏರ್ಪಡಿಸಿದ್ದರು. ಯೂನಿವರ್ಸಿಟಿ ಕ್ಯಾಂಪಸ್ಸಿನಲ್ಲಿ ಒಂದು ಹೊಂಗೆ ಮರ ತೋಪು ಇತ್ತು. ಮರಗಳಿಗೆಲ್ಲಾ ಬಣ್ಣ ಬಣ್ಣದ ಎಲೆಕ್ಟ್ರಿಕ್ ದೀಪಮಾಲೆಯನ್ನು ಹಾಕಿ ಒಂದು ಕಿನ್ನರ ಲೋಕವನ್ನೇ ಸೃಷ್ಟಿಸಿದ್ದರು. ಆ ಔತಣಕೂಟದ ವೈಭವವನ್ನು ನಾನು ಏನೆಂದು ಹೇಳಲಿ! ಪ್ರತಿಷ್ಠಿತ ಆಹ್ವಾನಿತರ ನಡುವೆ, ಭರ್ಜರಿ ಸೂಟು ಹಾಕಿಕೊಂಡು, ಜರತಾರಿ ಪೇಟ ಧರಿಸಿ, ಪತ್ನಿ ಸಮೇತರಾಗಿ ಕೂತಿದ್ದರು ಸುಬ್ಬರಾಯರು. ಜೀವನದ ಸಾರ್ಥಕತೆಯೆಂದರೆ ಇಂಥ ರೂಪವತಿ ಹೆಂಡತಿಯನ್ನು ಪಡೆಯುವುದು ಎಂದು ಎಷ್ಟೋ ಜನ ಹೊಟ್ಟೇಕಿಚ್ಚು ಪಟ್ಟುಕೊಂಡರು. ಅಲ್ಲಿ ಬಡಿಸಿದ್ದ ಖಾದ್ಯ ಪದಾರ್ಥಗಳ ವೈವಿಧ್ಯ, ಅಚ್ಚುಕಟ್ಟು ವರ್ಣನೆಗೆ ಮೀರಿದ್ದು. ಒಂದೊಂದು ತಿನಸು ಲೊಟ್ಟೆ ಹೊಡೆದುಕೊಂಡು ತಿನ್ನುವ ಹಾಗಿತ್ತು. ಅಂದು ಅಲ್ಲಿ




ಬಾದಾಮಿ ಹಾಲಿನ ಹೊಳೆಯೇ ಹರಿದಿತ್ತು. ಆ ಚಿತ್ರಾನ್ನ, ಬೊಂಡ ನೋಡಿದರೇ ಬಾಯಲ್ಲಿ ನೀರೂರುತ್ತಿತ್ತು. ಆ ದಿನದ ಸ್ಪೆಷಲ್ ಭಕ್ಷ ಫೇಣಿ. ಪರಿಚಾರಕರು ಬುಟ್ಟಿಯಲ್ಲಿ ಹೊತ್ತುಕೊಂಡು ತಂದು ಹಾಕುತ್ತಿದ್ದರು; ತಿನ್ನುವವರಿಗೆ ಬಿಡುವೇ ಇರಲಿಲ್ಲ. ಪಕ್ಕದಲ್ಲಿ ಕೂತಿದ್ದ ನನ್ನ ಸ್ನೇಹಿತ ಷರೀಫ್ ಅದನ್ನು ತಿನ್ನುವ ಬಗೆ ಗೊತ್ತಾಗದೆ, ಅದರ ಮೇಲೆ ಅಳತೆ ಮೀರಿ ಬಾದಾಮಿ ಹಾಲನ್ನು ಸುರಿದು ಅದು ಮುದುಕನ ಗಡ್ಡದಂತಾದಾಗ ನಾವೆಲ್ಲ ಹೊಟ್ಟೆ ಹುಣ್ಣಾಗುವಂತೆ ನಕ್ಕಿದ್ದೆವು.

ಭೋಜನಾ ನಂತರ ಸುಬ್ಬರಾವ್ ದಂಪತಿಗಳಿಗೆ ಆಳುದ್ದ ಮಲ್ಲಿಗೆ ಹಾರವನ್ನು ಹಾಕಿ ಶುಭ ಕೋರಿದೆವು. ಹೊಟ್ಟೆ ಭಾರದಿಂದ ನಡಿಯುವುದಕ್ಕಾಗದೆ ಟಾಂಗ ಮಾಡಿಕೊಂಡು ಮನೆ ಸೇರಿದೆವು.

ಆಗ ಸಯಾಜಿರಾವ್ ರೋಡಿನಲ್ಲಿ ಆಗ ತಾನೆ ಆನಂದ ಭವನದ ಹೋಟೆಲು ಪ್ರಾರಂಭವಾಗಿತ್ತು (೧೯೩೫). ಆ ಕಾಲಕ್ಕೆ ಅದು ಅತ್ಯಂತ ಪ್ರತಿಷ್ಠಿತ ಹೋಟೆಲು. ಅಲ್ಲಿಗೆ ಹೋಗುತ್ತಿದ್ದವರೆಲ್ಲಾ ಸಮಾಜದ ಪ್ರತಿಷ್ಠಿತ ವ್ಯಕ್ತಿಗಳು, ಹಿರಿಯ ಸರಕಾರಿ ಅಧಿಕಾರಿಗಳು. ಅಲ್ಲಿಯೂ ಮಸಾಲೆ ದೋಸೆಯದೇ ದರ್ಬಾರು. ಅದನ್ನು ತಿನ್ನದೇ ಬರುವವರನ್ನು 'ಎಲ್ಲೋ ಬಡವರು' ಎಂದು ವರ್ಗೀಕರಿಸುತ್ತಿದ್ದರು. ಅಲ್ಲಿಯ ಪೂರಿ- ಚಪಾತಿಯದೇ ಒಂದು ವಿಶಿಷ್ಟ ರುಚಿ. ಆ ಬಾಂಜ್‌ವಾಲಾಗಳು ಸ್ವೀಟ್ಸ್ ಮಾಡುವುದರಲ್ಲಿ ಎತ್ತಿದ ಕೈ. ಹೋಟೆಲಿನ ಮುಂಭಾಗದಲ್ಲಿ ಆತ್ಯಾಕರ್ಷಕವಾಗಿ ಜೋಡಿಸಿಟ್ಟಿದ್ದ ಜಿಲೇಬಿ, ಚಿರೋಟಿ, ಜಹಾಂಗೀರು, ಫೇಣಿಯನ್ನು ನೋಡಿದರೆ ಸಾಲವನ್ನಾದರೂ ಮಾಡಿಕೊಂಡು ನಮ್ಮ ಜಿಹ್ವಾಚಾಪಲ್ಯವನ್ನು ತೀರಿಸಿಕೊಳ್ಳಬೇಕು ಎನ್ನಿಸುತ್ತಿತ್ತು. ಝಗ ಝಗಿಸುವ ಎಲೆಕ್ಟ್ರಿಕ್ ದೀಪದ ಪ್ರಕಾಶದಲ್ಲಿ ಅವು ನಮ್ಮನ್ನು 'ಬನ್ನಿ ಬನ್ನಿ'ಎಂದು ಕರೆಯುವಂತಿತ್ತು.

ಮದ್ದೂರು ವಡೆಯ ಕೀರ್ತಿಯನ್ನು ಕೇಳಿದವರು, ಮದ್ದೂರು ರೈಲ್ವೆ ಸ್ಟೇಷನ್ ಬಂದೊಡ



ಆಸೆ

'ನೋವು'
ಎಷ್ಟೇ ಬರಲಿ
ನನಗೆ
ಆದರೆ
ಯಾವತ್ತೂ
ಬರದಿರಲಿ
'ನಾನು'

-ಶಿ.ಹಾ.ಬ

ಬೆಳಗಾಗುವವರೆಗೆ....

ಸುಳ್ಳು ಮೈಕೈ ತುಂಬಿಕೊಂಡಿತ್ತು
ಸತ್ಯ ಕೊಂಚ ಕೃಶವಾಗಿತ್ತು

ಸುಳ್ಳಿನ ಮುಖದಲ್ಲಿ ನಗೆಯಿತ್ತು
ಸತ್ಯ ಸ್ವಲ್ಪ ಖಿನ್ನವಾಗಿತ್ತು


ಸುಳ್ಳಿನ ತಲೆ ಮೇಲೆ ಟೋಪಿಯಿತ್ತು
ಸತ್ಯದ ತಲೆಯಲ್ಲಿ ನರೆಕೂದಲೇ
ಹೆಚ್ಚಾಗಿತ್ತು

ಸುಳ್ಳು ಸತ್ಯದ ಪಕ್ಕದಲ್ಲೆ ಕೂತಿತು
ಮಾತು ಶುರು ಮಾಡಿತು

ಸುಳ್ಳು ಮಾತಾಡುತ್ತಾ ಹೋದಂತೆ
ಸತ್ಯದ ಬಾಯಿ ಕಟ್ಟಿತು

ಸತ್ಯ ನಿತ್ರಾಣದಲ್ಲಿ ತೂಕಡಿಸುತ್ತಿತ್ತು
ನಡುರಾತ್ರಿ ಕತ್ತಲೆ
ಸತ್ಯದ ಕಣ್ಣುಕಟ್ಟಿಸುತ್ತಿತ್ತು

ಸುಳ್ಳು ಕುಣಿದು ಕುಪ್ಪಳಿಸುತ್ತಿತ್ತು
ಕತ್ತಲು ಹೆಪ್ಪುಗಟ್ಟಿದಂತೆ
ಸುಳ್ಳಿನ ಶಕ್ತಿಯೂ ಹೆಚ್ಚುತ್ತಿತ್ತು



ಬೆಳಗಾಗುವವರೆಗೆ ಸುಳ್ಳು ಬೊಬ್ಬೆ
ಹೊಡೆಯಿತು
ಸೂರ್ಯನ ಮೊದಲ ಕಿರಣ ತಟ್ಟಿದಾಗ
ಸುಳ್ಳು ಆಕಳಿಸತೊಡಗಿತು.

✷ ಯು. ದಿವಾಕರ ರೈ,

ನೆಯ ಬೋಗಿಯಿಂದ ಇಳಿದು ವಡೆ ಕೊಳ್ಳಲು ಮುಗಿಬೀಳುತ್ತಿದ್ದರು. ಆಗಲವಾಗಿ, ಸಪೂರ ವಾಗಿ ಇದ್ದ ಆ ವಡೆಯ ರುಚಿ ಯಾವುದಕ್ಕೂ ಬರುತ್ತಿರಲಿಲ್ಲ. ಅಂಥ ವಡೆ ಈಗ ಸಿಕ್ಕೋದಾದರೆ ಎಷ್ಟು ದುಡ್ಡನ್ನಾದರೂ ಕೊಟ್ಟೇನು. ಒಂದು ಸಲ ನಾಲ್ವಡಿ ಕೃಷ್ಣರಾಜ ಒಡೆಯರು ತಮ್ಮ ಸ್ಪೆಷಲ್ ಸೆಲೂನಿಗೆ ಮದ್ದೂರು ವಡೆಯನ್ನೂ ಕಾಫಿಯನ್ನೂ ತರಿಸಿಕೊಂಡು ತಿಂದದ್ದನ್ನು ನಾನು ನೋಡಿದ್ದೇನೆ. ಹೀಗೆ ತನ್ನ ಯೋಗ್ಯತೆಯಿಂದ ರಾಜಮಾನ್ಯತೆಯನ್ನೂ ಪ್ರಜಾಮಾನ್ಯತೆಯನ್ನೂ ಪಡೆದ ಅಷ್ಟು ಪ್ರಸಿದ್ಧ ವಾದ ಆ ತಿಂಡಿ ಈಗ ಎಲ್ಲಿ ಹೋಯಿತೋ ಗೊತ್ತಿಲ್ಲ.

ಮಾಧ್ವರ ಮನೆಯಲ್ಲಿ ಮಧ್ವಾಚಾರ್ಯರ ಪುಣ್ಯದಿನದಂದು ಹಯಗ್ರೀವ ತಪ್ಪದೆ ಮಾಡುತ್ತಿದ್ದರು. ಅದರ ರುಚಿಯೇ ರುಚಿ. ಬೆಲ್ಲದ ಸ್ವಾದ ತನ್ನ ಪರಾಕಾಷ್ಠೆಯ ರುಚಿಯಲ್ಲಿ ನೋಡಬೇಕೆಂದರೆ ಅದನ್ನು ತಿನ್ನಬೇಕು. ರುಚಿ ಸಂವೇದನೆಯುಳ್ಳ ರಸಿಕರಿಗೆ ಅದು ಹೇಳಿ ಮಾಡಿಸಿದ್ದು.

ಈಗ ಕಾಲ ಬದಲಾಗಿದೆ. ವೈಭವೋಪೇತವಾದ ದೊಡ್ಡ ದೊಡ್ಡ ಫಲಾಹಾರ ಮಂದಿರಗಳು ಬಂದಿವೆ. ಅವಕ್ಕೆ ತ್ರೀಸ್ಟಾರ್, ಫೈವ್‌ಸ್ಟಾರ್, ಸೆವನ್ ಸ್ಟಾರ್ ಎಂಬ ಬೆಡಗಿನ ಹೆಸರುಗಳು ಬೇರೆ. ಅಲ್ಲೆಲ್ಲಾ ಬಾಹ್ಯಾಡಂಬರ ಜಾಸ್ತಿ. ಹೋಟೆಲುಗಳಲ್ಲಿ ನಾವು ನಿರೀಕ್ಷಿಸುವ ರುಚಿಯನ್ನೊಂದು ಬಿಟ್ಟು ಬಾಕಿದಕ್ಕೆಲ್ಲಾ ಬಹಳ ಗಮನ ಕೊಡುತ್ತಾರೆ ಹೆಣ್ಣು ಚೆನ್ನ, ಕಣ್ಣು ಕುರುಡು ಎಂಬಂತೆ. ಆ ಕಾಲದ ತಿಂಡಿಗಳ ವೈಶಿಷ್ಟ್ಯವೆಂದರೆ ರುಚಿ. ಈಗ ಅಂಥಾ ರುಚಿಯನ್ನಾಗಲಿ ಅಂಥಾ ರಸಿಕರನ್ನಾಗಲಿ ಎಲ್ಲಿಂದ ತರೋಣ ?

ಲೇಖಕರಿಗೆ ಸೂಚನೆ

- 'ಕಸ್ತೂರಿ'ಗಾಗಿ ಕಳಿಸುವಂಥ ಲೇಖನಗಳು ಕಾಗದದ ಒಂದೇ ಮಗ್ಗುಲಲ್ಲಿ ಸ್ಫುಟವಾಗಿ ಬರೆದಂಥವಾಗಿರಲಿ. ನಿಮ್ಮ ಹೆಸರು-ವಿಳಾಸಗಳು ಸ್ಪಷ್ಟವಾಗಿರಲಿ. ಅನುವಾದ, ರೂಪಾಂತರ, ಆಧಾರಿತ ಲೇಖನಗಳಾದರೆ ಮೂಲ ಲೇಖಕ-ಪ್ರಕಾಶಕರ ವಿಳಾಸ, ಅನುಮತಿ ಪತ್ರಗಳನ್ನು ಜತೆಗೆ ಲಗತ್ತಿಸಿ.
- ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಲೇಖನಗಳ ಸಂಗಡವೆ ಅಗತ್ಯ ಅಂಚೆಚೀಟಿ ಲಗತ್ತಿಸಿದ ಲಕೋಟೆಯನ್ನಿಡಿ.
- ಚುಟುಕು, ಪುಟಕೊನೆಯ ಕಿರುಲೇಖನ, 'ನೆನಪು ನೆರಳಿನಲ್ಲಿ'ಮುಂತಾದವುಗಳ ಕುರಿತು ಪತ್ರವ್ಯವಹಾರ ಮಾಡಲಾಗುವುದಿಲ್ಲ.
- ಲೇಖನದ ಕಾರ್ಬನ್ ಅಥವಾ ಝೆರಾಕ್ಸ್ ಪ್ರತಿಯನ್ನು ಕಳಿಸಲೇಬೇಡಿ.
- ಸ್ವೀಕೃತ ಲೇಖನಗಳನ್ನು ಯಥಾವಕಾಶ ಪ್ರಕಟಿಸಿ ಸೂಕ್ತ ಗೌರವಧನವನ್ನು ನೀಡಲಾಗುವುದು.

ಚಂದಾದಾರರಿಗೆ ಸೂಚನೆ

- 'ಕಸ್ತೂರಿ'ಯು ಪ್ರತಿ ತಿಂಗಳ ೧ನೇ ದಿನಾಂಕದೊಳಗೆ ಪ್ರಕಟವಾಗುವುದು. ತಿಂಗಳಿನ ೨ನೆಯ ದಿನಾಂಕದೊಳಗೆ ನಿಮಗೆ ತಲುಪದಿದ್ದಲ್ಲಿ ಚಂದಾದಾರರು ತಮ್ಮ ಟಪ್ಪಾಲು ಕಚೇರಿಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಈ ಸಂಬಂಧದಲ್ಲಿ ಪತ್ರವ್ಯವಹಾರ ಮಾಡುವಾಗ, ವಿಳಾಸ ಬದಲಾವಣೆಯ ಸಂದರ್ಭದಲ್ಲಿ, ದಯವಿಟ್ಟು ಚಂದಾನಂಬರು ಸ್ಫುಟವಾಗಿ ನಮೂದಿಸಬೇಕಾದದ್ದು ಅತ್ಯವಶ್ಯಕ.

ಪತ್ರವ್ಯವಹಾರ ವಿಳಾಸ:

ಪ್ರಸಾರಾಂಗ ವ್ಯವಸ್ಥಾಪಕ,
ಕಸ್ತೂರಿ, ಪೊ.ಬಾ. ನಂ. ೩೦,
ಹುಬ್ಬಳ್ಳಿ-೫೮೦ ೦೨೦

ಚಂದಾ ದರಗಳು

ಬಿಡಿ ಸಂಚಿಕೆಗೆ	ರೂ. ೬-೦೦
೬ ತಿಂಗಳಿಗೆ ಅಂಚೆ ವೆಚ್ಚ ಸೇರಿ	ರೂ. ೩೫-೦೦
೧ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೭೦-೦೦
೨ ವರ್ಷಕ್ಕೆ ಅಂಚೆ ವೆಚ್ಚ ಸೇರಿ	ರೂ. ೧೩೦-೦೦

ಬಿಟ್ಟೇನೆಂದರೂ ಬಿಡದೀ 'ಸ್ವಭಾವ'

ಗುರುರಾಜ ಜೋಶಿ

ಆಫೀಸಿನ ಕೆಲಸ ಮುಗಿಸಿ ಆತ ಮನೆಗೆ ಹೊರಟಿದ್ದ. ಮುಖ ವ್ಯಗ್ರವಾಗಿತ್ತು. ಮಧ್ಯಾಹ್ನ ಆಫೀಸಿನಲ್ಲಿ ಸಹೋದ್ಯೋಗಿಯೊಂದಿಗೆ ಸಣ್ಣ ಕಾರಣಕ್ಕೆ ಜಗಳಾಡಿದ್ದ. ಸಂಜೆಯಾದರೂ ತಲೆಯಲ್ಲಿ ಹೊಕ್ಕಿದ್ದ ಗುಂಗು ತೊಲಗಿರಲಿಲ್ಲ. ತನ್ನದೇ ತಪ್ಪೆಂದು ಈಗ ಅವನಿಗೆ ಅನಿಸುತ್ತಿದೆ. ಏಕೆಂದರೆ ಸಣ್ಣ ಪುಟ್ಟ ವಿಷಯಗಳಿಗೂ ದಿಢೀರ್ ಸಿಟ್ಟಿಗೇಳುವುದು ಅವನ ಸ್ವಭಾವ. 'ಛೇ, ಇನ್ನಾದರೂ ಈ ಸ್ವಭಾವ ಬಿಡಬೇಕು' ಎಂದುಕೊಳ್ಳುತ್ತಲೇ ಮನೆ ಕಡೆಗೆ ಹೊರಟಿದ್ದ ಆತ. ಇಂದಾದರೂ ಮಕ್ಕಳ ಮೇಲೆ ಸಿಟ್ಟು ಮಾಡಿಕೊಳ್ಳಬಾರದು, ಮಡದಿಗೂ ಏನನ್ನಬಾರದು ಎಂದು ಮನದಲ್ಲೇ ಸಂಕಲ್ಪ ಮಾಡಿದ. ಅದೇ ಉತ್ಸಾಹದಲ್ಲಿ ಮಕ್ಕಳಿಗೆ ಸ್ವೀಟ್ಸ್ ತೆಗೆದುಕೊಂಡ. ಮಡದಿಗಾಗಿ ಒಂದು ಕುಚ್ಚು ಹೂವು ಖರೀದಿಸಿದ. ಹೊಸ ಸಂಕಲ್ಪದ ಹುರುಪಿನಲ್ಲಿಯೇ ಮನೆಯೊಳಗೆ ಕಾಲಿಟ್ಟ ಅವನನ್ನು ಸ್ವಾಗತಿಸಿದ್ದು ಮಗಳ ಕೂಗು! ಮಗನ ಗಲಾಟೆ!

ಹಾದಿಯಲ್ಲೇ ಬಿಟ್ಟುಬಂದಿದ್ದ ಸಿಟ್ಟಿನ ಭೂತ ಮತ್ತೆ ಆವಾಹನೆಯಾಗಿತ್ತು. ಮಕ್ಕಳ ಜನ್ಮ ಜಾಲಾಡಿದ. ಹೆಂಡತಿಯ ಮೇಲೆ ಕೂಗಾಡಿದ. ಜೋರಾಗಿ ಅಬ್ಬರಿಸಿದ... ಮನೆಯಲ್ಲಿ ಸ್ಮಶಾನ ಮೌನ! ಸಂಜೆಯ ಸಂತಸ ಅರೆಗಳಿಗೆಯಲ್ಲೇ ಹಾಳಾಗಿ ಹೋಗಿತ್ತು. ಅಕ್ಕರೆಯಿಂದ ತಂದಿದ್ದ ಸ್ವೀಟ್ಸ್, ಮಲ್ಲಿಗೆ ಮೂಲೆ ಸೇರಿದ್ದವು. ಮಕ್ಕಳ ಮನಸ್ಸು ಮುದುಡಿತ್ತು. ಮಡದಿಯ ಮುಖ ಮ್ಲಾನವಾಗಿತ್ತು. ಅಳುತ್ತಲೇ ಅವಳು ತಂದಿಟ್ಟ ಚಹ ಗುಟುಕರಿಸತೊಡಗಿದಂತೆ ಅವನ ಆರ್ಭಟ ತಣ್ಣಗಾಗತೊಡಗಿತ್ತು!

"ನನ್ನ ಸ್ವಭಾವವೇ ಹೀಗೆ, ಸಣ್ಣ ಸಣ್ಣ ವಿಷಯಕ್ಕೂ ಸಿಟ್ಟು ಉಕ್ಕಿ ಬರುತ್ತದೆ. ಏನು ಮಾಡಲಿ?" ಎಂದು ಮಡದಿಯ ಮುಖ ನೋಡುತ್ತ ಹೇಳಿದವನ ಮುಖದಲ್ಲಿ ಪಶ್ಚಾತ್ತಾಪವಿತ್ತು. ವಿಷಾದ ಮಡುಗಟ್ಟಿತ್ತು. ಮಡದಿ ಮುಗುಳ್ನಕ್ಕಳು. ಆ ಮುಗುಳ್ನಗೆಯಲ್ಲಿ ವ್ಯಂಗ್ಯವಿತ್ತೆ? ಮಕ್ಕಳಿಬ್ಬರೂ ನಗುನಗುತ್ತ ಬಳಿ ಬಂದರು. ಅವನೇ ತಂದ ಸ್ವೀಟ್ಸ್ ಬಾಯಿಗಿಟ್ಟರು. ಎಲ್ಲ ಸುಖಾಂತ!

ಇದು 'ಆತ'ನೊಬ್ಬನ ಕಥೆಯಲ್ಲ.

"ನನ್ನ 'ಸ್ವಭಾವವೇ' ಹೀಗೆ. ನೀನು ತಪ್ಪು ತಿಳಿದುಕೊಳ್ಳಬೇಡ."

"ಮದುವೆಗೆ ಮುಂಚೇನೆ ನನ್ನ 'ಸ್ವಭಾವ' ನಿನಗೆ ಗೊತ್ತಿದ್ದಿದ್ದೇ. ಮತ್ಯಾಕೆ ಈಗ ಗೊಣಗುಟ್ಟೋದು?"

"ನಾನೂ ಬದಲಾಗಬೇಕೆಂದು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇನೆ. ಆದರೇನು? ಹುಟ್ಟಿನಿಂದ ಬಂದ 'ಸ್ವಭಾವ' ಬದಲಾದೀತೆ?"...

ಇವು ಪ್ರತಿನಿತ್ಯ ಒಬ್ಬರಿಲ್ಲದಿದ್ದರೆ ಇನ್ನೊಬ್ಬರ ಬಾಯಿಯಿಂದ ಉದುರುವ ಆಣಿಮುತ್ತುಗಳು.

ಹೀಗೆ ತಮ್ಮ 'ಸ್ವಭಾವ'ದ ಸಮರ್ಥನೆ ಮಾಡಿಕೊಳ್ಳುವವರ ಸಂಖ್ಯೆ ಅತ್ಯಧಿಕ. ಎಲ್ಲೋ ಕೆಲವರು ಇದಕ್ಕೆ ಅಪವಾದವಾಗಿರಬಹುದು. ಅಥವಾ 'ಸ್ವಭಾವ'ವನ್ನು ತ್ಯಜಿಸಿದ ಸಹನಶೀಲ, ದೃಢಚಿತ್ತರಿರಬಹುದು.

ಏನಿದು 'ಸ್ವಭಾವ?' ಏನಿದರ ಗುಟ್ಟು? ಏನಿರಬಹುದು ಇದರ ಶಕ್ತಿ? ನಮ್ಮೆಲ್ಲ ನಡೆ-ನುಡಿ, ಸ್ನೇಹ-ಸಂಬಂಧ, ಚಟುವಟಿಕೆಗಳೆಲ್ಲದರ

ಮೇಲೆ ಪ್ರಭಾವ ಬೀರುವ, ಸಂಪೂರ್ಣ ನಿಯಂತ್ರಣ ಸಾಧಿಸುವ ಈ 'ಸ್ವಭಾವ' ಸರ್ವಶಕ್ತವೆ? ಸರ್ವಮಾನ್ಯವೆ?

'ಸ್ವಭಾವ' ಪ್ರತಿಯೊಬ್ಬರ ಸ್ವಂತದ್ದು. ಆದರೆ ಅದು ನಮ್ಮ ಅಡಿಯಾಳಲ್ಲ. ನಾವೇ ಅದರ ಕೈಗೊಂಬೆ. ಅದರ ಆಟಾಟೋಪ ಒಮ್ಮೊಮ್ಮೆ ನಮಗೇ ಅಸಹನೀಯ. ಆದರೂ ನಾವು ಅಸಹಾಯಕರು. ಏಕೆಂದರೆ 'ಸ್ವಭಾವ'ಕ್ಕೂ ನಮಗೂ ಬಿಡದ ನಂಟು. ಗಟ್ಟಿಯಾಗಿ ತಗುಲಿಕೊಂಡ ಅಂಟು. ಬಿಟ್ಟೇನೆಂದರೂ ಬಿಡದೀ ಮಾಯೆ! ನಮ್ಮ 'ಸ್ವಭಾವ'ದೊಂದಿಗೆ ನಮ್ಮದು ಅವಿನಾಭಾವ ಸಂಬಂಧ. ನಮಗೆ ಇಷ್ಟವಾಗಿರಲಿ, ಬಿಡಲಿ ಅದು ನಮ್ಮ ಜೀವನ ಸಂಗಾತಿ!

"ನಿನಗೆಷ್ಟು ಸಲ ಹೇಳೂದು- ಉಗುರು ಕಡೀಬ್ಯಾಡ ಅಂತ. ಇನ್ನೊಮ್ಮೆ ಹಾಂಗ ಮಾಡಿದ್ರ ಬರೀನ ಹಾಕ್ತೇನಿ ನೋಡು," ಎಂಬ ಅಮ್ಮನ ಗದರಿಕೆಗೆ ತತ್ತರಿಸುವ ಪೋರ ಆ ಗಾಬರಿಯಲ್ಲೇ ಬೆರಳನ್ನು ಮತ್ತೆ ಬಾಯಿಗೆ ಒಯ್ದಿರುತ್ತಾನೆ! ಏಕೆಂದರೆ, ಅದು ಅವನ 'ಸ್ವಭಾವ'!

ಮಗುವಿನ 'ಸ್ವಭಾವ' ಇದಾದರೆ, ಯಾರೊಡನೆ ಮಾತನಾಡುವಾಗಲೂ ಪದೇ ಪದೇ ಮುಖ ಒರೆಸಿಕೊಳ್ಳುವ, ತಲೆ ಮೇಲೆ ಕೈ ಇಡುವ, ಕಂಡ ಕಂಡಲ್ಲಿ ಪಿಚಕ್ಕನೆ ಉಗುಳುವ, ಯಾರನ್ನು ಕಂಡರೂ ಮೈಮುಟ್ಟಿ ಮಾತನಾಡಿಸುವ, ಗಳಿಗೆಗೊಮ್ಮೆ ಮೂಗೇರಿಸುವ, ಸುಮ್ಮ ಸುಮ್ಮನೆ ಕ್ಯಾಕರಿಸುವ, ಆಗಾಗ ಒಂದು ಹುಬ್ಬನ್ನು ಮೇಲಕ್ಕೇರಿಸುವ 'ಸ್ವಭಾವಿ'ಗಳನ್ನು ನಾವು ಪ್ರತಿನಿತ್ಯ ನೋಡುತ್ತೇವೆ. ಹೀಗೆ ಮನೆಯಲ್ಲಿ, ಕಚೇರಿಯಲ್ಲಿ, ಗೆಳೆಯ-ಗೆಳತಿಯರ ಗುಂಪಿನಲ್ಲಿ, ಅಪರಿಚಿತರೊಡನೆ ಯಾವಾಗ



ಅಂದರೆ ಆವಾಗಲೆಲ್ಲ ಇಣುಕಿ ಅವಾಂತರ ಮಾಡುವ ಈ 'ಸ್ವಭಾವ'ಕ್ಕೆ ಮದ್ದೇ ಇಲ್ಲವೇ... ?

ಬರಿ ಸಿಡುಕು, ಕಿರಿಕಿರಿಯೊಂದೇ 'ಸ್ವಭಾವ' ಅಲ್ಲ. ಕೆಲವರಿಗೆ ಅತಿ ಉಪಕಾರದ ಹುಚ್ಚು. ಕೇಳದಿದ್ದರೂ ಓಡಿ ಬಂದು ನೆರವಾಗುವ ಇಂತಹ ಜನರೂ ರೇಜಿಗೆ ಉಂಟು ಮಾಡುತ್ತಾರೆ ಎಂದರೆ ಅಚ್ಚರಿಯಾಗಬಹುದು. ಇನ್ನು ಕೆಲವರಿರುತ್ತಾರೆ. ಬಂದವರಿಗೆಲ್ಲ ಅತಿ ಎನಿಸುವಷ್ಟು ಉಪಚಾರ ಮಾಡುವದು ಇವರ 'ಸ್ವಭಾವ'. ಇಂತಹ 'ಅತಿ'ಗಳು ಕೂಡಾ ಒಮ್ಮೊಮ್ಮೆ ಅನಾಹುತಕಾರಿ ಆಗುವ ಸಂಭವ ಇಲ್ಲದಿಲ್ಲ. ಸಮಯ ಸಂದರ್ಭಗಳ ಪರಿಗಣನೆ ಇಲ್ಲದೆ ಮಾತನಾಡುತ್ತಲೇ ಇರುವದು ಕೆಲವರ 'ಸ್ವಭಾವ'ವಾದರೆ ಮಾತನಾಡಬೇಕಾದ ಪ್ರಸಂಗದಲ್ಲಿಯೂ ಬಾಯಿಬಿಚ್ಚದ 'ಮೌನಿಬಾಬಾ'ಗಳೂ ಇದ್ದಾರೆ. ಇದರಂತೆ ಮನೆ ಮನೆಗಳಲ್ಲಿ ವಟಗುಡುವ ಅತ್ತೆಂದಿರು, ಗೊಣಗುಟ್ಟುವ ಸೊಸೆಯಂದಿರು, ಹೇಳಿದ ಮಾತಿಗೆ ಸ್ವಾಭಾವಿಕ ಎಂಬಂತೆ ತದ್ವಿರುದ್ಧ ವರ್ತನೆ ತೋರುವ ಮಕ್ಕಳು, ಹೇಳಿದ್ದನ್ನೇ ಹೇಳುವ ಹಿರಿಯರು, ನಿರಂತರ 'ಉಪದೇಶಕ' ರು, ಸಮಯಾಸಮಯ ವಿವೇಚನೆ ಇಲ್ಲದ 'ಬೋರಣ್ಣ', 'ಬೋರಮ್ಮ'ಗಳು... ಉಫ್! ಈ 'ಸ್ವಭಾವ'ಎಷ್ಟೊಂದು ವಿಧ. ಇದಕ್ಕೆ ಎಷ್ಟೊಂದು ಮುಖ!

ಹೀಗೆ ಬಹುಸ್ವರೂಪಿಯಾದ ಈ 'ಸ್ವಭಾವ'ದ ಮೂಲ ಏನು? ಬೆಳವ ಬಗೆಯಾದರೂ ಎಂತು? ಕೆಲವರ ಪ್ರಕಾರ ಪರಿಸರವೇ 'ಸ್ವಭಾವ' ದ ಜನಕ, ಪ್ರೇರಕ. ಆದರೆ ಹಲವು ಪರಿಣಿತರ ಪ್ರಕಾರ ಹಲವು ಗುಣಗಳಂತೆ ಇದೂ ಕೂಡ ವಂಶಪರಂಪರಾಗತ. "ಅಯ್ಯೋ, ಅವನ ಸಿಟ್ಟು ಏನು ಹೊಸದಾ! ಅವರಪ್ಪನ ಗುಣಾನೇ ಅವನಿಗೆ ಬಂದಿರೋದು;" ಎಂಬಂತಹ ಮಾತುಗಳು ಸರ್ವೇಸಾಮಾನ್ಯ. ಬಾಲ್ಯದ ಅನುಭವಗಳು, ಸ್ನೇಹಿತರು, ಮನೆಯುವರು ಕೂಡಾ 'ಸ್ವಭಾವ'ದ ಬೆಳವಣಿಗೆಗೆ ಯಥಾಶಕ್ತಿ ಕೊಡುಗೆ ನೀಡುತ್ತಾರೆ. ಹುಲುಸಾಗಿ ಬೆಳೆಯುವಂತೆ ನೀರೆರೆಯುತ್ತಾರೆ.

'ಸ್ವಭಾವ'ದ ಮೂಲ ಏನಾದರಾಗಲಿ, ಅದರ ಅಂಕುರಾರ್ಪಣೆ ಮಾತ್ರ ಬಾಲ್ಯದಲ್ಲೇ ಎಂಬುದು ನಿರ್ವಿವಾದ. ಅನಂತರ ಪರಿಸರದ ನೆರವಿನಿಂದ ಹುಲುಸಾಗಿ ಬೆಳೆದು ಹೆಮ್ಮರವಾಗುತ್ತದೆ. ಕೆಲವೊಮ್ಮೆ ಕೆಲ ಸದ್ಗುಹಸ್ಥರು 'ಪಕ್ಷಾಂತರ' ಮಾಡುವಂತೆ 'ಸ್ವಭಾವಾಂತರ' ಮಾಡುವವರೂ ಉಂಟು. ಆದರೆ ಇದು ಅಪವಾದ. ಹುಟ್ಟಿನಿಂದ ಬಂದ 'ಸ್ವಭಾವ' ಚಟ್ಟದವರೆಗೂ ಬೆಂಬಿಡದಂತೆ ಅಂಟಿಕೊಂಡಿರುವದೇ ಹೆಚ್ಚು.

ಹೀಗೆ ಬಾಲ್ಯದಲ್ಲಿ ನಮ್ಮನ್ನು ಹಿಡಿದಿಟ್ಟುಕೊಳ್ಳುವ 'ಸ್ವಭಾವ' ನಮ್ಮ ಮುಂದಿನ ಬೆಳವಣಿಗೆಯಲ್ಲಿ ಗಮನ ಸೆಳೆಯುವ ಪಾತ್ರವಹಿಸುತ್ತಲೇ ಇರುತ್ತದೆ. ನಮ್ಮ ಸಾಧನೆಯಲ್ಲಿ ಪಾಲುದಾರನಾಗುತ್ತದೆ. ನಮ್ಮ ಅವನತಿಗೆ ಕಾರಣವಾಗುತ್ತದೆ. ಉನ್ನತಿಗೆ ತಾನೇ ಕಾರಣ ಎಂದು ಬೀಗುತ್ತದೆ. ಹೊಸ ಸ್ನೇಹಿತರನ್ನು ಪರಿಚಯಿಸುತ್ತದೆ. ಹಳೆಯ ಸ್ನೇಹಿತರನ್ನು ಅಗಲಿಸುತ್ತದೆ......ಹೀಗೆ 'ಸ್ವಭಾವ' ತನ್ನ ಕಬಂಧ ಬಾಹುಗಳಿಂದ ನಮ್ಮ ಬದುಕನ್ನು ಭದ್ರವಾಗಿ ಹಿಡಿದು, ಕೊನೆಯವರೆಗೂ ಸವಾರಿ ಮಾಡುತ್ತದೆ.

ಹಸಿವು

"ಶಿಶು ಆಹಾರ
ಉತ್ಪಾದನಾ ಘಟಕ"
ಬೋರ್ಡು
ಬರೆದ ಕಲಾವಿದ
ಹಸಿವಿನಿಂದ
'ಆಹಾರ'
ತಿಂದುಬಿಟ್ಟಿದ್ದ!

• - ರಮೇಶಚಂದ್ರ

ಆಶ್ಚರ್ಯವೆಂದರೆ, ಈ ನಮ್ಮ 'ಸ್ವಭಾವ'ಕ್ಕೆ ಇತರರು ಒಗ್ಗಿಕೊಳ್ಳಬೇಕೆಂಬ ಅಪೇಕ್ಷೆ ನಮ್ಮದಾಗಿರುತ್ತದೆ. ಅದನ್ನು ಒತ್ತಾಯಪೂರ್ವಕವಾಗಿ ಇತರರ ಮೇಲೆ ಹೇರಲು ನಾವು ಹಿಂದೆ ಮುಂದೆ ನೋಡುವದಿಲ್ಲ! ನಮ್ಮ 'ಸ್ವಭಾವ'ದೊಂದಿಗೆ ಮನೆಯುವರೆಲ್ಲ ರಾಜಿ ಮಾಡಿಕೊಳ್ಳಬೇಕು; ಸ್ನೇಹಿತರು ವಿರೋಧಿಸಬಾರದು; ಬಂಧುಗಳು 'ಸೀರಿಯಸ್' ಆಗಿ ತೆಗೆದುಕೊಳ್ಳಬಾರದು ಎಂದೆಲ್ಲ ನಾವು ಇಚ್ಛಿಸುತ್ತೇವೆ. 'ಏನು ತಪ್ಪು ತಿಳಕೋಬೇಡ ಗುರೂ' ಎಂದು ಗೋಗರೆಯುತ್ತೇವೆ.

ನಮ್ಮ 'ಸ್ವಭಾವ'ದಿಂದಾಗಿ ಇತರರಿಗೆ ಆಗುವ ತೊಂದರೆಯ ಬಗ್ಗೆ ನಾವು ಯೋಚಿಸುವದೇ ಇಲ್ಲ. ಬದಲಾಗಿ ಅವನಿಗೆ ಹೊಂದಿಕೊಂಡು ಹೋಗುವದು ಗೊತ್ತೇ ಇಲ್ಲ ಎಂದು ಮರಳಿ ಅವರ ಬಗ್ಗೇ ದೂರುತ್ತೇವೆ. ಅದೇ ನಮ್ಮ ಸ್ವಭಾವಕ್ಕೆ ಒಗ್ಗಿಕೊಂಡು ಹೋಗುವವರನ್ನು ಕಂಡರೆ ಆತ ಅಥವಾ ಆಕೆ ಬಹಳ ಒಳ್ಳೆಯವರು!

ನಮ್ಮ ಗುಣ-ಸ್ವಭಾವಗಳು ನಮ್ಮವು. ಅವುಗಳ ಪರಿಣಾಮದ ಹೊಣೆಯೂ ನಮ್ಮದೇ. ಆದರೆ ವಿಷಾದವೆಂದರೆ, ಕೆಲವೊಮ್ಮೆ ಈ ಪರಿಣಾಮದ ಬಿಸಿ ಅನುಭವಿಸುವವರು ಇತರರಾಗಿರುತ್ತಾರೆ. 'ಅದು ನನ್ನ ಸ್ವಭಾವ' ಎಂಬ ಸಮರ್ಥನೆಯ ತೆರೆಯೊಡ್ಡುವ ನಾವು ಅದು ಬೀರುವ ಪರಿಮಾಣಗಳ ಬಗ್ಗೆ ಕಿಂಚಿತ್ ಯೋಚನೆಯನ್ನೂ ಮಾಡುವುದಿಲ್ಲ. ಮಾಡಿದರೂ ಸ್ವಭಾವ ತಿದ್ದಿಕೊಳ್ಳಲು ಯತ್ನಿಸುವುದಿಲ್ಲ. ಎಷ್ಟೇ ಯತ್ನಿಸಿದರೂ ಅದು ನಮ್ಮಿಂದ ದೂರಾಗುವುದಿಲ್ಲ ಎಂಬುದು ಇನ್ನೊಂದು ಸಮರ್ಥನೆ. ಇತರರ ಮೇಲಾಗುವ ಪರಿಣಾಮಗಳ ಮಾತಂತಿರಲಿ, ನಮ್ಮ 'ಸ್ವಭಾವ' ದ ವಿರಾಟ್ ಪರಿಣಾಮ ನಮ್ಮ ಮೇಲೆ ನಮ್ಮ ಬದುಕಿನ ಮೇಲೆ, ನಮ್ಮನ್ನೇ ನಂಬಿದ ಮನೆಯ ಸದಸ್ಯರ ಮೇಲೆ ಎಷ್ಟೊಂದು ವಿಧದಲ್ಲಿ, ಎಷ್ಟೊಂದು ಪ್ರಮಾಣದಲ್ಲಿ ಆಗುತ್ತದೆ ಎಂಬ ವಾಸ್ತವಿಕ ಸತ್ಯವನ್ನು ಮರೆಯುತ್ತೇವೆ.

ನಮ್ಮ 'ಸ್ವಭಾವ'ನಮ್ಮದಾಗಿದ್ದರೂ, ನಾವೇ ಅದರ ವಶವರ್ತಿಗಳಾಗುತ್ತೇವೆ. ಅದು ಬೀರುವ ಪರಿಣಾಮಗಳ ಹೊಣೆಗಾರಿಕೆ ಮಾತ್ರ ನಮ್ಮದೇ ಆಗಿರುತ್ತದೆ.


ನಮ್ಮ ಮನವೆಂಬ ಮಂದಿರದಲ್ಲಿ ಕುಳಿತು ನಮ್ಮ ಎಲ್ಲ ಆಗುಹೋಗುಗಳನ್ನು ನಿಯಂತ್ರಿಸುವ ಈ 'ಸ್ವಭಾವ' ಅಗೋಚರ; ಹಾಗೆಯೇ ಆಗಮ್ಯ. ಅದರ ಆಣತಿಯಂತೆ ನಮ್ಮ ನಡವಳಿಕೆ ರೂಪಿತವಾಗುತ್ತದೆ.


ಆದರೆ ವಾಸ್ತವಿಕವಾಗಿ 'ಸ್ವಭಾವ' ಎಂಬುದು ನಮ್ಮ ದೇಹದ ಮನಸ್ಸಿನ ಭಾಗವಲ್ಲ. ಅದು ನಾವು ಬೆಳೆಸಿಕೊಂಡ ಭಾವನೆ. ಪ್ರಾಮಾಣಿಕವಾಗಿ ಯತ್ನಿಸಿದಲ್ಲಿ ಅನಾಹುತಕಾರಿ 'ಸ್ವಭಾವ'ಗಳಿಗೆ ಶಾಶ್ವತ ವಿದಾಯ ಹೇಳಬಹುದು. ಈ ಜಗತ್ತಿನಲ್ಲಿ ಮಾನವನಷ್ಟು ಹೊಂದಾಣಿಕೆಯ ಪ್ರಾಣಿ ಬೇರೊಂದಿಲ್ಲ. ಬೆಳೆಯಬೇಕು, ಉಳಿಯಬೇಕೆಂಬ ತುಡಿತ ನಮ್ಮಲ್ಲಿದ್ದಷ್ಟು ಇನ್ನುಳಿದ ಪ್ರಾಣಿಗಳಲ್ಲಿ ಇಲ್ಲ. ಸ್ವತಂತ್ರರಾದ ನಾವು, ಹೇಗೋ ನಮ್ಮೊಳಗೆ ನುಸುಳಿ, ನಮ್ಮೊಂದಿಗೆ ಬೆಳೆದುಬಂದ ಸ್ವಭಾವದ ವಶವರ್ತಿಯಾಗಿರಬೇಕಿಲ್ಲ, ಅದರ ಗುಲಾಮನಾಗಿ ನರಳಬೇಕಿಲ್ಲ. ಎಲ್ಲ ಬದಲಾವಣೆ, ಹೊಂದಾಣಿಕೆ, ವಿಕಾಸಕ್ಕೆ ಮುಕ್ತ ಅವಕಾಶವಿದೆ. ವ್ಯಕ್ತಿಗತ ಬೆಳವಣಿಗೆಗೆ ಸಮೃದ್ಧವೆನಿಸುವಷ್ಟು ಮಾರ್ಗಗಳಿವೆ. ಸ್ಥಿತಿಸ್ಥಾಪಕತ್ವ ಗುಣ ಪಡೆದ ನಮ್ಮ ಮನಸ್ಸು ನಮಗೆ ದಾರಿ ತೋರಬಲ್ಲದು. ಆದರೆ ಈ ಬದಲಾವಣೆಗೆ ನಾವು ಮನಸ್ಸು ಮಾಡಬೇಕಷ್ಟೇ.

ಲಿಮಿಂಗ್ಟನ್ನಿನ ಸ್ಯಾಮ್ಯುಯಲ್ ಬಾಲ್ಡ್‌ವಿನ್ ಎಂಬಾತ ೧೭೩೬ರಲ್ಲಿ ನಿಧನನಾದ. ಅವನ ಅಂತಿಮ ಅಪೇಕ್ಷೆಯಂತೆ ಕಳೇಬರವನ್ನು ಸಮುದ್ರದಲ್ಲಿ ಸಮಾಧಿ ಮಾಡಲಾಯಿತು. ಇದೇನು ಅಪೇಕ್ಷೆ ಎಂದಿರಾ? ತನ್ನ ಸಮಾಧಿಯ ಮೇಲೆ ಕುಣಿಯಬೇಕೆಂಬ ತನ್ನ ಪತ್ನಿಯ ಹಂಬಲವನ್ನು ಹುಸಿಗೊಳಿಸಲೆಂದೇ ಸಮುದ್ರದೊಳಗೆ ಸಮಾಧಿ ಮಾಡುವಂತೆ ಅವನು ಕೋರಿದ್ದ.

ಅತ್ಯಧಿಕ ಪ್ರಚಾರ ಪಡೆದ K.V.R. ಪೋಸ್ಟಲ್ ಕೋರ್ಸ್‌ಗಳು

ಸುಲಭ ಸೂತ್ರಗಳ ಇಂಗ್ಲೀಷ್ ಕೋರ್ಸ್





25 ಕೋರ್ಸ್ ಬುಕ್ಸ್ | **6 ಗಿಫ್ಟ್ ಬುಕ್ಸ್**

ಅದ್ಭುತವಾದ ಸುಲಭ ಸೂತ್ರಗಳಿಂದ ಸುಲಭವಾಗಿ ಇಂಗ್ಲೀಷ್ ಕಲಿಸುವ 25 ಪುಸ್ತಕಗಳು (600 ಪೇಜುಗಳು) ಅತ್ಯಧಿಕ ಪ್ರಚಾರ ಪಡೆದ ಕೋರ್ಸ್ ಇದು. ಇದರೊಂದಿಗೆ ಕೋರ್ಸ್‌ಗೆ ಉಪಯೋಗ ವಾಗುವ 6 ಉಚಿತ ಪುಸ್ತಕಗಳು ಸಹಾ. ಫೀಜು ರೂ.200 ಮಾತ್ರವೇ ! ಈ ಕೋರ್ಸ್‌ನಲ್ಲಿ ಸೇರಬೇಕೆಂದು ಕೊಂಡರೇ ಕೆಳಗಿನ ಕೂಪನ್‌ನ್ನು ಪೂರ್ತಿಮಾಡಿ ಕಳುಹಿಸಿ.

ಕೆ.ವಿ.ಆರ್. ಸಿಂಪ್ಲ್ ಆರ್ಟ್ ಕೋರ್ಸ್



ಹೀಗೆ ಸುಲಭವಾಗಿ ಬರೆಯ ಬಹುದು

ನೀವು ಮನೆಯಲ್ಲಿ ಇದ್ದುಕೊಂಡೇ ಸುಲಭವಾಗಿ ಚಿತ್ರಗಳನ್ನು ಹಾಕಲು ಕಲಿಸುವ ಕೋರ್ಸ್. ಇದರಲ್ಲಿ ಡ್ರಾಯಿಂಗ್, ಕಾರ್ಟೂನ್, ಕಮರ್ಷಿಯಲ್, ಅನಾಟಮಿ, ಜಾಮಿಟ್ರಿಕಲ್, ಎಂಬ 5 ಆರ್ಟ್ ಕೋರ್ಸ್‌ಗಳು ಇವೆ. ಚಿತ್ರ ಬರೆಯುವುದನ್ನು ಕಲಿತುಕೊಂಡು ನಿಮ್ಮ ಬಿಡುವಿನ ಸಮಯದಲ್ಲಿ ಹಣಗಳಿಸಬಹುದು. ಈ ಕೋರ್ಸ್‌ಗಳೆಲ್ಲಾ ಕೇವಲ ರೂ.250 ಗೆ. ಈ ಕೋರ್ಸ್‌ನಲ್ಲಿ ಸೇರಬೇಕೆಂದು ಕೊಂಡರೇ ಕೆಳಗಿನ ಕೂಪನ್‌ನ್ನು ಪೂರ್ತಿ ಮಾಡಿ ಕಳುಹಿಸಿ.


ಕೆ.ವಿ.ಆರ್. ಪರ್ಸನಾಲಿಟಿ ಡೆವಲಪ್‌ಮೆಂಟ್ ಕೋರ್ಸ್



ನಿಮ್ಮ ಬಾಳಿನಲ್ಲಿ ದೊಡ್ಡ ಬದಲಾವಣೆ

ಅಂದುಕೊಂಡಿದ್ದನ್ನು ಸಾಧಿಸ ಬೇಕಾದರೇ ಆಲೋಚನೆಯಲ್ಲಿ, ಆಚರಣೆಯಲ್ಲಿ ಬದಲಾವಣೆ ಬರಬೇಕು. ಸಕ್ರಮವಾಗಿ ಆಲೋಚಿಸುವಂತೆ ಮಾಡುವ ಅದ್ಭುತವಾದ ವ್ಯಕ್ತಿತ್ವದ ಕೋರ್ಸ್ ಇದು. ನಿಮ್ಮ ಕನಸು ನೆನೆಸಾಗಲು 7 ವಾರಗಳು ಸಾಕು. ಈ ಕೋರ್ಸ್ ನಿಮ್ಮ ವಿಜಯಕ್ಕೆ ಏಣಿ. ಫೀಜು ತುಂಬಾ ಕಡಿಮೆ. ರೂ.99/- ಮಾತ್ರವೇ ! ಎಲ್ಲರೂ ಖಂಡಿತ ಸೇರಲೇಬೇಕಾದ ಕೋರ್ಸ್. ಈ ಕೋರ್ಸ್ ನಲ್ಲಿ ಸೇರ ಬೇಕೆಂದು ಕೊಂಡರೇ ಕೆಳಗಿನ ಕೂಪನ್‌ನ್ನು ಪೂರ್ತಿಮಾಡಿ ಕಳುಹಿಸಿ.

ಕೆ.ವಿ.ಆರ್. ಬಿಜಿನೆಸ್ ಸಕ್ಸೆಸ್ ಕೋರ್ಸ್



ಬಿಜೀ ಬಿಜಿನೆಸ್ ಲಾಭಗಳು

ನಿಮಗೆ ವ್ಯಾಪಾರ ರಹಸ್ಯಗಳನ್ನು ಸ್ಪಷ್ಟವಾಗಿ ಹೇಳುವ ಮೊಟ್ಟ ಮೊದಲನೆಯ ಕೋರ್ಸ್. ಎಲ್ಲಾ ಬಗೆಯ ವ್ಯಾಪಾರಗಳಲ್ಲಿ ಇರುವವರಿಗೆ ಉಪಯೋಗವಾಗುವುದು. ಇಕ್ಕಟ್ಟುಗಳಿಂದ ಹೇಗೆ ಹೊರಗೆ ಬರಬೇಕೆಂದು ತಿಳಿಸುವ ಅದ್ಭುತವಾದ ಕೋರ್ಸ್. ವ್ಯಾಪಾರವನ್ನು ಕುರಿತು ಪೂರ್ತಿ ವಿವರಗಳನ್ನು ನೀಡುವ ಕೋರ್ಸ್. ಕೇವಲ ರೂ.200/- ಮಾತ್ರವೇ ! ಈ ರೂ.200/- ಬಂಡವಾಳದಿಂದ ಕೋಟೀಶ್ವರರು ಆಗಿದ್ದಾರೆಂದರೇ ನೀವು ಆಶ್ಚರ್ಯಪಡ ಬೇಕಾಗಿಲ್ಲ. ಇದು ನಿಜವೆಂದು ನೀವೇ ಬೇಗ ತಿಳಿದು ಕೊಳ್ಳುವಿರಿ. ಈ ಕೋರ್ಸ್ ನಲ್ಲಿ ಸೇರ ಬೇಕೆಂದರೆ ಕೆಳಗಿನ ಕೂಪನ್‌ನ್ನು ಪೂರ್ತಿ ಮಾಡಿ ಕಳುಹಿಸಿ.

ಈ ಕೂಪನ್‌ನ್ನು ಪೂರ್ತಿಮಾಡಿ ತಕ್ಷಣ ನಮ್ಮ ವಿಳಾಸಕ್ಕೆ ಕಳುಹಿಸಿ

KVR INSTITUTE

(AN INSTITUTE OF USEFUL POSTAL COURSES)

P.B.No. 1020, 77 Habibulla Road, T.Nagar, Chennai - 600 017

ನಾನು ಪಕ್ಕದ ಬಾಕ್ಸ್‌ನಲ್ಲಿ ಟಿಕ್ ಮಾಡಿರುವ ಕೋರ್ಸ್ (ಗಳು) ನಲ್ಲಿ ಸೇರ ಬೇಕೆಂದಿದ್ದೇನೆ. ಆದರಿಂದ ಆ ಕೋರ್ಸ್ ಗಳು ಎಲ್ಲ ನನ್ನ ಒಟ್ಟು ಹಣಕ್ಕೆ V.P.P ಮೂಲಕ ಕಳುಹಿಸಿ. ಪೋಸ್ಟ್ ಮೆನ್‌ಗೆ ಹಣ ಸಲ್ಲಿಸಿ ಖಂಡಿತ ತೆಗೆದು ಕೊಳ್ಳುತ್ತೇನೆ

ದಯವಿಟ್ಟು ನಿಮ್ಮ ವಿಳಾಸವನ್ನು ಇಂಗ್ಲೀಷ್‌ನಲ್ಲಿಯೇ ಬರೆಯಿರಿ.

ನನ್ನ ಹೆಸರು ....

ನನ್ನ ವಿಳಾಸ ....

....

.... ಪಿನ್‌ಕೋಡ್ : ☐☐☐☐☐☐

ನಾನು ಸೇರ ಬೇಕೆಂದಿರುವ ಕೋರ್ಸ್‌ಗಳ ವಿವರಗಳು

ಕೆಳಗಿನ ಕೋರ್ಸ್‌ಗಳಲ್ಲಿ ನೀವು ಸೇರುವ ಕೋರ್ಸ್‌ಗೆ ಎದುರಿಗೆ ಇರುವ ಬಾಕ್ಸ್ ಗಳಲ್ಲಿ ಹೀಗೆ ☑ ಟಿಕ್ ಮಾಡಿ

ಕೋರ್ಸ್ ಹೆಸರು	ಫೀಜು	
● ಇಂಗ್ಲೀಷ್ ಕೋರ್ಸ್	ರೂ.200	☐
● ಆರ್ಟ್ ಕೋರ್ಸ್	ರೂ.250	☐
● ಪರ್ಸನಾಲಿಟಿ ಡೆವಲಪ್‌ಮೆಂಟ್ ಕೋರ್ಸ್	ರೂ.99	☐
● ಬಿಜಿನೆಸ್ ಸಕ್ಸೆಸ್ ಕೋರ್ಸ್	ರೂ.200	☐

ಭಾರತದಲ್ಲಿ ಸಮಾಜ ಕಾರ್ಯ: ಹಿನ್ನೆಲೆ, ಮುನ್ನೋಟ

ಸಂಪಾದಕ: ಎಸ್.ಆರ್.ರಾಮಸ್ವಾಮಿ, ಪುಟ: ೩೫೦, ಬೆಲೆ: ೫೫/- ಪುಸ್ತಕ ದೊರೆಯುವ ವಿಳಾಸ: ರಾಷ್ಟ್ರೋತ್ಥಾನ ಸಾಹಿತ್ಯ 'ಕೇಶವ ಶಿಲ್ಪ' ಕೆಂಪೇಗೌಡ ನಗರ, ಬೆಂಗಳೂರು-೫೬೦೦೧೯. ಮೊದಲ ಮುದ್ರಣ: ೧೯೯೭.

ಈಗ 'ಶುದ್ಧವಿಜ್ಞಾನ'ವೆಂದು (ಪ್ಯೂರ್ ಸೈನ್ಸ್) ಕರೆಯಲಾಗುವ ಶಾಸ್ತ್ರಗಳಲ್ಲಿ ಭಾರತ ಹಿಂದೆ ಬಿದ್ದಿತ್ತೆಂಬುದಕ್ಕಿಂತ ದೊಡ್ಡ ಮಿಥ್ಯೆ ಇನ್ನೊಂದಿಲ್ಲ. ಆಂಗ್ಲ ಸಾಮ್ರಾಜ್ಯವಾದವು ತನ್ನ ಪ್ರಾಬಲ್ಯ ಸ್ಥಾಪನೆಗೆ ಪೋಷಕವಾಗಲೆಂದು ದೀರ್ಘಕಾಲದ ಸತತ ಪ್ರಯತ್ನದಿಂದ ಹುಟ್ಟುಹಾಕಿ ಪ್ರಚಾರ ಮಾಡಿದ ಮಿಥ್ಯೆ ಎಷ್ಟು ಆಳವಾಗಿ ಬೇರೂರಿದೆ ಎಂದರೆ ಭಾರತೀಯರಲ್ಲಿ ಬುದ್ಧಿಜೀವಿಗಳೆನಿಸಿಕೊಂಡವರೂ ಈ ಮಿಥ್ಯೆಯನ್ನು ಗತಾನುಗತಿಕವಾಗಿ ಕಳೆದ ನೂರೈವತ್ತು ವರ್ಷಗಳಿಂದ ಪುನರುಚ್ಚರಿಸುತ್ತ ಬಂದಿದ್ದಾರೆ. ಇತ್ತೀಚಿನವರೆಗೆ ಎಲ್ಲ ವೇದಿಕೆಗಳಲ್ಲಿಯೂ ಕರ್ಣತಾಡಿತವಾಗುತ್ತಿದ್ದ ಒಂದು ಪೂರ್ಣ ನಿರಾಧಾರ ಹೇಳಿಕೆ ಇದು- "ವಿಜ್ಞಾನ ತಂತ್ರಜ್ಞಾನಗಳಲ್ಲಿ ಭಾರತ ಪಾಶ್ಚಾತ್ಯ ದೇಶಗಳಿಗಿಂತ ಮುನ್ನೂರು ವರ್ಷದಷ್ಟು ಹಿಂದೆ ಇದೆ."

ಈ ಮಿಥ್ಯೆಯ ನಿರಂತರ ಪ್ರಚಾರದಿಂದಾಗಿ ಒಂದು ಕಡೆ ಭಾರತೀಯರಲ್ಲಿ ಕೀಳರಿಮೆಯುಂಟಾಯಿತು; ಇನ್ನೊಂದು ಕಡೆ ಭಾರತೀಯರ ಪ್ರಮುಖ ಸಾಧನೆಗಳ ಬಗ್ಗೆಯೇ ಅಜ್ಞಾನ ಹರಡುವಂತಾಯಿತು. ಎಲ್ಲ ಪ್ರಮುಖ ವೈಜ್ಞಾನಿಕ ಆವಿಷ್ಕಾರಗಳಿಗೂ ಪಾಶ್ಚಾತ್ಯ ಆಕರಗಳನ್ನೇ ತೋರಿಸುವ ಪರಿಪಾಠ ಬೆಳೆದುಬಂದಿತು.

ಈ ಪರಿಸ್ಥಿತಿ ಇಂದಿಗೂ ಮುಂದುವರಿದಿರುವುದು ಆಶ್ಚರ್ಯಕರ. ಉದಾಹರಣೆಗೆ ಜ್ಯಾಮಿತಿ ಶಾಸ್ತ್ರದಲ್ಲಿ ಪೈಥಾಗೊರಸ್ಸನ ನಿಯಮವೆಂದು (ಯೂಕ್ಲಿಡನ ೪೭ನೇ ಪ್ರಮೇಯ) ಪ್ರಸಿದ್ಧವಾದ ಗಣಿತಸೂತ್ರವನ್ನು ಪೈಥಾಗೊರಸ್ಸನಿಗಿಂತ ಬಹಳ ಹಿಂದಿನ ಬೌದ್ಧಾಯನ ಶುಲ್ವ ಸೂತ್ರದಲ್ಲಿಯೇ ವಿವರಿಸಲಾಗಿದೆ. ಆದರೂ ಭಾರತೀಯ ಪಠ್ಯಪುಸ್ತಕಗಳಲ್ಲಿ ಈ ಸೂತ್ರದ ಮೂಲ ಆಕರ ಭಾರತೀಯವೆಂದು ನಿರ್ದೇಶಿಸುವ ಧೈರ್ಯವನ್ನು ನಮ್ಮ ಬುದ್ಧಿಜೀವಿ ವರ್ಗ ಇನ್ನೂ ತೋರಬೇಕಾಗಿದೆ.

ಮೇಲಿನದು ಒಂದು ಉದಾಹರಣೆಯಷ್ಟೆ. ಹಲವಾರು ಕ್ಷೇತ್ರಗಳಲ್ಲಿ ಮೂಲಭೂತ ಸಂಶೋಧನೆಗಳನ್ನು ಮಾಡಿದ ಕೀರ್ತಿ ಸಲ್ಲಬೇಕಾದದ್ದು ಭಾರತೀಯರಿಗೆ. ಕೆಲವನ್ನು ನಿದರ್ಶನಾರ್ಥ ಇಲ್ಲಿ ಸ್ಮರಿಸಬಹುದು.

ಜಗತ್ತಿನ ಮೊತ್ತ ಮೊದಲ ವೈದ್ಯಶಾಸ್ತ್ರಜ್ಞರೇ ಅಶ್ವಿನಿಕುಮಾರರು.

ವೈದ್ಯಶಾಸ್ತ್ರದ ಮೊತ್ತಮೊದಲ ಶಾಸ್ತ್ರೀಯ ಪ್ರತಿಪಾದನೆ ಮಾಡಿದ ಮೂಲ ಚರಕ ಸಂಹಿತೆಯನ್ನು ಬರೆದವನು ಅಗ್ನಿವೇಶ. ಕ್ರಿ.ಪೂ. ೧೦ನೇ ಶತಮಾನಕ್ಕೂ ಹಿಂದೆ! ಶಲ್ಯ ಚಿಕಿತ್ಸೆಯ ಮೊತ್ತ ಮೊದಲ ಶಾಸ್ತ್ರಗ್ರಂಥ ಬರೆದವನು ಸುಶ್ರುತ-ಕ್ರಿ.ಪೂ. ೬ನೇ ಶತಮಾನಕ್ಕೂ ಹಿಂದೆ. ವಿಸ್ತೃತ 'ಚರಕಸಂಹಿತೆ' ರಚಿತವಾದದ್ದು ಕ್ರಿ.ಪೂ. ೨ನೇ ಶತಮಾನದಲ್ಲಿ.

ಅಶ್ವಾಯುರ್ವೇದದ ಮೊತ್ತಮೊದಲ

ಪ್ರತಿಪಾದಕ ಸಾಲಿಹೋತ್ರ. ಪಾದರಸದಿಂದ ಬಂಗಾರವನ್ನು ಹೊರತೆಗೆಯುವ ರಸವಿದ್ಯೆಯ ಹಾಗೂ ಲೋಹಶಾಸ್ತ್ರದ ಆವಿಷ್ಕರ್ತ ನಾಗಾರ್ಜುನ. ಗ್ರಹ, ನಕ್ಷತ್ರ, ಸ್ಥಾನಗಳ ಕೋಷ್ಟಕಗಳನ್ನು ಮೊದಲು ರಚಿಸಿದವರು ಭಾರತೀಯ ಜ್ಯೋತಿಷ್ಕರು.

ಸೂರ್ಯಚಂದ್ರ ಗ್ರಹಣಗಳನ್ನು ಶಾಸ್ತ್ರೀತ್ಯಾ ಪ್ರತಿಪಾದಿಸಿದವನು ಆರ್ಯಭಟ. ಭೂಮಿಯ ಪರಿಭ್ರಮಣವನ್ನು ಶಾಸ್ತ್ರೀಯವಾಗಿ ಪ್ರತಿಪಾದಿಸಿದ ಈತ ಬೀಜಗಣಿತ ಶಾಸ್ತ್ರದ (ಆಲ್ಜಿಬ್ರಾ) ಪ್ರವರ್ತಕ ಕೂಡ. ಗುರುತ್ವಾಕರ್ಷಣ ನಿಯಮವನ್ನೂ ದಶಮಾನ ಪದ್ಧತಿಯನ್ನೂ ಪ್ರತಿಪಾದಿಸಿದವನು ಬ್ರಹ್ಮಗುಪ್ತ. ಗಣಿತಶಾಸ್ತ್ರದಲ್ಲಿ ಶೂನ್ಯದ (ಸೊನ್ನೆ) ಕಲ್ಪನೆಯನ್ನು ಆವಿಷ್ಕರಿಸಿದವನು ಗೃತ್ಸಮದ. ತ್ರಿಭುಜದ ಕ್ಷೇತ್ರಫಲವನ್ನು ಗಣಿಸುವುದು, 'ಪೈ' ಮೌಲ್ಯಾಂಕನ ನಿರ್ಣಯ ಇವೂ ಭಾರತೀಯರವು. ಸೃಷ್ಟಿವಿಕಾಸ ತತ್ತ್ವವನ್ನು ವೈಜ್ಞಾನಿಕವಾಗಿ ಪ್ರತಿಪಾದಿಸಿದವನು ಸಾಂಖ್ಯ ದರ್ಶನಕಾರ ಕಪಿಲ.

ಈ ಪಟ್ಟಿಯನ್ನು ಎಷ್ಟು ಬೇಕಾದರೂ ವಿಸ್ತರಿಸಬಹುದು. ಮುಖ್ಯ ತಾತ್ಪರ್ಯವೆಂದರೆ ಭಾರತೀಯರ ಸಾಧನೆಯ ಬಗೆಗೆ ಭಾರತೀಯರಲ್ಲಿಯೇ ಇರುವ ಅಜ್ಞಾನವನ್ನು ನೀಗಲು ಇಂದು ಒಂದು ದೊಡ್ಡ ಆಂದೋಲನದ ಅಗತ್ಯವಿದೆ.

ಹೊರಗೆ ಕಾಣುವ ವಿಜ್ಞಾನ ತಂತ್ರಜ್ಞಾನಾದಿ ಸಾಧನೆ ಎಷ್ಟೇ ಅದ್ಭುತವೆನಿಸಿದರೂ ಮನುಷ್ಯ ಅದೆಲ್ಲಕ್ಕಿಂತ ಹೆಚ್ಚಿನವನು ಎಂಬುದು ಭಾರತೀಯರ ದೃಷ್ಟಿ. ಇದನ್ನು ಜ್ಞಾಪಕದಲ್ಲಿರಿಸಿಕೊಂಡರೆ ನಮ್ಮ ಮನಸ್ಸಿನ ಇಂದಿನ ಗೊಂದಲದ ಹೆಚ್ಚು ಭಾಗ ನಿವಾರಣೆಯಾದೀತು.

೧೯೫೨ರಲ್ಲಿ ವೈಜಮನ್ ನಿಧನರಾದ ಮೇಲೆ ಇಸ್ರೇಲಿನ ಅಧ್ಯಕ್ಷರಾಗುವಂತೆ ಖ್ಯಾತ ವಿಜ್ಞಾನಿ ಐನ್‌ಸ್ಟೈನರನ್ನು ಕೋರಲಾಯಿತು. ಅದಕ್ಕೆ ಐನ್‌ಸ್ಟೈನ್ ಉತ್ತರಿಸಿದರು: "ಜೀವನದುದ್ದಕ್ಕೂ ನಾನು ಭೌತ ಪದಾರ್ಥಗಳನ್ನಷ್ಟೆ ಅಭ್ಯಾಸ ಮಾಡಿರುವೆ. ಮನುಷ್ಯರೊಡನೆಯೂ ಸರ್ಕಾರಗಳೊಡನೆಯೂ ವ್ಯವಹರಿಸುವುದು ನನ್ನ ಸಾಮರ್ಥ್ಯಕ್ಕೆ ಮೀರಿದ್ದು!"


ಖ್ಯಾತ ಗಣಿತಶಾಸ್ತ್ರಜ್ಞ ಶ್ರೀನಿವಾಸ ರಾಮಾನುಜನ್ ಒಮ್ಮೆ ಹೇಳಿದರು: ``An equation has no meaning unless it expresses a thought of God" (ಭಗವಂತನ ಯಾವುದೋ ಆದೇಶವನ್ನು ಪ್ರತಿನಿಧಿಸಿದಲ್ಲಿ ಮಾತ್ರ ಒಂದು ಗಣಿತಶಾಸ್ತ್ರ ಸಮೀಕರಣ ಅರ್ಥಪೂರ್ಣವಾಗುತ್ತದೆ.)

ಇದಕ್ಕಾಗಿಯೇ ಬಾಹ್ಯ ಪ್ರಗತಿಗಿಂತ ಮಾನವನ ಆಂತರಿಕ ಪ್ರಗತಿ ಮುಖ್ಯವೆಂದು ಹಿಂದಿನ ಭಾರತೀಯರು ನಂಬಿದುದು.

ಗತಕಾಲ ನೆನೆಯುವುದು ನಿರರ್ಥಕ ಎಂದು ಟೀಕಿಸುವ ಆಧುನಿಕರಿಗೆ ನಾವು ಕೊಡಬಹುದಾದ ಒಂದೇ ಉತ್ತರ ಸಾಕಾಗುತ್ತದೆ. ನಮ್ಮ ನಾಗರಿಕತೆಯು ಅಸಂಖ್ಯ ಏರುಪೇರುಗಳ ನಡುವೆಯೂ ಇಷ್ಟು ದೀರ್ಘಕಾಲ ಉಳಿದಿರುವುದರಿಂದ ಅದರಲ್ಲಿ ಗುಣಾಂಶಗಳು ಇದ್ದಿರಲೇಬೇಕಲ್ಲವೆ? ನಾವು ಇಂದು ಯಾರನ್ನಾದರೂ ಅನುಕರಿಸಬೇಕಾದಲ್ಲಿ ತಮ್ಮ ಪ್ರಯತ್ನದಲ್ಲಿ ಸಫಲತೆ ಪಡೆದವರನ್ನು ಅನುಕರಿಸುವುದು ಮೇಲಲ್ಲವೆ? ಕೇವಲ ೨೦೦ ವರ್ಷದೊಳಗೆ ಗತಾರ್ಥವಾಗಿದೆ ಎನಿಸುತ್ತಿರುವ ತಂತ್ರಜ್ಞಾನಪ್ರಧಾನ ಜೀವನಶೈಲಿಯನ್ನು ನಾವು ವಿಚಾರಶೂನ್ಯರಾಗಿ ಏಕೆ ಅನುಕರಿಸಬೇಕು?

ಸಂಗ್ರಹ: ಲೀಲಾಧರ ಮಾ. ಭಂಡಾರಿ

ರಜತವರ್ಷದ ರಂಗ ಸಾಧಕ ಡಾ.ಪಾರ್ಶ್ವನಾಥ್



ಡಾ.ಹೆಚ್.ಎ. ಪಾರ್ಶ್ವನಾಥ್ ಎಂಬತ್ತರ ನಂತರದ ರಂಗಭೂಮಿ ಮತ್ತು ರಂಗ ಚಟುವಟಿಕೆಗಳ ಮಾತು ಬಂದಾಗ ತಟ್ಟನೆ ನೆನಪಾಗುವ ಹೆಸರು. ವೃತ್ತಿಯಿಂದ ರೋಗಲಕ್ಷಣ ಶಾಸ್ತ್ರದ ವೈದ್ಯರಾದರೂ ಪ್ರವೃತ್ತಿಯಿಂದ ಸಾಹಿತ್ಯ, ರಂಗಭೂಮಿ, ಇತಿಹಾಸ, ಧರ್ಮವೇ ಮುಂತಾಗಿ ಹಲವಾರು ವಿಷಯಗಳನ್ನು ತಲೆಯಲ್ಲಿ ಹಾಕಿಕೊಂಡು ಸದಾ ಚಿಂತನ ಶೀಲರಾಗಿರುವ ವ್ಯಕ್ತಿ. ತಮ್ಮ ವೃತ್ತಿ ಕ್ಷೇತ್ರದಲ್ಲೆಂತೋ ಪ್ರವೃತ್ತಿ ಕ್ಷೇತ್ರದಲ್ಲೂ ಪರಿಣತರೆ. ಅದರಲ್ಲೂ ಕನ್ನಡ, ಕರ್ನಾಟಕವೆಂದರೆ ಸಾಕು, ಇವರ ಕಿವಿ ನಿಮಿರುತ್ತದೆ. ಕರ್ನಾಟಕದ ಇತಿಹಾಸವೆಂದರೆ ಇವರಿಗೆ ಪಂಚಪ್ರಾಣ.

★ ಪ್ರೊ. ತಿಪ್ಪೇಸ್ವಾಮಿ

ಇತ್ತೀಚೆಗೆ ಡಾ.ಪಾರ್ಶ್ವನಾಥ್ ಪ್ರಕಟಿಸಿರುವ 'ಸನ್ನಿಧಿ'ಯನ್ನೇ ನೋಡಿ, ಇತಿಹಾಸಕಾರರೂ ಮೆಚ್ಚಬಹುದಾದ ಅಂತೆಯೇ ಅಸೂಯೆ ಪಡಬಹುದಾದ ಪುಸ್ತಕ ಇದು. ಇದರಲ್ಲಿ ಪಾರ್ಶ್ವನಾಥರು ಚರ್ಚಿಸಿರುವ, ಚಿತ್ರಿಸಿರುವ ಸ್ಥಳಗಳ ಬಗೆಗೆ ಬಂದದ್ದು ಪುಸ್ತಕಗಳಲ್ಲಿ ಓದಿ, ಭೂಪುಟ ನೋಡಿ ಬರೆದದ್ದಲ್ಲ. ಇಲ್ಲಿರುವ ಒಂದೊಂದು ಸ್ಥಳಕ್ಕೂ, ಆ ಸ್ಥಳದ ಮೂಲೆ ಮೂಲೆಗೂ ಅನ್ನ-ನೀರನ್ನು ಲೆಕ್ಕಿಸದೆ

ಅಲೆದು ಹೆಕ್ಕಿರುವ ಎಷ್ಟೋ ಅಂಶಗಳು ಬೆರಗನ್ನು ಹುಟ್ಟಿಸುವಂಥವು. ಹೀಗಾಗಿ 'ಸನ್ನಿಧಿ' ಹೊಸ ಹೊಸ ಹೊಳಹುಗಳನ್ನು ಒಳಗೊಂಡಿರುವ ಮಹತ್ವದ ಕೃತಿ. ಈಗಲೂ ಅಷ್ಟೆ; ಈ ಸ್ಥಳಾನ್ವೇಷಿ ತನ್ನ ವೈದ್ಯವೃತ್ತಿಯನ್ನು ವ್ಯಾಪಾರಕ್ಕಿಳಿಸಿ ಕೈತುಂಬ ಹಣ ಮಾಡಿಕೊಳ್ಳಬಹುದಾಗಿದ್ದರೂ ಹಾಗೆ ಮಾಡದೆ ತನ್ನ ಕೈಯಿಂದಲೇ ಖರ್ಚು ಮಾಡಿಕೊಂಡು ಕರ್ನಾಟಕದ ಉದ್ದಗಲಕ್ಕೂ ತಿರುಗುವುದರಲ್ಲಿ ಹಾಗೂ ತಾನು ನೋಡಿದ ಸ್ಥಳಗಳ ಮುಖಾಂತರ ಕರ್ನಾಟಕದ ಗತವೈಭವವನ್ನು ಕನ್ನಡಿಗರಿಗೆ ತಿಳಿಸುವುದರಲ್ಲಿ ಅಭಿಮಾನ ಪಡುವ ಕನ್ನಡಿಗ.


ವಿಶ್ವ ಆರೋಗ್ಯ ಸಂಸ್ಥೆಯಿಂದ (WHO) ವೃತ್ತಿಪರ ಫೆಲೋಷಿಪ್ ಪಡೆದು ೧೯೮೨-೮೩ರಲ್ಲಿ ಡೆನ್ಮಾರ್ಕ್-ಇಂಗ್ಲೆಂಡ್ ದೇಶಗಳಿಗೆ ಭೇಟಿಕೊಟ್ಟಾಗಲೂ ಅಲ್ಲಿನ ಮ್ಯೂಸಿಯಂಗಳಲ್ಲಿ ಪಾಶ್ಚಾತ್ಯ ಸರಕುಗಳನ್ನು ನೋಡುವುದಕ್ಕಿಂತಲೂ ಕನ್ನಡ ಮತ್ತು ಕನ್ನಡಿಗರ ಸಂಪತ್ತನ್ನು ನೋಡುವುದರಲ್ಲೇ ಇವರ ಕಣ್ಣುಗಳು ತಲ್ಲೀನವಾಗಿದ್ದವು. ಅಲ್ಲಿ ಕಂಡ ಕನ್ನಡನಾಡಿನ ವಿಶಿಷ್ಟವಾದುದನ್ನು ಕುರಿತು ಕನ್ನಡ ಪತ್ರಿಕೆಗಳಲ್ಲಿ ಅಭಿಮಾನದಿಂದ ಬರೆದರು. ಅಲ್ಲಿನ ಸಂದರ್ಶಕರ ಪುಸ್ತಕದಲ್ಲಿ ಕನ್ನಡದಲ್ಲೇ ರುಜು ಮಾಡಿದರು. ನಾನು, "ಇಂಗ್ಲೀಷಿನಲ್ಲೇ ಮಾಡಬಹುದಿತ್ತಲ್ಲ," ಎಂದಾಗ "ಮಾಡಬಹುದಾಗಿತ್ತು. ಆದರೆ ಈ ಭಾಷೆಯ ಬಗೆಗೆ ಅವರಿಗೂ ಒಂದಿಷ್ಟು ಗೊತ್ತಾಗಲಿ ಎಂದು ಕನ್ನಡದಲ್ಲೇ ಮಾಡಿದೆ," ಎಂದು ಅಭಿಮಾನದಿಂದ ಹೇಳಿದರು. ಇನ್ನು ಕರ್ನಾಟಕದ ಹಳೇಬೀಡು, ಬೇಲೂರು, ಶ್ರವಣಬೆಳಗೊಳ, ಚಾಮುಂಡಿಬೆಟ್ಟವನ್ನೇ ನೋಡದೆ ಇಂಗ್ಲೆಂಡ್, ಅಮೇರಿಕಾ, ರಶಿಯಾ ಯಾತ್ರೆಗಳನ್ನು ಕೈಗೊಳ್ಳುವರನ್ನು ಕಂಡರೆ ಡಾ. ಪಾರ್ಶ್ವನಾಥರಿಗೆ ಕಸಿವಿಸಿಯಾಗುತ್ತದೆ-ಇದು ಅವರ ಕನ್ನಡ ಅಭಿಮಾನ, ಕರ್ನಾಟಕದ ಮೇಲಿನ ಪ್ರೀತಿ.

ಕರ್ನಾಟಕದ ಇತಿಹಾಸ ಮತ್ತು ರಂಗಭೂಮಿಗಳು ಅವರ ಹವ್ಯಾಸಿ ಪ್ರವೃತ್ತಿಯ ಎರಡು ಕಣ್ಣುಗಳು. ಇವರಿಗೆ ಇತಿಹಾಸದ ಬಗೆಗಿರುವ ಪ್ರೀತಿಯ ಬಗೆಗೆ ಈಗಾಗಲೆ ಹೇಳಿದೆ. ರಂಗಭೂಮಿ ಇವರ ಪ್ರೀತಿಯ ಕ್ಷೇತ್ರ. ತಮ್ಮ ವಿದ್ಯಾರ್ಥಿಜೀವನದಿಂದಲೇ ರಂಗಭೂಮಿಯೊಂದಿಗೆ ಸಖ್ಯ ಬೆಳೆಸಿಕೊಂಡು ಸಖಿಯಂತೆ ಅದನ್ನು ಪೋಷಿಸಿಕೊಂಡು ಬಂದಿದ್ದಾರೆ. ರಂಗಭೂಮಿಯ ವಿವಿಧ ಕ್ಷೇತ್ರಗಳನ್ನು ಆತ್ಮಸಾತ್‌ಮಾಡಿಕೊಂಡಿರುವ ಪಾರ್ಶ್ವನಾಥರಿಗೆ ಅಭಿನಯ ಆಸ್ಥೆಯ ಕ್ಷೇತ್ರ. ಯಾವುದೇ ನಾಟಕದಲ್ಲಿ ಪಾತ್ರ ಎಷ್ಟೇ ದೊಡ್ಡದಿರಲಿ, ಚಿಕ್ಕದಿರಲಿ, ನಾಟಕದುದ್ದಕ್ಕೂ ಬರುವ ನಾಯಕನದಾಗಿರಲಿ ಅಥವಾ ಒಂದೆರಡು ದೃಶ್ಯಗಳಿಗಷ್ಟೆ ಬಂದು ಮರೆಯಾಗುವ ಕಿರುಪಾತ್ರವಾಗಿರಲಿ, ಒಂದೇ ಬಗೆಯ ಪ್ರೀತಿ-ನಿಷ್ಠೆಯಿಂದ ಅಭಿನಯಿಸುವುದರಲ್ಲಿ ತನ್ಮಯತೆ ತೋರುವ ಡಾ. ಪಾರ್ಶ್ವನಾಥ್ ನಾಟಕ ತಾಲೀಮುಗಳಿಗೆ ಮಹತ್ವದ ಸ್ಥಾನ ಕೊಡುತ್ತಾರೆ. ತಾಲೀಮು ಅಂದರೆ ತಾಲೀಮು, ದಿನವೂ ಹೋಗಬೇಕು. ಮೊದಲಿನಿಂದ ಕೊನೆಯವರೆಗೂ ಅಲ್ಲಿರಬೇಕು ಎಂಬ ಸಿದ್ಧಾಂತಕ್ಕೆ ಪಕ್ಕಾಗಿರುವ ಇವರಿಗೆ ರಂಗವೆಂದರೆ ಮನೆಯನ್ನೂ ಮರೆಯುವಷ್ಟು ಸಮರ್ಪಣ ಭಾವ.

ಡಾ. ಪಾರ್ಶ್ವನಾಥ್ ರಂಗಭೂಮಿ ಮತ್ತು ವೈದ್ಯ ವೃತ್ತಿಗೆ ಪಾದಾರ್ಪಣೆಮಾಡಿ ಈ ವರ್ಷಕ್ಕೆ ಇಪ್ಪತ್ತೈದು ವರ್ಷಗಳಾಗಿವೆ. ಜೂಲೈ ೭, ೧೯೪೭ರಲ್ಲಿ ಅನಂತರಾಜಯ್ಯ ಮತ್ತು ಪ್ರಭಾವತಮ್ಮನವರ ಪುತ್ರನಾಗಿ ಜನಿಸಿದ ಡಾ. ಪಾರ್ಶ್ವನಾಥರಿಗೀಗ ಐವತ್ತು ವರ್ಷ. ಪುಟಿಯುವ ಉತ್ಸಾಹದ ಚಿಲುಮೆ, ದಷ್ಟ-ಪುಷ್ಟ

ದೇಹದ ಈ ವಾಮನ ಮೂರ್ತಿಯನ್ನು ನೋಡಿದರೆ ಇವರು ರಾಜಾ ಪಾರ್ಟಿಗೆ ಹೇಳಿ ಮಾಡಿಸಿದಂಥವರು ಎಂದು ಯಾರಿಗಾದರೂ ತಟ್ಟನೆ ಅನ್ನಿಸುತ್ತದೆ. ಸಾದಾ ಉಡುಪು ತೊಟ್ಟು ಸದಾ ಕೈಲಿ ಪುಸ್ತಕಗಳ ಕಟ್ಟೊಂದನ್ನು ಹಿಡಿದಿರುವ ಪಾರ್ಶ್ವನಾಥ್ ಅತ್ಯಂತ ಸರಳ ಜೀವಿ, ಸ್ನೇಹಶೀಲ ಮತ್ತು ನಿಗರ್ವಿ.

ಅವರು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಯ ಅಭ್ಯಾಸ ಮಾಡಿದ್ದು ತಮ್ಮ ಹುಟ್ಟೂರಾದ ಹಾಸನದಲ್ಲಿಯೆ. ಕೆಳ ಮಧ್ಯಮ ವರ್ಗದಿಂದ ಬಂದ ಇವರು ತರಗತಿಯಲ್ಲಿ ಸದಾ ಮುಂದಾಗಿದ್ದರು. ಪ್ರೌಢಶಿಕ್ಷಣದ ಅವಧಿಯಲ್ಲಿಯೇ ಗೊರೂರು ರಾಮಸ್ವಾಮಿಯ್ಯಂಗಾರರ ತಮ್ಮಂದಿರಾದ ಜಿ.ಕೆ. ನರಸಿಂಹಾಚಾರ್ಯರಿಂದ ಕನ್ನಡ ದೀಕ್ಷೆ ಮತ್ತು ವ್ಯಾಯಾಮ ಶಿಕ್ಷಕರಾದ ಎಚ್.ಬಿ. ರಮೇಶರ ಮೂಲಕ ಕೈಲಾಸಂ ಪ್ರಭಾವ. ಆ ದಿನಗಳಲ್ಲಿಯೇ ತಮ್ಮ ಶಾಲೆಯಲ್ಲಿ ಜರುಗಿದ ಕೈಲಾಸಂ ದಿನಾಚರಣೆಯಲ್ಲಿ ರಂಗ ಭೀಷ್ಮ ಆರ್.ನಾಗೇಂದ್ರರಾಯರು ಕೈಲಾಸಂ ಕುರಿತು ಮಾಡಿದ ಭಾಷಣದಿಂದ ಬಾಲಕ ಪಾರ್ಶ್ವನಾಥ್ ಪುಲಕಿತರಾದರು; ಕೈಲಾಸಂ ಭಕ್ತರಾದರು; ಏಕಲವ್ಯ ಭಕ್ತಿಯನ್ನು ಮೈಗೂಡಿಸಿಕೊಂಡರು. ಕೈಲಾಸಂ ಸಹ ಒಂದು ಕಾಲದಲ್ಲಿ ಹಾಸನದಲ್ಲಿದ್ದವರು ತಾನೆ? ಪಾರ್ಶ್ವನಾಥರ ಮನೆಯ ಪಕ್ಕದಲ್ಲಿಯೇ ವಾಸವಾಗಿದ್ದ ಕೈಲಾಸಂ ಓಡಾಡಿದ ಹಾಸನಾಂಬಾ ದೇವಾಲಯ, ನೀರು ಬಾಗಿಲು ಆಂಜನೇಯ ದೇವಸ್ಥಾನ ಮತ್ತು ಇತರೆ ಪರಿಸರದಲ್ಲಿಯೇ ನಾನು ಓಡಾಡುತ್ತಿದ್ದೇನೆ ಎಂಬ ಧನ್ಯತಾಭಾವ ಅವರಲ್ಲಿ. ಪಾರ್ಶ್ವನಾಥ್ 'ಕೈ' ಅವರ ಎಲ್ಲ ನಾಟಕಗಳನ್ನೂ ಓದಿದರು, ಅಭ್ಯಸಿಸಿದರು. ಅವೇ ದಿನಗಳಲ್ಲಿ ಹಾಸನದಲ್ಲಿ ಡಿ.ಸಿ. ಆಗಿದ್ದ ವೈ.



ರೂಪ್ಲಾ ನಾಯಕ್‌ರ ಮಗನ ಸಹವಾಸದಿಂದ ಅವರ ಮನೆಯಲ್ಲಿದ್ದ ಬಹುಮೂಲ್ಯ ಗ್ರಂಥಗಳನ್ನು ಓದಿದರು.

ಡಾ. ಪಾರ್ಶ್ವನಾಥ್ ಅವರೊಂದಿಗೆ ಮಾತನಾಡುವುದು ಸಹ ಒಂದು ಅನುಭವವೆ. ಮಾತು ಮಾತಿಗೂ ಮಾತುಗಳಲ್ಲೆ ಪನ್ ಮಾಡುವ, ಆ ಮೂಲಕ ಶಬ್ದಗಳಲ್ಲಿರುವ ಶಬ್ದಕೋಶೇತರ ಅರ್ಥಗಳನ್ನು ಸ್ಫುರಿಸುವಂತೆ ಮಾಡುವ ಇವರ ಕಲೆ ಎಲ್ಲರನ್ನೂ ಆಕರ್ಷಿಸುತ್ತದೆ. ಶಬ್ದಗಳೊಡನೆ ಪಾರ್ಶ್ವನಾಥ್ ಆಡುವ ರೀತಿ ಕೇಳುವವರಿಗೊಂದು ಖುಷಿ. ಕನ್ನಡದಂತೆ ಇಂಗ್ಲೀಷಿನಲ್ಲೂ ಪ್ರಭುತ್ವ. ಇವರ ಇಂಗ್ಲೀಷಿನೊಂದಿಗೆ ಆಡುವ 'ಪನ್ನಾಟವೂ' ರಂಜಕವಾಗಿರುತ್ತದೆ. ಈ ಪನ್-ಆಟ ಇವತ್ತಿನ ಸಾಮಾಜಿಕ ಸಂಗತಿಗಳನ್ನೂ ಅಧ್ವಾನಗಳನ್ನೂ ವ್ಯಂಗ್ಯ ಮಾಡುವ ಬಗೆಯನ್ನು ಕೇಳಿಯೇ ಆನಂದಿಸಬೇಕು.

ಈ ಮಾತುಗಾರಿಕೆ ಪಾರ್ಶ್ವನಾಥರಿಗೆ ಬಾಲ್ಯದಿಂದಲೇ ಕರಗತವಾದದ್ದು. ಶಾಲೆಯ

ದಿನಗಳಲ್ಲೇ ಭಾಷಣ ಮಾಡಿ ಪ್ರಶಸ್ತಿ ಸಂಪಾದಿಸುವುದರಲ್ಲಿ ನಿಸ್ಸೀಮರಾಗಿದ್ದರು. ಮೈಸೂರು ವಿಶ್ವವಿದ್ಯಾಲಯದ ನಾಟಕಶಾಸ್ತ್ರದಲ್ಲಿ ಡಿಪ್ಲೊಮಾ ಪದವೀಧರರಾದ ಡಾ. ಪಾರ್ಶ್ವನಾಥ್ ವೈದ್ಯಕೀಯ ಅಭ್ಯಾಸದುದ್ದಕ್ಕೂ ಪ್ರತಿಭಾವಂತರಾಗಿದ್ದುಕೊಂಡೇ ಬಂದವರು. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಎಂ.ಬಿ.ಬಿ.ಎಸ್. ಮತ್ತು ಎಂ.ಡಿ. ಮಾಡಿ ಇಂಗ್ಲೆಂಡ್ ಮತ್ತು ಡೆನ್ಮಾರ್ಕಿನಲ್ಲಿ ತಮ್ಮ ವೃತ್ತಿಯ ನೈಪುಣ್ಯವನ್ನು ಹೆಚ್ಚಿಸಿಕೊಂಡರು. ಈಗ ಡಾ. ಪಾರ್ಶ್ವನಾಥ್ ರೋಗಲಕ್ಷಣ ಶಾಸ್ತ್ರದಲ್ಲಿ ಅಖಿಲ ಭಾರತ ಮಟ್ಟದ ತಜ್ಞರಲ್ಲೊಬ್ಬರು. ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಪ್ರಾಧ್ಯಾಪಕ ರಾದರು. (೧೯೮೩) ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಅನೇಕ ಸಂಶೋಧನಾ ಪ್ರಬಂಧಗಳನ್ನವರು ಮಂಡಿಸಿದ್ದಾರೆ.

ನಿಂತಲ್ಲಿ ನಿಲ್ಲದ, ಕುಳಿತಲ್ಲಿ ಕೂಡದ ವ್ಯಕ್ತಿ. ಒಂದು ಕೆಲಸದಿಂದ ಇನ್ನೊಂದು ಕೆಲಸದಲ್ಲಿ ತೊಡಗಿರುವುದರಲ್ಲೆ ವಿಶ್ರಾಂತಿ ಸುಖವನ್ನು ಅನುಭವಿಸುವ ಅಪರೂಪದ ಸ್ವಭಾವ. ವೈದ್ಯಕೀಯ ವೃತ್ತಿ ಮತ್ತು ರಂಗಚಟುವಟಿಕೆಗಳನ್ನು ಜೊತೆಜೊತೆಯಾಗಿ ಕಳೆದ ಇಪ್ಪತ್ತೈದು ವರ್ಷಗಳಿಂದಲೂ ತೂಗಿಸಿಕೊಂಡು ಬರುತ್ತಿರುವ ಇವರು ಎರಡೂ ಕ್ಷೇತ್ರಗಳಲ್ಲಿ ನಿರ್ವಂಚನೆಯಿಂದ ಕೆಲಸ ಮಾಡಿದ್ದಾರೆ. ತಮ್ಮ ಕಾಲೇಜಿನ ಕಾಲಾವಧಿಯ ನಂತರ ಎಲ್ಲ ವೇಳೆಯನ್ನೂ ರಂಗಭೂಮಿಗೇ ಧಾರೆ ಎರೆದಿದ್ದಾರೆ. ಈ ಇಪ್ಪತ್ತೈದು ವರ್ಷಗಳಲ್ಲಿ ಲಂಕ್ಕೂ ಹೆಚ್ಚು ನಾಟಕಗಳಲ್ಲಿ ವಿಭಿನ್ನ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. 'ಅರಗಿನ ಬೆಟ್ಟ' ನಾಟಕದ ಮುದುಕ, 'ಸೂರ್ಯ ಶಿಕಾರಿ' ನಾಟಕದ ಮರ್ಧರ, 'ಗಾಂಪರ ಗುಂಪು' ವಿನ ಮಡ್ಡಿ, 'ಹೀಗೊಂದೂರಾಗ ಒಬ್ಬ ರಾಜ'ದ ಫೂಲ್‌ಚಂದ್,' 'ತಾಮ್ರ ಪತ್ರ'ದ ತಿಲಕ, 'ಜಾತ್ರೆ'ಯ ಹುಚ್ಚಾಪುರದ ಹುಚ್ಚು ದೊರೆ, 'ಉರಿಯುವ ನೆರಳು'ವಿನ ಮಾರ್ವಾಡಿ, 'ಮದರ್ ಕರೇಜ್'ನಲ್ಲಿನ ರೈತ ಕಮಾಂಡರ್, ಗೂಢಚಾರ ಇತ್ಯಾದಿ ನಾಟಕಗಳಲ್ಲಿನ ಇವರ ಅಭಿನಯ ತನ್ನ ಸಹಜತೆಯಿಂದಾಗಿ ಮನೋಜ್ಞವಾಗಿದೆ.

ಡಾ. ಪಾರ್ಶ್ವನಾಥ್ ಅನೇಕ ರಂಗಸಂಸ್ಥೆಗಳೊಡನೆ-ವಿಜಯಕಲಾ ಸಂಘ (ಬಳ್ಳಾರಿ), ಸುರುಚಿ, ಕದಂಬ ರಂಗವೇದಿಕೆ, ಸಮುದಾಯ, (ಮೈಸೂರು), ಅಭಿನಯ ಭಾರತಿ, ಪ್ರಗತಿ ಕಲಾವೃಂದ, ರಂಗರಂಜನಿ (ಹುಬ್ಬಳ್ಳಿ) ಸಹೃದಯ ಸಾಂಸ್ಕೃತಿಕ ಸಮನ್ವಯ ಸಮಿತಿ, ಸಮುದಾಯ (ಧಾರವಾಡ)- ನಿಕಟವಾದ ಸಂಬಂಧಗಳನ್ನಿಟ್ಟುಕೊಂಡು ಅವುಗಳ ರಂಗ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವಂತೆ 'ರಂಗತೋರಣ' 'ಸೂತ್ರಧಾರ', 'ರಂಗವಾಣಿ', 'ಸಂಯುಕ್ತ ಕರ್ನಾಟಕ', 'ನವನಾಡು' 'ಚಿತ್ರದೀಪ', ಚಿತ್ರಜ್ಯೋತಿ, ಗೊಮ್ಮಟವಾಣಿ, ಯಾತ್ರಿಕ ಮುಂತಾದ ಪತ್ರಿಕೆಗಳಲ್ಲಿ ನಾಟಕ-ಸಿನಿಮಾ ಕ್ಷೇತ್ರವನ್ನು ಕುರಿತಂತೆ ಬರೆಯುತ್ತಾ ಬಂದಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಸಾಹಿತ್ಯ ಶಿಬಿರ (೧೯೮೩), ಅಭಿನಯ ಭಾರತಿಯ ರಂಗ ಕಾರ್ಯಾಗಾರ (೧೯೮೫) ಸಮುದಾಯ ಶಿಬಿರ (೧೯೮೮), ನೀನಾಸಂ ಮತ್ತು ಪುಣೆಯಲ್ಲಿ ನಡೆದ ಚಲನಚಿತ್ರ ರಸ ಗ್ರಹಣ ಶಿಬಿರ (೧೯೮೪ ಮತ್ತು ೧೯೮೭) ಗಳಲ್ಲಿ ಭಾಗವಹಿಸಿ ತರಬೇತಿ ಮತ್ತು ನೈಪುಣ್ಯವನ್ನು ಸಂಪಾದಿಸಿರುವ ಡಾ. ಪಾರ್ಶ್ವನಾಥ್ ಅವರು ೫೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ (ಹುಬ್ಬಳ್ಳಿ) ನಾಟಕಗೋಷ್ಠಿ, ರಾಜ್ಯ ಮಟ್ಟದ

ನಾಟಕ ಸ್ಪರ್ಧೆ-ಪ್ರಿಯದರ್ಶಿನಿ ೮೮-ಯ ಸಂಚಾಲಕರಾಗಿ ಕೆಲಸ ಮಾಡಿದ್ದಾರೆ. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಉತ್ಸವಗಳನ್ನು ಏರ್ಪಡಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಅನೇಕ ವಿದ್ವತ್‌ಗೋಷ್ಠಿಗಳಲ್ಲಿ ಭಾಗವಹಿಸಿ ರಂಗಭೂಮಿಯನ್ನು ಕುರಿತಂತೆ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಕನ್ನಡವೆಂದರೆ ಕಿವಿ ನಿಮಿರಿಸಿಕೊಳ್ಳುವ ಡಾ. ಪಾರ್ಶ್ವನಾಥ್ ಅವರಿಗೆ ಕನ್ನಡದ ಮೇರು ನಟ ಡಾ. ರಾಜ್‌ಕುಮಾರ್ ಅಂದರೆ ಎಲ್ಲಿಲ್ಲದ ಶ್ರದ್ಧೆ. ಕನ್ನಡ ಸಿನಿಮಾ ಪ್ರಪಂಚದ ಬಗೆಗೆ ಅಪರಿಮಿತ ಮಾಹಿತಿಗಳ ಸಂಗ್ರಹಕಾರ. ಕನ್ನಡ ಶಕ್ತಿಕೇಂದ್ರದ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಸಕ್ರಿಯ ಸದಸ್ಯನಾಗಿಯೂ ಕನ್ನಡ ಪರವಾದ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

ಡಾ. ಪಾರ್ಶ್ವನಾಥರ ಮನೆಯ ಇಡೀ ಒಂದು ಕೋಣೆ ಪುಸ್ತಕಗಳ ಮತ್ತು ಹಳೆಯ ಪತ್ರಿಕೆಗಳ ಮ್ಯೂಸಿಯಮ್ಮೇ ಸರಿ. ಕನ್ನಡದ ಮಹತ್ವದ ಗ್ರಂಥಗಳಂತೂ ಸರಿಯೆ. ಆದರೆ ಬಹುತೇಕ ಎಲ್ಲ ಕನ್ನಡ ಪತ್ರಿಕೆಗಳ ಮೊದಲ ಸಂಚಿಕೆಗಳ ಬೃಹತ್ಸಂಗ್ರಹಾಲಯ ಇವರ ಕೋಣೆಯಲ್ಲಿದೆ. ಪತ್ರಿಕಾ ಅಕಾಡೆಮಿಯಾಗಲಿ ಸಾಹಿತ್ಯ ಅಕಾಡೆಮಿಯಾಗಲಿ ಮಾಡದಂಥ ಡಾಕ್ಯುಮೆಂಟೇಷನ್ ಕೆಲಸವನ್ನು ಪಾರ್ಶ್ವನಾಥ್ ಪ್ರೀತಿ ಮತ್ತು ಕಳಕಳಿಯಿಂದ ಮಾಡಿದ್ದಾರೆ. ಹೀಗೆ ಡಾ. ಪಾರ್ಶ್ವನಾಥ್ ತಮ್ಮ ವಿಭಿನ್ನ ರುಚಿ-ಹವ್ಯಾಸಗಳಿಂದಾಗಿ ತುಂಬ ಅಭಿರುಚಿಯ, ಕುತೂಹಲದ ವ್ಯಕ್ತಿಯಾಗಿದ್ದಾರೆ.

ಡಾ. ಹೆಚ್. ಎ. ಪಾರ್ಶ್ವನಾಥ್ ರಂಗಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವಂತೆ ಸಾಹಿತ್ಯಕ್ಷೇತ್ರದಲ್ಲೂ ಕ್ರಿಯಾಶೀಲರಾಗಿದ್ದರೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ನಾಡಿನ ಹತ್ತು-ಹಲವಾರು ಪತ್ರಿಕೆಗಳಲ್ಲಿ ನಿರಂತರವಾಗಿ ಬರೆಯುತ್ತಿದ್ದಾರೆ. ಸಾಹಿತ್ಯ, ರಂಗಭೂಮಿ ಮತ್ತು ಧರ್ಮವನ್ನು ಕುರಿತು ಪ್ರೌಢ ಪ್ರಬಂಧಗಳನ್ನು ಬರೆದಿದ್ದಾರೆ. 'ಸನ್ನಿಧಿ' ಮತ್ತು 'ರಂಗಸಂಗ' ಪ್ರಕಟವಾಗಿರುವ ಕೃತಿಗಳು. 'ವ್ಯಕ್ತಿ ಶಕ್ತಿ' ಮುದ್ರಣದಲ್ಲಿದೆ. ವೈದ್ಯರಾಗಿ ಡಾ. ಪಾರ್ಶ್ವನಾಥ್ ಬರೆದಿರುವ ವೈದ್ಯಕೀಯ ಲೇಖನಗಳು ಬಹು ಜನೋಪಯೋಗಿಯಾಗಿದ್ದು ಅವುಗಳ ಸಂಗ್ರಹ ಬರಬೇಕಾಗಿದೆ. ಆಕಾಶವಾಣಿಯಲ್ಲೂ ಇವರ ಅನೇಕ ವೈದ್ಯಕೀಯ ಭಾಷಣಗಳು ಪ್ರಸಾರವಾಗಿವೆ.

ಕನ್ನಡ ನೆಲವೆಲ್ಲ ತನ್ನೂರು ಎಂದು ಭಾವಿಸುವ ಡಾ. ಪಾರ್ಶ್ವನಾಥ್ ಉತ್ತರ ಕರ್ನಾಟಕದ ಸಾಂಸ್ಕೃತಿಕ ಕೇಂದ್ರವಾದ ಹುಬ್ಬಳ್ಳಿ-ಧಾರವಾಡದಲ್ಲಿ ೧೨ ವರ್ಷಗಳಷ್ಟು ದೀರ್ಘಕಾಲ ಸೇವೆಯಲ್ಲಿದ್ದವರು. ಹೀಗಾಗಿ ಉತ್ತರ ಕರ್ನಾಟಕ ಎಂದೊಡನೆ ಮೈಯುಬ್ಬಿ ಮನತುಂಬಿ ಮಾತನಾಡುತ್ತಾರೆ.

ಡಾ. ಹೆಚ್. ಎ. ಪಾರ್ಶ್ವನಾಥರನ್ನು ದೀರ್ಘಕಾಲದಿಂದ ಬಲ್ಲ ನಾನು ಅವರ ಸ್ನೇಹದ ಸವಿಯನ್ನು ಅನುಭವಿಸಿದ್ದೇನೆ. ನಿರಾಡಂಬರ ವ್ಯಕ್ತಿತ್ವದ ಡಾ. ಪಾರ್ಶ್ವನಾಥ್ ತಮ್ಮ ಸ್ನೇಹವಲಯದಲ್ಲಿ ನಗೆಯ ಚಿಲುಮೆ. ರಂಗಭೂಮಿ ಮತ್ತು ಸಾಹಿತ್ಯ ಕ್ಷೇತ್ರಗಳು ಇವರಿಂದ ಬಹಳಷ್ಟನ್ನು ನಿರೀಕ್ಷಿಸಬಹುದಾಗಿದೆ.

ಸಂತೈಸು

ನಲ್ಲೆಯ ಮೆಲುದನಿಗೆ
ಕಿವಿಗೊಟ್ಟ ಇನಿಯ
ಅವಳ ಮನದಾಸೆ ಪೂರೈಸಲು
ಅಡವಿಟ್ಟ ಮನೆಯ!

★ ಎಸ್.ಖಾದರಬಾದಶಹ

ದೇವಕನ್ಯೆಯರು ಪಲಾಯನ ಹೇಳಿದರು!



ಜಗತಾಲಪ್ರತಾಪ ತನ್ನ ಹೊಸ ಸಾಮ್ರಾಜ್ಯದಲ್ಲಿ ನಾಲ್ವರು ಪತ್ನಿಯರೊಂದಿಗೆ ಸ್ವರ್ಗಸುಖದಲ್ಲಿ ವಿಹರಿಸುತ್ತಿರುವಂತೆಯೆ ಅವನ ತಂದೆ ಲೋಕಾಧಿಪ, ತಾಯಿ ಹಾಗೂ ಸೋದರರೆಲ್ಲ ನಿತ್ಯ ತುಣುಕು ರೊಟ್ಟಿಗಾಗಿ ಬೆವರು ಸುರಿಸಬೇಕಾದಷ್ಟು ದರಿದ್ರಸ್ಥಿತಿಗಿಳಿದಿದ್ದರು.

ಲೋಕಾಧಿಪನ ಶತ್ರುವಾಗಿದ್ದ ನೆರೆಯ ದೇಶದ ಅರಸು ಉಷ್ಣನು ಅವನ ರಾಜ್ಯದ ಮೇಲೆ ದಾಳಿ ಮಾಡಿ ಸೋಲಿಸಿ ಅವನನ್ನೂ ಅವನ ಕುಟುಂಬದವರನ್ನೂ ಬೀದಿಗೆಳೆದಿದ್ದನು. ಅವರೆಲ್ಲ ಕಾಡಿನಿಂದ ಉರುವಲು ಕಟ್ಟಿಗೆಯನ್ನು ತಂದು ಮಾರಿ ಅದರಿಂದ ತಮ್ಮ ಹೊಟ್ಟೆ ಹೊರೆಯುತ್ತಿದ್ದರು.

ಬಹುದಿನಗಳವರೆಗೆ ಅವರ ಜೀವನ ಇದೇ ರೀತಿ ಸಾಗಿರುತ್ತಲೊಂದುದಿನ ಯಾರೋ ಒಬ್ಬ ಪ್ರತಾಪನೆಂಬ ಅರಸನಿಂದ ಆಳಲ್ಪಡುತ್ತಿರುವ ಹೊಸದಾಗಿ ಸ್ಥಾಪಿತವಾದ ರಾಜ್ಯದಲ್ಲಿ ಕಟ್ಟಿಗೆಗೆ ಒಳ್ಳೆಯ ಬೆಲೆ ಬರುವುದೆಂದು ಹೇಳಿದ್ದರಿಂದ ಅವರೆಲ್ಲ ಅಲ್ಲಿಗೆ ನಡೆದರು.

ಆ ನಗರವನ್ನು ತಲುಪಿದ ನಂತರ ಪ್ರತಿಯೊ

ಬ್ಬರೂ ತಮ್ಮ ತಮ್ಮ ಹೊರೆಯೊಂದಿಗೆ ವ್ಯಾಪಾರಕ್ಕಾಗಿ ಬೇರೆ ಬೇರೆ ದೆಸೆಗೆ ತೆರಳಿದರು. ಲೋಕಾಧಿಪನ ಹೆಂಡತಿ ಅರಮನೆಯಿರುವ ಭಾಗಕ್ಕೆ ಹೋದಳು. ಆಗಲೇ ವಯಸ್ಸಾಗಿ ಅವಳ ಮೈದೊಗಲು ಸುಕ್ಕುಗಟ್ಟಿತ್ತು. ಸೊಂಟ ಬಾಗಿತ್ತು. ಮೇಲಾಗಿ ಉರಿಬಿಸಲಲ್ಲಿ ತಲೆಯ ಮೇಲೆ ಹೊರಲಾರದ ಹೊರೆಯನ್ನು ಹೊತ್ತುಕೊಂಡು ಪ್ರಯಾಸದಿಂದ ಹೆಜ್ಜೆಯಿಡುತ್ತ ನಡೆದಿದ್ದಳಾಕೆ. ಅರಮನೆಯ ಎದುರಿಗೆ ಬರುವ ಸಮಯಕ್ಕಾಗಲೆ ತೀರ ಸೋತುಹೋಗಿದ್ದ ಆಕೆ ಈ ಆಯಾಸವನ್ನು ತಡೆಯಲಾರದೆ ಮೂರ್ಛೆ ಹೊಂದಿ ಅಲ್ಲಿಯೇ ಬಿದ್ದುಬಿಟ್ಟಳು.

ಪ್ರತಾಪ ತನ್ನ ಅರಮನೆಯ ಕಿಟಕಿಯಿಂದ ಇದನ್ನು ಕಂಡವನೆ ಸರಸರನೆ ಓಡುತ್ತ ಇಳಿದು ಕರುಣೆಯಿಂದ ಅವಳ ನೆರವಿಗೆಂದು ಬಂದನು. ಆದರೆ ಆ ವೃದ್ಧೆಯ ಮುಖ ನೋಡಿದಾಗ ಆಕೆ ತನ್ನ ತಾಯಿಯೇ ಎಂಬುದನ್ನು ತಕ್ಷಣ ಗುರುತಿಸಿದನು.ಅದರಿಂದ ಅವನಿಗೆ ವಜ್ರಾಘಾತವೇ ಆದಂತಾಯಿತು. ಯಾಕೆಂದರೆ ತನ್ನ ತಾಯಿಯನ್ನು ಅವನೆಂದೂ ಇಂಥ ಹೀನ ಸ್ಥಿತಿಯಲ್ಲಿ ಕಾಣಬಹುದೆಂದು ನಿರೀಕ್ಷಿಸಿರಲಿಲ್ಲ.

ತಕ್ಷಣ ಪ್ರತಾಪನು ತನ್ನ ಪತ್ನಿಯರಿಗೆ ತೀವ್ರವೇ ಬರಲು ಹೇಳಿಕಳುಹಿಸಿದನು. ಅವರು ಬರುವುದರೊಳಗೆಯೆ ಅವನು ತಾನೇ ತನ್ನ ತಾಯಿಯನ್ನು ನೆಳಲಿನಲ್ಲೊಯ್ದಿದ್ದನು. ಮಂದವಾಗಿ ಗಾಳಿ ಹಾಕುತ್ತ ಮುಖದ ಮೇಲೆ ತಣ್ಣೀರು ಸಿಂಪಡಿಸುತ್ತಲೆ ಅವಳಿಗೆ ಎಚ್ಚರ ಬಂದು ತುಸುವೆ ಕಣ್ತೆರೆಯಲು ಸಾಧ್ಯವಾಯಿತು. ಅನಂತರ ತುಸು ನೀರು ಕುಡಿಸಿದಾಗ ಆಕೆ ಚೇತರಿಸಿಕೊಂಡಳು. ಸಂಜ್ಞೆಯಿಂದ ಪ್ರತಾಪನು ಆಕೆ ತನ್ನ ತಾಯಿಯೆಂಬುದಾಗಿ ಪತ್ನಿಯರಿಗೆ ತಿಳಿಸಿದನು. ಆ ವೃದ್ಧೆ ತಮ್ಮ ಅತ್ತೆಯೆಂದು ತಿಳಿದಾಕ್ಷಣದಿಂದ ನಾಲ್ವರೂ ರಾಣಿಯರು ಅವಳ ಸೇವೆಯಲ್ಲಿ ನಾ ಮುಂದೆ ನೀ ಮುಂದೆ ಎಂದು ಅತ್ಯುತ್ಸಾಹದಿಂದ ನಿರತರಾದರು.

ಇದೆಲ್ಲವನ್ನೂ ಪ್ರತಾಪನ ತಾಯಿ ಬೆರಗುಗಣ್ಣುಗಳಿಂದಲೇ ನೋಡುತ್ತಿದ್ದಳಾದರೂ

ನೆಂಟ

ಅಜ್ಜಿ
ಹೇಳುತ್ತಿದ್ದಳು
ಆಪತ್ಕಾಲದಲ್ಲಿ
ಆಗುವವನೇ
ನೆಂಟ;
ನಾ
ಹೇಳುತ್ತೇನೆ
ಆಪತ್ಕಾಲದಲ್ಲಿ
ದೂರ
ಓಡುವವನೇ
ನೆಂಟ!!

★ ದೇವಯಾನಿ

ಮಾತಾಡುವಷ್ಟು ಶಕ್ತಿ ಆಕೆಗಿನ್ನೂ ಬಂದಿರಲಿಲ್ಲ. ಮಾತಾಡುವಷ್ಟು ಚೇತರಿಸಿಕೊಂಡ ನಂತರ ಆಕೆ ನಾಲ್ವರು ರಾಣಿಯನ್ನು ಕುರಿತು, "ನೀವೆಲ್ಲ ದೇವಕನ್ನಿಕೆಯರಂತಿದ್ದೀರಿ. ಆದರೆ ಬಡ ಕಟ್ಟಿಗೆ ಮಾರುವವಳಾದ ನನ್ನ ಉಪಚಾರವನ್ನು ಇಷ್ಟಾಗಿ ಏಕೆ ಮಾಡುತ್ತಿರುವಿರೊ ನನಗಂತೂ ತಿಳಿಯದಾಗಿದೆ. ನನ್ನ ಈ ಅಸಹನೀಯ ಜೀವನ ಕೊನೆಗೊಂಡಂತೆಯೆ ಎಂದು..."

ಅವಳ ಮಾತನ್ನು ಅರ್ಧಕ್ಕೆಯೇ ತಡೆದು ರಾಣಿಯರು ಅವಳನ್ನು ಅರಮನೆಯೊಳಕ್ಕೆ ಕರೆದುಕೊಂಡು ಹೋದರು. ಅಲ್ಲಿ ನಾನಾ ವಿಧವಾಗಿ ಅವಳ ಸೇವೆ ಮಾಡುತ್ತ ಸಹಜವಾಗಿಯೆ ಅವಳನ್ನವರು, "ತಾಯೆ, ಇಷ್ಟೊಂದು ನಿರಾಸೆಯಿಂದೇಕೆ ಮಾತಾಡುತ್ತಿರುವಿರಿ? ಜೀವನದಲ್ಲಿ ಬಹಳ ಕಷ್ಟಗಳನ್ನು ತಾವು ಅನುಭವಿಸಿದಂತೆ ತೋರುವುದಲ್ಲ!" ಎಂದು ಕೇಳಿದರು.

"ಕಷ್ಟಗಳೆ! ನಾನು ಎಷ್ಟು ಕಷ್ಟ ಹಾಗೂ ಅಪಮಾನ ಸಹಿಸಬೇಕಾಗಿ ಬಂತೆಂಬುದು ನಿಮ್ಮ ಊಹೆಗೂ ನಿಲುಕಲಸಾಧ್ಯ. ಒಂದು

ಕಾಲಕ್ಕೆ ಮಹಾಸಾಮ್ರಾಜ್ಯವೊಂದರ ರಾಜಾಜ್ಞಿಯಾಗಿದೆ. ನನ್ನ ಪತಿ ಲೋಕಾಧಿಪತಿ, ಆರು ಜನ ಪುತ್ರರು ಹಾಗೂ ನಮ್ಮ ರಾಜ್ಯವನ್ನು ಗೆದ್ದುಕೊಂಡ ಶತ್ರುರಾಜ ಗಡಿಪಾರು ಮಾಡಿದ. ಅಂದಿನಿಂದಲೂ ಕಟ್ಟಿಗೆ ಮಾರಿ ಉಪಜೀವನ ನಡೆಸುವುದು ನಮ್ಮ ನಿತ್ಯ ಕರ್ಮವಾಗಿ ಬಿಟ್ಟಿದೆ!"

ಈ ಹೃದಯದ್ರಾವಕ ಕತೆಯನ್ನು ತೆರೆಯಮರೆಯಿಂದಲೇ ಕೇಳುತ್ತಿದ್ದ ಪ್ರತಾಪನಿಗೆ ಇನ್ನು ತಡೆಯಲಾಗಲಿಲ್ಲ. ಧಾವಿಸಿ ಬಂದವನೇ ತಾಯಿಯ ಪಾದಗಳಿಗೆರಗಿ, "ಅಮ್ಮಾ! ನಾನು, ನಿನ್ನ ಎಲ್ಲಕ್ಕೂ ಚಿಕ್ಕ ಮಗ, ಜೀವಂತನಿರುವಾಗಲೇ ನಿನಗೆ ಇಂತಹ ಪರಿಸ್ಥಿತಿಯೊದಗಿದೆ!" ಎಂದು ಅಪಾರ ವ್ಯಥೆಯಿಂದ ನುಡಿದನು.

ಆಗ ಅವಳು ಪ್ರತಾಪನ ಮುಖವನ್ನು ದಿಟ್ಟಿಸಿ ನೋಡಿ ಕಳೆದುಹೋದನೆಂದು ತಾನು ಬಗೆದಿದ್ದ ತನ್ನ ಕಿರಿಯ ಮಗನನ್ನು ಸುಲಭವಾಗಿ ಗುರುತಿಸಿದಳು. ಆಗ ತಾಯಿ ಮಕ್ಕಳಿಬ್ಬರೂ ಒಬ್ಬರನ್ನೊಬ್ಬರು ಅಪ್ಪಿಕೊಂಡು ಎದೆ ಹಗುರಾಗುವವರೆಗೆ ಅತ್ತುಬಿಟ್ಟರು.

ನಂತರ ಪ್ರತಾಪನೇ ಮೊದಲು ಮಾತಾಡಿ, "ಅಮ್ಮಾ ತಂದೆಯವರು ಎಲ್ಲಿ? ನನ್ನ ಅಣ್ಣಂದಿರೆಲ್ಲ ಎಲ್ಲಿ?" ಎಂದು ಆತುರದಿಂದ ವಿಚಾರಿಸಿದನು.

ಒಡನೆಯೆ "ಅವರೂ ಕಟ್ಟಿಗೆ ಮಾರಲೆಂದು ಊರಲ್ಲಿ ಅಲ್ಲಲ್ಲಿ ಅಲೆಯುತ್ತಿದ್ದಾರೆ. ಅವರು ಬಹುಶಃ ನನಗಾಗಿ ಹುಡುಕುತ್ತಿರಬಹುದು" ಎಂದು ತಾಯಿ ತಿಳಿಸಿದಳು. ಪ್ರತಾಪ ತನ್ನ ತಂದೆ ಹಾಗೂ ಸೋದರರ ಶೋಧಕ್ಕಾಗಿ ನಗರದಲ್ಲೆಲ್ಲ ಸೇವಕರನ್ನು ಕಳುಹಿದನು. ತುಸು ಸಮಯದಲ್ಲಿಯೆ ಅವರೆಲ್ಲರನ್ನೂ ಗುರುತಿಸಿ ಅರಮನೆಗೆ ತರಲಾಯಿತು. ಪ್ರತಾಪ ಅತ್ಯಂತ ಸಂತಸದಿಂದ ಅವರನ್ನೆಲ್ಲ ಬರಮಾಡಿಕೊಂಡು ತನ್ನ ತಾಯಿಯಿರುವಲ್ಲಿಗೆ ಕರೆದೊಯ್ದನು.

ತನ್ನ ಪತಿ ಲೋಕಾಧಿಪನನ್ನು ಕಂಡೊಡನೆಯೆ ವೃದ್ಧ ರಾಣಿಯ ಹೃದಯ ತುಂಬಿಬಂತು. ಆ ಮೇಲೆ ಬಹುದಿನಗಳಿಂದ ಕಣ್ಮರೆಯಾಗಿದ್ದ ತನ್ನ ಕಿರಿಯ ಮಗ ಪ್ರತಾಪನೆಡೆಗೆ ಬೆರಳು ತೋರಿಸುತ್ತ ಕಣ್ಣೀರ ಮಧ್ಯದಲ್ಲಿಯೆ ಅವನು ಸೆರೆಯಿಂದ ಪಾರಾದುದೆಂತೆಂಬುದನ್ನು ವಿವರಿಸಿದಳು.

ಇದನ್ನು ಕೇಳಿದ ಪ್ರತಾಪನ ಸೋದರರಿಗೆಲ್ಲ ಸಂತೋಷವಾದಂತೆ ಕಂಡಿತಾದರೂ ವೃದ್ಧ ಅರಸನಿಗೆ ಮಾತ್ರ ಅಷ್ಟೊಂದು ಆನಂದವಾದಂತೆ ತೋರಲಿಲ್ಲ.

ಭೋಜನ, ವಿಶ್ರಾಂತಿಗಳ ನಂತರ ಲೋಕಾಧಿಪನು ಎಲ್ಲರನ್ನೂ ಕೂಡಿಸಿಕೊಂಡು ತನಗೆ ದುಃಸ್ಥಿತಿ ಒದಗಿದುದೆಂತೆಂಬುದನ್ನೂ, ಅನಂತರ ತಾವೆಲ್ಲ ಪಟ್ಟ ಬವಣೆಯನ್ನೂ ಕತೆ ಮಾಡಿ ಹೇಳಿದನು. "ಸಿರಿ ಮತ್ತು ಅರಸೊತ್ತಿಗೆಗಳು ಎಂದೂ ಶಾಶ್ವತವಲ್ಲ." ಎಂಬ ಉದ್ಗಾರದೊಂದಿಗೆ ಅವನು ತನ್ನ ಮಾತನ್ನು ಮುಗಿಸಿದನು.

ನಂತರ ತುಸು ಸಮಯದಲ್ಲಿಯೇ ಜಗತಾಲ ಪ್ರತಾಪನು ಸಿಂಹಾಸನ ತ್ಯಾಗ ಮಾಡಿ ತನ್ನ ತಂದೆಗೆ ಪಟ್ಟಗಟ್ಟಿದನು. ಆ ಮೇಲೆ ಪ್ರತಾಪ ಹಾಗೂ ಅವನ ಸೋದರರು ಅರಸನಿಗೆ ರಾಜ್ಯಭಾರದಲ್ಲಿ ಸಹಾಯ ಮಾಡತೊಡಗಿದರು.

ಒಂದು ದಿನ ರಾಜ ಕುಟುಂಬದವರೆಲ್ಲ ಹಾಯಾಗಿ ಕುಳಿತಿರುವಾಗ ಪ್ರತಾಪ ತಾನು ತಂದೆಯ ಕೋಪಕ್ಕೆ ತುತ್ತಾದ ರೀತಿಯನ್ನೂ ಅನಂತರ ತಾಯಿಯ ಸಹಾಯದಿಂದ ಪಾರಾದುದನ್ನೂ ಮೊದಲು ಮಾಡಿ ಅದುವರೆಗಿನ ತನ್ನ ಕತೆಯನ್ನೆಲ್ಲ ವಿವರಿಸಿದನು. ಅಂದು ತಾನು ಇಂದ್ರ, ವರುಣ, ನಾಗರಾಜ ಹಾಗೂ ಅಗ್ನಿಯ ಪುತ್ರಿಯರು ವಿವಿಧ ರೀತಿಯಲ್ಲಿ ತನ್ನ ಸೇವೆ ಮಾಡುವಂತೆ ಮಾಡುವುದಾಗಿ ನುಡಿದುದನ್ನು ಕೇಳಿದ ತಂದೆ ತನ್ನನ್ನು ಜಂಭದ ಕೋಳಿಯೆಂದು ಬಗೆದು ಕೊಲ್ಲಲು ನಿರ್ಧರಿಸಿದುದನ್ನು ಸ್ಮರಿಸಿಕೊಂಡು ಈಗ ಅದೇ ನಾಲ್ಕು ಜನ ದೇವಕನ್ನೆಯರು ತನ್ನವರಾಗಿರುವುದನ್ನು ನೆನೆದನು.

ಇದು ಕಿವಿಗೆ ಬಿದ್ದೊಡನೆಯೆ ವೃದ್ಧ ಅರಸು ಲೋಕಾಧಿಪ ಸಿಡಿದೆದ್ದನು. "ಈಗಲೂ ನೀನು ಜಂಭದ ಕೋಳಿಯೆ ಆಗಿರುವಿ. ಸಾಕು ನಿನ್ನ ಜಂಭ. ಇದೆಲ್ಲ ಕೇಳುವುದಕ್ಕಿಂತ ನಾನಿಲ್ಲಿಂದ

ತೊಲಗುವುದೇ ಲೇಸು" ಎಂದು ಗುಡುಗಿದನು.

ಇದರಿಂದ ಭಯಗೊಂಡ ಪ್ರತಾಪನು ಕೂಡಲೆ ತಂದೆಯ ಪಾದಗಳಿಗೆರಗಿ ಕ್ಷಮೆಯಾಚಿಸಿದನಲ್ಲದೆ ಉಷ್ಕ ರಾಜನನ್ನು ಸದೆಬಡೆದು ಲೋಕಾಧಿಪನ ಮೂಲ ರಾಜ್ಯವನ್ನು ಮರಳಿ ಸಂಪಾದಿಸಿಕೊಡುವುದಾಗಿ ಆಶ್ವಾಸನೆ ಇತ್ತನು. ಇದರಿಂದ ಅರಸನು ತುಂಬಾ ಸಂತುಷ್ಟನಾದನು.

ಹೀಗೆಯೇ ಒಂದುದಿನ ಪ್ರತಾಪನಿಗೆ ಬೇಟೆಗೆ ಹೋಗಬೇಕೆನ್ನಿಸಿತು. ಅವನ ಅಣ್ಣಂದಿರೆಲ್ಲರೂ ಅದಕ್ಕೊಪ್ಪಿದ್ದರಿಂದ ಎಲ್ಲರೂ ಅರಣ್ಯಕ್ಕೆ ಹೋಗಲು ನಿರ್ಧರಿಸಿದರು. ಆಗ ಪ್ರತಾಪನಿಗೆ ತನ್ನ ಈ ಯಶಸ್ಸಿಗೆ ಕಾರಣಳಾದ ಮುದುಕಿ ಹೇಳಿದ ಮಾತು ನೆನಪಿಗೆ ಬಂತು. ಬೇಟೆ ಹಾಗೂ ಯುದ್ಧಕ್ಕೆ ಹೋಗುವಾಗ ತನ್ನ ತೊಡೆಯಲ್ಲಿರಿಸಿಕೊಂಡ ಇಂದ್ರಕುಮಾರಿಯ ಅಂಗವಸ್ತ್ರಗಳನ್ನು ತನ್ನ ಅತ್ಯಂತ ವಿಶ್ವಾಸಕರಾದ ಯಾರಾದರೊಬ್ಬರ ಹತ್ತಿರ ಸುರಕ್ಷಿತವಾಗಿಟ್ಟು ಹೋಗಬೇಕೆಂದೂ ಅದು ಇಂದ್ರಕುಮಾರಿಯ ಕೈಗೆ ಬೀಳಕೂಡದೆಂದೂ ಆಕೆ ಎಚ್ಚರಿಸಿದ್ದಳು. ಅದನ್ನು ನೆನೆದು ಪ್ರತಾಪನು ಇಂದ್ರಕುಮಾರಿಯ ಅಂಗವಸ್ತ್ರಗಳನ್ನು ತನ್ನ ತಾಯಿಯ ಕೈಗಿತ್ತು, ಎಂಥ ಪ್ರಸಂಗದಲ್ಲಿಯೂ ಯಾವ ಕಾರಣಕ್ಕಾಗಿಯೂ ತಾನು ಮರಳಿ ಬರುವವರೆಗೆ ಅವನ್ನು ಬೇರಾರಿಗೂ ಕೊಡಕೂಡದೆಂದೂ ಕೆಳಗಿರಿಸಕೂಡದೆಂದೂ ಯಾವಾಗಲೂ ಕೈಯಲ್ಲಿಯೇ ಹಿಡಿದುಕೊಂಡಿರಬೇಕೆಂದೂ ಅವಳಿಗೆ ಹೇಳಿದನು.

ಅದು ಹೇಗೋ ತನ್ನ ಅಂಗವಸ್ತ್ರಗಳು ತನ್ನ ಅತ್ತೆಯ ಕೈಲಿರುವುದು ಇಂದ್ರಕುಮಾರಿಗೆ ತಿಳಿದುಬಿಟ್ಟಿತು. ಆಕೆ ಕೂಡಲೆ ತನ್ನ ಸವತಿಯರನ್ನೆಲ್ಲ ಕರೆದು ಆ ವಿಷಯವನ್ನು ತಿಳಿದು ಅತ್ತೆಯಿಂದ ಅಂಗವಸ್ತ್ರಗಳನ್ನು ಹೇಗಾದರೂ ಕಿತ್ತುಕೊಳ್ಳುವುದೆಂದು ಹೇಳಿದಳು. ಆನಂತರ ನಾಲ್ವರು ಸೇರಿ ಅತ್ತೆಯೆಡೆಗೆ ಹೋಗಿ ಅವಳನ್ನು ಬಹಳವಾಗಿ ಹೊಗಳಲಾರಂಭಿಸಿದರು. ವೃದ್ಧ ರಾಣಿ ತಮ್ಮ ಸ್ತುತಿಗೆ ಮಾರುಹೋಗಿದ್ದಾಳೆಂದು ಖಚಿತವಾದ ನಂತರ ಇಂದ್ರಕುಮಾರಿಯು, "ಅಮ್ಮಾ ನೀವು ನಮ್ಮಿಂದ ಏನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿದ್ದೀರಲ್ಲ ?" ಎಂದು ನಯವಾಗಿ ಕೇಳಿದಳು.

"ಅದೇನೂ ಅಲ್ಲ; ನನ್ನ ಮಗ ಭದ್ರವಾಗಿರಿಸಿಕೊಳ್ಳಲು ಅಂಗವಸ್ತ್ರಗಳನ್ನು ನನ್ನೆಡೆಗಿತ್ತಿದ್ದಾನೆ ಅಷ್ಟೆ."

"ಅವನ್ನು ನಾನೊಂದರೆಕ್ಷಣ ನೋಡಬಹುದೇ ?" ಇಂದ್ರಕುಮಾರಿ ಮತ್ತೆ ಕೇಳಿದಳು.

"ಅದಕ್ಕೇನಂತೆ !" ಎನ್ನುತ್ತ ರಾಣಿ ಅವನ್ನು ಸೊಸೆಯ ಕೈಲಿರಿಸಿದಳು.

"ಓ ! ಎಷ್ಟೊಂದು ಸುಂದರವಾಗಿವೆ ಅಲ್ಲವೆ ?" ಇಂದ್ರಕುಮಾರಿಯ ಈ ಉದ್ಗಾರಕ್ಕೆ ಉಳಿದ ಮೂವರೂ ಧ್ವನಿಗೂಡಿಸಿದರು.

"ಅಮ್ಮಾ ಒಂದು ಕ್ಷಣ ಮಾತ್ರ ನಾನಿವನ್ನು ಧರಿಸಬಹುದೆ ? ಒಡನೆಯೇ ಹಿಂತಿರುಗಿಸುವೆ" ಮನವೊಲಿಸುವಂತೆ ನಯವಾಗಿ ನುಡಿದ ಸೊಸೆಯ ಮಾತನ್ನು ಅಲ್ಲಗಳೆಯುವುದು ವೃದ್ಧ ರಾಣಿಗಾಗಲಿಲ್ಲ.

ಆದರೆ ಇಂದ್ರಕುಮಾರಿಯು ಆ ವಸ್ತ್ರಗಳನ್ನು ತೊಟ್ಟುಕೊಂಡವಳೆ "ಶಂಕರ !" ಎನ್ನುತ್ತಲೇ ತಕ್ಷಣ ನಾಲ್ವರೂ ದೇವಕನ್ಯೆಯರು ಅಂತರ್ಧಾನರಾದರು. ಆ ಅರಮನೆ, ನಗರ, ಸಾಮ್ರಾಜ್ಯಗಳೆಲ್ಲ ಗಾಳಿಯಲ್ಲಿ ತೇಲಿ ಹೋದಂತೆ ಕೂಡಲೆ ಇಲ್ಲವಾಗಿ ಪ್ರತಾಪ ಹಾಗೂ ಅವನ ಕುಟುಂಬದ ಜನರೆಲ್ಲ ಮತ್ತೆ ಭಿಕ್ಷಾಪತಿಗಳಾದರು.

ಅರಣ್ಯದಲ್ಲಿ ಬೇಟೆಯಾಡುತ್ತಿದ್ದ ಪ್ರತಾಪ ಹಾಗೂ ಅವನ ಸೋದರರಿಗೂ ಈ ಆಘಾತದ ಅನುಭವ ಕೂಡಲೇ ಆಯಿತು. ಅವರು ಏರಿದ ಕುದುರೆಗಳು ಮಾಯವಾದವು. ಅವರ ರಾಜ ಪೋಷಾಕುಗಳೆಲ್ಲ ಮರೆಯಾದವು;

ಇದೆಲ್ಲ ತನ್ನ ತಾಯಿಯ ತಪ್ಪು ಎಂದು ಗುರುತಿಸಲು ಪ್ರತಾಪನಿಗೆ ವೇಳೆ ಹಿಡಿಯಲಿಲ್ಲ.

(ಮುಂದುವರಿಯುವದು)

ಇಂಡಿಯಾದಲ್ಲಿ No.1

ಇಂಗ್ಲೀಷ್ ಇನ್‌ಸ್ಟಿಟ್ಯೂಟ್



ವಿವೇಕಾನಂದಾ

ನಿಮಗಾಗಿಯೇ ತಯಾರಿಸಿರುವ

ಹೈಪವರ್ ಇಂಗ್ಲೀಷ್ ಕೋರ್ಸ್

ಬುಡತಳ, ವ್ಯಾಕರಣ, ಇಂಗ್ಲೀಷ್ ಭಾಷೆಯ ಸಂಭಾಷಣೆ ಎಂದು

ಈ ಶಿಕ್ಷಣವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ನಿಮಗೆ ಬೇಕಾದ ವಿಭಾಗದಲ್ಲಿ ಸೇರಿ ಮನೆಯಲ್ಲಿಯೇ ಕುಳಿತು ಸಮಯ ಸಿಕ್ಕಾಗ ಅಂಚೆಯ ಮೂಲಕ ಸುಲಭವಾಗಿ ಇಂಗ್ಲೀಷ್ ಕಲಿಯ ಬಹುದು ಮತ್ತು ಸರಳವಾಗಿ ಮಾತನಾಡ ಬಹುದು.

ವಿವೇಕಾನಂದ ಹೈಪವರ್ ಇಂಗ್ಲೀಷ್ ಕೋರ್ಸ್‌ನ ವಿವರಗಳು

LEVEL-1 (**ಬುಡತಳ ಇಂಗ್ಲೀಷ್**) ABCD ಯಿಂದ ಪ್ರಾರಂಭಿಸಿ ಇಂಗ್ಲೀಷ್ ಪದಗಳನ್ನು (ಶಬ್ದಗಳನ್ನು) ಬರೆಯಲು, ಓದಲು ಶಿಕ್ಷಣ ಶುಲ್ಕ ರೂ. **150/-** ಮಾತ್ರ.

LEVEL-2 (**ವ್ಯಾಕರಣ ಶಿಕ್ಷಣ**) ಇಂಗ್ಲೀಷ್ ವ್ಯಾಕರಣವನ್ನು ಪೂರ್ತಿಯಾಗಿ ಕಲಿತು. ತಪ್ಪುಗಳಿಲ್ಲದೆ ಪತ್ರಗಳನ್ನೂ, ಪ್ರಬಂಧಗಳನ್ನೂ ಬರೆಯಲು ಶಿಕ್ಷಣ ಪಡೆಯಬಹುದು. ಶುಲ್ಕ : ರೂ **175/-**ಮಾತ್ರ.

LEVEL-3 (**ಸಂಭಾಷಣೆಯ ಶಿಕ್ಷಣ**) ಯಾವ ಸಂದರ್ಭದಲ್ಲಾದರೂ ಸರಿ, ಸಂಕೋಚವಿಲ್ಲದೆ (ಅಂಜಿಕೆಯಿಲ್ಲದೆ) ಸರಳವಾಗಿ ಇಂಗ್ಲೀಷನ್ನು ಮಾತನಾಡಲು ಶಿಕ್ಷಣ ಪಡೆಯಬಹುದು. ಶುಲ್ಕ : ರೂ **200/-** ಮಾತ್ರ.

SPECIAL OFFER

LEVEL-2&3 ಈ ಎರಡು ವಿಭಾಗಗಳಲ್ಲಿಯೂ ಸೇರಿ ಶಿಕ್ಷಣ ಪಡೆಯಲು ರೂ. **325/-**ನ್ನು ಮಾತ್ರ ಸಲ್ಲಿಸಿದರೆ ಸಾಕು.

LEVEL-1,2&3 ಈ ಮೂರು ವಿಭಾಗಗಳಲ್ಲಿಯೂ ಸೇರಿ ಶಿಕ್ಷಣ ಪಡೆಯಲು ರೂ. **450/-**ಮಾತ್ರ ಸಲ್ಲಿಸಿದರೆ ಸಾಕು.

ಮುಂಗಡ ಹಣ ಕಳುಹಿಸ ಬೇಕಾಗಿಲ್ಲ : ಪಾಠಗಳನ್ನು V.P.P. ಯಲ್ಲಿ ಕಳುಹಿಸುವೆವು.

— ಈ ಕೂಪನನ್ನು ಭರ್ತಿಮಾಡಿ ಇಂದೇ ಕಳುಹಿಸಿರಿ —

VIVEKANANDA INSTITUTE　KST

9, (K) NATESAN STREET, T.NAGAR, MADRAS-600 017.

ನಾನು ವಿವೇಕಾನಂದ ಹೈಪವರ್ ಇಂಗ್ಲೀಷ್ ಕೋರ್ಸ್‌ನಲ್ಲಿ ಸೇರಲು ಬಯಸುತ್ತೇನೆ. ನನಗೆ ಪಾಠಗಳನ್ನು V.P.P. ಯಲ್ಲಿ ಕಳುಹಿಸಿರಿ. ಅಂಚೆಯವರ ಹತ್ತಿರ ಹಣ ಸಲ್ಲಿಸಿ ಪಾಠಗಳನ್ನು ಪಡೆದು ಕೊಳ್ಳುತ್ತೇನೆ.

☐ LEVEL 1　☐ LEVEL 2 & 3

☐ LEVEL 2　☐ LEVEL 1,2&3

☐ LEVEL 3　(ಬೇಕಾಗಿರುವ ಚೌಕದಲ್ಲಿ ✔ ಗುರ್ತಿಸಿರಿ)

ಹೆಸರು :..

ವಿಳಾಸ :..

....

..............................PIN ☐

VI/308/96/Naga

ಯುಗಗಳ ಕಾಲ ಎಷ್ಟು?

ಭಾರತದ ಪುರಾಣ ಮತ್ತು ಜ್ಯೋತಿಷ್ಯಶಾಸ್ತ್ರದ ಪುಸ್ತಕಗಳಲ್ಲಿರುವ ಯುಗಗಳ ಪರಿಮಾಣಗಳನ್ನು ಈ ರೀತಿ ಅರ್ಥಮಾಡಲಾಗಿದೆ: ಒಂದು ಮಾನುಷ ವರ್ಷ =೧ ದಿವ್ಯ ದಿನ. ೩೬೦ ಮಾನುಷ ವರ್ಷ = ೧ದಿವ್ಯ ವರ್ಷ. ಹನ್ನೆರಡು ಸಹಸ್ರ ದಿವ್ಯವರ್ಷ = ಚತುರ್ಯುಗ. ಸಾವಿರ ಚತುರ್ಯುಗ = ಬ್ರಹ್ಮನ ಹಗಲು. ರಾತ್ರಿಯೂ ಇದೇ ಪರಿಮಾಣದಲ್ಲಿ. ಬ್ರಹ್ಮನ ಹಗಲು ಮುಗಿದಾಗ ಪ್ರಳಯ. ಕೃತ ೪ ಸಹಸ್ರ + ೮೦೦ ವರ್ಷ ಸಂಧ್ಯಾಂಶ. ತ್ರೇತಾ ೩.೬ ಸಹಸ್ರ ವರ್ಷ ದ್ವಾಪರ ೨.೪ ಸಹಸ್ರ ವರ್ಷ ಕಲಿಯುಗ ೧.೨ ಸಹಸ್ರ ವರ್ಷ. ಪರಿಸ್ಥಿತಿ ಹೀಗಿರುವಾಗ ಸದ್ಯದಲ್ಲೇ ಪ್ರಳಯವಾಗಲಿದೆ ಎಂಬ ಪುಸ್ತಕಗಳಿಂದೇನೂ ಭಯವಿಲ್ಲ.

ಏಕೆಂದರೆ ಮೇಲಿನ ಪರಿಮಾಣದಂತೆ, ೪ ಲಕ್ಷದ ಮೂವತ್ತೆರಡು ಸಹಸ್ರ ವರ್ಷ ಕಲಿಯುಗ. ಈಗಿನ ಕಲಿಯುಗ ಆರಂಭವಾಗಿ ಕೇವಲ ೫೦೯೮ ವರ್ಷಗಳಾಯಿತಷ್ಟೆ. ಆದ್ದರಿಂದ ಪ್ರಳಯವಾಗಲು ಇನ್ನೂ ೪ ಲಕ್ಷ ವರ್ಷ ಬೇಕು.

ಈ ಕಲಿಯುಗ ಎಂದು ಆರಂಭವಾಯಿತು ಎನ್ನುವುದಕ್ಕೆ ಪಂಚಾಂಗಕರ್ತರು ಮತ್ತು ಜ್ಯೋತಿಷ್ಯ ಪಂಡಿತರು ಮಹಾಭಾರತವನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಕುರುಪಾಂಡವ ಯುದ್ಧಾನಂತರದ ಮೂವತ್ತಾರನೇ ವರ್ಷದಿಂದ ಕಲಿಯುಗಾರಂಭವಾಯಿತಂತೆ. ಆ ಪ್ರಕಾರ ೧೯೯೭ಕ್ಕೆ ಕಲಿಯಾರಂಭವಾಗಿ ೫೦೯೮ ವರ್ಷಗಳಾಯಿತಂತೆ.

೫೦೯೮+೩೬ = ೫೧೩೪ ವರ್ಷಗಳ ಹಿಂದೆ ವಸಂತವಿಭುವ ಬಿಂದುವು ಸುಮಾರಾಗಿ ರೋಹಿಣಿ ನಕ್ಷತ್ರದ ಮೂರನೇ ಪಾದದಲ್ಲಿರಬೇಕು. ಉತ್ತರಾಯಣಾರಂಭ ಶತಭಿಷೆಯ ಅಂತ್ಯದಲ್ಲಿರಬೇಕು.

ಆದರೆ ಕಳೆದ ವರ್ಷದ ಪ್ರಸಿದ್ಧ ಪಂಚಾಂಗವೊಂದರ ಒಳಪುಟಗಳಲ್ಲಿ ಉತ್ತರಾಯಣಾರಂಭವು ೭೨ ವರ್ಷಗಳಿಗೆ ಒಂದು ದಿನದಷ್ಟು ಹಿಂದಕ್ಕೆ ಸರಿಯುತ್ತದೆ ಎನ್ನುವುದನ್ನು ದೃಢೀಕರಿಸಲು ಭೀಷ್ಮನಿರ್ಯಾಣದ ಕಾಲದ ಉಲ್ಲೇಖವನ್ನು ಮಾಡಲಾಗಿದೆ. "ಮಹಾಭಾರತದೊಳಗಿನ ಭೀಷ್ಮನಿರ್ಯಾಣದ ಕಾಲದ ವಿಚಾರವನ್ನು ಮಾಡಿದರೆ ಇವನು ಮಾಘಮಾಸದಲ್ಲಿ ನಿರ್ಯಾಣ ಹೊಂದಿದನೆಂದೂ, ಆ ಕಾಲದಲ್ಲಿ ವೇದಾಂಗ ಜ್ಯೋತಿಷ್ಯ ಪದ್ಧತಿಯು ಮಾನ್ಯವಾಗಿದ್ದು ಧನಿಷ್ಠಾದಿಯಲ್ಲಿ ಸೂರ್ಯನು ಬಂದಾಗ (ಫೆಬ್ರುವರಿ-೬) ಉತ್ತರಾಯಣಾರಂಭವಾಗುತ್ತಿತ್ತೆಂದೂ ತಿಳಿದುಬರುತ್ತದೆ! (ಈಗ ಡಿಸೆಂಬರ್ ೨೨)

ಅಂದರೆ ೪೭X೭೨ = ೩೩೮೪ ವರ್ಷಗಳ ಹಿಂದೆ ಭೀಷ್ಮಾಚಾರ್ಯರು ನಿಧನರಾದರು ಎನ್ನಬಹುದು. ಹಾಗಿರುವಾಗ ಹಿಂದಿನ ವರ್ಷ ಕಲಿಯುಗ ಪ್ರಾರಂಭವಾಗಿ ೩೩೮೪ ವರ್ಷಗಳಾದವು ಎಂದಾಗುತ್ತದೆ. ಆದರೆ

★ ತೆಕ್ಕುಂಜ ಜಯಶಂಕರಭಟ್ಟ

ಪಂಚಾಂಗದ ಮುಖಪುಟದಲ್ಲಿರುವುದು ೫೦೮೯ಲ ವರ್ಷಗಳು ಎಂದು.

ಮಹಾಭಾರತ ಯುದ್ಧಾನಂತರದ ೩೬ನೇ ವರ್ಷ ದ್ವಾರಕೆಯು ಸಮುದ್ರದಲ್ಲಿ ಮುಳುಗಿತು. ಆ ಸಮಯದಲ್ಲಿ ಕಲಿಯುಗಾರಂಭವಾಯಿತು ಎಂಬುದು ಇದುವರೆಗಿನ ವಿದ್ವಾಂಸರ ನಿರ್ಣಯ. ಆದರೆ ಈ ಗ್ರಂಥದಲ್ಲಿ ನಮೂದಿಸಲಾಗಿರುವ ಹಲವು ಸೂರ್ಯಗ್ರಹಣಗಳ, ಪರೀಕ್ಷಿತನ ವಿದ್ಯಾಭ್ಯಾಸದ ವಿವರಗಳಂತೆ ದ್ವಾರಕೆಯು ಯುದ್ಧಾನಂತರದ ೧೯ನೆಯ ವರ್ಷವೇ ಸಮುದ್ರದಲ್ಲಿ ಮುಳುಗಿತು ಎಂದು ನಿಶ್ಚಯವಾಗಿ ಹೇಳಬಹುದು.

ಕೃತಾದಿ ಚತುರ್ಯುಗಗಳ ಬಗ್ಗೆ ಮಹಾಭಾರತದಲ್ಲಿ ಹೇರಳವಾದ ವಿವರಗಳಿವೆ. ಅವುಗಳು ಮೇಲುನೋಟಕ್ಕೆ ವಿರೋಧಾಭಾಸವೆನಿಸುವಂತಿದ್ದರೂ ಸಮರ್ಪಕವಾಗಿ ಪರಿಶೀಲಿಸಿದಲ್ಲಿ ಯುಗಗಳ ಬಗ್ಗೆ ಸುಮಾರಾಗಿ ಹೀಗೇ ಎಂದು ಹೇಳಬಹುದಾಗಿದೆ.

ಕಾರ್ತಿಕ ಮಾಸದ ಶುಕ್ಲ ದ್ವಾದಶಿಯಂದು ಕಲಿದ್ವಾಪರ ಸಂಧಿಕಾಲದಲ್ಲಿ ಯುದ್ಧಾರಂಭವಾಗಿ ಅಮಾವಾಸ್ಯೆಯಂದು ಗದಾಯುದ್ಧವಾಗಿತ್ತು. ಭೀಮನ ಮೇಲೆ ಸಿಟ್ಟಾದ ಬಲರಾಮನನ್ನು ಸಮಾಧಾನಿಸುವಾಗ, "ಈಗಾಗಲೇ ಕಲಿಯುಗ ಪ್ರಾರಂಭವಾಗಿದೆ," ಎಂದು ಶ್ರೀಕೃಷ್ಣನು ಹೇಳಿದ್ದ (ಗದಾ ೩೧-೧೩)

ಯುದ್ಧಾರಂಭದ ಮೊದಲು ಆಶ್ವಯುಜದ ಅಮಾವಾಸ್ಯೆಯಂದು ರಾಹುಗ್ರಸ್ತ ಸೂರ್ಯಗ್ರಹಣವಾಗಿತ್ತು. ಅನಂತರದ ವರ್ಷ ಆಶ್ವಯುಜದ ಅಮಾವಾಸ್ಯೆಯಂದು ಅರ್ಜುನನು ಅಶ್ವಮೇಧದ ನಿಮಿತ್ತ ಸಿಂಧೂದೇಶದಲ್ಲಿ ಸೈಂಧವರೊಡನೆ ಯುದ್ಧಮಾಡುವಾಗ ರಾಹುಗ್ರಸ್ತ ಸೂರ್ಯಗ್ರಹಣವಾಗಿತ್ತು;

ರಾಹುರಗ್ರಸ್ತದಾದಿತ್ಯಂ ಯುಗಪತ್
ಸೋಮಮೇವ ಚ (ಆಶ್ವ ೭೭-೧೫)

ಯುಗವು ಮುಗಿಯುವ ಕಾಲದಲ್ಲಿ ರಾಹುವಿನಿಂದ ಸೂರ್ಯನು ಹಿಡಿಯಲ್ಪಟ್ಟ.

ಆದುದರಿಂದ ಈಗ ಪ್ರಚಲಿತದಲ್ಲಿರುವ ಚತುರ್ಯುಗಗಳ ಲೆಕ್ಕಾಚಾರವು ಆಧಾರರಹಿತವೂ ನಂಬಲನರ್ಹವೂ ಆಗಿದೆ ಎಂದು ಹೇಳಬಹುದು.

ಮಹಾಭಾರತದಲ್ಲಿರುವ ಯುಗಗಳ ವಿವರಗಳನ್ನು ಪರಿಶೀಲಿಸುವಾಗ ಚಕ್ರವ್ಯೂಹದಲ್ಲಿ ಸಿಲುಕಿದಂತಾಗುತ್ತದೆ. ಏಕೆಂದರೆ ವ್ಯಾಸರು ದ್ವಂದ್ವಾರ್ಥದಲ್ಲಿ ಸುತ್ತೂ ಬಳಸಿ ಹೋಗುತ್ತಾ ರಾಜನೀತಿ, ಅಧ್ಯಾತ್ಮ ಕಾಲಗಣನೆಗಳೆಲ್ಲವನ್ನೂ ಒಂದೇ ಎಂಬ ಭ್ರಮೆ ಓದುಗನಿಗೆ ಮೂಡುವಂತೆ ಮಾಡಿದ್ದಾರೆ.

ಯುಗಗಳು ಹನ್ನೆರಡು ತಿಂಗಳುಗಳದು ಎಂದು ಪ್ರಾರಂಭಿಸಿ, ಫಕ್ಕನೆ ವಿಷಯಾಂತರವಾಗಿ 'ರಾಜಾಕಾಲಸ್ಯಕಾರಣಮ್' ಎನ್ನುವುದರ ವಿವರಣೆ. ನಾಲ್ಕು ಯುಗಗಳು ರಾಜನ ಆಡಳಿತದ ಪರಿಣಾಮಗಳು ಎಂದು ಹೇಳುತ್ತಾ ಪರಬ್ರಹ್ಮದ ವಿಶ್ವರೂಪದ ವರ್ಣನೆ ಮೊದಲಾಗುತ್ತದೆ. ಇಲ್ಲಿಯೂ ವಿಷಯಾಂತರವಾಗಿ ವಿಶ್ವದ ಉತ್ಪತ್ತಿ, ಅಂತ್ಯ ಹೇಗಾದೀತು ಎಂಬ ಕಲ್ಪನೆಯ ಜೊತೆಗೆ ನಕ್ಷತ್ರ ವೀಕ್ಷಣೆಯ ಉಪಯುಕ್ತ ವಿವರ, ಗ್ರಹಣಗಳ ಪಕ್ಕಾ ವೈಜ್ಞಾನಿಕ ವಿವರಣೆ, ಸೌರವ್ಯೂಹದ ಗ್ರಹಗಳ ಚಲನೆ ಇತ್ಯಾದಿಗಳನ್ನು ವಿಚಿತ್ರವೆನಿಸುವ ಕಥೆಗಳ ರೂಪದಲ್ಲಿ ಬರೆಯಲಾಗಿದೆ. ಆದ್ದರಿಂದ ಕಾಲಗಣನೆಗೆ ಸಂಬಂಧಿಸಿದಹಾಗೆ ಯುಗಗಳ ಬಗ್ಗೆ ಸರಿಯಾಗಿ ತಿಳಿದುಕೊಳ್ಳುವುದು ಸರಳವಲ್ಲ.

ಯುಗ ಎನ್ನುವುದನ್ನು ವಿವಿಧ ರೀತಿ

ಯಲ್ಲಿ ವಿಮರ್ಶಿಸಿದಾಗ ಈ ಶಬ್ದವು ಸಂವತ್ಸರ ಎನ್ನುವುದರ ಪರ್ಯಾಯರೂಪವಾಗಿ ಕಂಡುಬರುತ್ತದೆ. ಸಂವತ್ಸರ ಎಂದರೆ ಎಷ್ಟು ಎನ್ನುವುದೂ ಸಮಸ್ಯೆ. ಏಕೆಂದರೆ ದಿನ, ತಿಂಗಳು, ಮೂರುತಿಂಗಳು, ಹನ್ನೆರಡು ತಿಂಗಳುಗಳೆಲ್ಲಾ ವರ್ಷ ಎಂದು ಕರೆಯಲ್ಪಟ್ಟಿವೆ.

ಅಹೋ ರಾತ್ರಂ ಮಹಾರಾಜ ತುಲ್ಯಂ ಸಂವತ್ಸ
ರೇಣ ಹ।
ತದೈವ ವೇದ ವಚನಂ ಶ್ರೂಯತೇ ನಿತ್ಯದಾ ವಿಭ
'ಶೋ (ವನ ೫೨ನೇ ಅಧ್ಯಾಯ)

ಒಂದು ದಿನವು ಸಂವತ್ಸರಕ್ಕೆ ಸಮಾನ ಎಂದು ವೇದಗಳು ಸಾರುತ್ತಿವೆ.

ಅದ್ಯತದ ದಿವಸಂ ಚೇತಿ ಹುತ್ವಾ
ದೀಪ್ತಂ ಹುತಾಶನಂ।
ಯುಗ ಮಾತ್ರೋ ದಿತೇ ಸೂರ್ಯೇಃ ಕೃತ್ವಾ
ಪೌರ್ವಾಹ್ನಿಕೀಕ್ರಿಯಾಃ (ವನ ೨೯೬-೧೦)

ಪ್ರತಿದಿನದಂತೆ ಯುಗಾದಿಯಲ್ಲಿ ಸೂರ್ಯನು ಉದಯಿಸಲಾಗಿ ಎಂದಿರುವಂತೆ ಒಂದು ದಿನವು ಯುಗ, ಸಂವತ್ಸರ ಎಂದು ತಿಳಿಯಲ್ಪಟ್ಟಿದೆ. ಯೋಮಾಸಃ ಸ ಸಂವತ್ಸರಃ ಎಂದೂ ವೇದಗಳು ಸಾರುತ್ತಿವೆ. ಇದರಂತೆ ತಿಂಗಳನ್ನು ಸಂವತ್ಸರ ಎಂದೂ ತಿಳಿಯಬಹುದು.

ಹದಿಮೂರು ದಿವಸಗಳಲ್ಲಿ, ಹದಿಮೂರುತಿಂಗಳುಗಳಲ್ಲಿ ವನವಾಸವನ್ನು ಮುಗಿಸೋಣ ಎಂದು ಯುಧಿಷ್ಠಿರನಿಗೆ ಭೀಮನು ಸಲಹೆ ನೀಡಲು ಇದೇ ಕಾರಣ.

ಶಮಿ ವೃಕ್ಷದಲ್ಲಿದ್ದ ಪಾಂಡವರ ಶಸ್ತ್ರಗಳನ್ನು ವಿರಾಟಪುತ್ರ ಉತ್ತರನು ಕೆಳಗಿಳಿಸುವಲ್ಲಿ ಗಾಂಡೀವವು ಅರ್ಜುನನಿಗೆ ದೊರಕಿ ೬೫ ವರ್ಷಗಳಾಯಿತು ಎಂಬರ್ಥ ಬರುವ ಶ್ಲೋಕವಿದೆ. ಆದರೆ ಆ ಸಮಯ ಅರ್ಜುನನ

ಸಮಾಧಾನ

ಗೆಳೆಯಾ
ನಿನ್ನ ಪ್ರೀತಿ
ದೊರೆಯದ್ದಕ್ಕೆ
ನನಗಿಲ್ಲ
ವ್ಯಸನ
ಎಂದಾದರೂ
ಸಂಧಿಸಬಲ್ಲದೆ
ಈ ಭೂಮಿಯನ್ನು
ಆ ಗಗನ?

★ ದೇವಯಾನಿ

ವಯಸ್ಸೇ ಸುಮಾರು ೫೦ ವರ್ಷ. ಇದೇ ವರ್ಷ ಕಾರ್ತಿಕ ಬಹುಳ ದಶಮಿಯ ಸುಮಾರಿಗೆ ಚಕ್ರವ್ಯೂಹದಲ್ಲಿ ಸಾಯುವಾಗ ಅಭಿಮನ್ಯುವಿಗೆ ೧೬ ವರ್ಷಪ್ರಾಯ ಪೂರ್ತಿಯಾಗಿತ್ತು. ಅಭಿಮನ್ಯು ಜನಿಸಿದ ವರ್ಷ ಚೈತ್ರಮಾಸದ ಅಂತ್ಯದಲ್ಲಿ ಗಾಂಡೀವವು ಅರ್ಜುನನಿಗೂ ಸುದರ್ಶನ ಚಕ್ರವು ಕೃಷ್ಣನಿಗೂ ದೊರಕಿತ್ತು.

ಆದ್ದರಿಂದ ಇಲ್ಲಿ ಸೂಚಿತವಾದ ವರ್ಷ ಮೂರು ತಿಂಗಳಿನದು. ೬೫/೪ =೧೬ವರ್ಷ ೯೧ ದಿವಸ. ಅರ್ಜುನನಿಗೂ ಉತ್ತರನಿಗೂ ಸಂಭಾಷಣೆ ನಡೆದುದು ಆಷಾಢ ಕೃಷ್ಣ ಅಷ್ಟಮಿಯಂದು.

ಸಂವತ್ಸರ ಎಂದರೆ ಸಾಮಾನ್ಯವಾಗಿ ಗಣಿಸುವುದು ಚಂದ್ರಮಾನ ಮತ್ತು ಸೌರಮಾನ. ಆದ್ದರಿಂದ ಕೃತಾದಿಚತುರ್ಯುಗ ಇವುಗಳಿಗೇ ಸಂಬಂಧಿಸಿದುದಾಗಿರಬೇಕು. ಏಕೆಂದರೆ ಕೃತ ಯುಗದ ಆದಿ ಶಿಶಿರ ಋತು ಎಂದು



ವ್ಯಾಸರು ಸ್ಪಷ್ಟವಾಗಿ ಹೇಳಿದ್ದಾರೆ.

ಯುಗಗಳೆಂದರೆ ಒಂದು ವರ್ಷ ಎಂದು ತಿಳಿಯುವುದಾದರೆ ೪:೩:೨:೧ರ ಅನುಪಾತ ದಲ್ಲಿರುವ ಕೃತಾದಿಯುಗಗಳು ಯಾವ ರೀತಿ ಭಾಗಮಾಡಲ್ಪಟ್ಟವು ಎಂಬ ಸಂದೇಹ ಸಹಜ. ಭೀಷ್ಮಪರ್ವದ ಹತ್ತನೆಯ ಅಧ್ಯಾಯದಲ್ಲಿ ಯಂತೆ ಕೃತಯುಗದಲ್ಲಿ ಮಾನವನ ಆಯುಷ್ಯ ೪ ಸಹಸ್ರವರ್ಷ. ತ್ರೇತೆಯಲ್ಲಿ ಮೂರು. ದ್ವಾಪರದಲ್ಲಿ ಎರಡು ಸಹಸ್ರ ವರ್ಷ. ಆದರೆ ಅನಾದಿಯಾದ ವೇದೋಕ್ತಿ ಮಾನವನ ಆಯುಷ್ಯ ನೂರುವರ್ಷ ಎಂದೇ ಆಗಿರುವಾಗ ಕೃತದ ನಾಲ್ಕೆಂದರೂ ನೂರು. ತ್ರೇತೆಯ ಮೂರೆಂದರೂ ನೂರು. ದ್ವಾಪ ರದ ಎರಡೆಂದರೂ ನೂರು.

ಈ ರೀತಿ ವಿಮರ್ಶಿಸಿದಾಗ ಒಂದು ವರ್ಷವು ತಲಾ ಮೂರು ತಿಂಗಳುಗಳಾಗಿ ಕೃತಾದಿ ನಾಲ್ಕು ಯುಗಗಳೆಂದು ಭಾಗಮಾಡ ಲ್ಪಟ್ಟಿದೆ ಎಂದು ಹೇಳಬಹುದಾಗಿದೆ. ಇದರಲ್ಲಿ ತಲಾ ೧೫ ದಿವಸಗಳಂತೆ ಎರಡು ತಿಂಗಳು ಗಳು ಸಂಧ್ಯಾಂಶಗಳಾಗುತ್ತವೆ.

ಭಾರತದಲ್ಲಿ ಬೇರೆ ಬೇರೆ ಕಾಲದಿಂದ ವರ್ಷಾರಂಭಗಳಾಗುತ್ತಿತ್ತು ಎಂದು ಹಲವು ಕಡೆ ಸೂಚಿಸಲಾಗಿದೆ. ಉತ್ತರಾಯಣಾರಂಭ ದಿಂದ, ವಸಂತ ಋತುವಿನ ಆರಂಭದಿಂದ, ದಕ್ಷಿಣಾಯನಾರಂಭದಿಂದ, ವಸಂತವಿಷುವ ಮತ್ತು ಶರದ್‌ವಿಷುವ ದಿನಗಳು ಆ ಕಾಲದಲ್ಲಿ ವರ್ಷಾರಂಭದ ದಿನಗಳಾಗಿದ್ದವು (ಸೌರ ಮಾನ). ಚಾಂದ್ರಮಾನದಂತೆ ಮಾಘ, ಚೈತ್ರ, ವೈಶಾಖ, ಶ್ರಾವಣ, ಕಾರ್ತಿಕ ಶುಕ್ಲಪಾಡ್ಯಗಳು ವರ್ಷಾರಂಭದ ದಿನಗಳಾಗಿದ್ದವು.

ಕೃತಯುಗವು ಎಲ್ಲಿಂದ ಆರಂಭವಾ ಯಿತು ಎನ್ನುವುದನ್ನು ಹೇಳುವ ಶ್ಲೋಕವನ್ನು

ಮೂರು ರೀತಿಯಲ್ಲಿ ಅರ್ಥಮಾಡಬಹುದು.

ಯದಾ ಸೂರ್ಯಶ್ಚಚಂದ್ರಶ್ಚ ತಥಾ ತಿಷ್ಯಬೃಹಸ್ಪತಿ।
ಏಕರಾಶೌ ಸಮೇಷ್ಯಂತಿ ಪ್ರಪಸ್ಯತಿ ತದಾಕೃತಮ್
(ವನಪರ್ವ, ಅಧ್ಯಾಯ ೧೯೧)

೧) ಗುರುವು ಪುಷ್ಯದಲ್ಲೂ ಸೂರ್ಯ ಚಂದ್ರರು ಒಂದೇ ರಾಶಿಯಲ್ಲೂ ಬಂದಾಗ ಕೃತಯುಗವು ಆರಂಭವಾಗುತ್ತದೆ. ಗುರುವು ಹನ್ನೆರಡು ವರ್ಷಗಳಿಗೊಮ್ಮೆ ಪುಷ್ಯದಲ್ಲಿರುತ್ತಾನೆ. ಆದ್ದರಿಂದ ಹನ್ನೆರಡು ವರ್ಷಗಳೆಂದರೆ ನಾಲ್ಕು ಯುಗ ಎನ್ನಬಹುದಾಗಿದೆ. ಈ ರೀತಿ ಲೆಕ್ಕ ಹಾಕುವಾಗ ಯುದ್ಧಕಾಲದಲ್ಲಿ (ಕಲಿದ್ವಾಪರ ಸಂಧಿಯಲ್ಲಿ) ಗುರುವು ಮಿಥುನ ಅಥವಾ ವೃಷಭರಾಶಿಯಲ್ಲಿದ್ದಿರಬೇಕು. ಆದರೆ ಗುರುವು ವೃಶ್ಚಿಕರಾಶಿಯಲ್ಲಿದ್ದುದರಿಂದ ಈ ಅರ್ಥ ಸರಿಯಾದುದಲ್ಲ.

೨) ಗುರುವು ಪುಷ್ಯದಲ್ಲಿರುವ ರೀತಿ, ಸೂರ್ಯ-ಚಂದ್ರರು ಒಂದೇ ರಾಶಿಯಲ್ಲಿರುವಾಗ ಕೃತಯುಗದ ಪ್ರಾರಂಭ. ಸೂರ್ಯ-ಚಂದ್ರರು ಪ್ರತಿತಿಂಗಳು ಒಂದೇ ರಾಶಿಯಲ್ಲಿ ಬರುವ ಕಾರಣ ಒಂದು ತಿಂಗಳು ಎಂದರೆ ಚತುರ್ಯುಗ ಎನ್ನಬಹುದು. ಆದರೆ ಇದೂ ಹೊಂದಿಕೆಯಾಗುವುದಿಲ್ಲ.

೩) ಹನ್ನೆರಡು ವರ್ಷಗಳಿಗೊಮ್ಮೆ ಗುರುವು ಪುಷ್ಯದ ಬಲು ಸನಿಹವಿರುವಂತೆ, ಹನ್ನೆರಡು ವರ್ಷ = ತಿಂಗಳುಗಳಿಗೊಮ್ಮೆ ಸೂರ್ಯ-ಚಂದ್ರ ಒಂದೇ ರಾಶಿಯಲ್ಲಿರುವಲ್ಲಿಂದ ಕೃತಯುಗವು ಆರಂಭವಾಗುತ್ತದೆ ಎಂಬುದೇ ಸರಿಯಾದುದು.

ಕೃತ ಮಾದಿಯುಗಾನಾಂ ಚ
ಸರ್ವೇಷಾಂ ನಾತ್ರ ಸಂಶಯಃ।
ಅಹಃ ಪೂರ್ವಂ ತತೋ ರಾತ್ರಿಃ ಮಾಸಾಃ
ಶುಕ್ಲಾದಯಃಸ್ಮೃತಾಃ
ಶ್ರವಣಾದೀನಿ ಋಕ್ಷಾಣಾಂ ಋತವಃ ಶಿಶಿರಾದಯಃ
(ಅಶ್ವಮೇಧಿಕ ಅಧ್ಯಾಯ೪೪)

ಮಹಾಭಾರತಕಾಲದಲ್ಲಿ ಧನಿಷ್ಠಾ ನಕ್ಷತ್ರದ ಆದಿಯಲ್ಲಿ ಸೂರ್ಯನು ಬಂದಾಗ ಉತ್ತರಾಯಣವೂ ಶಿಶಿರ ಋತುವೂ ಆರಂಭವಾಗುತ್ತಿತ್ತು. ಮಾಘಮಾಸದ ಶುಕ್ಲಪಾಡ್ಯದ ತಿಥಿಯಲ್ಲಿ ಸಾಮಾನ್ಯವಾಗಿ ಶ್ರವಣಾನಕ್ಷತ್ರವಿರುತ್ತದೆ. ಆದ್ದರಿಂದ ಚಾಂದ್ರಮಾನದಂತೆ ಮಾಘಶುಕ್ಲ ಪಾಡ್ಯದ ಸೂರ್ಯೋದಯದಿಂದ ಶ್ರವಣಾನಕ್ಷತ್ರದಲ್ಲಿ ಕೃತಯುಗವು ಆರಂಭವಾಗುತ್ತದೆ.

ಮಾಘಶುಕ್ಲದಿಂದ ಕೃತಯುಗಾದಿಯಾದರೆ ಚೈತ್ರಮಾಸದ ಅಮಾವಾಸ್ಯೆಯಂದು ಅಂತ್ಯವಾಗಿ ತ್ರೇತಾಯುಗವು ವೈಶಾಖ ಶುದ್ಧ ಪಾಡ್ಯದಿಂದ ಆರಂಭವಾಗುತ್ತದೆ. ಮುಂದೆ ಶ್ರಾವಣ ಶುಕ್ಲ ಪಾಡ್ಯದಿಂದ ದ್ವಾಪರ ಯುಗವು ಆರಂಭ. ಸುಮಾರಾಗಿ ಇದೇ ಕಾಲದಲ್ಲಿ ದಕ್ಷಿಣಾಯನಾರಂಭವಾಗಿ ಮಳೆಸುರಿಯಲಾರಂಭಿಸಬೇಕು. (ವರ್ಷ ಋತುವಿನ ಆರಂಭ) ಈ ವಿಷಯವನ್ನು ವಿಶ್ವಾಮಿತ್ರರು ಶುನಕ ಮಾಂಸವನ್ನು ಭಕ್ಷಿಸಿದ ವಿವರಗಳಿರುವ ಶಾಂತಿ ಪರ್ವದ ೧೪೧ ನೇ ಅಧ್ಯಾಯದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

ತ್ರೇತಾ ದ್ವಾಪರಯೋಃ ಸಂಧ್ಯೋ ತದಾ
ದೈವ ವಿಧಿಕ್ರಮಾತ್॥
ಅನಾವೃಷ್ಟಿರಭೂದ್ ಘೋರಾ ಲೋಕೇ
ದ್ವಾದಶ ವಾರ್ಷಿಕೀ॥
ಪ್ರಜಾನಾಂ ಅತಿವೃದ್ಧಾನಾಂ ಯುಗಾನ್ತೇ
ಸಮುಪಸ್ಥಿತೇ।
ತ್ರೇತಾ ವಿಮೋಕ್ಷ ಸಮಯೇ ದ್ವಾಪರ
ಪ್ರತಿಪಾದನೇ॥
ನವವರ್ಷ ಸಹಸ್ರಾಕ್ಷಃ ಪ್ರತಿಲೋಮೋ
ಭವದ್ ಗುರುಃ।

ಜಗಾಮದಕ್ಷಿಣಂ ಮಾರ್ಗಂ ಸೋಮೋ
ವ್ಯಾವೃತ್ತಲಕ್ಷಣಃ

ತ್ರೇತಾಯುಗವು ಮುಗಿದು ದ್ವಾಪರವು ಪ್ರಾರಂಭವಾಗುವ ಕಾಲ ಪ್ರಕೃತಿ ನಿಯಮಾನು ಸಾರ ಮಳೆ ಸುರಿಯಬೇಕು. ಆದರೆ ಹನ್ನೆರಡು ತಿಂಗಳುಗಳವರೆಗೆ ಮಳೆ ಸುರಿಯದೆ ಅನಾವೃಷ್ಟಿಯುಂಟಾಯಿತು. ತ್ರೇತಾ-ದ್ವಾಪರ ಯುಗ ಸಂಧಿಯಲ್ಲಿ ಗುರುವು ಪ್ರತಿಕೂಲನಾಗಿದ್ದು, ಚಂದ್ರನು ಅಶುಭ ಲಕ್ಷಣವನ್ನು ಹೊಂದಿರುವಾಗ ದಕ್ಷಿಣ ದಿಕ್ಕಿನತ್ತ ಹೊರಟ ಸೂರ್ಯನು ಮಳೆಯನ್ನು ಸುರಿಸಲಿಲ್ಲ.

ದ್ವಾಪರಯುಗವು ಆಶ್ವಯುಜದ ಅಮಾವಾಸ್ಯೆಗೆ ಮುಗಿದು ಕಲಿಯುಗವು ಪ್ರಾರಂಭವಾಯಿತು. ಕಾರ್ತಿಕ ಹುಣ್ಣಿಮೆಯವರೆಗೆ ಕಲಿ ದ್ವಾಪರ ಸಂಧಿಕಾಲವಾದ್ದರಿಂದ ದ್ವಾದಶಿಯಂದು ಆರಂಭವಾದ ಕುರುಪಾಂಡವ ಯುದ್ಧ ಈ ಸಂಧಿಕಾಲದಲ್ಲಾಯಿತು ಎಂದು ವ್ಯಾಸರು ಹೇಳಿದ್ದಾರೆ. ಕಾರ್ತಿಕ ಅಮಾವಾಸ್ಯೆಯಂದು ಈಗಾಗಲೇ ಕಲಿಯುಗವು ಆರಂಭವಾಗಿದೆ ಎಂದು ಶ್ರೀ ಕೃಷ್ಣನು ಹೇಳಲೂ ಇದೇ ಕಾರಣ.

ಆಶ್ವಯುಜದ ಅಮಾವಾಸ್ಯೆಯಂದು ಸಿಂಧೂದೇಶದಲ್ಲಿ ಪಾರ್ಥನು ಕಂಡ ರಾಹುಗ್ರಸ್ತ ಸೂರ್ಯಗ್ರಹಣವು ದ್ವಾಪರಯುಗಾಂತ್ಯದಲ್ಲಿ ಸಂಭವಿಸಿತು. ಯುಗವು ಅಮಾವಾಸ್ಯೆಯಂದು ಮುಗಿಯುತ್ತದೆ ಎಂದು ಹಲವು ಕಡೆಗಳಲ್ಲಿ ವ್ಯಾಸರು ವರ್ಣಿಸಿರುವುದು ಸ್ವಾರಸ್ಯಕರವಾಗಿದೆ.

ಅಮಾವಾಸ್ಯಾಂ ಮಹಾಪ್ರಾಜ್ಞೋ
ವಿಪ್ರಾನಾನಾಯ್ಯ ಪೂಜಿತಾನ್।
ದಕ್ಷಿಣಾವರ್ತಿಕಾಃ ಸರ್ವಾ ಬ್ರುಸೀಃ
ಸ್ವಯಮರ್ಥಾರೋತ್।೩।
ಸಪ್ತ ವಿಪ್ರಾಂಸ್ತತೋ ಭೋಜ್ಯೇ ಯುಗಪತ್ ಸಮು

ನಮ್ಮೂರ ಬಸ್ಸುಗಳು

ನಮ್ಮೂರ
ಬಸ್ಸುಗಳೆಲ್ಲ
ಹೆಸರಿಗಷ್ಟೆ
ನಾನ್ ಸ್ಟಾಪು
ಹತ್ತಿಳಿಯುವವರಿಗೆಲ್ಲ
ನಾನಾಸ್ಟಾಪು!

★ ದೇವಯಾನಿ

ಪಾನಯೇತ್।ಶಾಂತಿ ೯೧-೧೩।।

ನಿಮಿಯೆಂಬ ಋಷಿಯು ತನ್ನ ಮಗನಿಗೆ ಪಿಂಡಪ್ರಧಾನ ಮಾಡಲು ಅಮಾವಾಸ್ಯೆಯಂದು ಬ್ರಾಹ್ಮಣರನ್ನು ಕರೆಸಿದ. ಏಳು ಮಂದಿ ವಿಪ್ರರಿಗೆ ಯುಗವು ಮುಗಿಯುವ ಕಾಲದಲ್ಲಿ ಭೋಜನವನ್ನು ನೀಡಿದ.

ಇಂದ್ರ ವೃತ್ರಾವಿವ ಕ್ರುದ್ಧೌ ಸೂರ್ಯ
ಚಂದ್ರ ಸಮಪ್ರಭೌ।
ಮಹಾಗ್ರಹಾವಿವ ಕ್ರುದ್ಧೌ ಯುಗಾಂತಾಯ
ಸಮುತ್ಥಿತೌ।
ಯುದೃಚ್ಛಯಾ ಸಮಾಯಾತ್ ಸೂರ್ಯಚಂದ್ರ
ಮಸೌ ಯಥಾ (ಕರ್ಣಪರ್ವ ೮೭ನೆಯ ಅಧ್ಯಾಯ)

ಸೂರ್ಯಚಂದ್ರರು ಯುಗಾಂತ್ಯದಲ್ಲಿ= ಅಮಾವಾಸ್ಯೆಯಂದು ಬಹಳ ಸನಿಹವಿರುವ ರೀತಿ ಕರ್ಣಾರ್ಜುನನು ಪರಸ್ಪರ ಹತ್ತಿರವಾದರು.

ಯುಗವೆಂದರೆ ೧೨ ತಿಂಗಳಿನದು ಎಂದು ನಿರೂಪಿಸಲು ಇನ್ನೂ ಹಲವು ಉದಾಹರಣೆಗಳನ್ನು ಕೊಡಬಹುದಾದರೂ ಇಷ್ಟೇ ಸಾಕೆನಿಸುತ್ತದೆ. ಚಾಂದ್ರ ಮತ್ತು ಸೌರವರ್ಷಗ

ಳಲ್ಲಿ ಸುಮಾರು ೧೧-೨೪ ದಿವಸಗಳ ವ್ಯತ್ಯಾಸ ಬರುವುದರಿಂದ ಹಾಗೂ ಋತುಗಳು ಸೂರ್ಯನನ್ನು ಹೊಂದಿಕೊಂಡಿರುವುದರಿಂದ ಯುಗಗಳಿಗೆ ತಲಾ ೧೫ ದಿವಸಗಳ ಸಂಧ್ಯಾಂಶಗಳನ್ನು ನಿಗದಿ ಮಾಡಲಾಗಿರುವಂತಿದೆ.

ಪಿತೃಗಳ, ದೇವತೆಗಳ, ಬ್ರಹ್ಮನ ಹಗಲು, ರಾತ್ರಿಗಳೆಂಬ ಕಲ್ಪನೆಗಳು ಆಧ್ಯಾತ್ಮಕ್ಕೆ ಸಂಬಂಧಿಸಿದವುಗಳೆಂದು ವ್ಯಾಸರೇ ಸೂಚಿಸಿರುವ ಕಾರಣ ಕಾಲಗಣನೆಗೆ ಅವು ಅಪ್ರಸ್ತುತಗಳಾಗಿವೆ.

ಒಟ್ಟಾರೆ ಹೇಳುವುದಾದರೆ ಉತ್ತರಾಯಣದಿಂದ ಆರಂಭವಾಗುವ ವರ್ಷ ಗಣನಾ ಪದ್ಧತಿಯೇ ಕೃತಾದಿ ಯುಗಗಳು. ಈ ಯುಗಗಳ ಪರಿಮಾಣಗಳನ್ನು ಈ ರೀತಿ ವಿಂಗಡಿಸಬಹುದು:

ಕೃತಾದಿ ಚತುರ್ಯುಗಗಳು = ತಲಾ ೨.೫ ತಿಂಗಳು

ಸಂಧ್ಯಾ ಸಂಧ್ಯಾಂಶ = ತಲಾ .೫ ತಿಂಗಳು

ಒಟ್ಟು = ೧೨ ತಿಂಗಳು

ಕಾಯಬೇಕಾದ ಒಂದು ಕ್ಷಣ

ಕೋಟ್ಯಧಿಪತಿ ವ್ಯಾಪಾರಿ ಮಿತ್ರನೊಡನೆ ಖಗೋಲ ವಿಜ್ಞಾನಿಯೊಬ್ಬ ಮಾತನಾಡುತ್ತ, "ಖಗೋಲ ವಿಜ್ಞಾನದ ನಮ್ಮ ಮಾನದಂಡಗಳೆಲ್ಲಾ ನಮ್ಮ ಎಣಿಕೆಗೂ ಮೀರಿದಂಥವು. ಕೋಟ್ಯಂತರ ಮೈಲುಗಳನ್ನು ಒಂದೆರಡು ಜ್ಯೋತಿರ್ನಿಮಿಷಗಳಲ್ಲಿ ಅಳೆಯುತ್ತೇವೆ. ಲಕ್ಷಾಂತರ ಮನ್ವಂತರಗಳನ್ನು ನಿನ್ನೆ ಮೊನ್ನೆ ಎಂದು ಭಾವಿಸಿ ಮಾತಾಡುತ್ತೇವೆ. ಈ ಮಾನದಂಡಗಳ ಪರಿಮಾಣದಲ್ಲಿ ಯೋಚಿಸಿ ಯೋಚಿಸಿ ನನಗೀಗ ನೂರು ವರ್ಷಗಳೆಂದರೆ ಒಂದು ಕ್ಷಣದಂತೆ ಭಾಸವಾಗುತ್ತದೆ," ಎಂದು ಹೇಳಿದ. ಅದಕ್ಕೆ ವ್ಯಾಪಾರಿ ಮಿತ್ರ ತಾನೇನೂ ಕಡಿಮೆಯಲ್ಲವೆಂದು ತೋರಿಸಿಕೊಳ್ಳಲು, "ನನಗೂ ಹಾಗೆಯೇ. ಈಗ ಭಾರೀ ಉದ್ಯಮದಲ್ಲಿ ಹಣ ತೊಡಗಿಸಿ ಕೋಟಿಗಟ್ಟಲೆ ರೂಪಾಯಿಗಳನ್ನು ಎಣಿಸಿ ಎಣಿಸಿ ಈಗ ಒಂದು ಕೋಟಿ ಎಂದರೆ ಒಂದು ಕಾಸಿಗೆ ಸಮನಾಗಿದೆ," ಎಂದ. ವಿಜ್ಞಾನಿ ವ್ಯಾಪಾರಿಯನ್ನು ಇಕ್ಕಟ್ಟಿಗೆ ಸಿಕ್ಕಿಸಲು, "ಹಾಗಾದರೆ ನಿನ್ನ ಲೆಕ್ಕದಲ್ಲಿ ಒಂದು ಕಾಸು ಕೊಡಯ್ಯ ನನಗೆ," ಎಂದು ಕೇಳಿದ. ಆಗ ವ್ಯಾಪಾರಿ ಕೊಂಚ ಯೋಚನೆ ಮಾಡಿ, ಅನಂತರ ತುಂಟನಗೆ ಬೀರುತ್ತಾ, "ಕೊಡೋಣಯ್ಯ ಅದಕ್ಕೇನಂತೆ? ಆದರೆ ಅದಕ್ಕಾಗಿ ನಿನ್ನ ಲೆಕ್ಕದಲ್ಲಿ ನೀನು ಒಂದು ಕ್ಷಣ ಕಾಯಬೇಕಾಗುತ್ತದೆ," ಎಂದ.

⊙ ಎಸ್.ಎಂ. ನಟರಾಜ

ಗಂಗವ್ವ ಗಂಗಾಮಾಯಿ



ಪುಸ್ತಕ ವಿಭಾಗ

ಮೂಲ: ಡಾ. ಶಂಕರ ಮೊಕಾಶಿ ಪುಣೇಕರ

ಸಂಗ್ರಹ: ಡಾ. ಮಂದಾಕಿನಿ ಪುರೋಹಿತ

ಪುಸ್ತಕ ವಿಭಾಗ

ಗಂಗವ್ವ ಎಲ್ಲರಿಗೂ ಗೊತ್ತು. ನಲ್ವತ್ತನೆಯ ವರ್ಷಕ್ಕೆ ಪತಿಯನ್ನು ಕಳೆದುಕೊಂಡ ಮೇಲೆ ತನಗಾಗಿ ಅಲ್ಲದಿದ್ದರೂ ತನ್ನ ಒಬ್ಬನೇ ಒಬ್ಬ ಮಗ ಕಿಟ್ಟಿಗಾಗಿ ಅವಳು ಬದುಕಿದಳು. ಈಗ ಕಿಟ್ಟಿಗೆ ಹದಿನೆಂಟು ವರ್ಷ. ಎಂಟು ವರ್ಷ ಗಂಗವ್ವ ಅನುಭವಿಸಿದ ಬವಣೆ ಅವಳಿಗೇ ಗೊತ್ತು. ತಾನು ಅರೆಹೊಟ್ಟೆ ಉಂಡು ಅವನಿಗೆ ಉಣಿಸಿದಳು. ಹೆರವರಲ್ಲಿ ಅಡಿಗೆ ಮಾಡಿ ಕಿಟ್ಟಿಯನ್ನು ಶಾಲೆಗೆ ಕಳಿಸಿದಳು. ಕಿಟ್ಟಿ ಮ್ಯಾಟ್ರಿಕ್ ಪರೀಕ್ಷೆ ಪಾಸಾದ. ಮಾಮಲೇದಾರ ಕಚೇರಿಯಲ್ಲಿ ಕೆಲಸವೂ ದೊರೆಯಿತು. ತಾಯಿ ತನ್ನ ಪ್ರಯತ್ನದ ಫಲವನ್ನು ಕಣ್ತುಂಬ ನೋಡಿ ಸಂತಸಪಟ್ಟಳು. ಆದರೆ ಆಸೆಗೆ ಕೊನೆಯೆಂಬುದು ಇದೆಯೆ?

ನೆರೆಮನೆಯ ದೇಸಾಯರ ಮನೆಯವರು ಕಾಶೀಯಾತ್ರೆಗೆ ಹೊರಟರು. ಗಂಗವ್ವ ಇದೇ ಸಂಧಿಯೆಂದುಕೊಂಡು ಅವರೊಡನೆ ತಾನೂ ಕಾಶಿಗೆ ಹೊರಟಳು. ಕಾಶಿಯಲ್ಲಿ ಗಂಗಾಮಾಯಿಯಲ್ಲಿ ಮಿಂದದ್ದಾಯಿತು. ವಿಶ್ವೇಶ್ವರ, ಕಾಲಭೈರವ, ದುಂಡಿರಾಜ, ಬಿಂದುಮಾಧವ ಮುಂತಾದ ಎಲ್ಲ ದೇವರ ದರ್ಶನವಾಯಿತು. ಪ್ರತಿಯೊಂದು ಕಡೆಯಲ್ಲೂ ಗಂಗವ್ವ ಭಕ್ತಿಯಿಂದ ಕಣ್ಣು ಮುಚ್ಚಿ ಸಾಷ್ಟಾಂಗವೆರಗಿ, ಕಿಟ್ಟಣ್ಣನ ಮದುವೆಯಾಗಿ ಅವನ ಮನೆ ತುಂಬಿದ್ದನ್ನು ತೋರಿಸಿದ ನಂತರವೇ ತನ್ನನ್ನು ಕರೆದುಕೊಳ್ಳಬೇಕಾಗಿ ದೇವರಲ್ಲಿ ಬೇಡಿಕೊಳ್ಳುತ್ತಿದ್ದಳು. ಕಿಟ್ಟಿ ಐಶ್ವರ್ಯವಂತನಾಗಲಿ, ಸುಖದ ಬದುಕು ಸಾಗಿಸಲಿ ಎಂಬುದಷ್ಟೇ ಅವಳ ಮನೀಷೆ. ವಿಶ್ವೇಶ್ವರನೆದುರು ಗೋಪುರಾರತಿ ನಡೆದಾಗ ನೀಲಾಂಜನಗಳ ಸಾಕ್ಷಿಯಾಗಿ ತನ್ನ ಯಾಚನೆಯನ್ನು ದೇವರೆದುರು ಇಟ್ಟು ಮನದಲ್ಲಿ ಅಂಗಲಾಚಿದಳು.

ಕಾಶಿ ಬಿಟ್ಟು ಊರಿಗೆ ಹೊರಡುವ ಹಿಂದಿನ ದಿನವೇ ಗಂಗವ್ವ ತಾನೂ ಮುಚ್ಚಳಸಹಿತವಾಗಿ ಒಂದು ಬಿಂದಿಗೆ ಕೊಂಡು ಗಂಗಾಜಲತುಂಬಿಸಿಕೊಂಡಳು. ಗಂಗವ್ವ ಕಿಡಕಿಗೆ ತಲೆ ಆನಿಸಿ, ಕೆಳಗೆ ತನ್ನ ಬಿಂದಿಗೆಯನ್ನೂ ಗಂಟನ್ನೂ ಇಟ್ಟುಕೊಂಡು ಕುಳಿತಿದ್ದಳು. ಗಾಡಿಯ ಹೊಯ್ದಾಟ, ನಾಲ್ಕು ದಿನಗಳ ಆಯಾಸದಿಂದ ಅವಳಿಗೆ ನಿದ್ದೆ ಹತ್ತಿತು.

ಅವಳು ಎರಡು ಮೂರು ತಾಸು ಮಲಗಿರಬಹುದು. ಅಷ್ಟರಲ್ಲಿ ಗಾಡಿಯ ಸಿಳ್ಳು ಅವಳನ್ನು ಎಚ್ಚರಗೊಳಿಸಿತು. ಗಂಗವ್ವ ಕುಳಿತ ಕಿಡಕಿ ಮಾತ್ರ ತೆರೆದೇ ಇತ್ತು. ಚಳಿಯಿಂದಾಗಿ ಕೈಯ ನರಗಳು ಜಗ್ಗಿದಂತಾಗಿ ಮೈಯಲ್ಲಿ ನಡುಕ ಹುಟ್ಟಿತು. ಹೊರಗೆ ನೋಡಿದಳು. ಇಂಜನ್ನಿನ ಕಪ್ಪು ಹೊಗೆ ಮೇಲೆ ತುಂಬಿಕೊಂಡಿತ್ತು. ತುಂಬು ಚಂದ್ರ ನಡುನೆತ್ತಿಗೇರಿದ್ದ. ಸುತ್ತೆಲ್ಲ ಹಾಲ್ಗಡಲು. ಮಂಜಾಗಿ ಮಿನುಗುವ ನಕ್ಷತ್ರಗಳು, ದೂರದ ಗುಡ್ಡಗಳು, ಗೋಪುರಾಕಾರದ ಗಿಡಗಳ ಕಪ್ಪು ಛಾಯೆ; ಎಲ್ಲವನ್ನೂ ನೋಡಿ ಗಂಗವ್ವ ಕಿಡಕಿ ಮುಚ್ಚಿದಳು. ಅವಳ ತಲೆಯಲ್ಲಿ ವಿಚಾರ ಚಕ್ರ ತಿರುಗಲು ಪ್ರಾರಂಭವಾಯಿತು.

ಎಲ್ಲ ಧಾರ್ಮಿಕ ಭಾವನೆಗಳನ್ನೂ ಮೀರಿದ ಆಸರೆಯೊಂದು ಮನುಷ್ಯನಿಗಿದೆ. ಅದೇ ಕರುಳು ಪ್ರೇಮ! ಅವಳಿಗೆ ಒಮ್ಮೆಲೆ ಕಿಟ್ಟಿಯ ನೆನಪಾಯಿತು. ಪಾಪ! ಈ ಕೆಲವು ದಿನ ಆತ

ತನ್ನ ಅಡಿಗೆ ತಾನೇ ಮಾಡಿಕೊಂಡಿದ್ದಾನೆ. ಎಷ್ಟು ತೊಂದರೆ ಅವನಿಗೆ! ಇನ್ನು ಅವನ ಕೊರಳಲ್ಲೊಂದು ಗುದ್ದಿಯನ್ನು ಕಟ್ಟಿ ತಾನು ಕಣ್ಣುಮುಚ್ಚಬಹುದು ಎಂದುಕೊಂಡಳು ಗಂಗವ್ವ.

ಅವಳ ವಿಚಾರಚಕ್ರ ಹಾಗೆಯೇ ತಿರುಗತೊಡಗಿತು. ಮೃತ್ಯುವಿನ ಭೀಕರ ಚಿತ್ರ ಅವಳ ಮನಸ್ಸನ್ನು ಕ್ಷುಬ್ಧಗೊಳಿಸಿತು. ಕಿಟ್ಟಿ ಮನುಷ್ಯನಾಗಿ ಬಾಳುವುದನ್ನು ತಾನು ಕಾಣಬೇಕು. ನಾಲ್ಕು ಜನ ಅವನನ್ನು ಹೊಗಳುತ್ತಿರುವುದನ್ನು ತಾನು ಕೇಳಬೇಕು. ಅವನ ಮಕ್ಕಳು ಅಂಗೈಬುತ್ತಿಗಾಗಿ ತನ್ನ ಸುತ್ತ ಸುಳಿದಾಡಬೇಕು ಇತ್ಯಾದಿ ಆಸೆ ಅವಳ ಹೃದಯವನ್ನು ಉನ್ನತವಾಗಿ ಎತ್ತಿ ಹಿಡಿಯಿತು.

ಡಬ್ಬಿಯ ವಿದ್ಯುದ್ದೀಪದ ಮಂದ ಪ್ರಕಾಶದಲ್ಲಿ ಅಲ್ಲಿಯೇ ತಾನಿರಿಸಿದ್ದ ಕಾಶಿಯ ಬಿಂದಿಗೆಯ ತೀಕ್ಷ್ಣ ಕಿರಣಗಳು ಅವಳೆಡೆಗೆ ಬಂದು ಶಲ್ಯದಂತೆ ನೆಟ್ಟಂತಾಯಿತು. ಗಂಗೋದಕದ ಚಲ್‌ಪಲ್ ಸಪ್ಪಳ ಅವಳಿಗೆ ಯಮಪಾಶದ ಬೀಸುವಿಕೆಯೆನಿಸಿತು.

ಗಂಗೋದಕ ತಾನು ಸಾಯುತ್ತಿರುವಾಗ ಗುಟುಕರಿಸುವುದಕ್ಕಾಗಿ ಅಲ್ಲವೆ? ಇಲ್ಲ. ತಾನು ಬದುಕುವಳು. ಸಾಯಲಾರಳು. ಅವಳ ಎದೆ ಡವ ಡವ ಬಡಿದುಕೊಳ್ಳತೊಡಗಿತು. ಮೆಲ್ಲನೆ ಆ ಬಿಂದಿಗೆಯನ್ನು ಎತ್ತಿಕೊಂಡು ಉಗುರಿನಿಂದ ಮೇಣವನ್ನು ಗೀರಿ ತೆಗೆದು ಮುಚ್ಚಳವನ್ನು ಎತ್ತಿದಳು. ಬಿಂದಿಗೆಯನ್ನು ಕಣ್ಣಿಗೊತ್ತಿಕೊಂಡು 'ಜಯ ಗಂಗಾಮಾತಾ' ಎಂದು ಪಿಸುಗುಟ್ಟಿ ಮೆಲ್ಲನೆ ಕಿಡಕಿಯ ಹೊರಗೆ ಎತ್ತಿ ಬೋರಲಾಗಿ ಹಿಡಿದಳು. ಗಂಗಾಮಾಯಿ ಚಲ್-ಪಲ್ ಎನ್ನುತ್ತ ಸುರಿದುಹೋದಳು.

ಕಾಶೀಯಾತ್ರೆಯಿಂದ ಮರಳಿ ಬಂದಮೇಲೆ ಗಂಗವ್ವನನ್ನು ಎಲ್ಲರೂ ಹೊಗಳುವವರೇ. ಗಂಗವ್ವ ತನ್ನ ಯಾತ್ರೆಯ ಅನುಭವವನ್ನು ರಸವತ್ತಾಗಿ ಬಣ್ಣಿಸಿ ಹೇಳಿದಳು.

ಗಂಗವ್ವನ ಬಾಳು ಸಾಗತೊಡಗಿತು. ತಾಯಿಯನ್ನು ಬಿಟ್ಟು ಕಿಟ್ಟಿ ಒಬ್ಬನೇ ಇದ್ದದ್ದು ಅದೇ ಮೊದಲ ಬಾರಿ. ಕಚೇರಿಯಲ್ಲಿ ತಾನು ಅನುಭವಿಸುವ ಕಷ್ಟಗಳನ್ನು ಸಹಾನುಭೂತಿಯಿಂದ ಕೇಳಲು, ಆಸರೆ ಕೊಡಲು ಮನೆಯಲ್ಲಿದ್ದ ಧೈರ್ಯದ ವೀರಗಲ್ಲು ಎಂದರೆ ಗಂಗವ್ವ ಮಾತ್ರ. ಹೀಗಾಗಿ ತಾಯಿ ಮನೆಯಲ್ಲಿಲ್ಲವಲ್ಲ ಎಂಬ ಬೇಸರ ಅವನನ್ನು ಕಾಡಿತ್ತು. ಮಾಮಲೇದಾರ, ಹೆಡ್‌ಕಾರಕೂನ ಜೋಶಿ ರಾಮರಾಯ, ಸಿಪಾಯಿ ಹುಸೇನಿ ಇವರಿಂದಾಗಿ ಕಚೇರಿಯಲ್ಲಿ ಅನೇಕ ವಿಚಿತ್ರ ಪ್ರಸಂಗಗಳನ್ನು ಎದುರಿಸಬೇಕಾಗುತ್ತಿತ್ತು.

ತಾಯಿ-ಮಗ ಇಬ್ಬರೂ ಆಗಾಗ ಅಂತಃಕರಣದಿಂದ ತಮ್ಮ ತಮ್ಮ ಕಷ್ಟ ಸುಖಗಳನ್ನು ಹೇಳಿಕೊಂಡು ಸಾಂತ್ವನ ಮಾಡಿಕೊಳ್ಳುತ್ತಿದ್ದರು. ಚಿಕ್ಕ-ಪುಟ್ಟ ಕಲಹಗಳು ಬಾಳಿನ ಏಕತಾನತೆಗೆ ನಲುಗಾಗಿ ಬಂದು ಸೊಗಸನ್ನು ಹೆಚ್ಚಿಸುತ್ತಿದ್ದವು.

* * * *

ಕಿಟ್ಟಿಗೆ ಇಬ್ಬರೇ ಸೋದರಮಾವಂದಿರು. ಒಬ್ಬ ವೆಂಕಟರಾಯ. ಇನ್ನೊಬ್ಬ ರಾಘಪ್ಪ. ಕಿಟ್ಟಿಗೆ ಅವರ ಹೆಸರನ್ನು ಕೇಳಿ ಮಾತ್ರ ಗೊತ್ತು. ಇದೀಗ ಗಂಗವ್ವ ಕಾಶೀಯಾತ್ರೆಗೆ ಹೋದಾಗ ಒಬ್ಬ ಮಾವ ಕ್ಷಿತಿಜದ ಮೇಲೆ ಮತ್ತೆ ಉದಯಿಸಿ ತನ್ನ ಬಳಗವನ್ನು ಕಿಟ್ಟಿಗೆ ಹೇಳಿದ.

ಜರತಾರಿ ಅಂಚಿನ ರುಮಾಲು ಧರಿಸಿದ ಗೋದಿ ಕೆಂಪು ವರ್ಣದ, ಎತ್ತರ ನಿಲುವಿನ ಸೋದರ ಮಾವನಲ್ಲಿ ಕಿಟ್ಟಿಗೆ ವಿಶೇಷ ಆಸಕ್ತಿಯೇನೂ ಹುಟ್ಟಲಿಲ್ಲ. ಆತ ಲೈನ ಬಜಾರದ ವಿಳಾಸ ಕೊಟ್ಟು ಕಿಟ್ಟಿಗೆ ಮನೆಗೆ ಬರಲು ಆಮಂತ್ರಿಸಿದ.

* * * * *

ಗಂಗವ್ವ ಯಾತ್ರೆಯಿಂದ ಬಂದು ಎರಡು ತಿಂಗಳಾಗುವಷ್ಟರಲ್ಲಿ ರಾಘಪ್ಪನ ಸವಾರಿ ಈ ಬಾರಿ ಮನೆಯನ್ನು ಹುಡುಕಿಕೊಂಡು ಬಂದಿತು. ಇಪ್ಪು ವರ್ಷಗಳ ನಂತರ ತಮ್ಮನ ಭೇಟಿಯಾದೀತೆಂದು ಗಂಗವ್ವ ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ಹತ್ತು ವರ್ಷಗಳ ನಂತರ ರಾಘಪ್ಪ ಗಂಗವ್ವನ ಮನೆಯನ್ನು ಪ್ರವೇಶಿಸಿದ್ದ. ರವಿವಾರವಾದ್ದರಿಂದ ಅಂದು ಕಿಟ್ಟಿಯೂ ಮನೆಯಲ್ಲಿದ್ದ. ರಾಘಪ್ಪ ತನ್ನ ಸುಖ-ದುಃಖಗಳನ್ನುಹೇಳಿಕೊಂಡ.

ಆತ ಇಪ್ಪು ವರ್ಷ ಹಳ್ಳಿಯಲ್ಲಿಯೇ ಇದ್ದನಂತೆ. ಎರಡನೆಯ ಹೆರಿಗೆಯಾದ ಮೇಲೆ ಅವನ ಹೆಂಡತಿ ಬೇನೆ ಬಿದ್ದವಳು ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ಈಗ ರಾಘಪ್ಪ ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಧಾರವಾಡದಲ್ಲಿ ಮನೆ ಮಾಡಿದ್ದ. ಗಂಗವ್ವ ಸುಮ್ಮನೆ ಎಲ್ಲವನ್ನು ಕೇಳಿಕೊಂಡಳು. ಕಿಟ್ಟಿಯನ್ನು ಮನಸಾರೆ ಹೊಗಳಿದ ರಾಘಪ್ಪ, "ಕಿಟ್ಟಣ್ಣಾ, ನಮ್ಮ ರತ್ನಾನ್ನ ನಿನ್ನ ಪಾಲಿಗೆ ಬಿಟ್ಟು ಬಿಟ್ಟೇವಿ. ಅವಳಿಗೆ ವರ ಹುಡುಕೂದ ಇಲ್ಲ. ಯಾಕವ್ವ ಗಂಗಕ್ಕಾ?" ಎಂದು ಎಳೆ ಚಾಚಿದ. ರತ್ನಾಳ ರೂಪವನ್ನು ವರ್ಣಿಸಿದ. ಮನೆಯಿಂದ ಹೋಗುವಾಗ, ಮಾಮಲೇದಾರ ಸಾಹೇಬರ ಹಾಗೂ ತನ್ನ ಸ್ನೇಹ 'ಗಳಸ್ಯ-ಕಂಠಸ್ಯ' ಎಂಬುದನ್ನು ಹೇಳಲು ಮರೆಯಲಿಲ್ಲ. ಅದನ್ನು ಕೇಳಿ ಕಿಟ್ಟಿಯ ಬಾಯಲ್ಲಿ ನೀರೂರಿತು. ಕಿಟ್ಟಿ ತಾಯಿಗೆ ಚಹ ಮಾಡಲು ಹೇಳಿದರೆ, "ರಾಘೂ ಚಹದ ಮನಶ್ಯಾ ಅಲ್ಲ ಏಳಪಾ," ಎಂದು ಮಾತು ಮುಗಿಸಿದಳು. ಕಿಟ್ಟಿಗೆ ಅವಮಾನವಾದಂತಾಗಿ ಕೋಪಬಂತು. ಎಷ್ಟೋ ಹೊತ್ತು ತಾಯಿಯ ಜೊತೆ ಮಾತಾಡಲಿಲ್ಲ. ಇದನ್ನರಿತ ಗಂಗವ್ವ ತನ್ನ ಕೆಲಸದಲ್ಲಿ ತೊಡಗಿದ್ದಳು. ಕೋಪಗೊಂಡ ಕಿಟ್ಟಿ, "ರಾಘಪ್ಪ ಬಂದಾಗ ಚಹ ಯಾಕ ಮಾಡಲಿಲ್ಲ?" ಎಂದು ಬಿಡಿ ಬಿಡಿಸಿ ಕೂಗಿ ಕೇಳಿದ. ಆಗ ಗಂಗವ್ವ, "ಚಹ ಪುಡಿ ತೀರೇದ" ಎಂದು ವಿವರಿಸಿ ಹೇಳಿದಾಗ ಕಿಟ್ಟಿಯ ಸಿಟ್ಟಿನ ಮೊನೆಯೇ ಮುರಿದುಹೋಯಿತು. ಅಂದು ಗಂಗವ್ವ, ಕಿಟ್ಟಿ ಅಡ್ಡಾಡಿ ಬರುವಷ್ಟರಲ್ಲಿ ಚಪಾತಿ-ಚಟ್ನಿಯನ್ನು ಮಾಡಿಟ್ಟಿದ್ದಳು. ಅವನಿಗೂ ಮಧ್ಯಾಹ್ನದ ಅವಿವೇಕವನ್ನು ಮರೆಮಾಡಿ ತಾಯಿಯೊಡನೆ ಸಂಧಾನ ಹೂಡಲು ಅವಕಾಶ ದೊರೆಯಿತು. ಅಂದು ರಾತ್ರಿ ತಾಯಿ-ಮಗ ಬಹಳ ಹೊತ್ತು ಮಾತಾಡಿದರು.

* * * * *

ಗಂಗವ್ವ ತನ್ನ ಹಳೆಯ ನೆನಪುಗಳನ್ನು ಮಗನೆದುರು ಬಿಚ್ಚಿಟ್ಟಳು: "ಈ ರಾಘ್ಯಾನಿಂದಲೇ ನಮಗೆ ಈ ಬಡತನ ಬಂದಿತು. ಕಿಟ್ಟಣ್ಣಾ, ನಾವು ಬಡವರು ಅಂತಿಯೇನು? ಅಲ್ಲಪ್ಪಾ, ಇಕಾ ನಾನs ಶೇರು ಬಂಗಾರ ಮೈಮ್ಯಾಲ ಇಟಗೊಂಡಕಿ ಇದ್ದೇನಿ. ನಾ ಗೋಟು ಪಾಟ್ಲಿ ಇಟಗೊಂಡರ ಕೈ ಮ್ಯಾಲ ಎತ್ತಲಿಕ್ಕೆ ಆಗತಿದ್ದಿಲ್ಲ. ಲಕ್ಷ್ಮೀನಾರಾಯಣನ ದರ್ಶನಕ್ಕೆ ಈ ಪೋದ್ದಾರ ಲಕ್ಷ್ಮಂಬಾಯಿ, ನಾನು ಕೂಡೇ

ಹೋಗತಿದ್ದಿವಿ. ಈಗ ನೆನಸಿ ಏನು ಉಪಯೋಗ ?

'ಈ ರಾಘ್ಯಾ,' 'ಹೊಲಾ ಒತ್ತೀ ಬಿದ್ದಾವ ಐನೂರು ರೂಪಾಯಿ ಸಾಲಾ ಕೊಡ್ರಿ; ಎರಡು ಹೊಲಾನಾರ ಬಿಡಿಸಿಕೋತೇನಿ' ಅಂತ ನಿಮ್ಮಪ್ಪನ ಎದುರಿಗೆ ಬಂದು ಮೂಗು ತಿಕ್ಕತಿದ್ದ. ಇವರ ಮನಸ್ಸು ಬಹಳ ದೊಡ್ಡದು. ಏನು ಮಾಡೋದು ಕಿಟ್ಟಣ್ಣಾ, ಆಗ ನೀ ಇನ್ನೂ ಸಣ್ಣವ ಇದ್ದಿ. ಅವರು ಕೈ ಬಿಟ್ಟು ಹೋದರು. ಇವನ ಹೇಣ್ತಿ ಚಂಪಿ ಈಗ ದೌಲತ್ತು ಮೆರೆಸತಾಳ. ಆಗ ಮೊದಲು ಕೆಲವು ದಿನ ಇವರು 'ನಿನ್ನ ಹೇಣ್ತಿಗೆ ಎರಡು ಕಿರಿಗಿ ತಗೋ' ಅಂತ ಕೈ ಎತ್ತಿ ಕೊಟ್ಟಾಗ ಆಕಿ ಹೊಸಾ ಸೀರಿ ಕಾಣಬೇಕು. ಇಂಥಾ ದಿನಾನೂ ಇದ್ದವು. ಕಡೀಗೆ ಆ ಉಪಕಾರಾನೂ ತೀರಿಸಿದನಲ್ಲ! ತಮ್ಮಂತ ತಮ್ಮ! ಪೂರ್ವಜನ್ಮದ ಭಾಗಾದಿ !

"ನಿನಗೆ ವೆಂಕಾಟಿ ಅಂತ ಇನ್ನೊಬ್ಬ ಸೋದರಮಾವ ಇದ್ದಾನ. ಈ ರಾಘ್ಯಾಸಕಿಂತಾ ಚಿಕ್ಕಾವ. ಈಗ ಇದ್ದಾನೋ ಸತ್ತಾನೋ! ಅವ ನಾಪತ್ತೆ ಆಗೇ ಈಗ ಹತ್ತು ಹನ್ನೊಂದು ವರ್ಷ ಆತು. ಸ್ವಲ್ಪ ಅರೆ ಹುಚ್ಚನ ಹಾಂಗ ಇದ್ದ. ಈ ರಾಘ್ಯಾನ ಲಗ್ನ ಆದ ಕೂಡಲೇ ಯಾರೋ ಬ್ಯಾಪ್ಪಿಲೇ 'ನಿನ್ನ ಲಗ್ನ ಮಾಡತೇವಿ' ಅಂದರು. ಅಂದ ಕೂಡಲೇ ಪುಣೇಕ್ಕ ಓಡಿಹೋತು ಖೋಡಿ. ಮಣೇದಾಗ ಯಾರೋ ಗುಜ್ಜರ ಮನ್ಯಾಗ ಪೂಜಿ ಮಾಡಿಕೋತ ಇದ್ದನಂತ. ಒಂದು ದಿವಸ ಯಾರು ಏನು ಕಲಿಸಿದರೋ, ಎರಡು ಸಾವಿರ ಹುಂಡಿ ಮ್ಯಾಲ ಖೊಟ್ಟಿ ಸಹಿ ಹಾಕಿ ಯಾವುದೋ ಬ್ಯಾಂಕಿನ್ಯಾಗಿಂದ ಆ ರೊಕ್ಕಾ ಸುಂಗಿ ಹಾಕಿ ಬಿಟ್ಟ. ಅದು ವ್ಯಾಳ್ಯಾಕ್ಕ ಪುಣೇದಾಗ ಇಂಥಲ್ಲಿ ಅವ ಇದ್ದದ್ದು ತಿಳಿದುಕೊಂಡು ರಾಘ್ಯಾ ಎರಡು ದಿವಸ ಇದ್ದು ಬಂದಿದ್ದನಂತ. ಈತನ ಅವನ ತಲ್ಯಾಗ ತುಂಬಿರಬೇಕು. ಪೊಲೀಸರು ಬಂದು ಹುಚ್ಚು ವೆಂಕಾಟಿನ ಹಿಡಕೊಂಡು ಪೊಲೀಸ ಠಾಣೆಕ್ಕ ಒಯ್ದರು. ಆಗ ಅವ ಅವರಿಗೆ ಇವರಿಗೆ ಹೇಳಿಕೊಂಡು ರಾಘ್ಯಾಗ ತಾರು ಕಳಿಸಿದ. ರಾಘ್ಯಾ ಬಂದು ಇವರ ಕಾಲು ಹಿಡಕೊಂಡ. ಆಗ ರಾಘ್ಯಾನ ಹೊಲಾ ಒತ್ತಿ ಬಿದ್ದಿದ್ದವು. ಆಗ ಇವರು ನನ್ನ ಮಾರಿ ನೋಡಿ ಐದು ಸಾವಿರಕ್ಕ ಜಾಮೀನು ಆಗಿ ವೆಂಕಾಟಿನ್ನ ಬಿಡಿಸಿಕೊಂಡು ಬಂದರು. ವೆಂಕಾಟಿ ಒಂದಿಷ್ಟು ದಿನಾ ನಮ್ಮಲ್ಲೇ ಇದ್ದ. ಒಂದು ದಿವಸ ವೆಂಕಾಟಿ ರಾಘ್ಯಾನ ಮನಿಗೆ ಮಲಕೊಳ್ಳಿಕ್ಕೆ ಹೋಗಿದ್ದ. ಅವನ ತಲ್ಯಾಗ ರಾಘ್ಯಾ ಏನು ತುಂಬಿದನೋ ಏನೋ, ಅಂದ ರಾತ್ರಿ ಅವನನ್ನು ಊರು ಬಿಟ್ಟು ಓಡಿಸಿಬಿಟ್ಟ. ಇಂದಿಗೂ ಅವನ ಪತ್ತೆ ಇಲ್ಲ. ಮುಂದ ಆಗೋದಿಲ್ಲ ಆತು. ಆ ಜಾಮೀನು ಆದ ತಪ್ಪಿಗೆ ನಮ್ಮ ಮನೆ ತೊಳದು ಹೋತು. ಇವ್ರು ಹೋದ್ರು," ಎಂದು ಹಳೆಯ ಘಟನೆಗಳನ್ನು ಮಗನೆದುರು ಹೇಳಿ ದುಃಖಿಸಿದಳು.

* * * **

ಕಿಟ್ಟಿಯ ಮನಸ್ಸಿನಲ್ಲಿ ಹೊಯ್ದಾಟ ಪ್ರಾರಂಭವಾಯಿತು. ಅವ್ವ ಹಳೆಯ ಪೀಳಿಗೆಯವಳು; ತಾನು ಹೊಸ ಪೀಳಿಗೆಯವ. ಒಂದೊಂದು ಪೀಳಿಗೆಗೂ ಒಂದೊಂದು ಸಮಸ್ಯೆ. ಆಕೆಯ ನಿರ್ಣಯದ ವಿರುದ್ಧ ತಾನು ನಿಲ್ಲುವುದು ಅಸಾಧ್ಯ. ಹಣವು ಅವನಲ್ಲಿ. ಹೊಸ ಮನುಷ್ಯತ್ವವನ್ನು ತುಂಬತೊಡಗಿತ್ತು. ಬದಲಾದ ಜಗತ್ತಿನಲ್ಲಿ ಕ್ಷಣಕ್ಷಣಕ್ಕೆ ಬದಲಾಗುತ್ತಿದ್ದ ಕಿಟ್ಟಿಗೆ ಉಸಿರುಗಟ್ಟುವ ಅನೇಕ ಪ್ರಸಂಗಗಳು

ಬರುತ್ತಿದ್ದವು. ಭೂತಕಾಲದೊಡನೆ ಸಂಬಂಧವಿಟ್ಟುಕೊಳ್ಳುವುದು ದಿನದಿನಕ್ಕೆ ಕಠಿಣವಾಗತೊಡಗಿತ್ತು. ಬೀದಿಯಲ್ಲಿ ಅಡ್ಡಾಡುವಾಗ ಹಿಂದೆ ವಿದ್ಯಾರ್ಥಿಯಾಗಿದ್ದಾಗ ಯಾರ ಮನೆಗೆ ವಾರಾನ್ನಕ್ಕೆ ಹೋಗುತ್ತಿದ್ದನೋ ಅವರು ಭೇಟಿಯಾದರೆಂದರೆ ಅವರಿಗೆ ನಮಸ್ಕಾರ ಮಾಡಲೋ ಬಿಡಲೋ ಎಂಬ ಧರ್ಮಸಂಕಟ. ತಾನು ಈಗ ಲಂಡ-ಚಣ್ಣ ಬಿಟ್ಟು ಪೈಜಾಮು ಧರಿಸತೊಡಗಿದ್ದನ್ನು ಕಂಡು ಜನ ಎಲ್ಲಿ ನಗುತ್ತಾರೋ ಎಂಬ ಭಯ. ಚಂಡಿಕೆ ಕಡಿಮೆಯಾಗಿ ಕೂದಲು ಉದ್ದವಾಗತೊಡಗಿದ್ದವು. ಜೊತೆಗೆ ಕನ್ನಡಿ ಎದುರು ನಿಂತು ಬೈತಲೆ ತೆಗೆದುಕೊಳ್ಳುವ ಹವ್ಯಾಸ.

ಕಚೇರಿಯಲ್ಲಿ ಕಿಟ್ಟಿಗೆ ಸಿಪಾಯಿಯಾದ ಹುಸೇನಿಯನ್ನು ಕಂಡರೆ ತುಸು ಭೀತಿ. ಅವನು ಜಾಣನೆಂದೂ ಸಾಕಷ್ಟು ಲಾಭ ಮಾಡಿಕೊಡಬಲ್ಲ ಯೋಗ್ಯತೆ ಅವನಲ್ಲಿ ಇದೆಯೆಂದೂ ಅವನ ಬಗ್ಗೆ ಖ್ಯಾತಿ ಇತ್ತು. ಒಂದು ಸಂದರ್ಭದಲ್ಲಿ ಕಿಟ್ಟಿ ಹುಸೇನಿ ಸ್ನೇಹ-ಪ್ರಾರಂಭೋತ್ಸವವನ್ನು ಚಹದಂಗಡಿ ಪ್ರವೇಶದ ಮೂಲಕ ನೆರವೇರಿಸಿದ.

* * * *

ಒಂದು ದಿನ ಸಂಜೆಯ ಹೊತ್ತಿನಲ್ಲಿ ಗಂಗವ್ವ ದೇಸಾಯರ ಮನೆಗೆ ಹೋದಳು. ದೇಸಾಯರ ಹಿರಿಯ ಮಗ ಅಚ್ಯುತ ಕಾಮರ್ಸ್ ಕಲಿಯಲು ಮುಂಬೈಗೆ ಹೋದಂದಿನಿಂದ ಅವರ ಎರಡನೆಯ ಮಗ ವಸಂತನಿಗೆ ಮನೆಯ ವ್ಯವಹಾರಗಳ ಬಗ್ಗೆ ಹೆಚ್ಚಿನ ಆಸಕ್ತಿ ಹುಟ್ಟಿತು. ಕಿಟ್ಟಿ ಮೊದಲ ವರ್ಷವೇ ಮ್ಯಾಟ್ರಿಕ್ ಪಾಸಾಗಿ ತಾನು ಹಿಂದೆಬಿದ್ದದ್ದು ಅವನಿಗೆ ಅತೀವ ಅಸಮಾಧಾನವನ್ನುಂಟುಮಾಡಿತ್ತು.

ದೇಸಾಯರು ಕಿಟ್ಟಿಗೆ, 'ನೀ ಬ್ಯಾರೆ ಅಲ್ಲ, ನಮ್ಮ ವಸಂತ ಬ್ಯಾರೆ ಅಲ್ಲ' ಎಂದು ಹೇಳಿದಾಗ ತನಗಿಂತಲೂ ಅವನ ಮೇಲೆಯೇ ವಾತ್ಸಲ್ಯ ಬಹಳ ಎಂದು ಅವನಿಗನಿಸಿರಬಹುದು. ಗಂಗವ್ವ ಮನೆಯಲ್ಲಿ ಪ್ರವೇಶ ಮಾಡಿದಾಗ ವಸಂತ, "ಬರ್ರಿ, ಎಷ್ಟು ರೂಪಾಯಿ ಬೇಕಾಗಿದ್ದವು ಹೇಳ್ರಿ. ಹಿತ್ತಲದಾಗ ಗಿಡಾ ಹಚ್ಚೇವಿ," ಎಂದ. ಗಂಗವ್ವ ಸಂತಪ್ತಳಾದಳು. ಬಿರಬಿರನೆ ಒಳಗೆ ಹೋಗಿ ಕೋಣೆಯಲ್ಲಿ ಎಲೆ ಮೆಲ್ಲುತ್ತ ಕುಳಿತ ದೇಸಾಯರ ಎದುರು ನಿಂತು, "ಯಾಕಪಾ ಗೋಪಣ್ಣಾ, ನಿನ್ನ ಆಧಾರದ ಮೇಲೆ ನಾವು ಇದ್ದೇವಿ ಅನ್ನುವದು ಖರೆ, ಆದರ ನಾ ಬೇಡಿದಾಗ ನೀ ರೊಕ್ಕಾ ಕೊಡತೀಯಲ್ಲಾ, ಆ ರೊಕ್ಕ ಯಾರದು ಅನ್ನುವದನ್ನ ನಿನ್ನ ಮಗನಿಗೆ ಸ್ವಲ್ಪ ತಿಳಿಸಿ ಹೇಳಪಾ," ಎಂದು ಕೂಗಾಡಿದಳು. ಎಲ್ಲವನ್ನೂ ಕೇಳಿಕೊಂಡ ದೇಸಾಯರು ಗಂಗವ್ವನಿಗಾಗಿ ಮರುಗಿದರು.

ವಸಂತನ ಕಾರುಭಾರಗಳು ನಡೆದೇ ಇದ್ದವು. ಗಂಗವ್ವ ಸಿಟ್ಟಿನ ಭರದಲ್ಲಿ ದೇಸಾಯರ ಮುಂದೆ ಆಡಿದ ಮಾತುಗಳು ವಸಂತನ ಕಿವಿಗೆ ಬೀಳದೇ ಇರಲಿಲ್ಲ. ಅವಳಾಡಿದ ಹಣದ ವಿಷಯವನ್ನು ತಾಯಿಯಿಂದ ತಿಳಿಯಲೇಬೇಕೆಂದು ಆತ ಪಣತೊಟ್ಟ. ಇದನ್ನರಿತ ವೇಣಕ್ಕ ಒಂದು ದಿನ ಮಗನನ್ನು ಕೂಡಿಸಿಕೊಂಡು, "ಗಂಗವ್ವನೂ ದೊಡ್ಡ ಮನೆತನದವಳು. ಆಕಿ ಗಂಡ ಮುತ್ತಿನ ವ್ಯಾಪಾರ ಮಾಡ್ಯಾನ, ಬೆಲ್ಲದ ವ್ಯಾಪಾರ ಮಾಡ್ಯಾನ. ಒಂದ..ಎರಡ..ಏನೋ ತ್ರಾಸಿನಾಗ ಸಿಕ್ಯಾ, ಎಲ್ಲಾ ಲಿಲಾವ ಆಗಿ ಆಗಿ

ಹೋತು. ಆರು ತಿಂಗಳದಾಗ ಹೊಟ್ಟೆಬ್ಯಾನಿ ಹಚಗೊಂಡ ಸತ್ತುಹೋದ. ಆದರ ಗಂಗವ್ವ ಶ್ಯಾಣ್ಯಾಕಿ. ಮನ್ಯಾಗಿನ ಸ್ವಲ್ಪ ಭಂಗಾರದ ದಾಗೀನೆ ಈ ಕಿಟ್ಯಾನ ಕೈಯಾಗ ಕೊಟ್ಟು ಹಿತ್ತಲ ಬಾಗಿಲಲೇ ಹೊರಗೆ ಕಳಿಸಿ ತಿಪ್ಯಾಗ ಒಗಿಸಿದಳು. ಅಂತೂ ಅಷ್ಟಾದರೂ ಉಳಿತು. ಎಲ್ಲಾ ಹೋಗಿ ಗಂಡ ಸತ್ತು ಹೋದ ಮ್ಯಾಲ ಆದನ್ನು ಹೊರಗ ತಗದು, ರಾತ್ರೋ ರಾತ್ರಿ ನಮ್ಮಲ್ಲೇ ಬಂದು, ಮಾರಿಸಿ ಬಂದ ಏಳೆಂಟು ನೂರು ರೂಪಾಯಿ ಇವರ ಕಡೆಗೆ ಇಟ್ಟಾಳ. ಬಡ್ಡಿಗೆ ಬಡ್ಡಿ ಕೂಡಿ ಈಗ ಸಾವಿರದ ಹತ್ತಿರ ಬಂದದ. ಬೇಕಾದಾಗ ಬಂದು ತನ್ನ ರೊಕ್ಕಾ ಒಯ್ತಾಳಪ್ಪ. ನಾವು ಕೊಡೋದು ಬರೇ ಎರಡು ಒಳ್ಳೇ ಮಾತು. ಅಷ್ಟಕ್ಕ ನಮ್ಮ ಉಪಕಾರ ಆಕಿ ಎಷ್ಟು ಹಿಡದಾಳ! ಈ ಗುಣ ನೋಡಪಾ," ಎಂದು ಮಗನಿಗೆ ತಿಳಿ ಹೇಳಿದಳು.

ಈ ವಿಷಯವನ್ನು ಕಿಡಿಗೇಡಿ ವಸಂತರಾಯ ಹೊತ್ತು ಸಾಧಿಸಿ ಒಂದು ದಿನ ಕಿಟ್ಟಿಗೆ ತಿಳಿಸಿದ. ಹೆಡ್‌ಮಾಸ್ತರರನ್ನು ಗೋಳುಹೊಯ್ದುಕೊಳ್ಳುವುದು, ಹುಡುಗಿಯರನ್ನು ಛೇಡಿಸುವುದು ಒಂದೇ ಎರಡೇ! ಶಾಲೆಯಲ್ಲಿಯೂ ಈ ವಸಂತರಾಯನ ತಕರಾರುಗಳು ಸಾಕಷ್ಟಿದ್ದವು. ಕೊನೆಗೆ ದೇಸಾಯರೇ ಬೇಸತ್ತು ತಮ್ಮ ಮಗನನ್ನು ಶಾಲೆಯಿಂದ ಹೊರಗೆ ಹಾಕುವಂತೆ ಮಾಡಿದರು.

*** **** ***

ಕಿಟ್ಟಿ ದಿನದಿನಕ್ಕೆ ಬದಲಾಗುತ್ತಿದ್ದ. ರಾಘಪ್ಪ ತನ್ನ ಸಾಹೇಬನ ಸ್ನೇಹಿತನೆಂಬುದು ತಿಳಿದಂದಿನಿಂದ ಅವನ ಮೇಲೆ ವಿಶೇಷ ಭಕ್ತಿ ಹುಟ್ಟಿತು. ಒಂದು ದಿನ ರಾಘಪ್ಪ ಸಮಯ ಸಾಧಿಸಿ ಮಾಮಲೇದಾರರನ್ನೂ ತನ್ನ ಆಳಿಯ ಕಿಟ್ಟಿಯನ್ನೂ ತನ್ನ ಮನೆಯಲ್ಲಿ ಮೆಹಬೂಬ ಜಾನಳ 'ಗಾಣೇ ಪಾರ್ಟಿಗೆ' ಬರಬೇಕೆಂದು ಆಗ್ರಹದಿಂದ ಆಮಂತ್ರಿಸಿದ. 'ಗಾಣೇ' ಎಂಬ ಕಾರ್ಯಕ್ರಮ ಹೇಗಿರುತ್ತದೆಂಬುದು ಕಿಟ್ಟಿಯ ಕಲ್ಪನೆಗೂ ಮೀರಿತ್ತು.

ಕಿಟ್ಟಿ ಸಂಗೀತಕ್ಕೆ ಗಂಜಿ ಹಾಕದ ಕೋಟು ಹಾಕಿಕೊಂಡೇ ಹೋಗಿದ್ದ. ಪಡಸಾಲೆಯಲ್ಲಿ ಸಂಗೀತ ಕಾರ್ಯಕ್ರಮಕ್ಕೆ ಏರ್ಪಾಟು ಮಾಡಲಾಗಿತ್ತು. ರಸಿಕರೆಲ್ಲರೂ ಅಲ್ಲಿಗೆ ಬಂದಿದ್ದರು. ಕಿಟ್ಟಿ ಪಡಸಾಲೆಯ ಒಂದು ಮೂಲೆಯಲ್ಲಿ ಅನುಮಾನಿಸುತ್ತ ಕುಳಿತುಕೊಂಡ. ಒಂದು ಕೋಣೆಯಲ್ಲಿ ಸುರಸುಂದರಿಯೋರ್ವಳು ಕುಳಿತಿದ್ದಳು. ಗ್ಯಾಸಿನ ಮಂದ ಪ್ರಕಾಶದಲ್ಲಿ ಕಿಟ್ಟಿ ಎಲ್ಲವನ್ನೂ ಸೂಕ್ಷ್ಮವಾಗಿ ನೋಡಿದ. ಹುಬ್ಬಳ್ಳಿಯ ಮೆಹಬೂಬಜಾನ್ ಹೆಸರಾದ ಗಾಯಕಿ. ರೂಪವತಿ. ಅವಳು ತನ್ನದೇ ಆದ ರೀತಿಯಲ್ಲಿ ಸುಸಂಸ್ಕೃತಳು. ಕಳೆದ ಹತ್ತು-ಹನ್ನೆರಡು ವರ್ಷಗಳಿಂದ -ಅಂದರೆ ರಾಘಪ್ಪನ ಹೆಂಡತಿ ಚಂಪಿ ಬೇನೆ ಬಿದ್ದು ಅಶಕ್ತಳಾದಂದಿನಿಂದ -ಅವನ ಮನದನ್ನೆಯಾಗಿ ಅವನ ಆಶ್ರಯದಲ್ಲೇ ಇದ್ದಳು.

ಮೊದಮೊದಲು ರಾಘಪ್ಪ- ಮೆಹಬೂಬ ಜಾನ್ ಸಂಬಂಧ ಮನೆಯಲ್ಲಿ ಗೋಪ್ಯವಾಗಿಯೇ ಇತ್ತು. ಆದರೆ ಕೊನೆಗೊಮ್ಮೆ ಸ್ಫೋಟಗೊಂಡಿತು. ಬಿಂದಗೋಳದಲ್ಲಿ ಒಮ್ಮೆ ಮನೆಯಲ್ಲಿಯ ತುಸು ಬಂಗಾರ ಮಾಯವಾಯಿತು. ರಾಘಪ್ಪ 'ಕಳುವಾಯಿತು' ಎಂದು ತಪಾಸಣೆ ಶುರು ಮಾಡಿದ. ಊರಲ್ಲೆಲ್ಲ ಗದ್ದಲ ಏಳಲಾಗಿ ಅದೇ ಓಣಿಯ ಮುಪ್ಪಿನ ಮುದುಕ, ಲಿಂಗಯ್ಯ ಮಕ್ಕಳ

ಮಾತು ಮೀರಿ ಚಂಪಕ್ಕನ ಬಳಿ ಬಂದು, "ಮಗಳ ನಾ ಒಂದು ಮಾತು ನಿನ್ನ ಸುಖಕ್ಕ ಹೇಳತೇನಿ. ಗೌಡರು ಕೋರ್ಟು-ಕಚೇರಿ ಅಂತ ಹುಬ್ಬಳ್ಳಿ ಅಡ್ಡಾಡಿ ಬರತಾರ. ಅಲ್ಲೇ ಅಡ್ಡಹಾದಿ ಬಿದ್ದಾರು. ದಾಗೀಣು ಮತ್ತೆಲ್ಲೂ ಹೋಗಿಲ್ಲ. ಒಯ್ದುವರೂ ತಾವ, ಹುಡಕೋ ಅವರೂ ತಾವ. ನೀ ಹುಶ್ಯಾರಾಗಿ ಬಾಳೆ ಮಾಡು," ಎಂದು ಹೇಳಿ, ಹೋದ.

ಮುಂದೆ ಮೂರು ವರ್ಷಗಳವರೆಗೆ ಚಂಪಕ್ಕ ಮನೆಯನ್ನು ಅಸಾಧ್ಯ ಗೃಹಕಲಹದಿಂದ ತುಂಬಿದ್ದಳು. ಒಮ್ಮೆ ತವರುಮನೆಗೆ ಹೋದವಳು ನಾಲ್ಕು ತಿಂಗಳು ಬರಲಿಲ್ಲ. ಅನಂತರ ಅವಳ ತಮ್ಮನೇ ಬುದ್ಧಿ ಹೇಳಿ ಕಳಿಸಿಕೊಟ್ಟಿದ್ದ. ರಾಘಪ್ಪನಿಗೆ ಬುದ್ಧಿ ಹೇಳುವ ಧೈರ್ಯ ಬಿಂದಗೋಳದಲ್ಲಿ ಯಾರಿಗೂ ಇರಲಿಲ್ಲ. ಚಂಪಕ್ಕ ಏನಾದರೂ ಕೇಳಿದರೆ ರಾಘಪ್ಪನ ಉತ್ತರ ಒಂದೆ: "ನಾ ಘಳಸತೇನಿ, ಖರ್ಚು ಮಾಡತೇನಿ. ನಿಮ್ಮ ಅನ್ನ-ವಸ್ತ್ರಕ್ಕ ಕಡಿಮೆ ಆದ ದಿನ ಬಿಂದಗೋಳ ಚಾವಡೀ ಮುಂದ ನಿಂತು ಕಿವಿ- ಮೂಗು ಕೊಯ್ಸಿಗೋತೇನಿ. ಗಂಡಸರ ವ್ಯವಹಾರದಾಗ ನಿಮ್ಮದ್ಯಾಕ ಬಾಯಿ.... ?"

ಚಂಪಕ್ಕನ ತಮ್ಮನಿಗೆ ಹುಬ್ಬಳ್ಳಿಗೆ ವರ್ಗವಾದ್ದರಿಂದ ತನ್ನ ಪತಿಯನ್ನು ತನ್ನಿಂದ ಸೆಳೆದೊಯ್ದ ರಂಭೆಯನ್ನು ಒಮ್ಮೆ ಕಣ್ಣಿಂದ ನೋಡಬೇಕೆಂಬ ಇಚ್ಛೆ ಚಂಪಕ್ಕನಿಗೆ ಬಲವಾಯಿತು. ಒಮ್ಮೆ ಹುಬ್ಬಳ್ಳಿಗೆ ಬಂದು ತಮ್ಮನ ಮನೆಯಲ್ಲಿ ನಿಂತು ಮೆಹಬೂಬಜಾನ್‌ಳ ಮನೆಯನ್ನು ಹುಡುಕಿ ತೆಗೆದಳು. ಆಕೆಯ ಮನೆಗೆ ಹೋಗಿ ತನ್ನ ಗೋಳನ್ನು ಹೇಳಿಕೊಂಡಳು.

ಮೆಹಬೂಬಳಿಗೂ ರಾಘಪ್ಪನಿಗೆ ಹೆಂಡಿರು ಮಕ್ಕಳಿವೆಯೆಂಬ ವಿಚಾರವೇ ಹೊಳೆದಿರಲಿಲ್ಲ. ಅವಳ ಕರುಳು ಕರಗಿತು. ಮುಂದಿನ ಸಲ ರಾಘಪ್ಪ ತನ್ನ ಕಡೆ ಬಂದಾಗ, "ನಿಮ್ಮ ಮನೆಗೆ ಹೋಗಿರಿ," ಎಂದು ಹೇಳಿ ಕಳಿಸಿಕೊಟ್ಟಳು. ಅಂದಿನಿಂದ ರಾಘಪ್ಪನಿಗೆ ಒಂದೂವರೆ ವರ್ಷ ಮೆಹಬೂಬಜಾನ್‌ಳ ದರ್ಶನವಾಗಲಿಲ್ಲ.

ಆದರೆ ಇಷ್ಟರಲ್ಲಿ ತನ್ನ ಅನಾರೋಗ್ಯದ ನಿಮಿತ್ತ ಚಂಪಕ್ಕನಿಗೆ ಹೊಸ ಚಿಂತೆಗಳು ಪ್ರಾರಂಭವಾದವು. ತನ್ನ ಗಂಡ ಅತ್ತಿತ್ತ ಕೀಳು ಕಸಬೆಯರಲ್ಲಿ ಅಡ್ಡಾಡಿ ಎಲ್ಲಿ ಆರೋಗ್ಯ ಕೆಡಿಸಿಕೊಳ್ಳುವನೋ ಎಂಬ ಭೀತಿ ಶುರುವಾಯಿತು. ಕೊನೆಗೆ ಚಿಂತಿತಳಾದ ಚಂಪಕ್ಕ ಒಂದು ದಿನ ತಾನೇ ಮೆಹಬೂಬಜಾನ್‌ಳ ಮನೆಗೆ ಬಂದು ರಾಘಪ್ಪನ ಪಾಲನೆಯನ್ನು ಅವಳಿಗೆ ಒಪ್ಪಿಸಿದಳು. ಅಂದಿನಿಂದ ಮೆಹಬೂಬ್‌ಜಾನ್ 'ಅಕ್ಕಾ ಅವರ' ಮನೆಯ ದೇವತೆಯಾದಳು.

ಯುಗಾದಿಗೊಮ್ಮೆ ದೀವಳಿಗೆಗೊಮ್ಮೆ ಮೆಹಬೂಬಜಾನ್‌ಳನ್ನು ಚಂಪಕ್ಕ ಬಿಂದಗೋಳದ ಮನೆಗೆ ಕರೆದುಕೊಂಡು ಹೋಗಿ ಖಣಕೊಟ್ಟು ಮರ್ಯಾದೆ ಮಾಡಿ ಕಳುಹಿಸುವಳು. ಮೆಹಬೂಬಜಾನ್‌ಳಾದರೂ ಹುಬ್ಬಳ್ಳಿಯಿಂದ ಪೇರಲಹಣ್ಣಿನ ಬುಟ್ಟಿ, ಮಾವಿನ ಬುಟ್ಟಿಗಳನ್ನು ಆಯಾ ಮಾಸಕ್ಕೆ ಅನುಗುಣವಾಗಿ ಚಂಪಕ್ಕನಿಗೆ ಕಳಿಸಿಕೊಡುವಳು. ಅಂತೂ ಹೀಗೆ ರಾಘಪ್ಪನ ಬಾಳುವೆ ಸಮೃದ್ಧವಾಗಿ ಸಾಗಿತ್ತು.

ಮೆಹಬೂಬಜಾನ್ ನಾಟಕಗಳಲ್ಲಿ ಪಾರ್ಟುಮಾಡಿ ವಿಪರೀತ ಆಯಾಸವಾಗಿ ಒಮ್ಮೆ ಬೇನೆ ಬಿದ್ದ ಮೇಲೆ ತನ್ನ 'ಯಜಮಾನ'ನ ಆಜ್ಞೆಯಂತೆ ನಾಟಕಗಳಲ್ಲಿ

ಪಾರ್ಟಿ ಮಾಡುವುದನ್ನು ನಿಲ್ಲಿಸಿಬಿಟ್ಟಿದ್ದಳು. ನಂತರ ರಾಘಪ್ಪನೇ ಆಗಾಗ 'ಗಾಣೇ ಪಾರ್ಟಿ' ಏರ್ಪಾಟು ಮಾಡುತ್ತಿದ್ದ.

*** **** ***

ಆಗಲೇ ಹೇಳಿದಂತೆ ರಾಘಪ್ಪ ಏರ್ಪಾಟು ಮಾಡಿದ ಅಂದಿನ 'ಗಾಣೇ ಪಾರ್ಟಿ'ಗೆ ರಾಘಪ್ಪನ ಸ್ನೇಹಿತರಾದ ಮಾಮಲೇದಾರ ಸಾಹೇಬರು ಹಾಜರಾಗಿದ್ದರು. ಮೆಹಬೂಬಜಾನ್ ಪಡಸಾಲೆಯ ಬೆಳಕಿಗೆ ಬಂದೊಡನೆ ಆಕೆಯ ಸೌಂದರ್ಯವನ್ನು ಕಂಡು ಕಿಟ್ಟಿಗೆ ನಿರಾಶೆಯಾಯಿತು. ಸ್ಥೂಲಕಾಯದವಳಾದ ಆಕೆ ಸಾಕಷ್ಟು ಬಣ್ಣ ಬಳಿದುಕೊಂಡಿದ್ದಳು. ಆಕೆ ಹಿಂದುಸ್ತಾನಿ ಸಂಗೀತ ಬಲ್ಲವಳು. ಅವಳು ಒಂದು ಮರಾಠಿ ಪದವನ್ನೂ ಒಂದು ಕನ್ನಡ ಹಾಡನ್ನೂ ಹಾಡಿದಳು. ಸಂಗೀತ ಸಭೆ ಮುಗಿದ ಮೇಲೆ ಕಿಟ್ಟಿ ಮೊದಲ ಸಲ ತನ್ನ 'ಮಾಮಿ'ಯನ್ನು ಭೇಟಿಯಾದ.

ಅನಾರೋಗ್ಯದಿಂದ ಸೋತು ಸಣ್ಣಾದ ಚಂಪಕ್ಕ ಮಧ್ಯವಯಸ್ಸಿನ ಹೆಣ್ಣುಮಗಳು. ಬಾಗಿ ಕುಳಿತುಕೊಂಡಿದ್ದಳು. ಸಣ್ಣನೆಯ ಉದ್ದ ಕುಂಕುಮ ಧರಿಸಿದ್ದಳು. ಲಿಂಬೆಹಣ್ಣಿನ ಮೈಬಣ್ಣ. ಅವಳು ತನ್ನ ವಯಸ್ಸಿಗೆ ಹೆಚ್ಚು ವಯಸ್ಕಳಾಗಿ ಕಂಡರೂ ತನ್ನ ಹರೆಯದಲ್ಲಿ ಆಕೆ ಸುಂದರಿಯಾಗಿದ್ದಳೆಂದು ಯಾರಾದರೂ ಹೇಳಬಹುದಿತ್ತು. ಅವಳು ಮಂದ ಪ್ರಕಾಶದಲ್ಲಿ ಕಿಟ್ಟಿಯನ್ನು ದಿಟ್ಟಿಸಿ ನೋಡಲು ಯತ್ನಿಸದೆ, 'ಬಾ ಕಿಟ್ಟಣ್ಣ, ಬಾ," ಎಂದಳು.

ಅಷ್ಟರಲ್ಲಿ ಬಾಗಿಲ ಎದುರಿಗೆ ಹಾಯ್ದು ಹೋಗುತ್ತಿದ್ದ ರತ್ನಾಳನ್ನು ಕರೆದು, "ರತ್ನಾ, ಪಡಸಾಲ್ಯಾಗಿನ ಗ್ಯಾಸ ಬತ್ತಿ ತಗೊಂಡು ಬಾ," ಎಂದಳು. ಹೊಸ್ತಿಲ ಬಳಿ ಗ್ಯಾಸನ್ನು ಇಟ್ಟು ರತ್ನಾ ಹೊರಗೆ ಜಾರಿದಳು. ಮತ್ತೆ ಎರಡು ಕಪ್ಪು ಬಿಸಿ ಹಾಲು ತೆಗೆದುಕೊಂಡು ಬಂದಳು. ಹದಿನೈದು ವರ್ಷದ ಆ ಎಳೆಯ ಅರೆ ತರುಣಿ ಒಮ್ಮೆ ಮಾತ್ರ ಕಿಟ್ಟಿಯ ಕಣ್ಣಿಗೆ ಬಿದ್ದಳು. ಆಕೆ ಹಾಲನ್ನು ತಂದಿಟ್ಟಾಗ ಕಿಟ್ಟಿ ಅವಳ ತೆವಳು ಬೈತಲೆಯನ್ನು ಆಸೆಯಿಂದ ನೋಡಿದ. ಮೂರು ಗಂಟೆಗಳ ಹಿಂದೆ ಯಾವ ಭಾವನೆಯೂ ಇಲ್ಲದೆ ಬಂದ ಕಿಟ್ಟಿ ಇದೀಗ ಪ್ರೇಮಿಯಾಗಿ ಹೊರಬಂದ.

ಕಚೇರಿಯಲ್ಲಿ ಕಿಟ್ಟಿಯ ಬದಲಾದ ಮನೋವೃತ್ತಿಗನುಗುಣವಾಗಿ ಹೊಸ ಸ್ನೇಹಿತನೊಬ್ಬ ದೊರಕಿದ. ಅವನೇ ಜಾರ್ಜ್ ವಾಶಿಂಗಟನ್ ಕಂಬಾರಗಣವಿ. ಜಾರ್ಜಿಯ ಪ್ರದೀರ್ಘ ನಾಮದ ಮೂಲಕ ಅವನು ಕಿಟ್ಟಿಗೆ ಪವಾಡ ಪುರುಷನಂತೆ ತೋರಿದ್ದ. ಮೌನವೆ ಜಾರ್ಜಿಯ ಜೀವಾಳ. ತನ್ನ ಕೆಲಸದಲ್ಲಿ ಅವನು ಚೊಕ್ಕ. ಕಿಟ್ಟಿ ಅದುವರೆಗೆ ಸಿನೆಮಾ ನೋಡಿರಲಿಲ್ಲ. ಜಾರ್ಜಿ ಕಿಟ್ಟಿಯ ಜೀವನದಲ್ಲಿ ಅದನ್ನು ತಂದ. ಒಮ್ಮೆ ಸಿನೇಮಾಕ್ಕೆ ಹೋದಾಗ ಜಾರ್ಜಿ ತನ್ನ ಭಾವೀ ಪತ್ನಿ ಸಾರಾಳನ್ನು ಪರಿಚಯಿಸಿದ.

ರಾಘಪ್ಪನ ಮನೆ ಕಿಟ್ಟಿಯ ಕಚೇರಿಗೆ ಸಮೀಪವಾಗಿದ್ದರಿಂದ ಬೇಕಾದಾಗ ಬಂದು ಚಹಾ- ಫರಾಳ ತೆಗೆದುಕೊಂಡು ಹೋಗಲು ಔತಣ ಕೊಟ್ಟಿದ್ದ. ದೀಪಾವಳಿ ಬಂದೊಡನೆ ನರಕ ಚತುರ್ದಶಿ ದಿವಸ ಆರತಿಗೆ ಬರಬೇಕೆಂದು ಆಗ್ರಹದ ಆಮಂತ್ರಣವಿತ್ತಿದ್ದ.

ಕಿಟ್ಟಿಗಾಗಿಯೇ ಎಂದು ಎಂಟೂವರೆಯಾಗಿದ್ದರೂ ಆರತಿ ಆಗಿರಲಿಲ್ಲ. ಆರತಿಯ ಶಾಸ್ತ್ರ ಪ್ರಾರಂಭವಾಯಿತು. 'ಬಾ ನಿನ್ನ...ನಿನ್ನ ಕೈಲೇ ಆರತಿ ಹಿಡಸತೇನಿ' ಎಂದು ಗಂಭೀರ

ಪ್ರತಿಜ್ಞೆಯನ್ನು ತೊಟ್ಟು ಗೋದಾವರಿ (ಓಣಿಯವಳು) ನಾಚುತ್ತ ಒಳಗೆ ಓಡಿದ ರತ್ನಾಳ ಬೆನ್ನುಹತ್ತಿದಳು. ಅಂತೂ ರತ್ನಾ ನಾಚುತ್ತ "ಕೃಷ್ಣಾ ನೀ ಬೇಗನೇ ಬಾರೋ. ಮುಖವನೆ ತೋರೋ' ಎಂಬ ಹಾಡನ್ನು ಹಾಡಿದಳು. ಕಿಟ್ಟಿಗೆ "ಅಯ್ಯೋ, ಯಾಕೆ ಈ ಹುಡುಗಿಯರ ಕೈಯಲ್ಲಿ ಸಿಕ್ಕೆನಪ್ಪಾ," ಎನಿಸಿತು. ಫರಾಳವಾಯಿತು. ಅಂದು ರತ್ನಾ ಕೋಣೆಯಲ್ಲಿ ಒಂದು ದೊಡ್ಡ ಕನ್ನಡಿಯನ್ನು ಗೋಡೆಗೆ ಆನಿಸಿಟ್ಟು ತನ್ನ ನಸುಗೆಂಪು ಕೂದಲಗುಚ್ಛವನ್ನು ಬೆರಳುಗಳಿಂದ ಒಮ್ಮೆ ಎಡಗಡೆಗೆ, ಬಲಗಡೆಗೆ ಸರಿಸಾಡುತ್ತ ತನ್ನ ಬಹುವಿಧ ಸೌಂದರ್ಯದಲ್ಲಿ ಆಸಕ್ತಳಾಗಿದ್ದಳು. ಕಿಟ್ಟಿ ಕೋಣೆಯಲ್ಲಿ ಹೋಗಿ ಬರುತ್ತೇನೆಂದು ಹೇಳಿ ಬರುವ ನೆಪದಲ್ಲಿ ಹಣಿಕಿ ಹಾಕಿ ತುಂಟ ನೋಟ ಬೀರಿದ. ಹೀಗೆ ಕಿಟ್ಟಿ ರಾಘಪ್ಪನ ಬಲೆಯಲ್ಲಿ ಬಿದ್ದ.

*** **** ***

ರಾಘೂನ ಒಳಸಂಚನ್ನು ಅರಿತಿದ್ದ ಗಂಗವ್ವ ದೇಸಾಯರ ಮೇಲೆ ದೊಡ್ಡ ಭಾರ ಹಾಕಿ ಕನ್ಯಾನ್ವೇಷಣೆಗೆ ತೊಡಗಿದಳು. ಹಟಮಾರಿಯಾದ ಕಿಟ್ಟಿ, "ಈಗ ನನ್ನ ಲಗ್ನದ ವಿಚಾರವಿಲ್ಲ. ನೌಕರಿ ಕಾಯಂ ಆದಮೇಲೆ ನೋಡೋಣ," ಎಂದು ದೇಸಾಯರಿಗೂ ಗಂಗವ್ವನಿಗೂ ಸ್ಪಷ್ಟವಾಗಿ ತಿಳಿಸಿದ. ರಾಘಪ್ಪನ ಸವಾರಿ ಕಾರ್ಯ- ಸಾಧನೆಗಾಗಿ ದೇಸಾಯರ ಮನೆಗೆ ಆಗಮಿಸಿತು. ದೇಸಾಯರು ಸನ್ನಿವೇಶದ ಸೂಕ್ಷ್ಮವನ್ನರಿತು ಗಂಗವ್ವನಿಗೂ ರಾಘಪ್ಪನಿಗೂ ಸಂಧಾನ ಮಾಡಲು ಪ್ರಯತ್ನಿಸಿದರು.

ಗಂಗವ್ವನಂತೂ ಮಾತು ಮಾತಿಗೆ ರಾಘಪ್ಪನನ್ನು ಹಂಗಿಸಿದಳು. ಮಾತಿನ ನಡುವೆ ವೆಂಕಾಟಿಯ ವಿಷಯುವೂ ಬಂದಿತು. "ಗಂಗಕ್ಕಾ, ಖರೇ ವಿಷಯ ಹೇಳತೇನಿ ಕೇಳು, ವೆಂಕಾಟಿಯ ಖರೇ ಜವಾಬುದಾರಿ ನನ್ನದು. ನನ್ನ ಮನ್ಯಾಗಿನಿಂದ ಅವ ಓಡಿಹೋದದ್ದಕ್ಕೆ ನನ್ನ ಅಕ್ಕನ ಮನಿ ಬರೇದಾತು. ಆದರ ಒಂದಿಲ್ಲ ಒಂದು ರೀತಿಯಿಂದ ನನ್ನ ಅಕ್ಕನ ಋಣ ತೀರಿಸಬೇಕು ಅನ್ನೋ ಹ್ಯಾಂವದಾಗ ನಾನೂ ಇದ್ದೆ. ಅಷ್ಟರಾಗ ಸ್ವಾಮಿರಾಯನ ತಲಿ ಪಟಕ್ಕನ ಬಿತ್ತು. ಆಗ ನನಗ ಏನು ಅನಿಸಿರಬ್ಯಾಡ ?.....ಅವನ್ನ ಕೊಂದವ ನಾನs ಅನ್ನೋ ಭ್ರಮಾದಾಗ ನಾ ಹೆಂಗ ಓಣಿ ಓಣಿ ಅಡ್ಯಾಡಿ ದೇವರs ನನ್ನ ಜೀವಾ ತೊಗೊಂಡು ಅವನ ಜೀವಾ ಕೊಡು ಅಂತ ಅತ್ತೇನಿ...... ಇದು ನಿನಗ ಗೊತ್ತದ್ದರs....."

ತನ್ನ ಮಾತಿನ ರಭಸದಲ್ಲಿ ರಾಘಪ್ಪ ಕೊನೆ ಕೊನೆಗೆ ತನ್ನ ಧ್ವನಿಯನ್ನು ಏರಿಸಿದನಲ್ಲದೆ ಅವನಿಗೂ ಆ ದಿನಗಳ ನೆನಪಾಗಿ ನಿಜವಾದ ದುಃಖಕನಿಕರಗಳು ತುಂಬಿದ್ದರಿಂದ ಎಂತಹವರ ಎದೆಯನ್ನೂ ಮೀಟುವಂತೆ ಮಾತುಗಳು ಬಂದವು. ಭೂತಕಾಲದಲ್ಲಿ ಮಗ್ನಳಾದ ಗಂಗಕ್ಕನೂ ರೋದಿಸುತ್ತಿರುವಾಗ ತಮ್ಮನ ಬಗ್ಗೆ ತುಸು ಕನಿಕರವೆನಿಸಿತು.

ಮರುದಿನ ದೇಸಾಯರು ಗಂಗವ್ವನನ್ನು ಕರೆ ಕಳಿಸಿ ಕಿಟ್ಟಿಯ ಲಗ್ನದ ವಿಷಯಕ್ಕೆ ಪೀಠಿಕೆ ಹಾಕಿದರು. "ಕನ್ಯಾ ಸಾಧಾರಣ ಮಟ್ಟಿಗೆ ಛಲೋ ಇದ್ದು ಕೆಲಸಾ ಪಲಸಾ ಮಾಡಿಕೊಂಡು ಮನಿ ತೂಗಿಸಿಕೊಂಡು ಹೋಗೋ ಹಂಗ ಇದ್ದರ ನೀನು ಹೆಚ್ಚು ತಕರಾರು ಇಲ್ಲದ ಹೂಂ ಅನ್ನೋದು ಛಲೋ

ಗಂಗವ್ವ – ಗಂಗಾಮಾಯಿ

ಕಾಣಸ್ತದ- ಕೃಷ್ಣಗ ಮನಸ್ಸದ ಅಂದ ಮ್ಯಾಲ. ಇನ್ನ ಇತರ ಲೌಕಿಕ ವ್ಯವಹಾರ. ವರದಕ್ಷಿಣೆ ಎಷ್ಟರ ಯಾಕ ಕೊಡವಲ್ಲ- ಹೆಂಗೂ ದತ್ತಕ ತಗೋತಾನಂತ," ಅಂದರು.

"ಏನೋಪಾ ಗೋಪಣ್ಣ, ನೀ ಹೇಳಿದ ಮಾತು ನನಗೆ ಖರೇ ಅನಿಸತದ. ಆದರೆ ಆ ದಾಘ್ಯಾನ ದಶಿಂದ ನನಗ ಧೈರ್ಯ ಇಲ್ಲ," ಎಂದು ಗಂಗವ್ವ ತುಸು ಸಂಶಯದಿಂದಲೇ ಅಂದಳು.

*** **** ***

ಕಿಟ್ಟಿಯ ಲಗ್ನದ ಸಲುವಾಗಿ ತಯಾರಿ ಪ್ರಾರಂಭವಾಯಿತು. ಯಾದಿ ಮಾಡುವ ಕಾಲಕ್ಕೆ ಕನ್ಯಾ ತೋರಿಸುವ ಶಾಸ್ತ್ರವೂ ಆಯಿತು. ರತ್ನಾ ಬಂದು ನಮಸ್ಕಾರ ಮಾಡಿದಾಗ ಗಂಗವ್ವ ಸೊಸೆಯನ್ನು ಕದ್ದು ನೋಡಿ ಮತ್ತೆ ಮುಖ ಹೊರಳಿಸಿದಳು. ಇತ್ತ ದಿನ ಕಳೆದಂತೆ ಕಿಟ್ಟಿಗೆ ದುಡ್ಡಿನ ಚಿಂತೆಯಾಯಿತು. ಲಗ್ನ ಒಂದೆರಡು ವಾರವಿದ್ದಾಗ ಒಮ್ಮೆ ಕಚೇರಿಯಲ್ಲಿ ಕಿಟ್ಟಿ ಟೇಬಲ್ ಮೇಲೆ ಮೊಳಕೈಯೂರಿ ಹಸ್ತಗಳಲ್ಲಿ ತಲೆಯ ಭಾರವನ್ನು ಆನಿಸಿ ಒರಗಿದ್ದ. ಆವನನ್ನು ಜಾರ್ಜ್ ಎಬ್ಬಿಸಿ ಚಹಕ್ಕೆ ಕರೆದೊಯ್ದು, "short of cash?" ಎಂದು ಕೇಳಿದ. ಕಿಟ್ಟಿಯ ಕಣ್ಣಲ್ಲಿ ನೀರೂರಿತು. ಅಂದೇ ಜಾರ್ಜ್ ಒಂದು ಕಡೆಗೆ ಕರೆದೊಯ್ದು ಐದುನೂರು ರೂಪಾಯಿಸಾಲ ಕೊಡಿಸಿದ. ಲಗ್ನದ ಕಾರ್ಯಕ್ರಮಗಳು ಪ್ರಾರಂಭವಾದವು.

*** **** ***

ಲಗ್ನದ ಮನೆಯಲ್ಲಿ ಮಹಬೂಬಜಾನ್‌ಳಿಗೆ ಬಹಳ ತೊಂದರೆಗಿಟ್ಟುಕೊಂಡಿತು. ಆಕೆಯನ್ನು ಮರ್ಯಾದೆಯಿಂದ ಕಾಣುವವನೆಂದರೆ ಯಜಮಾನನೊಬ್ಬನೇ. ಪೀತಾಂಬರದ ಭಾರದಿಂದ ಕುಂಟುತ್ತ ಆಡ್ಡಾಡುವ ಚಂಪಕ್ಕ ಮಾತ್ರ ತುಸು ಪರಾಮರಿಕೆ ಮಾಡುತ್ತಿದ್ದಳು. ಲಗ್ನಕ್ಕೆ ಬಂದ ಮಡಿ ಹೆಂಗಸರಿಗಂತೂ ಆವಳನ್ನು ಕಂಡರೆ ವಾಗತ್ಯ ಆಗುತ್ತಿತ್ತು.

ಇರಲಿ, ಮೆಹಬೂಬ ತಾನೇ ನಿಂತು ಲಗ್ನ ಮಂಟಪವನ್ನು ಸಿಂಗರಿಸಿದಳು. ಅಲ್ಲಲ್ಲಿ ಕಾಗದದ ಹೂವಿನ ಕುಚ್ಚು, ಗುಳಾಪ್ರು, ತೋರಣ, ಫರಫರೆ ಇವುಗಳಿಂದ ಮಂಟಪದ ಶೋಭೆಯನ್ನು ಹೆಚ್ಚಿಸಿದಳು. ಇನ್ನೂ ಅಕ್ಕಿ ಕಾಳಿಗೆ ಒಂದು ತಾಸು ವೇಳೆಯಿತ್ತು. ರತ್ನಾಳ ಮುಡಿಯಲ್ಲಿ ಹನ್ನೊಂದು ಬಗೆಯ ಹೂಗಳ ಅರ್ಧಚಂದ್ರಾಕಾರದ ಮಾಲೆಯನ್ನು ಇಟ್ಟು ಸಿಂಗರಿಸಿದಳು. ಓಲಗದವರು ಮಂಗಳವಾದ್ಯವನ್ನು ಬಾರಿಸತೊಡಗಿದರು. ಅಷ್ಟರಲ್ಲಿ ಮಂಟಪದಲ್ಲಿ ಏನೋ ಗದ್ದಲ, ಕೂಗಾಟ ಪ್ರಾರಂಭವಾಯಿತು. ಹಿಂದಿನ ದಿನ ಯಾರೋ 'ಗಂಗಕ್ಕಾ' ಎಂದು ಕರೆಯುವುದನ್ನು ಕೇಳಿದ ಮೆಹಬೂಬ ಇವಳೇ ಮದುಮಗನ ತಾಯಿ ಎಂದು ಗ್ರಹಿಸಿದ್ದಳು. ಇದೀಗ ಆಕೆಯ ಹಿಂದಿನಿಂದಲೇ ಯಜಮಾನರೂ ಜನರನ್ನು ಸರಿಸುತ್ತ ಓಡಿ ಬಂದು ಗಂಗಕ್ಕನನ್ನು ಅಡ್ಡಗಟ್ಟಿ ಉಪರಣಿ ಹಾಸಿದರು. ಮದುಮಗ ಕೂಡ ಓಡಿ ಬಂದವನೆ, "ಅವ್ವಾ, ಹೋಗಬ್ಯಾಡ," ಎಂದು ಕೂಗತೊಡಗಿದ. ಮೆಹಬೂಬಳಿಗೆ ಇದಾವುದರ ಅರ್ಥವೇ ಆಗಲೊಲ್ಲದು. ಹಿಂದಿನಿಂದ ಇನ್ನೋರ್ವ ಜರಿ ರುಮಾಲು ಧರಿಸಿದ ವ್ಯಕ್ತಿಯೂ ಬಂದು ನಿಂತಿತು. ಗಂಗವ್ವ ಆ ವ್ಯಕ್ತಿಯತ್ತ ಹೊರಳಿ ನಿಂತು ಕೈ ಮಾಡಿ ಏನೇನೋ ಆರ್ಭಟದಿಂದ

ಹೇಳತೊಡಗಿದ್ದಳು. ಆದರೆ ಜನರ ಗದ್ದಲದ ಮೂಲಕ ಅವಳ ಧ್ವನಿ ಕೇಳಿಸುತ್ತಿತ್ತೇ ಹೊರತು ಮಾತು ಕೇಳಿಸುತ್ತಿರಲಿಲ್ಲ. ಹೀಗೆ ತುಸು ಆಕ್ರೋಶ, ಮಾತುಕತೆ, ಕೂಗಾಟಗಳಾದ ಮೇಲೆ ಎಲ್ಲವೂ ಶಾಂತವಾಯಿತು. ಗಂಗವ್ವ ಕಟ್ಟೆಯ ಮೇಲೆ ಬಂದು ಕುಳಿತಳು. ಅಷ್ಟರಲ್ಲಿ ಆ ಜನಸಂದಣಿಯಿಂದ ಒಂದೇ ಹಲ್ಲಿನ ಭಟ್ಟರು ಬಂದರು. ಮೆಹಬೂಬಳಿಗೆ ಅವರ ಮುಖಪರಿಚಯವಿತ್ತು. ಅವರನ್ನು ತಡೆದು ಮೆಹಬೂಬ, "ಏನಾಯಿತು ?" ಎಂದು ಕೇಳಿದಳು.

"ಆಗೋದೇನು ? ನಿನ್ನ ಯಜಮಾನನ ಕೆಲಸವೇ ಇಂಥಾದ್ದು ! ಸಾವಿರ ರೂಪಾಯಿ ವರದಕ್ಷಿಣೆ ಕೊಡತೇನಿ ಅಂತ ಲೇಖಿ ಬರಕೊಟ್ಟು ಈಗ ಅಕ್ಕಿ ಕಾಳಿಗೆ ಒಂದು ತಾಸು ಉಳದಾಗ 'ಐನೂರs ತಗೊಳ್ಳರಿ. ಇನ್ನ ಒಂದs ತಿಂಗಳದಾಗ ಉಳದ್ದ ಐನೂರು ಕೊಡತೇನಿ' ಅಂತ ಆಟಾ ಹೂಡ್ಯಾನ. ಇನ್ನೊಂದು ತಿಂಗಳಾದಾಗ ಅಂದರ' 'ಠ್ಯಾಂ' ಅಂತ ಅಂದಹಂಗ. ರಾಘೋಬಾ ಭಡಾರಿ ಮಾತು ಅವು," ಆ ವೃದ್ಧ ಬ್ರಾಹ್ಮಣನಿಗೆ ಎಲೆ ಅಡಿಕೆ ಕೊಡುತ್ತ ಮೆಹಬೂಬ ಈಗ ತನ್ನ ಯಜಮಾನನ ಮರ್ಯಾದೆಯ ಪ್ರಶ್ನೆಯಿದೆ ಎನ್ನುವುದನ್ನು ಕೇಳಿ ತಿಳಿದುಕೊಂಡಳು. ರಾಘಪ್ಪ ಈ ಗದ್ದಲದಲ್ಲಿ ಏನೇನೋ ಲೆಕ್ಕ ಹಾಕಿ ರುಮಾಲು ಧರಿಸತೊಡಗಿದ.

ಆತ ಮಂಟಪದ ಬಾಗಿಲಿನಿಂದ ಹೊರಗೆ ಬರುವಷ್ಟರಲ್ಲಿ ಎದುರಿನಿಂದ ಟಾಂಗಾ ಒಂದು ರಭಸದಿಂದ ಓಡಿಬಂದು ಬಾಗಿಲಿಗೆ ನಿಂತಿತು. ಅದರೊಳಗೆ ಮೆಹಬೂಬ ಕುಳಿತಿದ್ದಳು. ಆಕೆ ಟಾಂಗಾದಿಂದ ಇಳಿಯುವುದನ್ನು ನೋಡಿ ರಾಘಪ್ಪ, 'ತನ್ನ ಫಜೀತಿಯ ಕಾಲಕ್ಕೆ ಆಕೆ ಮನೆಯಲ್ಲಿರಲಿಲ್ಲವಲ್ಲ' ಎಂದು ಸಮಾಧಾನ ಹಚ್ಚಿಕೊಂಡು, "ಮೆಹಬೂಬ, ಎಲ್ಲಿ ಹೋಗಿದ್ದಿ ?" ಎಂದಿಷ್ಟೇ ಕೇಳಿದ.

"ಸ್ವಲ್ಪ ಒಳಗೆ ಬಂದು ಹೋಗಿರಿ," ಎಂದವಳೆ ನೇರವಾಗಿ ಒಳ ಕೋಣೆಗೆ ಹೋಗಿ ತನ್ನ ಪುಟ್ಟ ಟ್ರಂಕು ತೆಗೆದಳು. ಅದರಲ್ಲಿದ್ದ ನೋಟುಗಳ ಸುರುಳಿಯನ್ನು ತೆಗೆದು, "ಅಕ್ಕಾ ಅವರನ್ನ ಕರೀರಿ," ಎಂದಳು. "ಮೆಹಬೂಬ, ಯಾಕ ?" ಅಂದ ರಾಘಪ್ಪ. ಅದಕ್ಕೆ ಅವಳು ಉತ್ತರವನ್ನು ಕೊಡಲಿಲ್ಲ. ಹಿಂದೊಮ್ಮೆ ಚಂಪಕ್ಕ ರತ್ನಾಳ ಲಗ್ನಕ್ಕೆ ಸಹಾಯ ಮಾಡುವಂತೆ ಸೂಚ್ಯವಾಗಿ ಮೆಹಬೂಬ ಜಾನ್‌ಳಿಗೆ ಸೂಚನೆ ಮಾಡಿದ್ದಳು. ಇಂದು ಆ ಸೂಚನೆಯನ್ನು ನೆರವೇರಿಸಿ ತಾನು ಋಣಮುಕ್ತಳಾಗುವ ದಿನ ಬಂದಿತ್ತು. ಚಂಪಕ್ಕ ಬಂದ ಕೂಡಲೇ ಪಾಕೀಟನ್ನು ಇಟ್ಟು, "ಅಕ್ಕಾ, ಕುಂಕುಮ ಹಚಗೊಳ್ರಿ," ಅಂದಳು. "ಮೆಹಬೂಬ, ಇದೇನು ಮಾಡಿದಿ ? ಖರೇ ಹೇಳು," ಎಂದ ರಾಘಪ್ಪ ಸಂಕಟದಿಂದ. "ಯಾಕs....?" ಆಹೇರು ಕೊಟ್ಟೇನಿ. ಆಹೇರಿಗೆ ಒಲ್ಲೆ ಅಂತಿರೇನು ?" ಎಂದಳು ಮೆಹಬೂಬ ಗದ್ಗದಿತಳಾಗಿ.

ಮುಹೂರ್ತಕ್ಕೆ ಕೆಲವೇ ನಿಮಿಷಗಳಿದ್ದವು. ರಾಘಪ್ಪ ಹೆಚ್ಚು ಚಿಂತೆ ಮಾಡಲಿಲ್ಲ "ಒಂಭತ್ತಕ್ಕs ಅಕ್ಕಿಕಾಳು !" 'ಸುಮುಹೂರ್ತೇ ಸಾವಧಾನs' ಎಂದು ಕೊನೆಯ ಬಾರಿ ಬ್ರಾಹ್ಮಣರು ಅಂದಕೂಡಲೇ ಎಲ್ಲರೂ ಅಕ್ಕಿಕಾಳು ತೂರಿಬಿಟ್ಟರು. ಮಂಗಳವಾದ್ಯಗಳು ಒಮ್ಮೆಲೆ ಭೋರ್ಗರೆಯತೊಡಗಿದವು. ವಿಚಾರದ ಸ್ತಿಮಿತ ತಪ್ಪಿಯೋ, ಏನೋ ಅಂತೂ

ಗಂಗವ್ವ - ಗಂಗಾಮಾಯಿ

ಮೆಹಬೂಬ ತನ್ನ ಅಕ್ಕಿ ಕಾಳುಗಳನ್ನು ಎಲ್ಲ ಶಕ್ತಿಹಾಕಿ ತೂರಿಬಿಟ್ಟಳು. ಅವು ಸಮೀಪದಲ್ಲಿಯೇ ಯಾವುದೋ ಪುಂಡ ಹುಡುಗರ ತಲೆಯ ಮೇಲೆ ಬಿದ್ದುದರಿಂದ ಮೆಹಬೂಬಳಿಗೆ ದುಃಖವಾಯಿತು. ಅಕ್ಕಿಕಾಳು ಹಾಕಿದ ಕೂಡಲೇ ಮೆಹಬೂಬ ತನ್ನ ಪುಟ್ಟ ಟ್ರಂಕಿನೊಂದಿಗೆ ಮನೆಗೆ ಹೋದದ್ದು ಗದ್ದಲದಲ್ಲಿ ಯಾರಿಗೂ ತಿಳಿಯಲಿಲ್ಲ.

ಅಂದೇ ಸಂಜೆ ಲಗ್ನದ ಓಲಗಕ್ಕಿಂತ ದೊಡ್ಡ ಸಪ್ಪಳ ಮಾಡುತ್ತ ಬ್ಯಾಂಡು ಲಗ್ನದ ಮನೆಯ ಎದುರಿಗೆ ಹಾಯ್ದು ಹೋಯಿತು. ಹರಟುತ್ತ ನಿಂತಿದ್ದ ಒಂಟಿ ಹಲ್ಲಿನ ಹನುಮಂತಭಟ್ಟನ ಕೈಯಲ್ಲಿ ನಾಟಕದ ಹ್ಯಾಂಡಬಿಲ್ ಒಂದು ಬಿದ್ದಿತು. ಅದನ್ನು ಅವನು ಆವಸರದಿಂದ ಓದಿ ರಾಘಪ್ಪನ ಕೈಗೆ ಕೊಟ್ಟ. ರಾಘಪ್ಪನಿಗೆ ಅದನ್ನು ಓದುತ್ತಲೆ ಮೈಯೆಲ್ಲ ಬೆವೆತಿತು.

"ಖಾಸಾ ಜಾತ್ರೆಯ ನಿಮಿತ್ತ ಹುಬ್ಬಳ್ಳಿಯ ಗಾನ ಗಂಧರ್ವಿ ಮೆಹಬೂಬಜಾನ್ ಮಿರಜಕರ ಧಾರವಾಡದ ರಸಿಕರಿಗಾಗಿ ಎಲ್ಲ ನಾಟಕಗಳಲ್ಲಿ ಸ್ತ್ರೀ ಪಾರ್ಟು ಮಾಡುವುದರೊಂದಿಗೆ ತಮ್ಮ ಗಾನಸುಧೆಯನ್ನು ಕುಡಿಸಲಿದ್ದಾರೆ," ಎಂಬುದೇ ಅದರ ಸಾರಾಂಶವಾಗಿತ್ತು.

*** **** ***

ಮೆಹಬೂಬಳಿಗೆ ವಯಸ್ಸು ಆಗಿತ್ತು. ನಾಟಕದ ಶ್ರಮವನ್ನು ಸಹಿಸುವ ತ್ರಾಣ ಅವಳಿಗೆ ಉಳಿದಿರಲಿಲ್ಲ. ತೇಕು ಹತ್ತುತ್ತಿತ್ತು. ಆರು ವರ್ಷಗಳ ಹಿಂದೆಯೇ ರಾಘಪ್ಪ ಪಾರ್ಟು ಮಾಡುವುದನ್ನು ಬಿಡಿಸಿದ್ದ. ಈಗ ಅವಳು ಮತ್ತೆ ಪಾರ್ಟು ಮಾಡಲು ಸುರು ಮಾಡಿದ್ದು ಅವನ ಮನಸ್ಸಿಗೆ ಒಪ್ಪದ ವಿಷಯವಾಗಿತ್ತು.

ವಿಪರೀತ ಆಯಾಸದಿಂದ ಮೆಹಬೂಬ ಜಾನಳಿಗೆ 'ಬ್ಲಡ್ ಫೀವರ್' ಪ್ರಾರಂಭವಾಗಿತ್ತು. ರಾಘಪ್ಪ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಔಷಧಿ ಕೊಡಿಸಿದ. ಸ್ವಲ್ಪ ಗುಣವಾದಂತೆ ಕಂಡಿತು. ಮತ್ತೆ ಜ್ವರ ಬಂತು. ಆಕೆಗೆ ಇನ್ನು ತಾನು ಬದುಕುವುದಿಲ್ಲವೆಂದು ಖಚಿತವಾಯಿತು. ಈಗ ರಾಘಪ್ಪನಿಗೆ ಅವಳ ಸಹವಾಸ ಬೇಸರವೆನಿಸತೊಡಗಿ ಬೇರೊಬ್ಬಳಲ್ಲಿಗೆ ಹೋಗಿ ಕೂಡ ತೊಡಗಿದ. ಒಂದು ದಿನ ಮೆಹಬೂಬ ತನ್ನ ಯಜಮಾನನನ್ನೇ ನೆನೆಸುತ್ತ ಕಣ್ಣು ಮುಚ್ಚಿದಳು. ಮರುದಿನ ಸುದ್ದಿ ತಿಳಿದ ರಾಘಪ್ಪನ ಜೀವ ಹಿಂಡಿ ಹೋಯಿತು. ಅವಳ ಮರಣದ ನಂತರ ಉಳಿದದ್ದು ರಾಘಪ್ಪನ ನೆರಳು ಮಾತ್ರ. ಮೊದಲಿನ ಪ್ರಚಂಡ 'ರಾಘೋಬಾ' ಮಾಯವಾಗಿದ್ದ.

** ** **

ಇತ್ತ ಕಿಟ್ಟಿಯ ಗೃಹಸ್ಥಾಶ್ರಮವೇನೋ ಸಡಗರದಿಂದಲೇ ಪ್ರಾರಂಭವಾಯಿತು. ಗಂಗವ್ವ ಸೊಸೆಯನ್ನು ಪ್ರೇಮದಿಂದಲೇ ಸ್ವಾಗತಿಸಿದಳು. ದೇಸಾಯರ ಸಲಹೆಯಂತೆ ಸೊಸೆಯೊಡನೆ ಸಹನೆಯಿಂದಲೇ ವರ್ತಿಸಲು ಪ್ರಾರಂಭಿಸಿದಳು. ಸೊಸೆಯ ಲೋಪದೋಷಗಳು ಕಂಡುಬಂದರೆ ಮೊದಮೊದಲು ಗಂಗವ್ವ ತನ್ನ ಮನಸ್ಸನ್ನೇ ಪರೀಕ್ಷಿಸಿ ನೋಡುತ್ತಿದ್ದಳು- ರಾಘಪ್ಪನ ಮೇಲಿನ ಸಿಟ್ಟಿನಿಂದ ಹಾಗೆ ತನಗೇನಾದರೂ ತೋರುತ್ತಿದೆಯೋ ಎಂದು. ಕಿಟ್ಟಿ ಮೂರುನಾಲ್ಕು ವರ್ಷ ತನ್ನ ಕಡೆಗೆ ಲಕ್ಷ್ಯವನ್ನೇ ಕೊಟ್ಟಿರಲಿಲ್ಲ. ಮನೆಗೆ ಬಂದಾಗಲೂ ಹೆಚ್ಚು ಮಾತುಕಥೆ ಇರಲಿಲ್ಲ. ಆದರೆ ಇದೀಗ ಹೆಂಡತಿ ಮನೆಗೆ ಬಂದೊಡನೆ ತಲೆತುಂಬ

ಮಾತಾಡುವುದು ಹಾಗೂ ತನ್ನನ್ನು ಅಲಕ್ಷಿಸುವುದು ಅವಳಿಗೆ ಹೊಸ ಅನುಭವವಾಗಿತ್ತು. ಎರಡು ತಿಂಗಳಲ್ಲಿಯೇ ಸೊಸೆಯ ವರ್ಚಸ್ಸು ಮಗನ ಮೇಲೆ ಹೆಚ್ಚಾದದ್ದು ಕಂಡುಬರತೊಡಗಿತು.

ಈ ಹೊಸ ಅನುಭವಕ್ಕೆ ಮನಸ್ಸನ್ನು ಹೊಂದಿಸಿಕೊಳ್ಳುವುದು ಬಲು ಕಠಿಣವೆನಿಸತೊಡಗಿತು. ಏನನ್ನೋ ಕಳೆದುಕೊಂಡಂತೆ ಆಕೆಗೆ ಜೀವನ ಶೂನ್ಯವೆನಿಸತೊಡಗಿತು. ಮನಸ್ಸಿನಲ್ಲಿ ಕೆಟ್ಟ ವಿಚಾರಗಳು, ಅದಕ್ಕೂ ಭಯಾನಕ ಶೂನ್ಯತೆ, ಒಂಟಿತನ. ಆದರೂ ಸೊಸೆಯೊಡನೆ ಒಪ್ಪಂದ ಮಾಡಿಕೊಳ್ಳುವ ನೆಪದಲ್ಲಿ ಗಂಗವ್ವ ಅವಳನ್ನು ನಾಲ್ಕೆಂಟು ದಿನ ಹಳೆಯ ಗುರುತಿನವರ ಮನೆಗೆ ಹೋಗಿ ತೋರಿಸಿಕೊಂಡು ಬಂದಳು.

ಗಂಗವ್ವನ ಮನೆಯೂ ಸಣ್ಣದು. ಅನಾನುಕೂಲ. ಒಂದು ಪಡಸಾಲೆ, ಒಂದು ಅಡಿಗೆ ಮನೆ, ಇದೀಗ ಗಂಗವ್ವ ಆ ತೇವದ ಅಡಿಗೆಮನೆಯಲ್ಲಿಯೇ ಮೂರು ಮಣೆಗಳನ್ನು ಜೋಡಿಸಿ ಅದರ ಮೇಲೆ ಹಾಸಿಕೊಂಡು ಮಲಗತೊಡಗಿದ್ದಳು. ಆದರೆ ದಿನ ಕಳೆದಂತೆ ಕಿಟ್ಟಿಯ ಕೋಣೆಯ ಸಮೀಪದಲ್ಲಿಯೇ ಮಲಗುವುದು ಅಸಹ್ಯವಾಗತೊಡಗಿತು.

ಚಿಕ್ಕಪುಟ್ಟ ವಿಷಯಗಳಲ್ಲಿ ಮೆಲ್ಲನೆ ಕಲಹಗಳು ಪ್ರಾರಂಭವಾದವು. ಗಂಗವ್ವನ ಬಗ್ಗೆ ಅಕರಾಳವಾದ ಚಿತ್ರವು ರತ್ನಾಳಲ್ಲಿ ಮನೆ ಮಾಡಿಕೊಂಡಿತ್ತು. ಅವಳ ಬಗ್ಗೆ ಅರ್ಧ ಭೀತಿ, ಅರ್ಧ ದ್ವೇಷ. ಗಂಗವ್ವ ಮೊದಲಿಗೆ ಕೊಟ್ಟ ಉಪದೇಶಗಳೆಲ್ಲ ದುಃಶಬ್ದಗಳೆಂದೇ ಭಾವಿಸಿ ರತ್ನಾ ಒಳಗೊಳಗೇ ಉರಿಯತೊಡಗಿದಳು.

"ರತ್ನಾ, ಹೊಸಾ ಸೀರಿ ಉಟಗೊಂಡು ಮುಸರೀ ತಿಕ್ಕಬಾರದು," ಬಯಲಾಗ ಹರಕ ಸೀರಿ ಉಟಗೊಂಡು ಕೂಡಲೇನು ? ಆಯ್ತು ನಾಳಿಂದ ಹಂಗs ಆಗಲಿ," ಎಂದು ಎದುರುತ್ತರ.

"ರತ್ನಾ, ಉಪ್ಪು ಈ ಕಡೆ ಹಾಕಬಾರದು."

"ನೀವು ಹೇಳಿದ ಕಡೆಗೆ ಹಾಕತೇನಿ. ನಡುವ ಸರಸಲೇನು ?"

ಇಂಥ ಮಾತುಕಥೆಗಳಲ್ಲಿ ಕೊಂಕು, ಸಂದೇಹ, ಬಿಗುಮಾನಗಳು ಶುರುವಾಗಿ ಅತ್ತೆ ಸೊಸೆಂದಿರ ನಡುವಿನ ಅಂತರವನ್ನು ಹೆಚ್ಚು ಮಾಡುತ್ತಿದ್ದವು. ರತ್ನಾ ತನ್ನನ್ನು 'ಅವ್ವಾ' ಎಂದು ಸಂಬೋಧಿಸಬಹುದೆಂದು ಗಂಗವ್ವ ಹೊಸದಾಗಿ ಬಂದ ಸೊಸೆಗೆ ತಿಳಿಸಿದ್ದಳು. ಆದರೆ ರತ್ನಾ ಒಮ್ಮೆಯೂ ಆಕೆಯನ್ನು ಹಾಗೆ ಸಂಬೋಧಿಸಲಿಲ್ಲ. ಏನಾದರೂ ಕೇಳುವ ಪ್ರಸಂಗ ಬಂದರೆ ಸಮೀಪಕ್ಕೆ ಹೋಗಿ ಗಟ್ಟಿಯಾಗಿ ಕಿವುಡರಿಗೆ ಕೇಳುವಂತೆ ಕೂಗಿ ಕೇಳುವಳು.

ಹೀಗೆ ಗುಪ್ತಗಾಮಿನಿಯಾಗಿ ಹರಿಯುತ್ತಿದ್ದ ವಿಷ ನದಿಯು ಒಮ್ಮೆಲೆ ಅನಪೇಕ್ಷಿತವಾಗಿ ಹೊರಗೆ ಬಂತು.

ಒಂದು ದಿನ ಗಂಗವ್ವ ಸಹಜವಾಗಿ, "ಕಿಟ್ಟಣ್ಣಾ, ತುಪ್ಪೀರಿ ಕಾಯಿ ಬಂದಾವಂತ ಪ್ಯಾಟ್ಯಾಗ. "ಒಂದ ದಿವಸ ತಗೊಂಡ ಬಾ ಅಲ್ಲಾ ! ಬುರುಬುರಿ ಕರಿಯೋಣ," ಎಂದಳು.

ಗಂಡ-ಹೆಂಡಿರು ಈ ಮಾತು ಕೇಳಿ ಫಕ್ಕನೆ ಒಬ್ಬರನ್ನೊಬ್ಬರು ನೋಡಿದರು..... ಮುನ್ನಾ ದಿನ ರಾತ್ರಿ ಇದೇ ಮಾತನ್ನು ರತ್ನಾ ಗಂಡನಿಗೆ ಹೇಳಿದ್ದಳು.

ಗಂಗವ್ವ - ಗಂಗಾಮಾಯಿ

ಗಂಗವ್ವನ ಮಾತಿಗೆ ಕಿಟ್ಟಿ ಉತ್ತರವನ್ನೇ ಕೊಟ್ಟಿರಲಿಲ್ಲ. ಅಡಿಗೆಮನೆಯಲ್ಲಿ ರಾತ್ರಿ ಸೆಕೆಯಾಗುತ್ತಿದ್ದರೂ ಗಂಗವ್ವ ಪಡಸಾಲೆಯ ಬಾಗಿಲಿನಿಂದ ಆದಷ್ಟು ದೂರವಾಗಲಿ ಎಂದು ಒಲೆಯ ಹತ್ತಿರಕ್ಕೆ ಮಲಗುತ್ತಿದ್ದಳು. ಆದರೆ ಅಂದು ಅಷ್ಟು ದೂರದಿಂದ ಕೂಡ, "ಮೆಲ್ಲಕ ಮಾತಾಡ್ರಿ. ಬಾಗಿಲ ಸಂದ್ಯಾಗಿಂದ ಕೇಳತಿರತಾರ," ಎಂಬ ಪಿಸು ಮಾತು ಗಂಗವ್ವನ ಕಿವಿಗೆ ಬಿದ್ದಿತ್ತು.

ಇಡೀ ರಾತ್ರಿ ಗಂಗವ್ವನಿಗೆ ನಿದ್ದೆ ಹತ್ತಲಿಲ್ಲ. ಮರುದಿನ ಅಡಿಗೆ ಮನೆಯಲ್ಲಿ ಸೆಕೆ ಬಹಳ ಎಂಬ ನೆಪ ಮಾಡಿ ತನ್ನ ಹಾಸಿಗೆ ಸುರುಳಿಯನ್ನು ನೆರೆಮನೆಯ ಕಾಶೀ ತಾಯಿಯ ಮನೆಯಲ್ಲಿ ಇಟ್ಟು ಬಂದಳು. 'ಅಂತೂ ಸೊಸಿ ರಾತ್ರಿ ಮಟ್ಟಿಗೆ ಮನಿ ಬಿಡಿಸಿದಳು. ಇನ್ನು ಹಗಲಿಗೆ ಯಾವಾಗ ಚಕ್ಕರ್ ತರ್ತಾಳೋ ನೋಡೋಣ' ಎಂದು ಸಂಕಟಪಡುತ್ತ ಗಂಗವ್ವ ದೇಸಾಯರ ಮಾತನ್ನು ನೆನೆದು ಸುಮ್ಮನಿರುತ್ತಿದ್ದಳು. ಗಂಗವ್ವ ಕಾಶೀತಾಯಿಯ ಮನೆಗೆ ಮಲಗಲು ಹೋದ ದಿನ ರತ್ನಾ ತನ್ನ ಔಷಧ ಅತ್ತೆಗೆ ನಾಟಿತು ಎಂದು ಹಿಗ್ಗಿದಳು. ಅನೇಕ ಮನೆಯ ಸೊಸೆಯಂದಿರ ಆಟವನ್ನು ಕಂಡ ಗಂಗವ್ವನಿಗೆ ಇದೇನೂ ಹೊಸದಾಗಿ ಕಾಣಲಿಲ್ಲ.

ಕಾಶೀತಾಯಿಯ ಮನೆಗೆ ಮಲಗಲು ಹೋಗತೊಡಗಿದ ನಂತರ ಹೊಸ ತೊಂದರೆಗಳು ಹುಟ್ಟಿಕೊಳ್ಳತೊಡಗಿದವು.ಗಂಗವ್ವನಿಗೆ ಮುಂಜಾನೆ ಐದಕ್ಕೇ ಏಳುವುದು ರೂಢಿ. ಕೂಗಿ ಕೂಗಿ ಬಾಗಿಲು ತೆಗೆಯಿಸಿಕೊಳ್ಳಲು ಅರ್ಧಗಂಟೆ ಬೇಕಾಗತೊಡಗಿತು. ಮನೆಯ ಮುಂದೆ ನಿಂತು ಬಾಗಿಲು ಬಡಿಯುವುದನ್ನು ನೆರೆಮನೆಯ ಹೆಣ್ಣುಮಕ್ಕಳು ನೋಡುವುದನ್ನು, ನಗುವದನ್ನು, ಚೇಷ್ಟೆ ಮಾಡುವುದನ್ನು ಸಹಿಸುವುದು ಗಂಗವ್ವನಿಗೆ ಅಸಾಧ್ಯವಾಯಿತು.

ಬೇಸತ್ತ ಗಂಗವ್ವ ಕಿಟ್ಟಿಗೆ ಈ ವಿಷಯವನ್ನು ಹೇಳಿ ಅಡಿಗೆಮನೆಯ ಹೊರಗಡೆಯಿಂದ ಬೀಗ ಹಾಕಿಕೊಂಡು ಕೀಲಿ ಕೈಯನ್ನು ತನ್ನ ಕಡೆಗೆ ಇಟ್ಟುಕೊಂಡು ಹೋಗತೊಡಗಿದಳು. ಒಂದು ದಿನ ಕೀಲಿ ಕೈ ಕಳೆದುಹೋಯಿತು. ಗಂಗವ್ವ ಹುಡುಕಿ ಹುಡುಕಿ ಗೋಳಾಡಿದಳು. ಕೊನೆಗೆ ಭದ್ರವಾದ ಆ ರೇಲ್ವೆ ಕೀಲಿಯನ್ನು ಮುರಿಸಬೇಕಾದರೆ ನಾಲ್ಕು ಗಂಟೆ ಬೇಕಾಯಿತು. ಕಿಟ್ಟಿ ರತ್ನಾಳ ಎದುರಿನಲ್ಲಿಯೇ ಆಕೆಗೆ ಉದ್ಧಟ ಮಾತುಗಳನ್ನಾಡಿ ಅವಳ ಕಣ್ಣೀರು ಕಪಾಳಕ್ಕೆ ಬರುವಂತೆ ಮಾಡಿದ.

ಹೀಗೆ ಸೊಸೆಯೊಡನೆ ಮೂಕ ತಿಕ್ಕಾಟಗಳು ಕ್ರಮೇಣ ಜಗಳಗಳಾಗಿ ಪರಿಣಮಿಸತೊಡಗಿದವು. ರತ್ನಾ ಆಗಾಗ ತನ್ನ ಅಳತೆಯೊಳಗೆ ಇದ್ದಾಗ ಎದುರುತ್ತರ ಕೊಡುವಳು. ತನ್ನ ಎಲ್ಲೆ ಮೀರಿದೊಡನೆ ಮುಳುಮುಳು ಅಳುತ್ತ ಮೂಲೆ ಹಿಡಿಯುವಳು. ಇತ್ತಿತ್ತ ಮಧ್ಯಾಹ್ನ ಅಪ್ಪನ ಮನೆಗೆ ಹೋಗಿ ಸಂಜೆಗೆ ಮನೆಗೆ ಬರುತ್ತಿದ್ದಳು. ಒಂದು ದಿನ ಕಿಟ್ಟಿಯೇ ದೇಸಾಯರ ವೇಣುಬಾಯಿಯನ್ನು ಅರಿಷಿಣ ಕುಂಕುಮಕ್ಕೆ ಕರೆಯಲು ಹೇಳಿ ಕಳಿಸಿದ. ಅಲ್ಲಿ ಹೋದಾಗ ವೇಣುಬಾಯಿ, "ಯಾಕಃ ಹುಡುಗಿ, ಅತ್ತೀ ಜೋಡಿ ರಸಖಸಿ ಮಾಡತೀ ಅಂತಲ್ಲಾ ?...ಇದು ತರ ಅಲ್ಲ. ನೋಡು ಆಕಿ ಬಹಳ ಅನುಭೋಗಿಸಿದಾಕಿ. ಆಕಿನ್ನ ನೀ ತಾಯಿ ಹಂಗ ಸಾಕಬೇಕು," ಎಂದು ಹೇಳಿಬಿಟ್ಟಿದ್ದರಿಂದ ರತ್ನಾಳಿಗೆ ಬಹಳ

ಅವಮಾನವಾಯಿತು. ಕಿಟ್ಟಿ ಏನಾದರೂ ಹೇಳಿದರೆ, "ಈ ಜಗಾನಽ ಛಲೋ ಇಲ್ಲಾ. ಕಾಮದಾರನಾಗಿ ಇಂಥಾ ಮನ್ಯಾಗ ಇದ್ದದ್ದಕ್ಕ ಎಲ್ಲಾರೂ ನಮ್ಮನ್ನ ನೋಡಿ ನಗತಾರ. ನಮ್ಮನ್ನ ಕೀಳು ಮಾಡ್ಯಾರ. ಬ್ಯಾರೆ ಕಡೆ ಮನಿ ಹಿಡೀರಿ," ಎಂದು ತಾಯಿಯಿಂದ ಪಡೆದ ಸೂಚನೆಯನ್ನು ರತ್ನಾ ಸೂಚಿಸುವಳು.

ಅತ್ತೆ ಸೊಸೆಯರಲ್ಲಿ ವೈಮನಸ್ಸು ಬೆಳೆಯತೊಡಗಿತು. ಒಂದು ದಿನ ರತ್ನಾ ಎಲ್ಲೆ ಮೀರಿ, "ಗಂಡಾ-ಹೇಣ್ತಿ ಪ್ರೀತಿಯಿಂದ ಇದ್ದದ್ದು ನೋಡಿ ಸಂಕಟ," ಎಂದು ಬೆರಳು ಮುರಿದಳು. ನೊಂದ ಗಂಗವ್ವ ಅಂದು ರಾತ್ರಿ ಫರಾಳವನ್ನು ಸ್ವೀಕರಿಸಲಿಲ್ಲ. ಕಿಟ್ಟಿ ಅಂದು ಹೆಂಡತಿಯನ್ನು ಹೊಡೆದ. ಇಬ್ಬರೂ ತೀರ ವಿರುದ್ಧ ಸಂಗತಿಗಳನ್ನು ನಿಜವೆಂದೇ ಹಿಡಿದು ತಮ್ಮ ಹಟ ಸಾಧಿಸುತ್ತಿದ್ದರು. ಕಿಟ್ಟಿಗಂತೂ ಈ ಜಗಳದಲ್ಲಿ ನಿರ್ಣಯ ಕೊಡುವುದೇ ಕಠಿಣವಾಗತೊಡಗಿತು.

ಆದರೆ ಈ ಎಲ್ಲ ಜಗಳ ರಂಭಾಟಗಳ ಮಧ್ಯೆ ಗಂಗವ್ವ ಒಂದು ಕಠೋರ ವ್ರತವನ್ನು ಕೈಗೊಂಡಿದ್ದಳು. ದಿನ ದಿನಕ್ಕೂ ಅದನ್ನು ಸ್ಮರಣೆಗೆ ತೆಗೆದುಕೊಂಡು ತನ್ನ ಬುದ್ಧಿಯನ್ನು ಸ್ತಿಮಿತಕ್ಕೆ ತರುವಳು. ಆ ವ್ರತದ ಪ್ರಶಾಂತತೆಯ ಎದುರಿಗೆ ದಿನದ ಸಿಟ್ಟು ಸೆಡುವು, ಸುಳ್ಳು ಮೋಸಗಳು, ಸಂಕಟಗಳು ಸಾಗರದ ಮೇಲಿನ ತೆರೆಗಳಂತೆ ಕ್ಷುದ್ರವಾಗಿ ತೋರುವವು. ಆ ವ್ರತವೆಂದರೆ ಏನೇ ಆಗಲಿ, ಕಿಟ್ಟಿಯ ಕೈ ಬಿಡಬಾರದು. ಸೊಸೆ ಎಷ್ಟೇ ಕುಹಕವಾಡಲಿ ಮನೆ ಬಿಡಕೂಡದು. ಒಮ್ಮೆ ಬೆನ್ನಿಗೆ ಹಾಕಿಕೊಂಡ ಮಗ ಒದ್ದಾಡುತ್ತಾನೆಂದು ನಡುನೀರಿನಲ್ಲಿ ಕೈಬಿಟ್ಟರೆ ಮುಂದೇನು ? ಇನ್ನು ರಾಘಪ್ಪನು ಕಿಟ್ಟಿಯನ್ನು ದತ್ತಕ ತೆಗೆದುಕೊಳ್ಳುವುದೊಂದಿದೆ. ರಾಘಪ್ಪನ ಆಟ ಸಾಗಗೊಡಬಾರದು. ಎಷ್ಟು ಅಪಮಾನವಾದರೂ, ಎಷ್ಟು ಕಷ್ಟಪಟ್ಟರೂ ಈ ದುರ್ಬಲ ಮಗನ ಹಿತ ಆಗುವುದು ತನ್ನಿಂದಲೇ. ಆದ್ದರಿಂದ ಅವನ ಸಾಮೀಪ್ಯ ಬಿಡಕೂಡದೆಂದು ಗಂಗವ್ವ ನಿರ್ಧರಿಸಿದಳು.

*** **** ***

ಇತ್ತ ಶಾಲೆಯಿಂದ ಹೊರ ಹಾಕಲ್ಪಟ್ಟು ಹಳ್ಳಿಗೆ ಹೋದ ದೇಸಾಯರ ಮಗ ವಸಂತ ಹಳ್ಳಿಗರಿಗಿಂತ ಹುಂಬ ಉತ್ಸಾಹವನ್ನು ತಳೆದಿದ್ದ. ಎತ್ತುಗಳಿಗೆ ಧಾರವಾಡದ ಫೇಡೆ ತಿನ್ನಿಸುತ್ತಿದ್ದ. ಇವನ ಕುಹಕ ಕಾರಭಾರಗಳಿಂದ ಊರಲ್ಲಿ ಕಲಹಗಳು ಏಳುತ್ತಿದ್ದವು. ಸುಗ್ಗಿ ನೋಡಿ ಬರಲು ಊರಿಗೆಹೋದ ದೇಸಾಯರಿಗೆ ಮಗನ ಕಾರಭಾರ ಎಲ್ಲವೂ ತಿಳಿಯಿತು. ಅವರು ಧಾರವಾಡಕ್ಕೆ ಹಿಂತಿರುಗಿ ಬರುವಷ್ಟರಲ್ಲಿ ಅವರಿಗಾಗಿ ಅಚ್ಯುತನ ಪತ್ರ ಕಾಯುತ್ತಿತ್ತು. ಅವನು ಕಾಲೇಜು ಕಲಿಯುವುದನ್ನು ಬಿಟ್ಟು ಸತ್ಯಾಗ್ರಹದಲ್ಲಿ ಭಾಗವಹಿಸಿ ಜೇಲು ವಾಸವನ್ನನುಭವಿಸಿದ್ದ. ಚಿಂತಿತರಾದ ದೇಸಾಯರು ಮುಂಬೈಗೆ ಹೋದರು. ಖಾದಿ ಪಾಯಿಜಾಮ, ಖಾದಿ ಟೊಪ್ಪಿಗೆ ಧರಿಸಿದ ಅಚ್ಯುತರಾಯನನ್ನು ದೇಸಾಯರು ಗುರುತಿಸಿದರು. ಆತ ಗಿರಣಿಯೊಂದರಲ್ಲಿ ಕೆಲಸಕ್ಕೆ ಸೇರಿದ್ದ. ಅಂದು ಚೌಪಾಟಿಯ ತೀರದಲ್ಲಿ ಕುಳಿತು ಅಪ್ಪ- ಮಗ ಬಹಳ ಹೊತ್ತು ಮಾತಾಡಿದರು. ಅಚ್ಯುತ ಕೆಲಸ ಮಾಡುತ್ತಿದ್ದ ಗಿರಣಿಯಲ್ಲಿಯೇ ಕೆಲಸ ಮಾಡುತ್ತಿದ್ದ ಕನ್ನಡಿಗ ಬಿಂದಗೋಳ ವೆಂಕಟರಾಯ (ರಾಘಪ್ಪನ ತಮ್ಮ) ಎಂಬುದನ್ನು ಪತ್ತೆಹಚ್ಚಿದರು.

ಗಂಗವ್ವ - ಗಂಗಾಮಾಯಿ

ಅಚ್ಯುತನು ವೆಂಕಟರಾಯನ ಬಗ್ಗೆ ಅನೇಕ ವಿಷಯಗಳನ್ನು ತಿಳಿದುಕೊಂಡು ದೇಸಾಯರಿಗೆ ಪತ್ರ ಬರೆದು ವಿವರಗಳನ್ನು ತಿಳಿಸುತ್ತಿದ್ದ. (ವೆಂಕಟರಾಯನ ಕಡೆ ಸ್ವಾಮಿರಾಯ ಬರೆಸಿಕೊಂಡ ಭಕ್ಷೀಸು ಪತ್ರದ ಮೂಲ ಪ್ರತಿ ಇರುವ ವಿಷಯವನ್ನು ತಿಳಿಸಿದ)

*** **** ***

ವಿವಾಹವು ತಾರುಣ್ಯಕ್ಕೂ ಪ್ರೌಢಾವಸ್ಥೆಗೂ ಇರುವ ಇಳಿಜಾರು ಸೇತುವೆ. ಹೊಸ ಹೊಸ ಆಸೆ-ಆಕಾಂಕ್ಷೆಗಳು, ಆದರ್ಶಗಳು ನಾಲ್ಕಾರು ವರ್ಷಗಳಲ್ಲಿ ತಲೆದೋರಿ ತಿಳಿವಿನ ಕಸುವನ್ನು ಮೆಲ್ಲಗೆ ಹುಳಿ- ಮಧುರಗೊಳಿಸುತ್ತವೆ. ಹಾಗೆ ಕಿಟ್ಟಿ ತಾನಿದ್ದ ಚಿಕ್ಕ ಪರಿಘದಲ್ಲಿಯೇ ಅಂತರ್ಮುಖಿಯಾಗತೊಡಗಿದ.

ಮದುವೆಯಾಗಿ ಐದು ವರ್ಷಗಳಾದರೂ ಮಕ್ಕಳ ಸುದ್ದಿಯಿಲ್ಲ. ದಿನದಿನಕ್ಕೆ ದೇಹದ ಬಯಕೆ ಮಕ್ಕಳ ಬಯಕೆಯಾಗಿ ಪರಿಪಾಕಗೊಳ್ಳತೊಡಗಿತು. ರತ್ನಾಳೂ ಮಕ್ಕಳಿಗಾಗಿ ಹಲಬುವಳು. ಮಕ್ಕಳಿಗಾಗಿ ಕಿಟ್ಟಿಯ ಮನಸ್ಸು ದೇವರತ್ತ ಹೊರಳಿತು. ಕಿಟ್ಟಿಯ ಮನೆಯಲ್ಲಿ ಪೂಜಿಸುತ್ತಿದ್ದ ಅಚ್ಚ ಕರಿಯ ಶಾಲಿಗ್ರಾಮವೊಂದು ದೇವರ ಪೆಟ್ಟಿಗೆಯಲ್ಲಿತ್ತು.

ಒಂದು ದಿನ ಕಿಟ್ಟಿಗೆ ಕನಸು ಬಿತ್ತು. ಕನಸಿನಲ್ಲಿ ಕಿಟ್ಟಿ ದೇವರ ಪೆಟ್ಟಿಗೆ ಹಿಡಿದು ಗಾಡಿ ಹಳಿಯ ಮೇಲೆ ಹೊರಟಿದ್ದ. ಸಾಗು ಸಾಗುತ್ತಲೆ ಗಾಡಿ ಅವನ ಹತ್ತಿರವೇ ಬಂದಿತು. ಕಿಟ್ಟಿ ಹಳಿಯ ಮೇಲೆ ಜೋರಾಗಿ ಓಡಿದ. ಓಡುತ್ತಿದ್ದಂತೆ ಸೇತುವೆಯ ಎರಡೂ ಬದಿಯ ಕಟಾಂಜನಗಳು ಮುಂದೆ ಹೋದಂತೆ ಕಿರಿಯಗಲವಾಗಿ ಒಂದೆಡೆಗೆ ಒರಗಿ ನಿಲ್ಲಲ್ಲು ಜಾಗ ಇಲ್ಲದಂತಾಯಿತು. ಗಾಡಿಯ ಸಪ್ಪಳಕ್ಕೆ ಹೆದರಿ ಕಿಟ್ಟಿ ಉಸಿರು ಬಿಗಿಹಿಡಿದು ಮೈಯೆಲ್ಲ ಬೆವೆತ. 'ಇನ್ನೇನು ಪಾರಾದೆನಪ್ಪಾ' ಎನ್ನುವಷ್ಟರಲ್ಲಿ ಗಾರ್ಡನ ಡಬ್ಬಿ ಬಂತು. ಕಾರಕೂನ ಜೋಶಿ, ಜಾರ್ಜ ಹಾಗೂ ದೇಸಾಯರು ಗಾರ್ಡನ ಜೊತೆಗೆ ನಿಂತಿದ್ದರು. ಜಾರ್ಜ ಗಾರ್ಡನ ಒಂದು ಕೈ ಹಿಡಿದು ಜಗ್ಗುತ್ತ, 'ಬೇಡ ಬೇಡ' ಎಂದ. ಆದರೆ ಗಾರ್ಡ್ ಕೈಕೊಸರಿಕೊಂಡು ತನ್ನ ಕೈಯಲ್ಲಿಯ ಬೆತ್ತದಿಂದ ಕಿಟ್ಟಿಯ ಬೆನ್ನಿಗೆ ಹೊಡೆದ. ಗಾಡಿ ಮುಂದೆ ಸಾಗಿತು: ಕಿಟ್ಟಿ ಸಾವರಿಸಿಕೊಳ್ಳುವಷ್ಟರಲ್ಲಿ ಕೈಯಲ್ಲಿಯ ದೇವರ ಪೆಟ್ಟಿಗೆಯ ಮುಚ್ಚಳ ತೆರೆದುಬಿಟ್ಟಿತು. ಒಳಗಿನ ಮೂರ್ತಿಗಳೆಲ್ಲ ಹಾರಿ ಬೆಣ್ಣೆ ಹಳ್ಳಕ್ಕೆ ಬಿದ್ದವು. ಕಿಟ್ಟಿ ಅವನ್ನು ಅಂತರಾಳದಲ್ಲಿಯೇ ಹಿಡಿಯಲೆಂದು ಕೈ ಚಾಚಿದ. ಆದರೆ ಅವನ ಕೈಗೆ ಶಾಲಿಗ್ರಾಮವೊಂದೇ ಸಿಕ್ಕಿತು. ಕಿಟ್ಟಿ ಅದನ್ನು ಬಿಗಿಯಾಗಿ ಹಿಡಿದುಕೊಂಡು ಕಿಸೆಗೆ ಸೇರಿಸಬೇಕೆನ್ನುವಷ್ಟರಲ್ಲಿ ಶಾಲಿಗ್ರಾಮ, "ನನ್ನನ್ನು ಏಕೆ ಹಿಡಿದೆ ? ನನ್ನ ಪೂಜೆ ಮಾಡಿದೆಯಾ ಇಷ್ಟು ದಿನ ? ನನ್ನನ್ನು ಬಿಟ್ಟು ಬಿಡು," ಎಂದು ಹೇಳಿದಂತಾಯಿತು. ಕಿಟ್ಟಿ ಥರ ಥರ ನಡುಗತೊಡಗಿದ. ಮೈಯೆಲ್ಲ ಜೋರಾಗಿ ಬೆವೆತು ನರಳತೊಡಗಿದ. ಅವನ ನರಳಾಟಕ್ಕೆ ಎಚ್ಚರವಾಗಿ ರತ್ನಳೂ ಎದ್ದು ಕುಳಿತುಕೊಂಡಳು. ಕಿಟ್ಟಿ ತನ್ನ ಕನಸಿನ ಅನುಭವವನ್ನು ತನ್ನ ತಾಯಿಗೆ ಮನಬಿಚ್ಚಿ ಹೇಳಿದ.

ತಾಯಿ-ಮಗ ಇಬ್ಬರೂ ಎಷ್ಟೋ ದಿನಗಳ ಮೇಲೆ ಮನಃಪೂರ್ವಕವಾಗಿ ಮಾತಾಡಿದರು. ಮಗನ ಭಯವನ್ನು ಕಂಡ ಗಂಗವ್ವ, "ಕಿಟ್ಟಣ್ಣಾ, ನೀ ಹೆದರಬ್ಯಾಡಪಾ. ಶಾಲಿಗ್ರಾಮ

ನಮ್ಮ ಮುಖ್ಯ ದೇವರು. ಇವರು ಇರೂತನಕಾ ಆದರ ಮ್ಯಾಲ ಭಾಳ ಜೀವ ಇತ್ತು. ಆವರು ಹೋದಾಗ ನೀ ಸಣ್ಣವ ಇದ್ದಿ. ಅವರ ಪೂಜಾದಾಗ ಹೆಚ್ಚು ಕಡಿಮೆ ಆಗಲಿ ಬಿಡಲಿ ಅಂತ ನಾನs ಒಳಗ ಇಡಿಸಿದ್ದೆ. ಭಕ್ತಿ ಒಂದ ಇದ್ದರ ಎಲ್ಲಾ ದೇವರು ಶಾಂತ ಇರತಾರ. ಶಾಲಿಗ್ರಾಮ ಸಿಟ್ಟಿಗೇಳೂದಿಲ್ಲ. ಏಳಪಾ. ಇನ್ನ ನೀ ದೊಡ್ಡವ ಆದಿ. ನನಗ ದಿವಸಾ ಪೂಜಿ ಕಾಣಿಸು ಅಂತ ನಮ್ಮಪ್ಪ ಸಾಲಿಗ್ರಾಮ ನಿನಗ ತಾನಾಗೇ ತಿಳಿಸಿ ಹೋಗ್ಯಾನ. ಅದು ನಿನ್ನ ಹಿರೇರ ಪುಣ್ಯ ಅಂತ ತಿಳಕೋ. ನಾ ಸಾಲಿಗ್ರಾಮನ ಹೆಂಗ ಮರೀಲ್ಯಪಾ; ಹಿಂದಕ ನಮಗ ದೌಲತ್ತು ಕೊಟ್ಟವನು ಅವನs, ಬಡತನದಾಗ ಕಾಯ್ದವನೂ ಅವನs. ಪೂಜಿ ಆದ ಮ್ಯಾಲ ದಿನಾ ನಾನು ಒಂದು ತುಪ್ಪದ ದೀಪಾ ಹಚ್ಚಿ ಇಡತಿದ್ದೆನಪಾ,"ಎಂದು ವಿವರಿಸಿದಳು.

"ಆ ದೀವಗಿ ಶಾಲಿಗ್ರಾಮಗ ಅಂತ ಇಡತಿದ್ದಿ ಏನು ?" ಹೌದೆಂದು ತಾಯಿ ಗೋಣು ಹಾಕಿದಳು.

ಈ ಮಾತು ಕೇಳಿ ಭಯಭೀತಳಾದ ರತ್ನಳಲ್ಲಿ ಗಂಗವ್ವನ ಬಗೆಗೆ ಆದರ ಹುಟ್ಟಿತು. ಕಿಟ್ಟಿಗಂತೂ ಅವ್ವ ನನ್ನನ್ನು ಕಾಯ್ದಳು ಎಂದೇ ಕಲ್ಪನೆಯಾಯಿತು. ತಮ್ಮ ಕುಲಧರ್ಮ, ಕುಲಾಚಾರಗಳ ದೀವಿಗೆಯಂತೆ ತಾಯಿ ಕಂಡಳು. ಅಂದೇ ಶಾಲಿಗ್ರಾಮ ಪೆಟ್ಟಿಗೆ ಬಿಟ್ಟು ಹೊರಗೆ ಬಂದು ತಾಮ್ರದ ತಟ್ಟೆಯಲ್ಲಿ ಪ್ರಸ್ಥಾಪಿತವಾಯಿತು.

*** *** ***

ಮೆಹಬೂಬ ಸತ್ತ ಮೇಲೆ ರಾಘಪ್ಪನ ವರ್ಚಸ್ಸು ಕಡಿಮೆಯಾಗುತ್ತ ಬಂತು. ಮೊದಲಿನ ದೈತ್ಯಶಕ್ತಿಯಿಂದಲೂ ಬುದ್ಧಿಮತ್ತೆಯಿಂದಲೂ ಅವನ ಕುಹಕಕಾರ್ಯಗಳು ಕೂಡ ಜನರಲ್ಲಿ ಪವಾಡಗಳಾಗಿ ಮೆರೆಯುತ್ತಿದ್ದವು. ರಾವಣನಂತೆ ಪ್ರಚಂಡ ಸಾಮರ್ಥ್ಯದಿಂದ ನೆಲವನ್ನು ತುಳಿಯುವವನು ಈಗ ಕೀಳು ಕುಹಕಿಯ ಹಾಗೆ ಕಾಣತೊಡಗಿದ. ಆತ ಯಾವಾಗಲೂ ವಿಚಿತ್ರ ಕಲ್ಪನೆಗಳ ಗುಂಗಿನಲ್ಲಿ ಇರುತ್ತಿದ್ದ. ಕಿಟ್ಟಿಯನ್ನು ದತ್ತಕ ತೆಗೆದುಕೊಳ್ಳುವ ವಿಷಯದಲ್ಲಿ ಅವನ ಮನಸ್ಸು ಬದಲಾಗತೊಡಗಿತ್ತು. ನಿಜವಾಗಿಯೆಂದರೆ ಅವನು ಈ ವಿಚಾರವನ್ನು ಎಂದಿಗೂ ಮನಃಪೂರ್ವಕವಾಗಿ ಮಾಡಿರಲಿಲ್ಲ. ತನ್ನ ಮಗಳನ್ನು ಕೊಡುವ ಮಾತು ನಡೆದಾಗ ಇದೊಂದು ಆಶೆ ಗಂಗವ್ವನನ್ನು ಬಗ್ಗಿಸೀತು ಎಂದು ಉಪಾಯ ಹುಡುಕಿದ್ದ. ಆದರೆ ಗಂಗವ್ವನ ಹಟದ ಮೂಲಕ ವಿಚಾರವು ಬಲಿಯುತ್ತಲೇ ನಡೆಯಿತು. ತಾನು ದತ್ತಕ ತೆಗೆದುಕೊಳ್ಳುವ ಯೋಚನೆಯೇ ಅವನಿಗೆ ಹಾಸ್ಯಾಸ್ಪದ ಎನಿಸಿತು. ಗಂಗವ್ವನಾದರೂ ತನ್ನ ಮಗಳನ್ನು ಸುಖವಾಗಿಟ್ಟಿಲ್ಲ ಎಂಬ ಕಲ್ಪನೆ ರಾಘಪ್ಪನಲ್ಲಿ ಸ್ಥಿರವಾಗಿತ್ತು.

ಇಂಥ ಪರಿಸ್ಥಿತಿಯಲ್ಲಿ ದೇಸಾಯರು ದತ್ತಕದ ವಿಷಯ ಮಾತಾಡಲಿಕ್ಕೆ ಪ್ರಾರಂಭಿಸಿದ್ದರಿಂದ ರಾಘಪ್ಪನ ಸಿಟ್ಟು ಬ್ರಹ್ಮಾಂಡಕ್ಕೆ ಏರಿತ್ತು. 'ದತ್ತಕ ಮಾಡಿಕೊಂಡು ಆ ಗಂಗೀ ಕೈಯಾಗ ನಾ ಸಿಕ್ಕೇ ಅಂದ್ರ ನನ್ನ ನುಚ್ಚುನೂರು ಮಾಡತಾಳ,' ಎಂದು ಕೊಳ್ಳುತ್ತಿದ್ದ. ಹೀಗೆ ಗಂಗವ್ವನ ಬಗ್ಗೆ ರಾಘಪ್ಪನಲ್ಲಿ ವಿರೋಧ ಭಕ್ತಿ ಸಾಗಿತ್ತು.

ಗಂಗವ್ವ - ಗಂಗಾಮಾಯಿ

ಶಾಂತಾ ಹುಟ್ಟಿದ ಮೇಲೆ ಡಾಕ್ಟರರ ಸಲಹೆಯ ಮೇರೆಗೆ ರಾಘಪ್ಪನಿಗೆ ಪತ್ನಿಯ ಸಂಬಂಧ ತಪ್ಪಿ ಹೋಗಿತ್ತು. ಇನ್ನೊಂದು ಪ್ರಸೂತಿಯಾದರೆ ಜೀವದ ಪ್ರಶ್ನೆಯಿದೆಯೆಂದು ಡಾಕ್ಟರು ಕಟ್ಟುನಿಟ್ಟಾಗಿ ಹೇಳಿದ್ದರು. ತನಗೆ ಐವತ್ತು ವರ್ಷ, ಹೆಂಡತಿಗೆ ನಲ್ವತ್ತು ವರ್ಷ. ಈಗಾಗಲೇ ಶಾಂತಾ ಲಗ್ನದ ವಯಸ್ಸಿಗೆ ಬಂದಿದ್ದಾಳೆ. ಈಗ ಶಾಂತಾಳ ಲಗ್ನ ಮುಂದೆ ಹಾಕುತ್ತ ಹೋಗುವುದರಲ್ಲಿ ಅರ್ಥವಿಲ್ಲ. ವಯಸ್ಸು ಮೀರಿದರೆ ಆಕೆಗೆ ಲಗ್ನವೇ ಆಗದಂತಾದೀತು...!

ಏನೇ ಆಗಲಿ, ಕೊನೆಗೆ ಕನಿಕರವನ್ನು ಬದಿಗೊತ್ತಿ ರಾಘಪ್ಪ ನಿಶ್ಚಯಿಸಿದ: "ನನ್ನ ಹೆಂಡತಿ ಜೀವ....?" ಒಂದು ಗಂಡು ಮಗನ್ನ ಕೊಟ್ಟು ಇಕೀನೂ ತನ್ನ ತಿಕೀಟು ತಗೀಲಿ.... ಇಷ್ಟಕ್ಕೂ ಡಾಕ್ಟರಿಗಾದರೂ ಏನು ತಿಳಿಯುತ್ತದೆ? ಒಂದು ಇದ್ದದ್ದು ಹತ್ತು ಮಾಡಿ ಹೇಳಿರುತ್ತಾರೆ."

ಚಂಪಕ್ಕ ತನ್ನ ಗಂಡನ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಲೇ ಬಂದಿದ್ದಳು. ರಾಘಪ್ಪ ಒಂದು ಮಾತನ್ನೂ ಬಾಯಿಬಿಟ್ಟು ಹೇಳದಿದ್ದರೂ ಎಲ್ಲವೂ ಪುಸ್ತಕದಲ್ಲಿ ಓದಿದಂತೆ ಆವಳಿಗೆ ಅವನ ಮನಸ್ಸಿನಲ್ಲಿದ್ದುದು ಸ್ಪಷ್ಟವಾಗಿ ಕಂಡಿತು.

ಆಕೆ ಪತಿಯ ಸಲುವಾಗಿ ಕೊನೆಯ ಸ್ವಾರ್ಥ- ತ್ಯಾಗಕ್ಕೆ ಸಿದ್ಧಳಾದಳು. ಶಾಂತಾಳ ಬಗ್ಗೆ ಚಿಂತೆಯಾಯಿತು. ರತ್ನಾಳ ಬಗ್ಗೆ ಕನಿಕರವೆನಿಸಿತು. ಆದರೆ ಪತಿಯೇ ದೈವ; ಅವನ ಪ್ರೀತಿ-ದ್ವೇಷಗಳೇ ತನ್ನವು, ತಾನು ಸಿದ್ಧಳಾಗಲೇಬೇಕು ಎಂದಾಕೆ ನಿರ್ಧರಿಸಿದಳು.

ಗಂಗವ್ವ ವರದಕ್ಷಿಣೆಯಾಗಿ ಬಂದ ಹಣವನ್ನು ಯಥಾಪ್ರಕಾರ ತನ್ನ ತಿಜೋರಿಯಾದ ದೇಸಾಯರ ಕಡೆಗೆ ತಂದುಕೊಟ್ಟಿದ್ದಳು. ವರದಕ್ಷಿಣೆಯ ಹಣದ ಧೈರ್ಯದ ಮೇಲೆ ಕಿಟ್ಟಿ ಸಾಲ ತೆಗೆದಿದ್ದ. ಪ್ರತಿ ತಿಂಗಳ ಸಂಬಳದಲ್ಲಿ ತುಸು ತುಸುವಾಗಿ ಮುಟ್ಟಿಸಿದರಾಯಿತೆಂದು ಕಿಟ್ಟಿ ವೈವಾಹಿಕ ಜೀವನ ಪ್ರಾರಂಭಿಸಿದ್ದ. ಆದರೆ ಈಗ ಸಾಲ ದುಪ್ಪಟ್ಟಾಗಿ ಭಾರವೆನಿಸತೊಡಗಿತು. ರತ್ನಾ ತವರು ಮನೆಗೆ ಹೋದಾಗ ರಾಘಪ್ಪನೆದುರು ಈ ವಿಷಯ ಹೇಳದೆ ಇರುತ್ತಿರಲಿಲ್ಲ. ರಾಘಪ್ಪ ಈ ಸಂಧಿಯನ್ನು ಸಾಧಿಸಿ ಕಿಟ್ಟಿಯನ್ನು ದೇಸಾಯರ ಮೇಲೆ 'ಛೂ' ಬಿಟ್ಟರು. ಕಿಟ್ಟಿ ಒಂದು ದಿನ ಧೈರ್ಯ ಮಾಡಿ ದೇಸಾಯರೆದುರು ತನ್ನ ಸಾಲದ ವಿಷಯ ಎತ್ತಿದ. ಕಿಟ್ಟಿ ಹಾಗೂ ಗಂಗವ್ವನ ಹಿತದೃಷ್ಟಿಯಿಂದ ದೇಸಾಯರು ಗಂಗವ್ವ ತಮ್ಮಲ್ಲಿಟ್ಟಿದ್ದ ಹಣದ ಸುಳಿವು ಕಿಟ್ಟಿಗೆ ಹತ್ತದಂತೆ ಮಾತಾಡಿದ್ದರು.

ಶಾಲಿಗ್ರಾಮದ ಪೂಜೆಯಿಂದ ಮನೆಯಲ್ಲಿ ಉಂಟಾದ ಶಾಂತಿ ಇದರಿಂದಾಗಿ ಬಲು ದಿವಸ ಬಾಳಲಿಲ್ಲ. ಮನೆಯಲ್ಲಿ ಶಾಂತಿ ಸಮಾಧಾನ ಇಲ್ಲದಂತಾಗಿ, ಗಂಗವ್ವನಿಗೆ ಸಹನೆ ಮೀರುವ ಪ್ರಸಂಗಗಳು ಮತ್ತೆ ಬರತೊಡಗಿದವು. ಕಿಟ್ಟಿ ತನ್ನ ವರದಕ್ಷಿಣೆ ಹಣವನ್ನು ದೇಸಾಯರಲ್ಲಿ ಕೇಳಲಿಕ್ಕೆ ಬಂದು ಅವಮಾನಿತನಾಗಿದ್ದ. ದೇಸಾಯರು ನಿಷ್ಠುರರಾಗಿ ತನ್ನ ಬೆನ್ನು ಕಟ್ಟಿದುದನ್ನು ವೇಣಕ್ಕನಿಂದ ತಿಳಿದು ಗಂಗವ್ವನಿಗೆ ಸಂತಸವಾಯಿತು. ಆದರೆ ಕಿಟ್ಟಿ ದೇಸಾಯರ ಮೇಲಿನ ಸಿಟ್ಟನ್ನು ತನ್ನ ಮೇಲೆ ಹಾಕಬಹುದೆಂದು ಗಂಗವ್ವ ಎಣಿಸಿರಲಿಲ್ಲ. ಶಾಲಿಗ್ರಾಮದ ಪ್ರಸಂಗವಾದ ಮೇಲೆ ಹತ್ತು-ಇಪ್ಪತ್ತು ದಿನ ಕಿಟ್ಟಿ ತಾಯಿಯ ಯೋಗಕ್ಷೇಮವನ್ನು ಚೆನ್ನಾಗಿಯೇ

ಪುಸ್ತಕ ವಿಭಾಗ

ನೋಡಿಕೊಳ್ಳುತ್ತಿದ್ದ. ಇದರಿಂದ ಅಸೂಯೆಗೊಂಡ ರತ್ನಾ ಒಳಗಿಂದೊಳಗೆ ಅಸಮಾಧಾನಗೊಂಡಿದ್ದಳು. ವರದಕ್ಷಿಣೆ ವಿಷಯದಲ್ಲಿ ಕಿಟ್ಟಿಗೆ ಮಂಗಳಾರತಿಯಾದ ಮೇಲೆ ಆತ ತಾಯಿಗೆ ಅನಾದರ ಮಾಡತೊಡಗಿದ.

ಒಂದು ದಿವಸ ಗಂಗವ್ವ ದೇವರ ಮುಂದೆ ಪೋಥಿ ಹಿಡಿದುಕೊಂಡು ಕುಳಿತಾಗ ಕಿಟ್ಟಿ ಮೈತುಂಬ ಉರಿಯುತ್ತ, ಬಂದು ಆಕೆಯ ಮುಂದೆ ಇಪ್ಪತ್ತು ರೂಪಾಯಿಯ ಚಿಲ್ಲರೆ ಸುರವಿ, 'ನಿನ್ನ ಹೆಸರಿಗೆ ಈ ಬಡ್ಡಿ ತುಂಬಿ ಬರತೇನಿ," ಎಂದು ಕೂಗಿದ.

ಗಂಗವ್ವನೂ ಸಂತಪ್ತಳಾದಳು. "ನೀ ಹೆಣ್ಣಿ ಸೋಗು ಬಿಟ್ಟು ಬಿಡು. ಈ ಮೂರು ನಾಕು ವರ್ಷದಾಗ ಬಡ್ಡೀ ಮುಟ್ಟಿಸಿ ಮ್ಯಾಲ ಒಂದು ನೂರು, ಇನ್ನೂರು ರೂಪಾಯಿ ಸಾಲ ಮುಟ್ಟಿಸಲಿಕ್ಕೆ ನಿನಗ ಆಗತಿತ್ತೋ ಇಲ್ಲೋ...? ನೀ ಅಷ್ಟು ಮುಟ್ಟಿಸಿ, ಅವ್ವಾ ಆದಷ್ಟು ಮಾಡಿದೆ, ಉಳಿದದ್ದು ಇಬ್ಬರೂ ಮುಟ್ಟಿಸಿ ಬಿಡೋಣ ಅಂದಿದ್ದರ ನಾ ಒಲ್ಲೆ ಅಂತಿದ್ದೆನೇನು? ಗಳಿಸಿದ ಪಗಾರ ಸಾಲೂದಿಲ್ಲ ಅಂತ ಅಳತೀದಿ. ಆದರ ನಾ ಇಷ್ಟು ಇಲ್ಲದ ಹತ್ತು ವರ್ಷ ಮನಿ ಸಾಗಿಸಿದ್ನೋ ಇಲ್ಲೋ? ಕೇಳು ನಾಕು ಮಂದಿಗೆ, ಐದಾಯಿ ದಿನದಾಗ ರೂಪಾಯಿಗೆ ಒಂದು ಸೇರು ಜೋಳ ಆದಾಗ ನಾ ಅರೆಹೊಟ್ಟೆ ಉಂಡು ನಿನ್ನ ಹೊಟ್ಟೆಗೆ ಹಾಕಿದೆ. ಈಗ ಪಗಾರ ಬಂದ್ರೂ ನಿನಗ ಸಾಲವಲ್ಲದು? ನಿನ್ನ ಗಳಿಕೆಗೆ ನೀಗದಂಥಾ ಒಜ್ಜಾ ಏನ ಬಂದದ? ಆಕೀನ ಒಜ್ಜಾಕ ಹೌದಲ್ಲೋ? (ರತ್ನಿ ?)"

ಗಂಗವ್ವನ ಒಂದೊಂದು ಮಾತಿನಲ್ಲೂ ಎರಡೆರಡು ಅರ್ಥಗಳು ಕಂಡವು. ಆದರಲ್ಲೂ ಕೊನೆಯ ಮಾತು ಕಿಟ್ಟಿಯ ಮರ್ಮಕ್ಕೆ ನಾಟಿತು. ಆದರಲ್ಲಿ ತನಗೆ ಮಕ್ಕಳಾಗದಿದ್ದುದಕ್ಕೆ ತಾಯಿ ತನ್ನ ಮನಸ್ಸು ನೋಯಿಸಲೆಂದೇ ಈ ಮಾತು ಆಡಿದಳೆಂದು ಭಾವಿಸಿ ತಾನೂ ತಾಯಿಯ ಮನಸ್ಸು ನೋಯಿಸಲು, "ಯಾತಕ್ಕ ಬಂದೀತು ನನ್ನ ಪಗಾರ...ನಿಮ್ಮ ಹೊಟ್ಟೆಗೆ ಹಾಕೋದಕ್ಕ ಹೋಗತದ," ಅಂದ. "ಬಿಡಪಾ ನನ್ನ ಹೊಟ್ಟಿಗೆ ಹಾಕೋದು, ಇವತ್ತ ಬೇಕಾದರ ನಿನ್ನ ನೌಕರಿ ಬಿಡು. ನಿನಗೂ ನಿನ್ನ ಹೇಣ್ತಿಗೂ ಕೂಡಿಸಿ ಊಟಕ್ಕ ಹಾಕತೇನಿ," ಎಂದು ಗರ್ಜಿಸಿದಳು.

ಅಂದು ಗಂಗವ್ವ ಊಟ ಮಾಡಲಿಲ್ಲ. ಕಿಟ್ಟಿ ದುಸುಮುಸು ಮಾಡಿಕೊಂಡು ಕಚೇರಿಗೆ ಹೋಗಿಬಿಟ್ಟ. ರತ್ನಾಳು ಊಟ ಮಾಡದೇ ಕುಳಿತಳು. ಕಿಟ್ಟಿ ಸಂಜೆ ಮನೆಗೆ ಬಂದಾಗ ತಾಯಿ ದೇವರ ಮುಂದೆ ಒಂದು ಕೃಷ್ಣಾಜಿನ ಹಾಸಿಕೊಂಡು ಮಲಗಿದ್ದಳು. ಹೆಂಡತಿ, "ಅವರು ಊಟಾ ಮಾಡಿಲ್ಲ. ಅದಕ್ಕ ನಾನೂ ಮಾಡಿಲ್ಲ. ನನಗೇನೂ ಉಪವಾಸ ಬೀಳಲಿಕ್ಕೆ ಬರೂದಿಲ್ಲೇನು?" ಎಂದು ಹೇಳಿದಳು.

ಕಿಟ್ಟಿ ಗಾಬರಿಯಿಂದ ತಾಯಿಯ ಹತ್ತಿರ ಹೋಗಿ, "ಅವ್ವಾ, ನನ್ನ ತಪ್ಪು ಆತು. ರೊಕ್ಕಾ ಕೈ ಬಿಡಬೇಕಾದರ ನನಗ ಸಂಕಟ ಆಗಿತ್ತು, ಸಹನ ಆಗಲಿಲ್ಲ," ಎಂದು ಬಹಳ ಸಮಾಧಾನ ಹೇಳಿದ ನಂತರ ಗಂಗವ್ವ ಎದ್ದು ಊಟ ಮಾಡಿದಳು.

ರತ್ನಾಳಿಗೆ ಅತ್ತೆಯ ಮಾತಿನಿಂದ ತಿರಸ್ಕಾರ ಹೆಚ್ಚಾಗತೊಡಗಿತು. ಅತ್ತೆಯ ವಿರುದ್ಧ ಬಂಡಾಯ ಹೂಡಿದಳು. ಮನೆಯಲ್ಲಿ

ಗಂಗವ್ವ – ಗಂಗಾಮಾಯಿ

ಕಿಸೆಯಲ್ಲಿಟ್ಟ ಹಣ ಹೋಗತೊಡಗಿತು. ಕಿಟ್ಟಿಗೆ ಯಾರಿಗೆ ಏನು ಅನ್ನಬೇಕು ತಿಳಿಯದಾಯಿತು. ನೆರೆಹೊರೆಯವರ ಎದುರು ರತ್ನಾ ಪ್ರಗಲ್ಭೆಯಾಗಿ ಮಾತಾಡುತ್ತ ತನ್ನ ಅತ್ತೆ ತನಗೆ ಮಾಟ ಮಾಡಿಸಿ ಮಕ್ಕಳು ಆಗದಂತೆ ಮಾಡಿಸಿದ್ದಾಳೆಂಬ ಸುದ್ದಿ ಹಬ್ಬಿಸಲು ಯತ್ನಿಸಿದಳು. ನೆರೆಮನೆಯವರಿಗೆ ಹೊಸ ಸೋಗು ಮೋಜಿನದೆನಿಸಿತು. ಗಂಗವ್ವನಿಗೆ ಈ ಸುದ್ದಿ ತಿಳಿದೊಡನೆ ಕಿಟ್ಟಿಯ ಅಧ್ಯಕ್ಷತೆಯಲ್ಲಿ ರತ್ನಾಳನ್ನು ಎದುರಿಗೆ ಕೂಡಿಸಿ, ತಾನು ಎಲ್ಲಿ, ಯಾವ ಮಾಂತ್ರಿಕನಲ್ಲಿ, ಯಾವಾಗ ಏನೆಂದು ಮಾಟ ಮಾಡಿಸಿದ್ದೇನೆ ? ಎಂಬುದನ್ನು ಹೇಳಲು ಆಹ್ವಾನಿಸಿದಳು. ಕಿಟ್ಟಿಗೆ ಸಮಾಧಾನ ಹೇಳುವುದು ಕಠಿಣವಾಯಿತು. ರತ್ನಾ ತಾನು ಹಾಗೆ ಅಂದೇ ಇಲ್ಲವೆಂದು ಆಣೆ ಮಾಡಿ ಸಾಧಿಸಿದಳು. ಗಂಗವ್ವ ನೆರೆಮನೆಯ ಕಾಶೀ ತಾಯಿಯನ್ನು ಕರೆತಂದಳು. ಕಾಶೀತಾಯಿ ಈ ನಾಟಕವನ್ನೆಲ್ಲ ಸೊಗಸಾಗಿ ನೋಡಿ, ಎರಡೂ ದಂಡೆಯ ಮೇಲೆ ಕೈಯಿಟ್ಟು ಅಲ್ಲಿಂದ ಜಾರಿದಳು.

ಒಂದು ದಿನ ಕಿಟ್ಟಿ ಒಂದು ಢಣೆ ಬೆಲ್ಲ ತಂದ. ಸಂಜೆಯೆನ್ನುವಷ್ಟರಲ್ಲಿ ಬೆಲ್ಲದ ಪೆಂಟೆ ಮಾಯವಾಗಿತ್ತು. ಅತ್ತೆ ಮನೆಯಲ್ಲಿಯ ಸಾಮಾನನ್ನು ಯಾರಿಗೋ ಮಾರಿಕೊಳ್ಳುತ್ತಾರೆ ಎಂದು ಸೊಸೆಯ ವಾದ. ಸೊಸೆ ಅಪ್ಪನ ಮನೆಗೆ ಚೀಲದಲ್ಲಿ ಬಚ್ಚಿಟ್ಟುಕೊಂಡು ಮನೆಯ ಸಾಮಾನು ಸಾಗಿಸುತ್ತಾಳೆ ಎಂದು ಅತ್ತೆಯ ವಾದ. ಹೀಗೆ ಅರ್ಧಗಂಟೆ ವಾದಿಸಿದ ಮೇಲೆ ರತ್ನ ಮೆಲ್ಲನೆ ಗಂಡನಿಗೆ ಕಪಾಟಿನಲ್ಲಿ ಅತ್ತೆಯವರು ಮಡಿಕೆ ಹಾಕಿ ಇಟ್ಟ ಮಡಿಯ ಸೀರೆ ಉಬ್ಬಿದಂತೆ ಕಾಣುತ್ತದೆ ಎಂದು ಸಂದೇಹ ವ್ಯಕ್ತಪಡಿಸಿದಳು. ಎತ್ತಿ ನೋಡುವಷ್ಟರಲ್ಲಿ ಕೆಳಗೆ ಆ ದೊಡ್ಡ ಪೆಂಟೆ ಇತ್ತು. ಮತ್ತೆ ಹೊಸ ವಾದ. ತನ್ನ ಮೇಲೆ ಅಪವಾದ ತರಲೆಂದು ಸೊಸೆಯೇ ಇಟ್ಟಿದ್ದಾಳೆಂದು ಗಂಗವ್ವ. "ಮಡಿಸೀರೆಯನ್ನು ನಾನೇಕೆ ಮುಟ್ಟಲಿ ? ಬಂಜೆಯೆಂದು ಹೆಸರು ಇಟ್ಟು, ನನಗೆ ಮೈಲಿಗೆಯವಳನ್ನಾಗಿ ಮಾಡಿದ್ದೀರಲ್ಲ," ಎಂದಳು ರತ್ನಾ.

"ನಿನಗೆ ಮಡಿ ಮೈಲಿಗೆ ಎಗ್ಗು ಇದ್ದರೆ ಹೀಗೇಕೆ ಆಗುತ್ತಿತ್ತು ?" ಎಂದು ಗಂಗವ್ವ.

"ನೀವು ಇಷ್ಟು ಮಡಿ ಮಾಡುವವರು ನಿನ್ನೆ ರಾತ್ರಿ ತಂಗಳು ಭಕ್ಕರಿಯನ್ನೇಕೆ ಕದ್ದು ತಿಂದಿರಿ ?" ಎಂದುಬಿಟ್ಟಳು ರತ್ನಾ.

ರತ್ನಾಳ ಈ ಕೊನೆಯ ಮಾತು ತೀರ ಅಸಹ್ಯವಾಯಿತು. ಅಪ್ರತಿಭಳಾದ ಗಂಗವ್ವ ಈ ಸುಳ್ಳು ಆರೋಪದಿಂದ ನೊಂದು ಊಟ ಬಿಟ್ಟು ಕುಳಿತಳು. ಕಿಟ್ಟಿ ಮೊದಲು ಹೆಂಡತಿಯಿಂದ 'ತಪ್ಪಾಯಿತು.' ಎಂದು ಅನ್ನಿಸಲು ಯತ್ನಿಸಿದ. ರತ್ನಾ ತಯಾರಾಗದಾಗ ತಾನೇ ತಾಯಿಗೆ ಸಮಾಧಾನ ಹೇಳಲು ಹವಣಿಸಿ, 'ಊಟ ಮಾಡಲು 'ನೋಟಿಸು ಜಾರಿ' ಮಾಡಿದ. ಗಂಗವ್ವ ಇದನ್ನೇಕೆ ಸಹನ ಮಾಡಿಯಾಳು ?

"ನಾ ಇನ್ನು ಸುಮ್ಮನಿರೂದಿಲ್ಲ. ಗೋಪಣ್ಣಗ ಹೇಳತೇನಿ ಇದು ಹ್ಯಾಂಗ ಏನು ಅಂತ!" ಎಂದವಳೇ ಮನೆಯಿಂದ ಹೊರಟು ದೇಸಾಯರ ಮನೆ ಸೇರಿದಳು.

ಮಟಮಟ ಮಧ್ಯಾಹ್ನ, ಮೂರು ಗಂಟೆಯಾಗಿತ್ತು. "ಗೋಪಣ್ಣಾ, ಇಂದೀಗ ನಾ ಕಟ್ಟ್ಯಾನ ಕೈ ಬಿಟ್ಟರ ನಾಳೆ ರಾಘ್ಯ ಅವನ್ನ ಕರಡಿ ಮಾಡಿ ಕುಣಸತಾನ ಅಂತ ಅಲ್ಲೇ ಇದ್ದೇನಿ ನೋಡು. ಅವಕಾಲೀಲೆ ಒದ್ದರೂ

ಬಾಗಲ ಚೌಕಟ್ಟು ಹಿಡಕೊಂಡು ಅಲ್ಲೇ ಕೂಡತೇನಿ. ಖರೇ ಹೇಳು ಗೋಪಣ್ಣಾ, ನಾ ಯಾಕ ಬದುಕಬೇಕು ಅಂತ ಆಗೇದ ನೋಡು. ಮಗನ್ನ ಬೆಳೆಸಿದೆ, ಲಗ್ನಾ ಮಾಡಿದೆ, ಮೊಮ್ಮಕ್ಕಳನ್ನು ಅಷ್ಟು ನೋಡಿದ್ದರ ಆಗುತ್ತಿತ್ತು.....ದೇವರ ಮನಸಿನ್ಯಾಗ ಇಲ್ಲ. ಹೋಗಲಿ....ಆದರ ಹೀಂಗ ಆದೀತು ಅನ್ನಿಸಿದ್ದಿಲ್ಲ ನೋಡು. ಹೋದ ಸರೆ ನನ್ನ ಕಾಶಿಗೆ ಕರಕೊಂಡು ಹೋದ ಹಂಗ ಇನ್ನೊಂದು ಸರೆ ಬದರಿಗೆ ಅಷ್ಟು ಕರಕೊಂಡು ಹೋಗಪಾ. ನಾರಾಯಣನ ದರ್ಶನಾ ತೋಗೋತೇನಿ. ಆ ಮ್ಯಾಲ, ಅಲ್ಲಿ ಗುಡ್ಡದಾಗಿಂದ ಗಂಗಾ ಹರೀತಾಳಂತ. ನಾ ಗಂಗಾದಾಗ ಹಾರಿಕೊಂಡು ಈ ನರಜನ್ಮದಾಗಿಂದ ಪಾರಾಗತೀನಿ. ನನಗ ಖರೇ ಈ ಜನ್ಮ ಸಾಕಾತು ನೋಡು...''ಎಂದು ದುಃಖಿಸಿದಳು.

ಎಲ್ಲವನ್ನೂ ಕೇಳಿದ ದೇಸಾಯರು, "ಗಂಗವ್ವಾ, ನೀ ಹೆದರಬ್ಯಾಡ, ಇವತ್ತ ನೀ ಇಲ್ಲೇ ಮೈತೊಳಕೊಂಡು ಒಂದು ಅನ್ನಾ ದ್ಗುಣಕಾ ಮಾಡಿಕೊಂಡು ಉಣ್ಣು. ನಾಳೆ ನಿನ್ನ ಮಗ- ಸೊಸಿ ನಿನ್ನ ಕಾಲಿಗೆ ಬಿದ್ದು ನಿನ್ನ ಮನಿಗೆ ಕರಕೊಂಡು ಹೋಗೋಹಂಗ ಮಾಡತೇನಿ,"ಎಂದರು.

ಆದರೂ ಗಂಗವ್ವನಿಗೆ ಸಂದೇಹ, ಇಲ್ಲಿ ಒಂದು ದಿನ ಇದ್ದರೆ ನಾಳೆ ಮಗ ಕರೆಯಲು ಬರುವನೆಂಬ ನಿಯಮವೇನು ?....ಅವನು ಬರದಿದ್ದರೆ, ನಾಳೆ ತಾನಾಗಿಯೇ ಮನೆಗೆ ತಿರುಗಿ ಹೋಗುವುದು ಇನ್ನೂ ಮರ್ಯಾದೆಗೇಡು. ಹಾಗೆಂದೆ, "ಒಲ್ಲೆ ಬಿಡು ! ಸ್ತ್ರೀ ಜನ್ಮ, ಅನುಭೋಗಸತೇನಿ," ಎಂದು ಎದ್ದಳು.

ಆದರೆ ದೇಸಾಯರು ಬಿಡಲಿಲ್ಲ. ಆಗ್ರಹಪಡಿಸಿ ಮನೆಯಲ್ಲಿ ನಿಲ್ಲಿಸಿಕೊಂಡರು. ಸಂಜೆಗೆ ವಸಂತನ ಮುಖಾಂತರ ರಾಘಪ್ಪನಿಗೆ, "ಗಂಗವ್ವ ನಮ್ಮಲ್ಲಿ ಇದ್ದಾಳೆ. ನಾಳೆ ಮುಂಜಾನೆ ನಿಮ್ಮ ಅಳಿಯ- ಮಗಳು ಇಬ್ಬರೂ ಬಂದು ಮನೆಗೆ ಕರೆದೊಯ್ಯಬೇಕು ಇದು ನಿಮ್ಮ ಜವಾಬ್ದಾರಿ," ಎಂದು ಒಂದು ಮೌಖಿಕ ಸಂದೇಶ ಕಳಿಸಿಕೊಟ್ಟರು.

ದೇಸಾಯರ ಗುರಿ ನೀಟಾಗಿ ಮುಟ್ಟಿತು. ಮರುದಿನ ಮಗ- ಸೊಸೆ ಇಬ್ಬರೂ ಬಂದು ಕ್ಷಮಾಯಾಚನೆ ಮಾಡಿದರು. ಗಂಗವ್ವನಿಗೆ ಇದರ ಗುಟ್ಟೇ ತಿಳಿಯದಾಯಿತು.

ಅಷ್ಟರಲ್ಲಿ ದೇಸಾಯರು, "ಇನ್ನು ದುಸುಮುಶಿ ಬಿಡರಿ. ಚಹಾ ಕುಡದಿರ್‍ಯೋ ಇಲ್ಲೋ.....ಇನ್ನ ಎಲ್ಲಾರೂ ನಗಬೇಕು. ಯಾಕಂದರ ನಾ ಒಂದು ಆನಂದದ ಸುದ್ದೀ ಹೇಳೂದದ,"ಎಂದರು.

"ಕೃಷ್ಣಾ, ನಿನ್ನ ಮಾವ ನಿನಗ ಇಲ್ಲೆ ಬಂದು ಅವ್ವನ್ನ ಕರಕೊಂಡು ಹೋಗಲಿಕ್ಕೆ ಬಹಳ ಆಗ್ರಹ ಮಾಡಿದನೇನು ?" ಎಂದು ನಗುತ್ತಲೇ ಕೇಳಿದರು. ಕಿಟ್ಟೀ ಇಲ್ಲ, ಉಂಟು ಎಂದು ಗೊಂದಲಗೊಂಡಿರಲು, ಅವರು ಇನ್ನು ಗಟ್ಟಿಯಾಗಿ ನಗುತ್ತ, "ಇನ್ನ ಮುಂದ ನೀ ನಿನ್ನ ಮಾವನ ಸಲಾಂ ಹೊಡಿಯೋ ಕಾರಣಿಲ್ಲ, ಇನ್ನ ನೀ ಖರೇ ಅಳಿಯ ಆದಿ. ಇನ್ನೇನು ರಾಘಪ್ಪ ದತ್ತಕ ತೊಗೊಳ್ಳೋ ವಿಚಾರದಾಗ ಇಲ್ಲ. ಇನ್ನ ಯಾಕ ಅವನ ಭಿಡೆ ?" ಎಂದರು. ಗಂಗವ್ವ, ರತ್ನಾ, ಎಲ್ಲರೂ" 'ಆಂ !" ಎಂದು ಉದ್ಗರಿಸಿದರು. ದೇಸಾಯರು ಸುಮ್ಮನೆ ನಕ್ಕರು.

ಗಂಗವ್ವ, "ಚ್ಯಾಷ್ಟಿ ಮಾಡಿತಿಯೋ ಏನೋ" ಎಂದು ಕೇಳಿದಳು. "ಏ, ನಾನ್ಯಾಕ

ಬ್ಯಾಪ್ತಿ ಮಾಡಲಿ? ರಾಘಪ್ಪ ತಾನs ಬಂದು ಹದಿನೈದು ಇಪ್ಪತ್ತು ದಿನಗಳ ಹಿಂದೆ ಹೇಳಿಹೋದ," ಎಂದರು.

"ಹಂಗಾರ ಯಾರನ್ನ ತಗೋತಾನಂತ?" ಗಂಗವ್ವ ಕೇಳಿದಳು.

"ರಾಘಪ್ಪಗ ದತ್ತಕ ಮಕ್ಕಳ ಮ್ಯಾಲ ನಂಬಿಕಿ ಹಾರಿಹೋಗೇದ," ಎಂದು ಗೊಂದಲಕ್ಕೆ ಕೆಡವಿ, ಕೊನೆಗೆ ಹೇಳಿದರು:

"ಸ್ವಂತ ಮಗ ಆಗತಿರಲಿಕ್ಕೆ ದತ್ತಕ ಮಗ ಯಾಕಂತ ರಾಘಪ್ಪನ ವಿಚಾರ."

ಅಷ್ಟರಲ್ಲಿ ವೇಣುಬಾಯಿ ಹೊಸ್ತಿಲ ಹೊರಗಿಂದಲೇ ಭಾಷ್ಯ ಮಾಡಿ ಹೇಳಿದಳು: "ಚಂಪಾಬಾಯಿಗೆ ಈಗ ಮೂರು ತುಂಬಿ ನಾಕರಾಗ ಅದ ಅಂತ."

ರತ್ನಾಳ ಆಶ್ಚರ್ಯಕ್ಕಂತೂ ಸೀಮೆಯೇ ಉಳಿಯಲಿಲ್ಲ. ವಾರಕ್ಕೆ ಎರಡು ಬಾರಿಯಾದರೂ ತಾನು ತವರುಮನೆಗೆ ಹೋಗಿ ಬರುತ್ತಿದ್ದರೂ ಯಾರೂ ತನಗೆ ಈ ಮಾತು ಹೇಳೇ ಇಲ್ಲ. ದೈವವು ತಮ್ಮನ್ನು ಈ ರೀತಿ ವಂಚನೆ ಮಾಡೀತೆಂಬ ಕಲ್ಪನೆ ಮಾಡುವುದು ಕೂಡ ಸಾಧ್ಯವಿರಲಿಲ್ಲ. ಅವಳಿಗೆ ತಂದೆಯ ವಿಷಯಕ್ಕೆ ಸಂತಾಪ ಉಂಟಾಯಿತು.

ಕಿಟ್ಟಿಗೆ ಅರ್ಧ ನಗೆ, ಅರ್ಧ ಅಸೂಯೆ. ಗಂಗವ್ವನಿಗೆ ನಿಜವಾದ ಕಸಿವಿಸಿ. ಅಂತೂ ಬಹಿರಂಗದಲ್ಲಿ ಆನಂದಕರವಾದರೂ ಅಂತರಂಗದಲ್ಲಿ ಚಿಂತಾಜನಕವಾದ ಈ ಹಾಸ್ಯಮಯ ಸುದ್ದಿಯ ಸಂಕೀರ್ಣಭಾವನೆಗಳಲ್ಲಿ ಮನಸಾ ಒಂದಾಗಿ ಆ ಪುಟ್ಟ ಕುಟುಂಬವು ಮನೆಯತ್ತ ಸಾಗಿತು.

** ** **

ಮರುದಿನ ರತ್ನಾ ತವರುಮನೆಗೆ ಮತ್ತೆ ಬಂದಳು. ರತ್ನಾ ಏನೆಂದು ಜಗಳಾಡಬೇಕು?....ಅವಳಿಗೆ ಯಾರೂ ತನಗೆ ಈ ಸುದ್ದಿ ಹೇಳಲಿಲ್ಲವಲ್ಲಾ ಎಂಬ ಸಂಕಟವೇ ಪ್ರಧಾನವಾಗಿತ್ತು. ರತ್ನಾ ಕಾಲು ಅಪ್ಪಳಿಸುತ್ತ ಬಂದವಳೇ ಎಲ್ಲರ ಮೇಲೆ ದಾಳಿ ಮಾಡಿದಳು. ತನಗೆ ಸತ್ಯ ಸಂಗತಿಯನ್ನು ಹೇಳಬಾರದೆ? ಹೇಳಿದ್ದರೆ ತಾನು ಕಸಿದೊಯ್ಯುತ್ತಿದ್ದೆನೆ?....ತನ್ನ ಮನೆಯ ಮಾತನ್ನು ಮಂದಿ ಬಾಯಿಂದ ಕೇಳಿ ತಿಳಿದುಕೊಳ್ಳಬೇಕೆ? ತಾನು ಮನೆಯವಳಲ್ಲವೆ? ತನ್ನ ತಂದೆತಾಯಿಗಳೇ ತನ್ನನ್ನು ದೂರವಿಟ್ಟಂತಾಯಿತೆ? ಅತ್ತೆಯ ಮನೆಯಲ್ಲಿ ಕಷ್ಟ ಅನುಭೋಗಿಸುವಾಗ ತವರುಮನೆಯ ಧೈರ್ಯವೊಂದಿತ್ತು. ಈಗ ಅದೂ ಹೊರತಾಯಿತೆ...? ತನ್ನ ಗಂಡ ಬಡವನಾದರೂ ಸರಕಾರಿ ನೌಕರಿ ಇಲ್ಲವೆ? ತಾವು ತವರು ಮನೆಯ ಆಸ್ತಿಯನ್ನೇ ಅವಲಂಬಿಸಿರುವೆವೆ? ಗಂಡಸುಮಗ ಹುಟ್ಟಿದರೆ ತನಗೂ ತಮ್ಮ ಹುಟ್ಟಿದಂತೆ ಆಗುವುದಿಲ್ಲವೇ?....ಹಾಗಾಗಿ ತಾನೂ ಸಕ್ಕರೆ ಹಂಚಲು ಬಾಧ್ಯಸ್ಥಳಲ್ಲವೆ?...ಪ್ರತಿಯೊಂದು ಪ್ರಶ್ನೆಗೂ ಅವಳ ಧ್ವನಿ ಏರುತ್ತಿತ್ತು. ಅವಳ ಆವೇಶಕ್ಕೆ ರಾಘಪ್ಪನಿಗೆ ಕೂಡ ಅವಳನ್ನು ಸಮಾಧಾನ ಮಾಡುವುದಾಗಲಿಲ್ಲ.

ಇಷ್ಟೆಲ್ಲ ಕೂಗಾಡಿ, ಅತ್ತು ಆಕ್ಕಸದಿಂದ ಚಹದ ಕಪ್ಪನ್ನು ಉರುಳಿಸಿ ಇನ್ನೊಮ್ಮೆ ತವರುಮನೆಗೆ ಕಾಲಿಡುವುದಿಲ್ಲವೆಂದು ಪ್ರತಿಜ್ಞೆ ಮಾಡಿ, ಹೆಣ್ಣು ಹುಟ್ಟಿದರೂ ಕೂಡ ತನ್ನ ಗಂಡನನ್ನು ದತ್ತಕ ತೆಗೆದುಕೊಳ್ಳಬಾರದೆಂದೂ ಆಣೆ ಹಾಕಿ ಬಿರಬಿರನೆ ಮನೆ ಸೇರಿದಳು.

ಅಂದಿನಿಂದ ಕಿಟ್ಟಿಯ ಮನೆಯ ಜಗಳ ಪೂರ್ಣಪೋಯಿತೆಂದಲ್ಲ. ಆದರೆ ರತ್ನಾ ತನ್ನ ತವರು ಮನೆಯ ಅಭಿಮಾನವನ್ನು ಮನಃಪೂರ್ವಕವಾಗಿ ಬಿಟ್ಟುಕೊಟ್ಟದ್ದರಿಂದ ಅವಳಲ್ಲಿ ತನ್ನ ಗಂಡನ ಮನೆಯ ಅಭಿಮಾನ ಸೇರಿಕೊಂಡಿತು. ತನ್ನ ಗಂಡನ ಹೊರತು ತನಗೆ ಯಾರೂ ಇಲ್ಲ. ಗಂಡನನ್ನು ನಂಬಬೇಕೆ ಹೊರತು ತಂದೆ ತಾಯಿ ತನ್ನವರಲ್ಲ ಎಂದು ಆಕೆ ಮನಸ್ಸು ಗಟ್ಟಿಮಾಡಿಕೊಂಡಳು. ಗಂಗವ್ವನನ್ನು ತನ್ನ ಪಾಲಿನ ದೈವದ ಒಂದು ಅಂಗವೆಂದು ಸ್ವೀಕರಿಸಿದಳು.

* * * *

ಇತ್ತ ಶಾಲೆಯಿಂದ ಹೊರಗೆ ಹಾಕಲ್ಪಟ್ಟ ವಸಂತ ಅಪಕೀರ್ತಿಗೆ ಅಂಜಿ ಧಾರವಾಡ ಬಿಟ್ಟು ಹಳ್ಳಿಯ ರಾಜಕಾರಣದಲ್ಲಿ ಸೇರಿದಂತೆಲ್ಲ ಧಾರವಾಡವನ್ನು ಪೂರ್ಣ ಮರೆತುಬಿಟ್ಟಿದ್ದ. ರಾಘಪ್ಪ ಅವನನ್ನು ಶಹರದ ಕಡೆಗೆ ಎಳೆಯುವ ಹೊಂಚುಹಾಕಿ ನಾಟಕದ ಹುಚ್ಚು ಹಿಡಿಸಿದ. ಅವನನ್ನು ಮನೆಗೆ ಆಗಾಗ ಕರೆದು 'ಫ್ರೂಟ್-ಸ್ಯಾಲೆಡ್' ಮುಂತಾದ ಹೊಸ ಬಗೆಯ ತಿನಿಸುಗಳಿಂದ ತನ್ನವನನ್ನಾಗಿ ಮಾಡಿಕೊಂಡು 'ಶಾಂತಾಳಿಗೆ ಇವನೇ ತಕ್ಕ ವರ' ಎಂದು ಮನಸ್ಸಿನಲ್ಲಿ ನಿಶ್ಚಯಿಸಿದ.

ಹದಿನೈದು ವರ್ಷಗಳ ಶಾಂತಾ ತುಂಬು ಜವ್ವನೆ. ಗುಲಾಬಿ ಹೂವಿನಂತೆ ಸುಂದರಿಯಾಗಿದ್ದಳು. ಅವಳು ಶಾಲೆಯಲ್ಲೂ ಮುಂದಾಗಿರುತ್ತಿದ್ದಳು. ಸುಂದರಿಯಾದ ಮಗಳನ್ನು ನೋಡುವಾಗಲೆಲ್ಲ ಚಂಪಕ್ಕನಿಗೆ ಇಲ್ಲದ ಸಂಶಯ, ಚಿಂತೆ. ಚಂಪಕ್ಕನ ವಿವಾಹವು ಧಾರವಾಡದಲ್ಲಿಯ ಪ್ರಥಮ ಪ್ರೇಮವಿವಾಹವೆಂದು ಒಂದು ತಲೆಮಾರಿನವರೆಗೂ ಹೆಸರಾಗಿತ್ತು. ಕೇವಲ ಕ್ಷಣದ ಅಜಾಗರೂಕತೆಗಾಗಿ ತಾನು ತನ್ನ ಕೌಮಾರ್ಯವನ್ನು ಕಳೆದುಕೊಂಡದ್ದು, ಅದರಿಂದ ಸಮಾಜದಲ್ಲಿ ಉಂಟಾದ ಕೋಲಾಹಲ, ತಾಯಿ ಬಾವಿ ಹಾರಿಕೊಳ್ಳಲು ಹೊರಟದ್ದು, ತನ್ನ ಪತಿ ಮೊದಲ ಬಾರಿ ತನ್ನನ್ನು ನಿರಾಕರಿಸಿದ್ದು, ತನಗಾದ ಭಯಂಕರ ಅನುತಾಪ, ತಾಯಿ ನವೆದು ಕೊನೆಗೆ ಜೀವ ನೀಗಿದ್ದು, ಇವೆಲ್ಲವುಗಳನ್ನು ಕಂಡು, ಕಹಿ ಉಂಡ ಅವರ ಮನಸ್ಸಿಗೆ ಮಕ್ಕಳ ಬಗ್ಗೆ ತಲೆತಿರುಗುವಷ್ಟು ಚಿಂತೆಯಾಗುತ್ತಿತ್ತು.

ಶಾಂತಾಳಾದರೂ ಈಗೀಗ ವಸಂತನ ಕಡೆಗೆ ಆಕರ್ಷಿತಳಾಗತೊಡಗಿದ್ದಳು. ಆತ ಅವಳಿಗಾಗಿ ಒಂದು ಕಲ್ಚರ್ ಮುತ್ತಿನ ಸರವನ್ನು ತಂದುಕೊಟ್ಟಿದ್ದ. ರಾಘಪ್ಪ ಒಂದು ದಿನ ವಸಂತನ ಮುಂದೆ ಪ್ರತ್ಯಕ್ಷನಾಗಿ ತನ್ನ ಮನೋಭಿಲಾಷೆಯನ್ನು ಬಿಚ್ಚಿಟ್ಟ. ವಸಂತ ಹಿರಿಹಿರಿ ಹಿಗ್ಗಿದ.

ಚಂಪಕ್ಕನಿಗೆ ಎಂಟನೆಯ ತಿಂಗಳಿಗೆ ಬೇನೆ ಸುರುವಾದವು. ಡಾಕ್ಟರು ಅವಳು ಅಶಕ್ತಳಾಗಿರುವುದರಿಂದ ಆಸ್ಪತ್ರೆಗೆ ಸೇರಿಸಬೇಕೆಂದು ಹೇಳಿದರು. ಅವ್ವ ಮನೆ ಬಿಟ್ಟು ದವಾಖಾನೆಗೆ ಹೊರಟಾಗ ಶಾಂತಾಳಿಗೆ ಅತಿಶಯವಾಗಿ ದುಃಖ ಉಕ್ಕಿ ಬಂತು. ಚಂಪಕ್ಕ ತನ್ನ ನೋವಿನಲ್ಲೇ, "ನಾ ತಿರುಗಿ ಬರೂ ತನಕ ಕೃಷ್ಣಾತಾಯಿ ಮನ್ಯಾಗ ಇರು," ಎಂದು ಹೇಳಿದಳು.

ನೆರೆಮನೆಯ ಹುಡುಗ ಭೀಮಸೇನನೊಡನೆ ರಾಘಪ್ಪ ಹೆಂಡತಿಯನ್ನು ಹಿಂಬಾಲಿಸಿದ. ಚಂಪಕ್ಕನ ಗೋಳಾಟ ನೋಡುತ್ತಲೆ ರಾಘಪ್ಪನ ಎದೆ ಒಡೆದುಹೋಗಿತ್ತು. ಅವನು ಆಸ್ಪತ್ರೆಯ

ಗಂಗವ್ವ - ಗಂಗಾಮಾಯಿ



ಹೊರಗೆ ದೇವರಿಗೆ ಪ್ರಾರ್ಥಿಸುತ್ತ ಶೂನ್ಯ ಮನಸ್ಕನಾಗಿ ಕುಳಿತ.

ನರಳಾಟದಲ್ಲೂ ಚಂಪಕ್ಕ ಕ್ಷಣ ಹೊತ್ತು ನಿಚ್ಚಳ ಆದಳು. "ನೀವು ಇನ್ನೂ ಇಲ್ಲೇ ಕೂತೀರೇನು ? ಮನ್ಯಾಗ ಶಾಂತಿನ್ನ ಒಬ್ಬಾಕಿನ್ನ ಬಿಟ್ಟು ಬಂದಿರೇನು ?" ಇಷ್ಟು ಕಷ್ಟದಿಂದ ಅಂದವಳೇ ಹಾಸಿಗೆಯ ಮೇಲೆ ಒರಗಿಕೊಂಡಳು

ತಲೆಬಾಗಿಲು ಮುಂದೆ ಮಾಡಿ ಬಂದು ಒಬ್ಬಳೇ ಕುಳಿತು ಶಾಂತಾ ಬಹಳ ದುಃಖಿಸಿದಳು. ವಸಂತ ಬಹಳ ದಿನಗಳ ಮೇಲೆ ಅಂದು ಆಕಸ್ಮಾತ್ತಾಗಿ ಬಂದ. ಶಾಂತಾ ಹೌಹಾರಿದಳು. ವಸಂತನಿಗೆ ಏನೇನೋ ಹೇಳಿದಳು. ಅವನು ಮನಸಾ ತಮ್ಮ ಲಗ್ನವಾದಂತೆಯೇ ಎಂದು ಅವಳ ಕೈ ಹಿಡಿದು ಅಂಗಲಾಚಿದ. ದೇವರಿಗೆ ಸಲ್ಲತಕ್ಕ ಹೂವು ನೈರ್ಮಾಲ್ಯವಾಯಿತು.

ಆಸ್ಪತ್ರೆಯಿಂದ ಹೊರಟ ರಾಘಪ್ಪ ವಸಂತ ತನ್ನ ಮನೆಯಿಂದ ಹೊರಬರುತ್ತಿರುವುದನ್ನು ನೋಡಿದ. ಮನೆಗೆ ಬಂದು, ಶೂನ್ಯ ದೃಷ್ಟಿಯಿಂದ ಅಳುತ್ತಿರುವ ಮಗಳನ್ನು ನೋಡಿ "ರಂಡೇ" ಎಂದು ಕೂಗಿ ಅವಳ ರಟ್ಟೆ ಹಿಡಿದು ನೆಲಕ್ಕೆ ಕೆಡವಿದ. ಅಷ್ಟರಲ್ಲಿ ಬಾಗಿಲ ಸಪ್ಪಳವಾಯಿತು. ಬಂದವನು ಹುಡುಗ ಭೀಮಸೇನ. ರಾಘಪ್ಪನನ್ನು ಕಂಡವನೇ "ಊಂ.' ಎಂದು ಬಿಕ್ಕಿ ಅಳುತ್ತ, "ಮಾಮಿ....ಹಂ. ಹೋದಳು" ಎಂದು ಹೇಳಿದ.

* * * *

ಎರಡನೆಯ ವಿಚಾರವಿಲ್ಲದೆ ರಾಘಪ್ಪ ಮನೆ ಬಿಟ್ಟವನೆ ಟಾಂಗಾ ಮಾಡಿಕೊಂಡು ಆಸ್ಪತ್ರೆಗೆ ಓಡಿದ. ಹೆಂಡತಿ ಪ್ರಸೂತಿ ಕಾಲಕ್ಕೆ ಪ್ರಾಣ ಬಿಟ್ಟಿದ್ದಳು. ನಾಡಿ ಮಿಡಿತ ನಿಂತ ಮೇಲೆ ಪ್ರಸೂತಿಯಾಯಿತು. ಹುಟ್ಟಿದ್ದು ಗಂಡು ಮಗು. ಆದರೆ ಅದಾಗಲೆ ಸತ್ತು ಹೋಗಿತ್ತು.

ಹೆಂಡತಿಯ ಹಾಗೂ ಮಗನ ಪ್ರೇತ ಸಂಸ್ಕಾರವನ್ನು ರಾಘಪ್ಪ ಸ್ವಲ್ಪವೂ ಅಳುಕಿಲ್ಲದೆ ತಾನೇ ಎದುರು ನಿಂತು ಮಾಡಿಸಿದ. ಮಗುವನ್ನು ತನ್ನ ಕೈಯಲ್ಲಿಯೇ ಹಿಡಿದುಕೊಂಡು ಆಸ್ಪತ್ರೆಯಿಂದ ಸ್ಮಶಾನದವರೆಗೆ ಹೆಂಡತಿಯ ಶವದ ಜೊತೆಗೆ ತಾನೇ ಒಯ್ದ.

ದೇಸಾಯರು ವ್ಯವಸ್ಥೆ ನೋಡಲಿಕ್ಕೆಂದು ಬಂದಿದ್ದರು. ಆದರೆ ಅವರು ಬರುವ ಮೊದಲೇ ರಾಘಪ್ಪ ಕಟ್ಟಿಗೆಗೆ ಹೇಳಕಳಿಸಿ

ಬರಬೇಕಾದವರನ್ನು ಕರೆ ಕಳಿಸಿ ಎಲ್ಲ ವ್ಯವಸ್ಥೆ ತಾನೇ ಮಾಡಿದ್ದ. ದೇಸಾಯರಿಗೆ ಬಿದ್ದ ಕೆಲಸವೆಂದರೆ ಚಂಪಕ್ಕನಿಗೆ ಹೆಗಲು ಕೊಟ್ಟದ್ದಷ್ಟೆ. ವಸಂತರಾಯನೂ ಆಸ್ಪತ್ರೆಯವರೆಗೆ ಅಂತ್ಯ ದರ್ಶನಕ್ಕಾಗಿ ಬಂದು ಹೋದನು.

ರತ್ನಾ-ಶಾಂತಾ ಬಹಳ ಅತ್ತರು. ಅವರಿಗೆ ಸಮಾಧಾನ ಹೇಳಲು ಬಂದ ವೇಣೂಬಾಯಿ ಕೂಡ ಅಳತೊಡಗಿದಳು. ಗಂಗವ್ವನೇ ಧೈರ್ಯ ತೆಗೆದುಕೊಂಡು ರತ್ನಾ ಶಾಂತಾರನ್ನು ಎದೆಗೆ ಅಪಚಿಕೊಂಡು, 'ನಾ ನಿಮ್ಮ ತಾಯಿ ಅಂತ ತಿಳಕೊಳ್ರಿ', ಎಂದು ಸಮಾಧಾನ ಹೇಳಿದಳು. ಗಂಗವ್ವ ದುಃಖದ ಮನೆಗೆ ಇರಲು ಬಂದಳು. ತಮ್ಮನಿಗೆ ಬಹಳ ಹೊತ್ತು ಸಮಾಧಾನ ಹೇಳಿದಳು. ಆದರೆ ಅವನಿಗೆ ಸಾಂತ್ವನದ ಆವಶ್ಯಕತೆ ಉಳಿದಿರಲಿಲ್ಲ.

* * * *

ಮರುದಿನ ರಾತ್ರಿ ಹತ್ತು ಗಂಟೆಗೆ ಕಿಟ್ಟಿ ದುಃಖದ ಮನೆಯಿಂದ ತಮ್ಮ ಮನೆಗೆ ಮಲಗಲು ಹೊರಟ. ಆಗ ಕೋಣೆಯಲ್ಲಿ ಏನನ್ನೋ ಬರೆಯುತ್ತ ಕುಳಿತ ರಾಘಪ್ಪ ಅವನನ್ನು ಕರೆದು, "ಈ ಪತ್ರ ನಾಳೆ ಮುಂಜಾನೆ ದೇಸಾಯರಿಗೆ ತಪ್ಪದೆ ಮುಟ್ಟಿಸು," ಎಂದು ಹೇಳಿದ.

ಅಂದು ಕಿಟ್ಟಿಗೆ ತಡವಾಗಿ ಎಚ್ಚರವಾಯಿತು. ಎದ್ದವನೇ ಮುಖ ತೊಳೆದು, ದೇಸಾಯರ ಮನೆಗೆ ಹೋಗಿ ಅವರಿಗೆ ಚೀಟಿ ಮುಟ್ಟಿಸಿ, ತಾನು ದುಃಖದ ಮನೆಯತ್ತ ಲಗುಬಗೆಯಿಂದ ನಡೆದ. ಅಷ್ಟರಲ್ಲಿ ಹಿಂದಿನಿಂದ ದೇಸಾಯರ ಟಾಂಗಾ ಭರದಿಂದ ಬಂದು ನಿಂತಿತು. ದೇಸಾಯರು ಟಾಂಗಾ ನಿಲ್ಲಿಸಿ, "ನಾನೂ ಅಲ್ಲೇ ಹೊರಟೇನಿ, ಟಾಂಗಾ ಹತ್ತು," ಎಂದು ಹೇಳಿದರು. ಕಿಟ್ಟಿ ಆಶ್ಚರ್ಯಪಡುತ್ತ ಹತ್ತಿದ. ಇಬ್ಬರೂ ರಾಘಪ್ಪನ ಮನೆ ಮುಟ್ಟಿದಾಗ ಬೆಳಗಿನ ಒಂಭತ್ತು ಗಂಟೆ ಆಗಿರಬಹುದು. ಮನೆಯ ಸುತ್ತಲೂ ಜನ ನೆರೆದಿದ್ದರು. ಒಳಗಿನಿಂದ ಸ್ತ್ರೀಯರ ಆರ್ತನಾದ ಕೇಳಿಸುತ್ತಿತ್ತು. ಬಾಗಿಲ ಬಳಿ ಪೋಲಿಸನೋರ್ವ ಪಹರೆ ಮಾಡುತ್ತ ನಿಂತಿದ್ದ. ರಾತ್ರಿ ಒಂದೆರಡು ಬಾರಿ ನರಳಿದ ಧ್ವನಿ ರತ್ನಾಳಿಗೆ ಕೇಳಿಸಿದ್ದರೂ ಮರಣಾಚ್ಛಾದಿತ ಮನೆಯಾದ್ದರಿಂದ ರತ್ನಾ ಹೆದರಿಕೆಯಿಂದ ಹಾಗೆಯೇ ಮಲಗಿಕೊಂಡಿದ್ದಳು. ನಿತ್ಯದಂತೆ ಆರು ಗಂಟೆಗೆ ಎದ್ದ ಗಂಗವ್ವ ತಮ್ಮನ ಕೋಣೆಯ ಬಾಗಿಲು ಇಕ್ಕಿದುದನ್ನು ನೋಡಿದಳು. ಎಂಟು ಗಂಟೆಯಾದರೂ ರಾಘಪ್ಪ ಹೊರಗೆ ಬರದಿರಲು ರಾಘಪ್ಪನನ್ನು ಎಬ್ಬಿಸಲು ರತ್ನಾಳನ್ನು ಕಳಿಸಿದಳು. ಒಳ ಚಿಲಕ ಹಾಕಿತ್ತು. ಎಷ್ಟು ಬಡಿದರೂ ಬಾಗಿಲು ತೆಗೆಯದಿರಲು ನೆರೆಮನೆಯ ಹುಡುಗ ಭೀಮಸೇನನನ್ನು ಕರೆಸಿ ಹಿಮ್ಮಗ್ಗಲಿನ ಕಿಡಕಿಯಿಂದ ನೋಡಲು ಹೇಳಿದರು. ಅವನು ಕಿಡಕಿಯ ಕಾಜನ್ನು ಒಡೆದು ನೋಡಲಾಗಿ ಜಂತಿಯಿಂದ ನೇತಾಡುತ್ತಿದ್ದ ರಾಘಪ್ಪನ ಶವವನ್ನು ಕಂಡು ಚೀತ್ಕಾರ ಮಾಡಿ ಬವಳಿ ಬಂದು ಕೆಳಗೆ ಬಿದ್ದ. ಒಮ್ಮೆಲೆ ಸುದ್ದಿ ಹಬ್ಬಿ ಜನರು ನೆರೆದರು. ಪೊಲೀಸರೂ ಬಂದರು. ಶವದ ಅಂಗಿಯ ಕಿಸೆಯಲ್ಲಿ ಒಂದು ಚೀಟಿ ದೊರಕಿತು.

"ಸಂಬಂಧಪಟ್ಟ ಎಲ್ಲ ಜನರಿಗೆ ರಾಘವೇಂದ್ರ ವಾಮನ ಬಿಂದಗೋಳ ನಾನು



ತಿಳಿಸುವದೇನೆಂದರೆ, ನಾನು ಹೆಂಡತಿಯ ಮರಣದ ಶೋಕದಿಂದ ಹಾಗೂ ಇತರ ಚಿಂತೆಗಳ ಮೂಲಕ ಬೇಸತ್ತು ಪಾಪ-ಪುಣ್ಯಗಳ ವಿಚಾರ ಮಾಡದೆ ಸ್ವಂತ ಖುಷಿಯಿಂದ ನನ್ನ ಕೋಣೆಯ ಜಂತಿಯಿಂದ ಹಗ್ಗವನ್ನು ತೂಗುಬಿಟ್ಟು ಉರುಲು ಹಾಕಿಕೊಳ್ಳುತ್ತೇನೆ. ಇದರ ಜವಾಬುದಾರಿ ಇನ್ನಾರ ಮೇಲೆಯೂ ಇರುವದಿಲ್ಲ. ಯಾರೂ ಇದಕ್ಕಾಗಿ ಖೇದ ಪಟ್ಟುಕೊಳ್ಳಬಾರದು. ನನ್ನ ಶವ ಸಂಸ್ಕಾರದ ಬಾಬತ್ತು ನಮ್ಮ ಓಣಿಯ ಮೂಲೆಗೆ ಇರುವ ಕಟ್ಟಿಗೆಯ ಅಡ್ಡೆ ಮಾಲೀಕರಿಗೆ ಹದಿನೈದು ರೂಪಾಯಿ ಮುಟ್ಟಿಸಿ ಇದರ ಜೊತೆಗೆ ಪಾವತಿ ಇಟ್ಟಿರುತ್ತೇನೆ. ಈಗ ಕೆಲ ದಿನಗಳಿಂದ ನನಗೆ ಹುಚ್ಚು ಹಿಡಿದೀತೆಂಬ ಭಯ ಸುರುವಾದ ಮೂಲಕ ಈ ಮೂರು ತಿಂಗಳ ಹಿಂದೆ ಮೃತ್ಯುಪತ್ರವನ್ನು ಮಾಡಿಸಿದ್ದೆ. ಅದೇ ನನ್ನ ಕಾಯ್ದೆಶೀರ ಮೃತ್ಯುಪತ್ರವೆಂದು ತಿಳಿಯಬೇಕು. ಮೃತ್ಯುಪತ್ರವು ತಿಜೋರಿಯಲ್ಲಿದ್ದು, ಕೀಲಿಕೈ ಇದರ ಜೊತೆಗೆ ಇದೆ. ತಿಜೋರಿ ಹಾಗೂ ಮೃತ್ಯು ಪತ್ರವು ನನ್ನ ಅಳಿಯ ಚಿ. ಕೃಷ್ಣಾಜಿ ಸ್ವಾಮಿರಾವ ಕುಲಕರ್ಣಿ ಇವರು ತಮ್ಮ ತಾಬೇದಲ್ಲಿ ತೆಗೆದುಕೊಳ್ಳತಕ್ಕದ್ದು ಹಾಗೂ ತಿಜೋರಿಯಲ್ಲಿರುವ ಸ್ವಲ್ಪ ಹಣದಲ್ಲಿ ನನ್ನ ಹೆಂಡತಿಯ ಕರ್ಮ ಮಾಡಿಸತಕ್ಕದ್ದು. ಎಲ್ಲ ಉತ್ತರಾಧಿಕಾರ ಅವರದೇ ಇರುತ್ತದೆ. ಇದನ್ನೆಲ್ಲ ಬರೆಯುವಾಗ ನಾನು ನಿಚ್ಚಳ ಬುದ್ಧಿಯಿಂದ ಇದ್ದು ಯಾವ ಮಾದಕ ಪದಾರ್ಥವನ್ನು ಸೇವಿಸಿರುವುದಿಲ್ಲ."

ಕೆಳಗೆ ರಾಘಪ್ಪನ ಸಹಿ ಹಾಗೂ ಮುನ್ನಾದಿನದ ತಾರೀಖು ಇದ್ದಿತು. ರಾಘಪ್ಪನ ಚೀಟಿಯ ಮೂಲಕ ಪೋಲೀಸರು ವಿಶೇಷ ಚಿಕಿತ್ಸೆ ಮಾಡಲಿಲ್ಲ. ಪೋಲಿಸರು 'ಕಾರಣ' ಕಾಲಮ್ಮಿನಲ್ಲಿ ಹೆಂಡತಿಯ ಮರಣದ ದುಃಖದ ಮೂಲಕ ಹಾಗೂ ಇತರ ಚಿಂತೆಗಳ ಮೂಲಕ ಎಂದ ಬರೆದುಕೊಂಡು ಶವವನ್ನು ಉತ್ತರಾಧಿಕಾರಿಯಾದ ಕಿಟ್ಟಿಯ ವಶಕ್ಕೆ ಒಪ್ಪಿಸಿದರು. ಶವವನ್ನು ನೋಡುವ ಧೈರ್ಯ ಯಾರಿಗೂ ಇರಲಿಲ್ಲ. ಕಿಟ್ಟಿ ಕೂಡ ಅಧೈರ್ಯದಿಂದ ಒಂದು ಕ್ಷಣ ನೋಡಿ ಕಣ್ಣುಮುಚ್ಚಿದ. ಆ ಸುಂದರವಾದ ಮುಖ ಜಗಳಾಡಿದಂತೆ ಅವಡು ಗಚ್ಚಿತ್ತು. ಮುಂದೆ ಒಂದು ತಾಸಿನಲ್ಲಿ ಶವ ಸ್ಮಶಾನ ಕಂಡಿತು.

ಹನ್ನೆರಡನೆಯ ದಿನವಾದ ಮೇಲೆ ದೇಸಾಯರು ಕಿಟ್ಟಿಯನ್ನು ಕರೆದು ಸಾಯುವ

ಮುನ್ನ ರಾಘಪ್ಪ ತಮಗೆ ಬರೆದ ಚೀಟಿಯನ್ನು ತೋರಿಸಿದರು.

ಕ್ಷೇಮ ಶ್ರೀ
ಧಾರವಾಡ

ರಾ.ರಾ. ಬಹದ್ದೂರ ದೇಸಾಯರಿಗೆ ರಾಘಪ್ಪನ ಸ.ವಿ.ವಿ. ನಾನು ನಿಮ್ಮ ಪ್ರೀತಿಗಾಗಿ ಈ ಎರಡು ಮಾತುಗಳನ್ನು ನಿಮ್ಮೆದುರು ಇಟ್ಟಿದ್ದೇನೆ. ನಾನು ಸೋತದ್ದು ನಿಮಗಲ್ಲ ಎಂಬುದನ್ನಿಷ್ಟೇ ನಿಮಗೆ ತಿಳಿಸಬೇಕಾಗಿದೆ. ಏಕೆಂದರೆ ವೆಂಕಾಟಿಯ ವಿಷಯವಾಗಿ ನಿಮ್ಮ ಮಗ ಅಚ್ಯುತನು ಬರೆದ ಪತ್ರ ತೋರಿಸಿ ನನ್ನನ್ನು ಹೆದರಿಸಲು ಪ್ರಯತ್ನಿಸಿದಿರಿ. ನಾನು ಹೆದರಿದೆನೆಂದು ನಿಮ್ಮ ಕಲ್ಪನೆಯಾಗಿದ್ದರೆ ಅದನ್ನು ಬಿಟ್ಟು ಬಿಡುವುದು ಒಳ್ಳೆಯದು. ವೆಂಕಾಟಿಯ ವಿಷಯವಾಗಿ ನಾನೇ ನಿಮಗೆ ಕೆಲವು ಸತ್ಯ ಸಂಗತಿಗಳನ್ನು ತಿಳಿಸುತ್ತಿದ್ದೇನೆ. ಅವನು ಮನೆ ಬಿಟ್ಟು ಓಡಿ ಹೋದ ಕಾರಣವನ್ನೂ ತಿಳಿಸುತ್ತಿದ್ದೇನೆ.

"ನಮ್ಮ ಪಿತ್ರಾರ್ಜಿತ ಹೊಲಗಳೆಲ್ಲ ತಂದೆಯವರ ಕಾಲದಿಂದಲೇ ಒತ್ತೀ ಬಿದ್ದು ನಾವು ಸ್ವಂತ ಪ್ರಯತ್ನದಿಂದ ನಾಲ್ಕು ಪುಸ್ತಕ ಧಾರವಾಡದಲ್ಲಿ ಕಲಿತೆವು. ನನಗೆ ಇತ್ತ ನೌಕರಿ ಸಿಗಲಿಲ್ಲವಾದ್ದರಿಂದ ಪುಣೆಗೆ ನನ್ನ ತಮ್ಮ ವೆಂಕಾಟಿಯ ಬಳಿ ಹೋದೆ. ಕೆಲವೊಂದು ಪ್ರಸಂಗದ ಮೂಲಕ (ಅವು ನಿಮಗೆ ಗೊತ್ತಿದ್ದರೂ ಇರಬಹುದು) ನಾನು ನೌಕರಿ ಹಿಡಿದು ನನ್ನ ಕಾಲ ಮೇಲೆ ನಿಲ್ಲುವುದಕ್ಕಿಂತ ಮೊದಲೇ ನನ್ನ ಲಗ್ನವಾಗಬೇಕಾಗಿ ಬಂತು. ಒಂದು ವರ್ಷದಲ್ಲಿಯೇ ರತ್ನಾ ಹುಟ್ಟಿದಳು. ಬಹಳ ಕಂಗಾಲ ಪರಿಸ್ಥಿತಿಯಲ್ಲಿ ನೌಕರಿ ಹುಡುಕಲು ಪುಣೆಗೆ ಹೋದೆ. ವೆಂಕಾಟಿಯಂತೆ ಒಬ್ಬರ ಮನೆಯ ಸಿಪಾಯಿಯಾಗುವುದು ನನಗೆ ಸಾಧ್ಯವೇ ಇರಲಿಲ್ಲ.

ವೆಂಕಾಟಿ ಪುಣೆಯಲ್ಲಿ ಸೇಠ ತಾಖತ್ತಮಲ್ಲ ಎಂಬ ವ್ಯಾಪಾರಸ್ಥನ ಮನೆಯಲ್ಲಿ ಕೆಲಸಕ್ಕಿದ್ದನಷ್ಟೆ. ಅವರ ಕಾರಿನ ಡ್ರೈವರ ವೆಂಕಾಟಿಯ ಕೈಯಲ್ಲಿ ಎರಡು ಸಾವಿರ ರೂಪಾಯಿಗಳ ಚೆಕ್ಕು ಮುರಿಸಲು ಕೊಟ್ಟು ಹೋಗಿದ್ದ. ಚೆಕ್ಕು ಮುರಿಸಿಕೊಂಡು ಬಂದ ಮರುದಿವಸ ವರ್ತಮಾನ ಪತ್ರದ ಮೂಲೆಯೊಂದರಲ್ಲಿ ತಾಜೀಮುದ್ದೀನ ಡ್ರೈವರ್ ಒಬ್ಬ ಮುದುಕನ ಮೇಲೆ ಮೋಟಾರು ಹಾಯಿಸಿ ಪೋಲೀಸರ ವಶದಲ್ಲಿದ್ದಾನೆಂಬ ಸುದ್ದಿ ಪ್ರಕಟವಾಗಿತ್ತು. ವೆಂಕಟರಾಯನಿಗೆ ಈ ಸುದ್ದಿ ತಿಳಿಯುವ ಸಾಧ್ಯತೆಯೂ ಇರಲಿಲ್ಲ. ಈ ಸುಸಂಧಿಯನ್ನು ಸಾಧಿಸಲು ನಾನು ಮುಂದಾದೆ. ವೆಂಕಾಟಿ ಪೂಜೆಗೆ ಕುಳಿತಾಗ ತಾಜೀಮುದ್ದೀನ್ ಬಂದಿದ್ದಾನೆಂದು ಸುಳ್ಳು ಹೇಳಿ, ಅವನ ಕೈಯಿಂದ ಕೀಲಿ ಕೈ ಪಡೆದು, ಎರಡು ಸಾವಿರ ರೂಪಾಯಿ ನಾನೇ ಎತ್ತಿದೆ. ಹೆಂಡಿರು ಮಕ್ಕಳನ್ನು ಉಪವಾಸ ಕೆಡವಿ ಅನುಭವವುಳ್ಳವರ ಕೃತಿಗಳನ್ನು ನೀವು ಅನಾದರದಿಂದ ನೋಡಬಾರದು.

"ಆದರೆ ಆ ಚೆಕ್ಕು ಖೊಟ್ಟಿಯಾಗಿರಬಹುದೆಂದೂ ನನಗೆ ಕಲ್ಪನೆಯಿಲ್ಲ. ನಾನು ಧಾರವಾಡಕ್ಕೆ ಹಿಂತಿರುಗಿ ಬಂದ ಒಂದು ವಾರದಲ್ಲಿ ವೆಂಕಾಟಿಯ ಪತ್ರಬಂತು. ಚೆಕ್ಕು ಖೊಟ್ಟಿ ಇತ್ತೆಂದು, ಅದಕ್ಕಾಗಿ ಪೋಲೀಸರು ಬಂದು ಅವನನ್ನು ಸೆರೆ ಹಿಡಿದಿದ್ದಾರೆಂದು ತಿಳಿಯಿತು. ಪುಣೆಗೆ

ಹೋಗುವಾಗ ವೆಂಕಾಟಿ ಜೇಲಿನೊಳಗೆ ಹೋಗದಂತೆ ಜಾಮೀನು ಕೊಡಿಸಲು ಬೇಕಾಗುವ ಕಾಗದಪತ್ರಗಳ ತಯಾರಿ ಮಾಡಿಕೊಂಡೆ. ಜಾಮೀನಾಗಲು ಸ್ವಾಮಿರಾಯನನ್ನು ಕೇಳಿಕೊಂಡು ಐದು ಸಾವಿರ ರೂಪಾಯಿಗಳಿಗೆ ಸ್ವಾಮಿರಾಯನನ್ನು ಜಾಮೀನು ಮಾಡಿದೆವು. ವೆಂಕಾಟಿಯನ್ನು ಬಿಡಿಸಿಕೊಂಡು ಮೂವರೂ ಧಾರವಾಡಕ್ಕೆ ಬಂದೆವು. ವೆಂಕಾಟಿ ನನ್ನ ಅಕ್ಕನ ಮನೆಯಲ್ಲಿ ಇರತೊಡಗಿದ.

ನನ್ನ ಅಕ್ಕನ ಗಂಡ ಸ್ವಾಮಿರಾಯ ಹೊರಗೆ ವೀರನಂತೆ ತೋರಿದರೂ ವೆಂಕಾಟಿಯ ವಿಕ್ಷಿಪ್ತ ಸ್ವಭಾವಕ್ಕೆ ಒಳಗೊಳಗೆ ಹೆದರಿರಬೇಕು. ಏಕೆಂದರೆ ನನಗೆ ತಿಳಿಸದೆ ಮೊದಲು ವೆಂಕಾಟಿಗೆ, 'ನಿನ್ನ ಬೋಜೆ ಹೊತ್ತಿದ್ದೇನೆ. ನಿನ್ನ ಪಾಲಿನ ಆಸ್ತಿ ಬರೆದುಕೊಡು,' ಎಂದು ಕಾಡಹತ್ತಿದನೆಂದು ತೋರುತ್ತದೆ. ಕೊನೆಗೊಮ್ಮೆ ಒಂದು ಬಕ್ಷೀಸುಪತ್ರವನ್ನು ತಯಾರಿಸಿ ಸ್ವಾಮಿರಾಯ ವೆಂಕಾಟಿಯ ಸಹಿ ತೆಗೆದುಕೊಳ್ಳಲಾಗಿ ವೆಂಕಾಟಿ, 'ನನ್ನ ಅಣ್ಣ ಸಹಿ ಮಾಡಿದರೆ ಮಾತ್ರ ನಾನು ಸಹಿ ಮಾಡುತ್ತೇನೆ,' ಎಂದು ಹಟ ಹಿಡಿದನು. ಆಗ ಸ್ವಾಮಿರಾಯ ನನ್ನನ್ನು ಕರೆಸಿ, 'ನಿನ್ನ ಆಸ್ತಿ ಆಸೆಗಾಗಿ ಅಲ್ಲ; ಇವನ ವಿಚಿತ್ರ ಸ್ವಭಾವಕ್ಕಾಗಿ ಕೇಳುತ್ತಿದ್ದೇನೆ' ಐದು ಸಾವಿರ ಎಂದರೆ ಸಣ್ಣ ಗಂಟು ಅಲ್ಲ ಎಂದು, ಹೇಳಿದ ಅದಕ್ಕೆ ನಾನು, ವೆಂಕಾಟಿ ಇಬ್ಬರೂ ಸಹಿ ಮಾಡಿದೆವು. ವೆಂಕಾಟಿಗೆ ಏಕೆ ಹೊಲಮನೆಯೆಂಬ ವಿಷಯದಲ್ಲಿ ಆಸಕ್ತಿ ಹುಟ್ಟಿತೋ ಏನೋ, "ನನಗೆ ವಂಚನೆ ಮಾಡಿದಿರಿ ನನ್ನ ಆಸ್ತಿ ಕಸಿದುಕೊಂಡಿರಿ," ಎಂದು ದಿನಾ



ಕೂಗಾಡತೊಡಗಿದ. ಇದರಿಂದ ಸಿಟ್ಟಿಗೆದ್ದ ಸ್ವಾಮಿರಾಯ ಒಂದು ದಿನ ಆ ಬಕ್ಷೀಸುಪತ್ರವನ್ನೇ ಪ್ರತಿಯೆಂದು ತಿಳಿದು ಬೀಸಾಡಲಾಗಿ ವೆಂಕಾಟಿ ಅದನ್ನು ತೆಗೆದುಕೊಂಡು ನಮ್ಮಲ್ಲಿ ಬಂದ. ತನ್ನ ಆಸ್ತಿ ಬಿಡಿಸಿಕೊಡಬೇಕೆಂದು ಎದೆ ಎದೆ ಬಡಕೊಳ್ಳತೊಡಗಿದ. ಅವನಲ್ಲಿದ್ದ ಕಾಗದವನ್ನು ನೋಡಲಾಗಿ ಅದು ಮೂಲ ಬಕ್ಷೀಸುಪ್ರತಿಯೆಂದು ನನಗೆ ತಿಳಿದು, 'ನೀನು ಚಿಂತೆ ಏಕೆ ಮಾಡುತ್ತೀ ? ಮೂಲ ಭಕ್ಷೀಸು ಕಾಗದವನ್ನೇ ನಿನ್ನ ಕಡೆಗೆ ಕೊಟ್ಟಿದ್ದಾನೆ. ನೀನು ತಿರುಗಿ ಅವನಿಗೆ ಕೊಡಬೇಡ ಅಂದರೆ ನಿನ್ನ ಆಸ್ತಿ ನಿನಗೇ ಆಗುತ್ತದೆ,' ಎಂದು ನಾನು ಹೇಳಿದೆ.

ಆ ವಿಕ್ಷಿಪ್ತನು ಆಗಿನಮಟ್ಟಿಗೆ

ಸಮಾಧಾನಗೊಂಡಂತೆ ತೋರಿತು. ಊಟ ಮಾಡಿ ಮಲಗಿದ ಸ್ವಲ್ಪ ಹೊತ್ತಿಗೆ ಯಾರೋ ಬಂದು ಬಾಗಿಲು ತಟ್ಟಿದರು. ವೆಂಕಾಟಿ, 'ಅಯ್ಯಯ್ಯೋ ಪೋಲಿಸರು ಬಂದರು. ನನ್ನನ್ನು ಹಿಡಿಯುತ್ತಾರೆ,' ಎನ್ನುತ್ತ ಹಿತ್ತಲು ಕಡೆಗೆ ಓಡಿ ಹೋದ. ನಾನು ಎಲ್ಲಿ ಹೋಗುತ್ತಾನೆ ಎಂಬ ವಿಚಾರದಿಂದ ಮಾನಸಿಕ ಮಾಡಿ ಬಂದವರ ಉಪಚಾರದಲ್ಲಿ ತೊಡಗಿದಾಗ ವೆಂಕಾಟಿ ನಾಪತ್ತೆಯಾದ. ಇಷ್ಟು ವರ್ಷಗಳ ನಂತರ ಅವನ ವಿಷಯ ನನಗೆ ತಿಳಿದದ್ದು ನಿಮ್ಮ ಮಗ ಅಚ್ಯುತನಿಂದಲೇ.

ವೆಂಕಾಟಿ ನಾಪತ್ತೆಯಾದ ನಂತರ ನನ್ನ ಅಕ್ಕನ ಮನೆ ಬರಿದಾಯಿತು. ನನ್ನ ಅಕ್ಕ ವಿಧವೆಯಾದಳು. ಅದರ ಅಪವಾದ ನನ್ನ ಮೇಲೆ ಬಂದಿತು. ಗಂಗಕ್ಕ ನನ್ನನ್ನು ನಾಯಿಯಂತೆ ದೂರವಿಟ್ಟಳು. ನನ್ನ ಮನೆಯೊಳಗಿನಿಂದ ವೆಂಕಾಟಿ ಕಣ್ಮರೆಯಾದದ್ದೇ ಅವಳ ದ್ವೇಷಕ್ಕೆ ಕಾರಣವಾಯಿತು. ಅಕ್ಕನಿಂದ ದೂರವಾಗಿ ನಾನು ಹಳ್ಳಿಗೆ ಹೋಗಿ ಇರತೊಡಗಿದೆ. ಅಲ್ಲಿ ಕಮತ ಮಾಡಿ ಖಂಬೀರನಾಗಿ ಬಾಳಿ ಸ್ಥಿತಿವಂತನಾಗಿ ಧಾರವಾಡಕ್ಕೆ ಮತ್ತೆ ಬಂದು ಮನೆ ಮಾಡಿದೆ. ಎಲ್ಲ ಉಪಾಯಗಳನ್ನೂ ಹೂಡಿ ಚಿ. ಕೃಷ್ಣನಿಗೆ ನನ್ನ ಮಗಳನ್ನು ಕೊಟ್ಟೆ. ಗಂಗಕ್ಕನೊಡನೆ ಹಳೆಯ ದ್ವೇಷವನ್ನು ಮುಗಿಸುವ ಉದ್ದೇಶ ನನ್ನದಾಗಿತ್ತು. ಆದರೆ ಗಂಗಕ್ಕ ತನ್ನ ದ್ವೇಷ ಬಿಡಲಿಲ್ಲ.

"ಇನ್ನು ಎರಡನೆಯದಾಗಿ ವರದಕ್ಷಿಣೆ ಹಣದ ವಿಷಯ. ವರದಕ್ಷಿಣೆ ಹಣ ಕಡಿಮೆ ಬೀಳುವುದೆಂದು ನನಗೆ ಗೊತ್ತಿದ್ದರೂ ಕಿಟ್ಟಿಯ ಹಣ ನಿಮ್ಮ ಹತ್ತಿರ ಇದ್ದದ್ದು ತಿಳಿದುದರಿಂದ ನಿಮ್ಮ ಕೈ ಕಟ್ಟಲೆಂದು ಹಾಗೆಯೇ ಸಾಗಿಸಲು ಯೋಚಿಸಿದೆ. ಆದರೆ ಒಂದು ಮಾಡ ಹೋಗಿ ಇನ್ನೊಂದಾಯಿತು. ನನ್ನ ಪ್ರೀತಿಯ ಮೆಹಬೂಬ ಐದುನೂರು ರೂಪಾಯಿ ತುಂಬುವ ಹವ್ಯಾಸಕ್ಕೆ ನನಗೆ ಅರಿಯದೆ ಬಿದ್ದು ಈ ಲೋಕಕ್ಕೆ ಎರವಾದಳು. ಅವಳ ಮರಣದ ದುಃಖ ನಿಮ್ಮಂಥ ಆತ್ಮ ಸಂಭಾವಿತರಿಗೆ ತಿಳಿಯಲಿಕ್ಕಿಲ್ಲ.

"ನೀವು ಅಚ್ಯುತನು ವೆಂಕಾಟಿಯ ವಿಷಯವಾಗಿ ಬರೆದ ಪತ್ರವನ್ನು ನನಗೆ ಕಳಿಸಿಕೊಟ್ಟಿರಿ. ಅವುಗಳಿಗೆ ನಾನು ಹೆದರಿದೆನೆಂದಲ್ಲ. ಪೂರ್ವದ ಸ್ಮರಣೆಯಾಗಿ ನನ್ನ ಕೃತಿಗಳ ಪರಿಣಾಮುಗಳ ಅಗಮ್ಯತೆಯ ಬಗ್ಗೆ ನನಗೆ ಭೀತಿ ಹುಟ್ಟಿತು. ನಮ್ಮ ಅಕ್ಕನು ನಿಮ್ಮಲ್ಲಿ ಉಪವಾಸ ಬಿದ್ದಾಗ ನಿಮ್ಮ ಮಾತಿಗೆ ಹೆದರಿ ನಾನು ನನ್ನ ಮಗಳನ್ನು ಕಳಿಸಿಕೊಡಲಿಲ್ಲ. ಗಂಗಕ್ಕನ ಬಗ್ಗೆ ನನ್ನಂಥವನಿಗೂಅಂತಃಕರಣವಿದೆ.

"ನನ್ನ ಕೊನೆಯ ಸೋಲು ನನ್ನ ಹೆಂಡತಿಯ ಸಾವು. ನಾನು ನನ್ನ ಹೆಂಡತಿಯನ್ನು ಸಾವಿರ ಬಗೆಯಿಂದ ಪ್ರೀತಿಸಿದ್ದೇನೆ. ಅಷ್ಟು ಅನುಭವ ನಿಮಗೆ ಇರುವುದು ಸಾಧ್ಯವಿಲ್ಲ. ಆದರೆ ಸಾವಿರದ ಒಂದನೆಯ ಬಗೆಯೊಂದೂ ಇರುತ್ತದೆಂಬುದು ನನ್ನಂಥವನಿಗೂ ಗೊತ್ತಾದದ್ದು ಇದೇ ಬಾರಿ. ಆಕೆಗೆ ಅನ್ಯಾಯ ಮಾಡಿದಾಗ, ಆಕೆ ಬೇನೆ ತಿನ್ನುವಾಗ, ಮೂಕತನದಿಂದ ಸಹಿಸುವಾಗ, ಕೊನೆಗೆ ಸತ್ತು ಹೋದಾಗ ಕರುಣೆ, ಮಮತೆ, ಮಾಯೆ ನನ್ನಲ್ಲಿ ಪೂರಪೂರವಾಗಿ ಹರಿಯಿತು.

ಗಂಗವ್ವ - ಗಂಗಾಮಾಯಿ



ಅಪಾರವಾದ ಕನಿಕರ, ಸಮುದ್ರದಂಥ ಕನಿಕರ, ಸೆಲೆಸೆಲೆಯಾಗಿ ಹರಿಯುವ ಕನಿಕರ......! ಸಾಧು ಸಂತರು ದೇವರನ್ನು ಹೀಗೆಯೇ ಪ್ರೀತಿಸಿದರೂ ಏನೋ ಎಂದು ನನ್ನ ಸಂಶಯ. ಎಷ್ಟು ಕಣ್ಣೀರು ಸುರಿಸಿದರೂ ಮುಗಿಯದ ಮಮತೆ. ನನ್ನ ಹೆಂಡತಿಯ ಬಗ್ಗೆ ಇಷ್ಟು ಅಪಾರವಾದ ಉನ್ನತವಾದ ಪ್ರೇಮ ನನ್ನಲ್ಲಿ ಹುಟ್ಟೀತೆಂದು ನಾನು ಎಂದೂ ಎಣಿಸಿರಲಿಲ್ಲ.

"ಇನ್ನು ಕೊನೆಯ ವಿಷಯ. ನಿಮ್ಮ ವಸಂತ ಗಟ್ಟಿಗಾಳಲ್ಲ. ನಿಮಗೆ ಹೆದರಿದ. ನನ್ನ ಮಗಳನ್ನು (ಶಾಂತಾ) ಆವನಿಗೆ ಕೊಟ್ಟು ಹಿಸೆಗಾಗಿ ಕೋರ್ಟು ಹತ್ತಿಸದೆ ಬಿಡುತ್ತಿರಲಿಲ್ಲ. ಇರಲಿ, ನನ್ನ ಹೆಂಡತಿಯನ್ನು ಆಸ್ಪತ್ರೆಗೆ ಹಾಕಿದ ದಿನ ಆವನೇ ಆವಳನ್ನು ಕದ್ದಿದ್ದಾನೆ. ಈ ಸುದ್ದಿ ನಾಲ್ಕು ದಿನದಲ್ಲಿ ಎಲ್ಲ ಕಡೆ ಹಬ್ಬುವುದರಲ್ಲಿ ಸಂದೇಹವಿಲ್ಲ. ನಾನೂ ನನ್ನ ಹೆಂಡತಿಯನ್ನು ಕದ್ದವನೇ. ಆದರೆ ನನ್ನ ಹೆಂಡತಿ ಒಲಿದದ್ದು ರಾಘಪ್ಪನಿಗೆ, ಶಾಂತಾ ಒಲಿದದ್ದು ವಸಂತನಿಗೆ. ನೆಲಮುಗಿಲಿನಷ್ಟು ಅಂತರ. ಬೇಕಾದರೆ ಅವಳೂ ನನ್ನೊಡನೇ ಬರಲಿ.

"ಇಂದು ರಾತ್ರಿ ಎರಡೂವರೆ ಗಂಟೆಗೆ ನಾನು ಕೆಲಸದಿಂದ ನಿವೃತ್ತನಾಗುತ್ತೇನೆ. ಅದಕ್ಕೂ ಮೊದಲು ಎಲ್ಲಿಯಾದರೂ ಸೋತಿದ್ದರೆ ನಿಮಗೆ ಅಲ್ಲ ಎಂದು ಸ್ಪಷ್ಟವಾಗಿ ತಿಳಿಸಿ ಹೇಳುವ ಕೊನೆಯ ಕೆಲಸ ಮಾಡಿರುತ್ತೇನೆ.

ಕೃಪೆಯಿರಲಿ, ನಿಮ್ಮ ಎದುರು ಆಡಿದ ಹಳೆಯ ಹುದ್ದರಿ.

ಇ ರಾಘಪ್ಪ"

ಅಂತೂ ರಾಘಪ್ಪನ ಮೃತ್ಯುಪತ್ರದಲ್ಲಿ 'ತನಗೆ ಗಂಡು ಹುಟ್ಟಿದರೆ ಪ್ರಶ್ನೆಯೇ ಇಲ್ಲ. ಆದರೆ ಹೆಣ್ಣು ಹುಟ್ಟಿದರೆ ತಾನು ದತ್ತಕ ತೆಗೆದುಕೊಳ್ಳಲಿ ಬಿಡಲಿ, ಆಸ್ತಿ ಬಿ. ಕೃಷ್ಣನಿಗೆ ಹೋಗಬೇಕು. ಅವನನ್ನೇ ದತ್ತಕ ತೆಗೆದುಕೊಳ್ಳುವ ವಿಚಾರ ಇದೆ. ಆದರೆ ಹುಚ್ಚು ಹಿಡಿಯುವ ಹೆದರಿಕೆ ಇದ್ದು, ಹಾಗೇನಾದರೂ ಆಗಿ ದತ್ತಕ ತೆಗೆದುಕೊಳ್ಳದೇ ಇದ್ದರೂ, ಆಸ್ತಿ ಅವನಿಗೇ ಹೋಗಬೇಕು ಎಂಬ ತಾತ್ಪರ್ಯವಿತ್ತು. ಇದಲ್ಲದೆ ವೆಂಕಟರಾಯ ತನ್ನ ಹಿಸೆ ಬೇಡಿದರೆ ಕೊಟ್ಟುಬಿಡಬೇಕೆಂದೂ, ಶಾಂತಾಳ ಲಗ್ನ ಮಾಡಿಸಬೇಕೆಂದೂ ಕರಾರು ಇದ್ದವು. ರಾಘಪ್ಪನ ದಿನಕರ್ಮಗಳು ಮುಗಿದು ಉದಕಶಾಂತಿ ಮಾಡಿಸಿದ ಮೇಲೆ ಕಿಟ್ಟಿ ರಾಘಪ್ಪನ ಮನೆಯಲ್ಲಿ ಇರತೊಡಗಿದ. ಉದಕಶಾಂತಿಯ ವೇದಘೋಷದಿಂದ ಕಿಟ್ಟಿಗೆ ಅಪಾರ ಆನಂದ ದೊರಕಿ ಕರ್ಮಠತನದತ್ತ

ಜಿಗಿದ. ಪ್ರತಿದಿನ ಶಾಲಿಗ್ರಾಮಕ್ಕೆ ಅಭಿಷೇಕ, ಸಂಧ್ಯಾವಂದನೆ ಅರ್ಧ ತಾಸು ಆಗಲೇಬೇಕು. ಮುಂಜಾನೆ ಬೇಗ ಏಳುವುದು ರೂಢಿಯಾಯಿತು. ಚಹದಂಗಡಿ, ಸಿನೇಮಾದ ಬದಲು ಕೀರ್ತನ- ಪುರಾಣಗಳಿಗೆ ಹೋಗತೊಡಗಿದ. ಮುಖವು ವೈದಿಕ ತೇಜಸ್ಸಿನಿಂದ ಕಂಗೊಳಿಸತೊಡಗಿತು. ಅಂತೂ ಕಿಟ್ಟಿಯ ಜೀವನ ಒಂದು ಸ್ತಿಮಿತಕ್ಕೆ ಬಂದಿತು.

ರತ್ನಾ ತನ್ನ ತಂದೆ- ತಾಯಿ ಸತ್ತಾಗ ನಾನ ನಿನಗ ತಾಯಿ ಅಲ್ಲ ಏನು? ಎಂದ ತನ್ನ ಅತ್ತೆಯ ಮಾತಿಗೆ ಕರಗಿಹೋದಳು. ಯಾವಾಗಾದರೊಮ್ಮೆ ಅತ್ತೆಗೆ 'ಹಾಲು ಕುಡಿದು ಮಲಗಿರಿ' ಎಂದು ಆಗ್ರಹ ಮಾಡತೊಡಗಿದಳು. ದಿನಾಲು ಕೆನ್ನಗೆ ಅರಿಷಿಣ ಹಚ್ಚಿಕೊಂಡು ತುಳಸಿಗೆ ನೀರು ಹಾಕತೊಡಗಿದಳು

ಪರದೇಶಿಯಾಗಿ ಆಳುವ ರತ್ನಾ- ಶಾಂತಾರು ಗಂಗವ್ವನಿಗೆ ತನ್ನ ಮಕ್ಕಳಾಗಿಯೇ ಕಂಡರು. ರಾಘಪ್ಪನ ಪ್ರಚಂಡ ಅಸ್ತಿತ್ವವು ಇಲ್ಲದೊಡನೆ ಗಂಗವ್ವನ ಮನಸ್ಸು ಶೂನ್ಯಗೊಂಡಿತು. ರಾಘಪ್ಪನ ದೆವ್ವ ಬಡಿದುಕೊಂಡೀತೆಂಬ ಭೀತಿ ಕೆಲದಿನ ಇದ್ದು ನಾಲ್ಕಾರು ದಿನ ಅವಳಿಗೆ ಭಯಂಕರ ಕನಸುಗಳೂ ಬಿದ್ದವು. ಆದರೆ ಗಂಗವ್ವ ಅವನ ಹೆಣ್ಣುಮಕ್ಕಳ ಮೇಲೆ ಅಕ್ಕರೆ ಮಾಡಿ ಭೀತಿಯನ್ನು ಹೊಡೆದೋಡಿಸಿದಳು. ಎಲ್ಲರೂ ಅವಳನ್ನು ಆದರಿಸುತ್ತಿದ್ದುದರಿಂದ ವಿಶ್ರಾಂತಿ ದೊರಕಿ ಬದರೀ ಯಾತ್ರೆಗೆ ಹೋಗಬೇಕೆನ್ನುವವಳು ಪ್ರಪಂಚದ ಸುಖಕ್ಕೆ ಮನಸ್ಸು ತಿರುಗಿಸಿದಳು.

ಸುದೈವದಿಂದ ಗಂಗಾಮಾಯಿ ತಾನಾಗಿಯೇ ನಡೆಯುತ್ತ ಗಂಗವ್ವನ ಕಡೆಗೆ ಬಂದಳು. ಕಾಶಿಗೆ ಹೋದಾಗ ಇವರು ಇಳಿದುಕೊಂಡ ಪಂಡಾ ಒಬ್ಬರು ತಮ್ಮ ಹಳೆಯ ಯಾತ್ರಿಕರಾದ ದೇಸಾಯರ ಮನೆ ಹುಡುಕಿಕೊಂಡು ಬಂದರು. ದೇಸಾಯರು ಗಂಗವ್ವನಿಗೆ ಹೇಳಿಕಳಿಸಿದರು. ಗಂಗವ್ವ ಅವರಿಗೆ ಊಟ ಹಾಕಿ ದಕ್ಷಿಣೆ ಕೊಡಿಸಿ ಒಂದು ಬಾಟಲಿ ಗಂಗಾಜಲವನ್ನು ಎಂಟು ಆಣೆಗೆ ಕೊಂಡು ದೇವರ ಮನೆಯಲ್ಲಿ ಪೂಜೆಗಾಗಿ ಇಡಿಸಿದಳು. ಇಂತು ಗಂಗಾಮಾಯಿ ಗಂಗವ್ವನ ಮನೆ ಸೇರಿದಳು.

ದೇಸಾಯರು ವಸಂತನಿಗೆ ಶಾಂತಾಳನ್ನು ತಂದುಕೊಂಡು ಮನೆ ತುಂಬಿಸಿಕೊಂಡರು. ಅವರ ಹಿರಿಯ ಮಗ ಅಚ್ಯುತ ತನಗಿಂತ ಮೊದಲು ತನ್ನ ತಮ್ಮನ ಲಗ್ನವಾಗಲಿಕ್ಕೆ ಯಾವುದೇ ಆತಂಕ ಮಾಡಲಿಲ್ಲ. ದೇಸಾಯರು ಕಿಟ್ಟಿಯನ್ನೂ ಗಂಗವ್ವನನ್ನೂ ಕೂಡಿಸಿಕೊಂಡು ಅವರ ಲೆಕ್ಕವನ್ನು ಓದಿ ಹೇಳಿ ಲೆಕ್ಕ ಪತ್ರವನ್ನು ಒಪ್ಪಿಸಿದರು. ಕಿಟ್ಟಿ ತನ್ನಿಂದ ತಿಳಿಯದೇ ಆದ ತಪ್ಪುಗಳಿಗೆ ದೇಸಾಯರಲ್ಲಿ ಕ್ಷಮೆ ಕೇಳಿದ.


ಕೋಳಿ ಮೊಟ್ಟೆ

"ಇದು ಬೆರಕೆ ಪ್ರಪಂಚ. ಸಾಯಬೇಕೆಂದು ವಿಷ ಕುಡಿದರೆ ವಿಷದಲ್ಲೂ ಬೆರಕೆ ಅನ್ನೋಕಾಲ. ಬೆರಕೆ ಪ್ರಪಂಚದಿಂದ ದೂರ ಇರೋ ಒಂದು ಆಹಾರ ಅಂದರೆ 'ಕೋಳಿಮೊಟ್ಟೆ.' ಆದರೆ ಅದು ಕೂಡ ನೀರಿನಲ್ಲಿ ತೇಲುತ್ತದೆ ಎಂದರೆ ಕೆಟ್ಟಿದೆಯೆಂದೇ ಅರ್ಥ.

★ ಬಿ.ಎಂ. ನಾಗಭೂಷಣ

ಆರೋಗ್ಯದಂಗಳ

ವಿಷಪ್ರಾಣಿ ವಿಷವೈದ್ಯರು



• ಡಾ. ಡಿ.ಕೆ. ಮಹಾಬಲರಾಜು ಎಂ.ಡಿ.
ಪ್ರಾಧ್ಯಾಪಕ,
ಜೆ.ಜೆ.ಎಂ. ಮೆಡಿಕಲ್ ಕಾಲೇಜು,
ದಾವಣಗೆರೆ

ವಿಪತ್ಕಾರಿ ವಿಷಮಜ್ವರ

ಜ್ವರ ಬಂದಾಕ್ಷಣ ಹೆದರುವ ನಾವು, ಟೈಫಾಯಿಡ್ ಎಂದರೆ ಗಡಗಡ ನಡುಗುತ್ತೇವೆ. ಏಕೆಂದರೆ ಮಾನವನ ಇತಿಹಾಸದ ಪುಟಗಳನ್ನು ತೆರೆದರೆ ಯಾವುದೇ ಯುದ್ಧ ಮತ್ತು ಪ್ರಕೃತಿ ವಿಕೋಪಗಳಿಂದ ಗತಿಸಿದವರ ಸಂಖ್ಯೆಗಿಂತ ಜ್ವರದಿಂದ ಮಡಿದವರ ಸಂಖ್ಯೆಯೇ ಅಧಿಕವಾಗಿರುವುದು ಕಂಡುಬರುತ್ತದೆ. ಹೀಗಾಗಿ ಜ್ವರವೇ ಮಾನವನ ಪ್ರಥಮ ಮತ್ತು ಪ್ರಮುಖ ಶತ್ರು ಎನ್ನಬಹುದಾಗಿದೆ.

ಜ್ವರ ಬರಲು ಸಾವಿರಾರು ಕಾರಣಗಳಿವೆ. ಅವುಗಳಲ್ಲಿ ಬ್ಯಾಕ್ಟೀರಿಯ ಮತ್ತು ವೈರಸ್‌ಗಳ ಸೋಂಕು ಅತಿ ಮುಖ್ಯ ಕಾರಣವಾಗಿರುತ್ತದೆ. ಪ್ರಪಂಚದೆಲ್ಲೆಡೆ ವ್ಯಾಪಿಸಿರುವ ಅಂಟುರೋಗಗಳ ಬಗ್ಗೆ ಜಾಗತಿಕ ಆರೋಗ್ಯ ಸಂಸ್ಥೆ ಜನಸಾಮಾನ್ಯರನ್ನು ಎಚ್ಚರಿಸಿದೆ. ವಿಶ್ವಆರೋಗ್ಯದಿನದಂದು (೧೯೯೭ರ ಏಪ್ರಿಲ್ ೭) "ಪ್ರತ್ಯಕ್ಷವಾಗಿರುವ ಮತ್ತು ಮರುಕಳಿಸುತ್ತಿರುವ ಅಂಟುರೋಗಗಳು-ಜಾಗತಿಕ ಜಾಗೃತಿ ಮತ್ತು ಜಾಗತಿಕ ಹೊಣೆಗಾರಿಕೆ" (Emerging and Re-emerging Communicable Diseases. Global alert and Global Response) ಎಂಬ ಘೋಷಣೆಯನ್ನು ಜಾಗತಿಕ ಆರೋಗ್ಯ ಸಂಸ್ಥೆ ಹೊರಡಿಸಿದೆ.

ಭಾರತದೇಶದಂತಹ ಅಭಿವೃದ್ಧಿಶೀಲ ದೇಶದಲ್ಲಿ ಹರಡುತ್ತಿರುವ ಅಂಟುರೋಗಗಳ ಸಂಖ್ಯೆ ಅಪಾರ. ಕ್ಷಯ, ಕುಷ್ಠ, ಮಲೇರಿಯ, ಕಾಮಾಲೆ, ಕಾಲರಾ, ವಾಂತಿ-ಭೇದಿ, ಟೈಫಾಯಿಡ್, ಮಿದುಳುಜ್ವರ, ಕ್ಯಾಸನೂರು ಕಾಡಿನ ಕಾಯಿಲೆ, ಏಡ್ಸ್, ದಡಾರ, ಧನುರ್ವಾಯು- ಹೀಗೆ ದೇಶದ ಉದ್ದಗಲದಲ್ಲೂ ಸೋಂಕು ರೋಗಗಳ ಮೆರವಣಿಗೆಯೇ ಮೇಳೈಸಿದೆ. ಪ್ಲೇಗ್ ಮರುಕಳಿಸಿತು. ಮಲೇರಿಯ ಮತ್ತೆ ತಲೆ ಎತ್ತಿತು. ಡೆಂಗೇ ಡಂಗೂರ ಸಾರಿತು. ಏಡ್ಸ್ ಮನುಕುಲವನ್ನೇ ಮಾರಣಹೋಮಕ್ಕೆ ತಳ್ಳುವ ಸಂಚು ನಡೆಸಿದೆ. ಹೀಗೆ ದಿನದಿನವೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತ, ಮಾನವನ ಬದುಕನ್ನು ಅಸಹನೀಯವಾಗಿಸುತ್ತ ಅಂಟುರೋಗಗಳು ಅವತಾರವೆತ್ತುತ್ತಿರುವುದು ಯಾರಿಗೇನೂ ಸಂತೋಷತರುವ ಸಂಗತಿಯಲ್ಲ. ಕೇವಲ ಸಾವು-ನೋವುಗಳಿಂದ ತೃಪ್ತಿಗೊಳ್ಳದ ಅಂಟುರೋಗಗಳು ಮಾನವನ ಸರ್ವತೋಮುಖ ಪ್ರಗತಿಯ ದಾರಿಯಲ್ಲಿ ಕಲ್ಲು, ಮುಳ್ಳುಗಳಾಗಿವೆ.

ಇಂದಿನ ವೈದ್ಯವಿಜ್ಞಾನಿಗಳಿಗೆ ಅಂಟುರೋಗಗಳ ಬಗ್ಗೆ ಸಕಲವೂ ತಿಳಿದಿದೆ. ರೋಗಕ್ಕೆ ಕಾರಣವಾದ ರೋಗಾಣುಗಳನ್ನು ಪ್ರತ್ಯಕ್ಷ ಕಂಡಿದ್ದಾರೆ. ರೋಗ ತಗಲುವ ರೀತಿಯನ್ನು ಪತ್ತೆ ಮಾಡಿದ್ದಾರೆ. ಬಹಳಷ್ಟು ರೋಗಗಳಿಗೆ ಚಿಕಿತ್ಸೆಯನ್ನು ಕಂಡುಹಿಡಿದಿದ್ದಾರೆ. ರೋಗವೇ

ಬಾರದಂತಹ ಪ್ರಬಲ ಅಸ್ತ್ರಗಳನ್ನೂ ಆವಿಷ್ಕರಿಸಿದ್ದಾನೆ. ರೋಗದಿಂದ ಪಾರಾಗುವ ವಿಧಿವಿಧಾನಗಳನ್ನೂ ನಿರೂಪಿಸಿದ್ದಾರೆ. ಇಷ್ಟೆಲ್ಲ ಸಮರ್ಥ ವಿಧಾನ ಸಾಧನೆ-ಸಲಕರಣೆಗಳು ಬಳಿಯಲ್ಲೇ ಇದ್ದಾಗ್ಯೂ ಪ್ರಗತಿಶೀಲ ದೇಶಗಳಲ್ಲಿ ಇಂದಿಗೂ ಮಾನವನ ಸಾವಿನ ಕಾರಣಗಳ ಅನುಕ್ರಮಣಿಕೆಯಲ್ಲಿ ಅಂಟುರೋಗಗಳಿಗೆ ಅಗ್ರಸ್ಥಾನ ದೊರೆತಿರುವುದು ಮಾನವನ ಬದುಕಿನ ಬಹುದೊಡ್ಡ [illegible] ಎನ್ನದೆ ವಿಧಿ ಇಲ್ಲ. ಇದಕ್ಕೆ ಕಾರಣಗಳೂ ಹಲವಾರು.

ನಮ್ಮಲ್ಲಿ ಹೆಪ್ಪುಗಟ್ಟಿನಿಂತ ಅಜ್ಞಾನ, ಅಜಾಗರೂಕತೆ, ಮೂಢನಂಬಿಕೆ, ಅಶುಚಿ, ಪರಿಸರನಾಶ, ನೆಲ, ಜಲ, ವಾಯು ಮಾಲಿನ್ಯ, ಬಡತನ, ಜನಸಂಖ್ಯಾಸ್ಫೋಟ, ಹೆಚ್ಚುತ್ತಿರುವ ಕೊಳೆಗೇರಿಗಳು, ಜನಸಂದಣಿಯಾಗುತ್ತಿರುವ ಪಟ್ಟಣಗಳು, ಅಪೌಷ್ಟಿಕತೆ, ಆರೋಗ್ಯದತ್ತ ಅಲಕ್ಷ್ಯ- ಇವೆಲ್ಲವೂ ಅಂಟುರೋಗಗಳನ್ನು ರತ್ನಗಂಬಳಿ ಹಾಸಿ ಆಹ್ವಾನಿಸುತ್ತಿವೆ.

ನಾವೆಲ್ಲ ಅಂಟುರೋಗಗಳ ಬಗ್ಗೆ ಅರಿತು, ಆರೋಗ್ಯನಿಯಮಗಳ ಆಚರಣೆಯನ್ನು, ಅನುಷ್ಠಾನಕ್ಕೆ ತಂದು, ರಕ್ಷಣಾ ತಂತ್ರಗಳ ನೆರಳಡಿ ಮೊರೆಹೋದರೆ, ಅಂಟುರೋಗಗಳ ಜಂಜಡದಿಂದ ಪಾರಾಗುವುದು ಕಷ್ಟವೇನಲ್ಲ. ಒಟ್ಟಿನಲ್ಲಿ ನಮ್ಮಲ್ಲಿ ಆಳವಾಗಿ ಬೇರುಬಿಟ್ಟಿರುವ ಅಜ್ಞಾನ ನಶಿಸಿ, ವಿಜ್ಞಾನವೆಂಬ ಸತ್ಯದ ಸಾಕ್ಷಾತ್ಕಾರವಾಗಬೇಕು. ಆಗ ಮಾತ್ರ ಮಾನವನು ತನ್ನ ತೊಳಲಾಟಗಳಿಗೆ ತೆರೆ ಎಳೆಯಬಹುದು.

ಈ ನಿಟ್ಟಿನಲ್ಲಿ ಅಂಟುರೋಗಗಳ ಬಗ್ಗೆ ನಮ್ಮಲ್ಲಿ ತಿಳುವಳಿಕೆ ಮೂಡುವ ಅಗತ್ಯ ಅಪಾರವಾಗಿದೆ. ನಮ್ಮನ್ನು ಸಾಮಾನ್ಯವಾಗಿ ಕಾಡುತ್ತಿರುವ ಸಾಂಕ್ರಾಮಿಕರೋಗಗಳಲ್ಲಿ ಒಂದಾದ ಟೈಫಾಯಿಡ್ ಬಗ್ಗೆ ಈಗ ತಿಳಿದುಕೊಳ್ಳೋಣ.

ಪ್ರಪಂಚದ ಎಲ್ಲ ದೇಶಗಳಲ್ಲಿಯೂ ಟೈಫಾಯಿಡ್ ಕಾಣುತ್ತಿದೆ. ಸ್ವಚ್ಛತೆಗೆ, ಸುರಕ್ಷಿತತೆಗೆ ಮತ್ತು ಪರಿಶುದ್ಧ ನೀರಿವ ಪೂರೈಕೆಗೆ ಆದ್ಯತೆ ನೀಡಿರುವ ದೇಶಗಳಲ್ಲಿ ಟೈಫಾಯಿಡ್ ಪ್ರಮಾಣ ಪಾತಾಳ ಕಚ್ಚಿದೆ. ಉದಾಹರಣೆಗೆ, ಇಂಗ್ಲಂಡಿನಲ್ಲಿ ಪ್ರತಿ ವರ್ಷ ಹತ್ತುಲಕ್ಷ ಜನರಲ್ಲಿ ಒಬ್ಬರಿಗೆ ಮಾತ್ರ ಟೈಫಾಯಿಡ್ ತಗಲುತ್ತಿದ್ದರೆ, ಆಫ್ರಿಕ, ಏಶಿಯ, ಲ್ಯಾಟಿನ್ ಅಮೆರಿಕಗಳಲ್ಲಿ ಪ್ರತಿನೂರು ಜನರಲ್ಲಿ ಇಬ್ಬರಾದರೂ ಟೈಫಾಯಿಡ್ ಪೀಡಿತರಾಗುತ್ತಿದ್ದಾರೆ. ಇತ್ತೀಚಿನ ವರದಿಗಳಂತೆ ಭಾರತದಲ್ಲಿ ಪ್ರತಿವರ್ಷ ೪-೫ ಲಕ್ಷ ಜನರು ಟೈಫಾಯಿಡ್ ಪೀಡಿತರಾಗುತ್ತಿದ್ದು ಅವರಲ್ಲಿ ೨-೩ ಸಾವಿರ ಜನರು ಸಾವಿಗೀಡಾಗುತ್ತಿದ್ದಾರೆ.

ಭಾರತದ ಪ್ರತಿಶಃ, ನಗರ ಪಟ್ಟಣಗಳಲ್ಲಿ ಟೈಫಾಯಿಡ್ ಸಾಂದರ್ಭಿಕವಾಗಿ ಕಾಣಿಸಿಕೊಳ್ಳುತ್ತಲೇ ಇದೆ. ಆಗಾಗ್ಗೆ ಸಾಂಕ್ರಾಮಿಕ ಪಿಡುಗಾಗಿ ಸ್ಫೋಟಗೊಳ್ಳುತ್ತ ಇದೆ. ಎಲ್ಲ ವಯಸ್ಸಿನವರನ್ನೂ ಈ ರೋಗ ಪೀಡಿಸಬಲ್ಲದಾದರೂ, ಮಕ್ಕಳಲ್ಲಿ (೫-೧೯ ವರ್ಷ) ಮತ್ತು ನಡುವಯಸ್ಸಿನವರಲ್ಲಿ (೪೫ರ ಒಳಗಿನ) ಈ ಕಾಯಿಲೆ ಕಾಣಿಸುವುದು ಹೆಚ್ಚು. ಗಂಡಸು-ಹೆಂಗಸು ಎಂಬ ಭೇದ ತೋರಿಸದ ಟೈಫಾಯಿಡ್ ಇಬ್ಬರಿಗೂ ತಗಲುವುದಾದರೂ ರೋಗ ಅನುಭವಿಸುವವರಲ್ಲಿ ಗಂಡಸರ ಸಂಖ್ಯೆಯೇ ಅಧಿಕ.

ಟೈಫಾಯಿಡ್‌ಗೆ ಕರುಳಿನ ಜ್ವರ, ವಾಯಿದೆ ಜ್ವರ, ಮುದ್ದತಿನ ಜ್ವರ, ಸನ್ನಿಪಾತ ಜ್ವರ, ಕರುಳು ಜ್ವರ, ವಿಷಮಶೀತಜ್ವರ ಮುಂತಾದ ಹೆಸರುಗಳಿವೆ.

ರೋಗದ ಅಸ್ತಿತ್ವದಲ್ಲಿ ಪರಿಸರದ ಪಾತ್ರವೂ ಪ್ರಮುಖವಾಗಿದೆ. ಟೈಫಾಯಿಡ್ ಸಾಮಾನ್ಯವಾಗಿ ಬೇಸಿಗೆಯ ಅಂತ್ಯ ಮತ್ತು ಮನ್ಸೂನ್ ಆರಂಭದಲ್ಲಿ (ಜುಲೈ-ಸೆಪ್ಟೆಂಬರ್) ತಲೆದೋರುವುದು ಹೆಚ್ಚು. ಏಕೆಂದರೆ ಈ ಅವಧಿಯಲ್ಲಿ ರೋಗ ಹರಡುವ ನೊಣಗಳ ಸಂಖ್ಯೆ ವಿಪುಲವಾಗಿರುತ್ತದೆ. ಜೊತೆಗೆ ಕುಡಿಯುವ ನೀರು ಮಲಿನಗೊಳ್ಳುವ ಸಾಧ್ಯತೆ ಸಾಕಷ್ಟಿರುತ್ತದೆ. ಭೂಕಂಪ, ನೆರೆಹಾವಳಿಯಂತಹ ಪ್ರಕೃತಿ ವಿಕೋಪ ಮತ್ತು ಜಾತ್ರೆ, ಮೇಳ, ಉತ್ಸವಗಳ ಸಂದರ್ಭಗಳಲ್ಲಿಯೂ ಟೈಫಾಯಿಡ್ ಸ್ಫೋಟಗೊಳ್ಳುವುದುಂಟು.

ಏಕಾಣುಜೀವಿಯ ವಿಕಟಾಟ್ಟಹಾಸ

ಟೈಫಾಯಿಡ್ ಕಾಯಿಲೆಗೆ ಮೂಲಕಾರಣ ಒಂದು ಬ್ಯಾಕ್ಟೀರಿಯ. ಎಬೆರ್ತ್ ಎಂಬುವವರು ೧೮೮೦ರಲ್ಲಿ ಸಾವಿನಂಚಿನಲ್ಲಿರುವ ರೋಗಿಯ ದೇಹದಲ್ಲಿದ್ದ ರೋಗಾಣುವನ್ನು ಪ್ರತ್ಯೇಕಿಸಿದರಾದರೂ ಗಾಫ್ಕಿ ೧೮೮೪ರಲ್ಲಿ ಮತ್ತು ಸಾಲ್ಮನ್ ಮತ್ತು ಸ್ಮಿತ್ ೧೮೮೫ರಲ್ಲಿ ರೋಗಾಣುವಿನ ವಿಶದವಾದ ವಿವರಣೆಗಳನ್ನು ನೀಡಿದ್ದಾರೆ. ಹೀಗಾಗಿ ಟೈಫಾಯಿಡ್‌ಕಾರಕ ಬ್ಯಾಕ್ಟೀರಿಯಕ್ಕೆ ಸಾಲ್ಮೋನೆಲ್ಲಾ ಟೈಫಿ (*Solmonella typhi*) ಎಂದು ನಾಮಕರಣ ಮಾಡಲಾಗಿದೆ.

ಟೈಫಾಯಿಡ್ ರೋಗಾಣುಗಳನ್ನು ಕೇವಲ ಸೂಕ್ಷ್ಮದರ್ಶಕದಲ್ಲಿ ಮಾತ್ರ ವೀಕ್ಷಿಸಬಹುದು. ಇವುಗಳ ಉದ್ದ ೧.೩ ಮೈಕ್ರಾನ್, ದಪ್ಪ ೦.೬ ಮೈಕ್ರಾನ್ ಇದೆ. (೧ ಮೈಕ್ರಾನ್ = ಒಂದು ಮಿಲಿಮೀಟರಿನ ಸಾವಿರದೊಂದನೇ ಭಾಗ). ರೋಗಾಣುಗಳ ದೇಹ ನುಸಿಗೂದಲುಗಳಿಂದ ಆವೃತವಾಗಿದೆ. ರೋಗಾಣುವಿನ ಕೂದಲಿನಲ್ಲಿ- ಎಚ್ (*H*), ದೇಹದ ಮೈಲ್ಮೈಯಲ್ಲಿ ವಿ-೧(*V*೧) ಮತ್ತು ದೇಹದೊಳಗೆ-ಒ (೦) ಪ್ರತಿ

ವಿಷಜನಕ ವಸ್ತು (ಆಂಟಿಜನ್) ಇವೆ. ರೋಗಾಣುಗಳು ಸ್ವಯಂ ಚಲಿಸಬಲ್ಲವು.

ತಂಪುವಾತಾವರಣದಲ್ಲಿ ರೋಗಾಣುಗಳು ಸಮೃದ್ಧವಾಗಿ ವೃದ್ಧಿಗೊಳ್ಳಬಲ್ಲವು. ಹೀಗಾಗಿ ಐಸ್, ಐಸ್‌ಕ್ರೀಂ, ಹಾಲು, ಬೆಣ್ಣೆ, ಗಿಣ್ಣು, ಮಾಂಸ, ಮೀನು, ಸಂಗ್ರಹಿಸಿಟ್ಟ ಆಹಾರ ಪಾನೀಯ ಮತ್ತು ನೀರು ಟೈಫಾಯಿಡ್ ರೋಗಾಣುಗಳಿಂದ ಯುಕ್ತವಾಗಿರುವ ಸಾಧ್ಯತೆ ಹೆಚ್ಚು. ಹಾಲಿನಲ್ಲಿ ರೋಗಾಣುಗಳ ಆಗರವೇ ಇದ್ದರೂ ಹಾಲಿನ ಬಣ್ಣ, ವಾಸನೆ, ಗುಣದಲ್ಲಿ ವ್ಯತ್ಯಯ ಕಾಣುವುದಿಲ್ಲ.

ಪ್ರಖರ ಬಿಸಿಲಿನ ಬೇಗೆಯಲ್ಲಿ ರೋಗಾಣುಗಳು ಬದುಕಲಾರವು. ೬೦ ಡಿಗ್ರಿ ಸೆಂಟಿಗ್ರೇಡ್ ಉಷ್ಣತೆಯಲ್ಲಿ ರೋಗಾಣು ನಿರ್ನಾಮವಾಗುತ್ತದೆ. ಹೀಗಾಗಿ ಕಾಯಿಸಿದ ನೀರು ರೋಗಾಣುರಹಿತವಾಗಿರುತ್ತದೆ. ಉಪ್ಪಿನ ನೀರು, ಮರ್ಕ್ಯುರಿಕ್ ಕ್ಲೋರೈಡ್, ಫಿನೈಲ್‌ಗಳು ರೋಗಾಣುವನ್ನು ಧ್ವಂಸಗೊಳಿಸುತ್ತವೆ. ಬಿಸಿ ಆಹಾರ, ಪಾಶ್ಚರೀಕರಿಸಿದ ಹಾಲು ಹಾಗೂ ಕ್ಲೋರಿನ್ ಬೆರೆತ ನೀರು ರೋಗಾಣುಗಳಿಂದ ಮುಕ್ತವಾಗಿರುತ್ತದೆ. ನೆಲದಲ್ಲಿ ಬಿದ್ದ ರೋಗಾಣು ಎರಡು ತಿಂಗಳವರೆಗೆ, ಐಸ್‌ಕ್ರೀಂನಲ್ಲಿ ಸೇರಿದ ರೋಗಾಣು ಒಂದು ತಿಂಗಳವರೆಗೆ, ನೀರು ಹಾಲಿನಲ್ಲಿ ಬೆರೆತ ರೋಗಾಣು ಒಂದು ವಾರಗಳವರೆಗೆ ಜೀವಂತವಾಗಿರಬಲ್ಲವು.

ನೀರ ಮೇಲೆ ತೇಲಿ ಗಾಳಿಯಲ್ಲಿ ಹಾರಿ.....

ಟೈಫಾಯಿಡ್ ರೋಗಾಣುವಿನ ಮೂಲ ಆಗರವೇ ಮಾನವ. ಟೈಫಾಯಿಡ್ ರೋಗದಿಂದ ಬಳಲುತ್ತಿರುವರೋಗಿ ತನ್ನ ಮಲಮೂತ್ರದ ಮೂಲಕ ಅಸಂಖ್ಯಾತ ರೋಗಾಣುಗಳನ್ನು ವಿಸರ್ಜಿಸುತ್ತಾನೆ. ರೋಗಿಯ ಪ್ರತಿ ಗ್ರಾಂ ಮಲದಲ್ಲಿ ಅನೇಕ ಸಾವಿರ ರೋಗಾಣುಗಳಿರುತ್ತವೆ. ನಮ್ಮ ದೇಶದಲ್ಲಿ ಬಯಲಿನಲ್ಲಿ ಮಲವಿಸರ್ಜಿಸುವ ರೂಢಿ ಇದೆ. ಇದೇ ನೆಲದಲ್ಲಿ ಸೊಪ್ಪು ತರಕಾರಿಗಳನ್ನು ಬೆಳೆಯುತ್ತೇವೆ. ರೋಗಾಣುಗಳಿಂದ ಕಲುಷಿತಗೊಂಡ ಭೂಮಿಯ ಮೇಲೆ ಹರಿದುಹೋಗುವ ನೀರು ರೋಗಾಣುಗಳನ್ನು ಹೊಳೆಗೋ, ಕೆರೆಗೋ ಕೊಂಡೊಯ್ಯುತ್ತದೆ. ನೊಣಗಳೂ ರೋಗಾಣುಗಳನ್ನು ಹೊಲಸಿನಿಂದ ಆಹಾರಕ್ಕೆ ಹಸ್ತಾಂತರಿಸುತ್ತವೆ. ಗಾಳಿಗೆ ಹಾರಿ ಬಂದ ಧೂಳಿನಲ್ಲಿದ್ದ ರೋಗಾಣುಗಳು ತೆರೆದಿಟ್ಟ ಹಣ್ಣು, ಆಹಾರ, ತಿಂಡಿಗಳ ಮೇಲೆ ನೆಲೆಸುತ್ತವೆ. ರೋಗಿಯ ಸಂಪರ್ಕದಲ್ಲಿರುವವರ ಬೆರಳುಗಳೂ ರೋಗಾಣುಯುಕ್ತವಾಗುವುದಿದೆ. ಹೀಗೆ ರೋಗಾಣುಗಳು ಕಲುಷಿತಗೊಂಡ ನೀರು, ಆಹಾರ, ಬೆರಳುಗಳ ಮೂಲಕ ಆರೋಗ್ಯವಂತನ ಅನ್ನನಾಳವನ್ನು ಸೇರುತ್ತವೆ.

ಸಾಮಾನ್ಯವಾಗಿ ಕಲುಷಿತಗೊಂಡ ನೀರು, ಹಾಲು, ಹಸಿಸೊಪ್ಪು, ತರಕಾರಿ, ಐಸ್, ಐಸ್‌ಕ್ರೀಂ, ಸಂಗ್ರಹಿಸಿಟ್ಟ ಆಹಾರ, ಬೀದಿಯಲ್ಲಿ ತೆರೆದಿಟ್ಟು ಮಾರುವ ಹಣ್ಣು, ಸಿಹಿತಿಂಡಿಗಳ ಸೇವನೆಯಿಂದ ಟೈಫಾಯಿಡ್ ರೋಗ ಬರುತ್ತದೆ.

ರೋಗವಾಹಕರಿವರು

ಟೈಫಾಯಿಡ್ ವಿಷಯದಲ್ಲಿ ಒಂದು ಸಂಗತಿ ಕೌತುಕಮಯವಾಗಿದೆ. ಟೈಫಾಯಿಡ್ ಅನುಭವಿಸಿರುವ ರೋಗಿಗಳಲ್ಲಿ ಶೇಕಡಾ ೩ ರಷ್ಟು ಜನರು ಕಾಯಿಲೆಯಿಂದ ಗುಣಮುಖರಾದ ಅನಂತರವೂ ಅನೇಕ ವರ್ಷಗಳವರೆಗೆ ತಮ್ಮ ಮಲಮೂತ್ರದಲ್ಲಿ ರೋಗಾಣುಗಳನ್ನು ವಿಸರ್ಜಿಸುತ್ತಿರುತ್ತಾರೆ. ಆದರೆ ತಾವು ಮಾತ್ರ ಆಷ್ಟಟ ಆರೋಗ್ಯದಿಂದಿರುತ್ತಾರೆ. ಇಂತಹವರನ್ನು ರೋಗವಾಹಕರು (*Carrier*) ಎನ್ನುತ್ತಾರೆ. ಸಾಮಾನ್ಯವಾಗಿ ಹೆಂಗಸರು ಹೆಚ್ಚಾಗಿ ರೋಗವಾಹಕರಾಗಿರುತ್ತಾರೆ.

ಟೈಫಾಯಿಡ್ ಇತಿಹಾಸದಲ್ಲಿ ಮೇರಿಯ ಹೆಸರು ಅವಿಸ್ಮರಣೀಯ. ಮೇರಿ ಮೆಲನ್ ಎಂಬುವವಳು ನ್ಯೂಯಾರ್ಕ್ ನಗರದ ಅಂಗಡಿಯೊಂದರಲ್ಲಿ ಐಸ್ಕ್ರೀಮ್ ತಯಾರಿಕಾ ಹುದ್ದೆಯಲ್ಲಿದ್ದಳು. ಆ ಅಂಗಡಿಯಲ್ಲಿ ಐಸ್ಕ್ರೀಮ್ ತಿಂದವರಲ್ಲಿ ಅನೇಕರು ಟೈಫಾಯಿಡ್ ತೊಂದರೆಗೊಳಗಾಗುತ್ತಿದ್ದರು. ಹೀಗಾಗಿ ಅವಳನ್ನು ಕೆಲಸದಿಂದ ತೆಗೆದುಹಾಕಲಾಯಿತು. ಅವಳು ಅಡುಗೆ ತಯಾರಕಳಾಗಿ ಮತ್ತೊಂದು ಅಂಗಡಿಯನ್ನು ಸೇರಿದಳು. ಅಲ್ಲಿಯೂ ಇದೇ ಗತಿಯಾಯಿತು. ಹೀಗೆ ೧೯೦೧ ರಿಂದ ೧೯೧೪ರ ಅವಧಿಯಲ್ಲಿ ಮೇರಿ ಎಂಟು ಜಾಗಗಳಲ್ಲಿ ಕೆಲಸ ಮಾಡಿ ಸುಮಾರು ೧೩೦೦ ಜನರಿಗೆ ಟೈಫಾಯಿಡ್ ಕಾಯಿಲೆ ಅಂಟಿಸಿದ್ದಾಳೆ. ವೈದ್ಯಕೀಯ ಪತ್ತೆದಾರಿ ಪರೀಕ್ಷೆಯಿಂದಾಗಿ ಅವಳು ಟೈಫಾಯಿಡ್ ವಾಹಕಿ ಎಂದು ಪತ್ತೆಯಾಯಿತು. ಅನಂತರ ಅವಳಿಗೆ ಯಾರೂ ಕೆಲಸ ಕೊಡಲಿಲ್ಲ.

ರೋಗವಾಹಕರು ಅಡುಗೆ ಮಾಡುವ, ಬಡಿಸುವ ಕೆಲಸದಲ್ಲಿ ನಿರತರಾಗಿದ್ದಲ್ಲಿ ಅವರ ಹಸ್ತದಲ್ಲಿನ ರೋಗಾಣುಗಳು ಅನೇಕರಿಗೆ ಹಸ್ತಾಂತರವಾಗುವ ಭೀತಿ ಇದೆ.

ದೈಹಿಕ ಬದಲಾವಣೆಗಳು

ಟೈಫಾಯಿಡ್ ರೋಗಾಣುಗಳು ಅನ್ನನಾಳದ ಮೂಲಕ ದೇಹವನ್ನು ಪ್ರವೇಶಿಸುತ್ತವೆ. ಕರುಳು, ಯಕೃತ್, ಪ್ಲೀಹ, ಹಾಲ್ರಸ ನಾಳ ಹೀಗೆ ದೇಹದ ವಿವಿಧ ಭಾಗಗಳಲ್ಲಿ ಅಡಗಿಕೊಂಡು ಬೆಳೆಯುತ್ತಿರುತ್ತವೆ. ಅವುಗಳ ಸಂಖ್ಯೆ ಅಧಿಕವಾದಾಗ ರೋಗಲಕ್ಷಣಗಳು ಪ್ರಾರಂಭವಾಗುತ್ತವೆ. ರೋಗಾಣು ದೇಹ ಸೇರಿದಂದಿನಿಂದ ಹಿಡಿದು ರೋಗಲಕ್ಷಣಗಳು ಪ್ರಕಟವಾಗಲು ಒಂದೆರಡು ವಾರಗಳಷ್ಟು ಸಮಯ ಬೇಕಾಗುತ್ತದೆ. ರೋಗಾಣುಗಳು ದೇಹದ

ಎಲ್ಲಾ ಭಾಗಗಳಿಗೆ ಪಸರಿಸುವವಾದರೂ ಕರುಳಿನಲ್ಲಿ ನೆಲೆಗೊಳ್ಳುವುದು ಹೆಚ್ಚು. ಇವು ಕರುಳಿನ ಸುತ್ತಲಿನ ಹಾಲ್ರಸ ಗ್ರಂಥಿಗಳಲ್ಲಿಯೂ ಕೇಂದ್ರೀಕೃತವಾಗಿ ವೃದ್ಧಿಗೊಳ್ಳುತ್ತವೆ.

ಕರುಳಿನಲ್ಲಿ ಕಲೆತ ರೋಗಾಣುಗಳು ಕರುಳಿನ ಲೋಳ್ಪರೆಯನ್ನು ನಾಶಗೊಳಿಸಿ, ಕರುಳಿನಲ್ಲಿ ಹುಣ್ಣು ಉಂಟುಮಾಡುತ್ತವೆ. ಇದೇ ಕಾರಣದಿಂದಾಗಿ ಜ್ವರ ಬರುವುದರಿಂದ ಟೈಫಾಯಿಡ್ ಕಾಯಿಲೆಗೆ ಕರುಳು ಜ್ವರ (*Enteric Fever*) ಎಂದೂ ಕರೆಯುತ್ತಾರೆ. ಕೆಲವೊಮ್ಮೆ ಕರುಳಿನ ಹುಣ್ಣುಗಳು ಆಳವಾಗಿ, ಕರುಳಿಗೇ ತೂತು ಬೀಳುವ ಅಪಾಯವಿರುತ್ತದೆ. ರೋಗಾಣುಗಳಿಂದ ಹೊರಹೊಮ್ಮುವ ವಿಷದಿಂದಾಗಿ ಮೂತ್ರಜನಕಾಂಗ, ಮಿದುಳು ಯಕೃತ್ ಮತ್ತಿತರ ಅಂಗಗಳ ಮೇಲೆ ವಿಷಮ ಪರಿಣಾಮ ಉಂಟಾಗುತ್ತದೆ. ಟೈಫಾಯಿಡ್ ಉಂಟಾಗಲು ಕೊನೇಪಕ್ಷ ಒಂದು ಕೋಟಿ ರೋಗಾಣುಗಳು ದೇಹ ಸೇರುವ ಅಗತ್ಯ ಇದೆ ಎಂದು ವಿಜ್ಞಾನಿಗಳು ಲೆಕ್ಕ ಹಾಕಿದ್ದಾರೆ.

ರೋಗಾಣುಗಳು ಹೆಚ್ಚಿನ ಸಂಖ್ಯೆಯಲ್ಲಿ ವೃದ್ಧಿಸುತ್ತಿರುವುದರಿಂದ ಕರುಳಿನ ಸುತ್ತಮುತ್ತಲಿನ ಹಾಲ್ರಸ ಗ್ರಂಥಿಗಳೂ ಊದಿಕೊಳ್ಳುತ್ತವೆ. ಯಕೃತ್ತು (*Liver*) ಮತ್ತು ಪ್ಲೀಹ (*Spleen*) ದೊಡ್ಡದಾಗುತ್ತವೆ. ಇದನ್ನೇ ಜ್ವರದ ಗಡ್ಡೆ ಎನ್ನುತ್ತಾರೆ. ಪಿತ್ತರಸದ ಮೂಲಕ ಅಸಂಖ್ಯಾತ ರೋಗಾಣುಗಳು ಕರುಳನ್ನು ಸೇರುತ್ತವೆ. ಕರುಳಿನಲ್ಲಿ ವಿಪುಲವಾದ ರೋಗಾಣುಗಳು ಮಲದೊಡನೆ ವಿಸರ್ಜನೆಗೊಳ್ಳುತ್ತವೆ. ಮೂತ್ರದ ಮೂಲಕವೂ ರೋಗಾಣುಗಳು ಹೊರಹೊಮ್ಮುತ್ತವೆ.

ರೋಗಲಕ್ಷಣಗಳು

ರೋಗದ ಆರಂಭಿಕ ಸ್ಥಿತಿಯಲ್ಲಿ ರೋಗಿಗೆ ದೇಹಾಲಸ್ಯ, ತಲೆನೋವು, ಸ್ವಲ್ಪ ಜ್ವರ ಇರುತ್ತದೆ. ಹೀಗಿದ್ದರೂ ರೋಗಿ ಚಟುವಟಿಕೆಯಿಂದಲೇ ಇರುತ್ತಾನೆ. ತನ್ನ ನಿತ್ಯ ಕೆಲಸ ಕಾರ್ಯಗಳಲ್ಲಿ ನಿರತನಾಗುತ್ತಾನೆ. ನಾಲ್ಕಾರು ದಿನಗಳ ಅನಂತರ ಜ್ವರ ಸತತವಾಗಿ ಬರಲಾರಂಭಿಸುತ್ತದೆ. ರೋಗಿ ನಿತ್ರಾಣನಾಗುತ್ತಾನೆ. ಆಗ ಅವನಲ್ಲಿ ಟೈಫಾಯಿಡ್ ರೋಗದ ವಿಶಿಷ್ಟ ಲಕ್ಷಣಗಳು ಎದ್ದುಕಾಣುತ್ತವೆ. ಅವುಗಳೆಂದರೆ;

ಜ್ವರ: ದಿನವಿಡೀ ಜ್ವರ ಇರುತ್ತದೆಯಾದರೂ ಹಗಲು ಹೊತ್ತಿನಲ್ಲಿ ಜ್ವರ ಸ್ವಲ್ಪ ಇಳಿಯುತ್ತದೆ. ಸಂಜೆ ಮತ್ತೆ ಏರುತ್ತದೆ. ಜ್ವರದ ತಾಪ ೧೦೦ ರಿಂದ ೧೦೩ರ ನಡುವೆ ಏರಿಳಿಯುತ್ತಿರುತ್ತದೆ. ಇಂತಹ ಜ್ವರಕ್ಕೆ ಏಣಿಯ ಮೆಟ್ಟಿಲಿನಂತಹ (*Step Ladder.*) ಜ್ವರ ಎನ್ನುತ್ತಾರೆ.

ನೋವು: ಜ್ವರದೊಂದಿಗೆ ತಲೆನೋವು, ಮೈಕೈ ನೋವು, ಕೀಲುನೋವು, ಆಯಾಸ, ನಿಃಶಕ್ತಿ, ನಿರುತ್ಸಾಹ, ನಿರಾಸಕ್ತಿ, ಕೆಮ್ಮು, ಹೊಟ್ಟೆನೋವು, ಊಟಬೇಕೆನಿಸದಿರುವುದು, ಮಲಬದ್ಧತೆ, ನಿದ್ರೆಯ ಗುಂಗು (*Drowsiness*), ಮತಿಭ್ರಮೆ (*Delirium*) ಮುಂತಾದ ತೊಂದರೆಗಳೂ ಇರುತ್ತವೆ.

ನಾಡಿಮಿಡಿತ: ಜ್ವರ ಬಂದಾಗ ಸಾಮಾನ್ಯವಾಗಿ ನಾಡಿಮಿಡಿತ ಹೆಚ್ಚುತ್ತದೆ. ಆದರೆ ಟೈಫಾಯಿಡ್ ಜ್ವರದಲ್ಲಿ ನಾಡಿಮಿಡಿತ ಜ್ವರದ ತಾಪಕ್ಕೆ ಅನುಗುಣವಾಗಿ ಹೆಚ್ಚುವುದಿಲ್ಲ.

ನಾಲಿಗೆ: ನಾಲಿಗೆಯ ಮಧ್ಯಭಾಗದಲ್ಲಿ ಬಿಳಿಯಾದ ಪೊರೆ ಮೆತ್ತಿಕೊಂಡಿರುತ್ತದೆ. ನಾಲಿಗೆಯ ಅಂಚು ಮಾತ್ರ ಕೆಂಪಾಗಿರುತ್ತದೆ. ನಾಲಿಗೆಯನ್ನು ಪರೀಕ್ಷಿಸುವವರಿಗೆ ನಾಲಿಗೆಯ 'ವಿ' ಆಕಾರದ ಅಂಚು ಎದ್ದು ಕಾಣುತ್ತದೆ.

ಚಳಿ: ಜ್ವರ ಏರಿರುವ ಸಮಯದಲ್ಲಿ ರೋಗಿಗೆ ಚಳಿಯ ಅನುಭವವಾಗುತ್ತದೆ. ಕೆಲವರಲ್ಲಿ ಚಳಿಯೇ ರೋಗದ ಪ್ರಥಮ ಲಕ್ಷಣವಾಗಿ ಪ್ರಕಟವಾಗುತ್ತದೆ. ಹೀಗಾಗಿ ಈ ಕಾಯಿಲೆಗೆ 'ವಿಷಮ ಶೀತ ಜ್ವರ' ಎಂದು ಕರೆಯುತ್ತಾರೆ.

ಹೊಟ್ಟೆ: ರೋಗಿಗೆ ಹೊಟ್ಟೆ ನೋವು, ಹೊಟ್ಟೆಯ ಅಸುಖ, ಸಂಕಟ, (*Discomfort*) ವಾಕರಿಕೆ, ಮಲಬದ್ಧತೆ ಇರುತ್ತದೆ. ಯಕೃತ್ತು ಮತ್ತು ಪ್ಲೀಹ ದೊಡ್ಡದಾಗಿರುವುದನ್ನು ಹೊಟ್ಟೆಯ ಪರೀಕ್ಷೆಯಿಂದ ತಿಳಿದುಕೊಳ್ಳಬಹುದು.

ಗುಲಾಬಿ ಚುಕ್ಕೆಗಳು: ರೋಗಿಯ ಮೈಮೇಲೆ- ಮುಖ್ಯವಾಗಿ ಹೊಟ್ಟೆಯ ಮೇಲೆ ಎರಡರಿಂದ ನಾಲ್ಕು ಮಿಲಿಮೀಟರ್ ವ್ಯಾಸದ ಚಿಕ್ಕಚಿಕ್ಕ ಗುಲಾಬಿ ಬಣ್ಣದ ಚುಕ್ಕೆಗಳು (*Rose spots*) ಕಾಣುತ್ತವೆ. ಬಿಳಿ ಬಣ್ಣದವರಲ್ಲಿ ಈ ಚುಕ್ಕೆಗಳು ಎದ್ದು ಕಾಣುತ್ತವೆ. ಈ ಚುಕ್ಕೆಗಳನ್ನು ಅದುಮಿದಾಗ ಅವು ಬಿಳುಚಿಕೊಳ್ಳುತ್ತವೆ.

ಕೆಮ್ಮು: ಕೆಲ ಟೈಫಾಯಿಡ್ ರೋಗಿಗಳಲ್ಲಿ ಶೀತ, ನೆಗಡಿ, ಕೆಮ್ಮು, ಏರಿದ ಉಸಿರಾಟ, ಗಂಟಲನೋವು, ಎದೆನೋವು ಮುಂತಾದ ತೊಂದರೆಗಳೂ ಇರುತ್ತವೆ.

ಭೇದಿ: ಸೂಕ್ತ ಚಿಕಿತ್ಸೆ ಪಡೆಯದಿದ್ದರೆ ಎರಡನೇ ವಾರದಷ್ಟರಲ್ಲಿ ರೋಗಿಯ ಸ್ಥಿತಿ ಚಿಂತಾಜನಕವಾಗುತ್ತದೆ. ಜ್ವರ ೧೦೪ ಡಿಗ್ರಿಗಳಷ್ಟಾಗುತ್ತದೆ. ಚಳಿ ಹೆಚ್ಚುತ್ತದೆ. ಮಾನಸಿಕ ಸ್ಥಿತಿಯಲ್ಲಿ ವ್ಯತ್ಯಯ ಉಂಟಾಗುತ್ತದೆ. ರೋಗಿಗೆ ಮಂಕುಕವಿದಂತಾಗುತ್ತದೆ. ಹೊಟ್ಟೆಯುಬ್ಬರವಾಗುತ್ತದೆ. ಭೇದಿ ನೀರಿನಂತೆ ಹೋಗುತ್ತದೆ. ಭೇದಿಯಲ್ಲಿ ಕೆಲ ಗಟ್ಟಿ ತುಣುಕುಗಳೂ ಇರುತ್ತವೆ.

ಅಪಾಯದ ಹಂತ: ಮೂರನೇ ವಾರದಲ್ಲಿ ರೋಗಿಯ ಜ್ವರ ತಂತಾನೆ ಕುಗ್ಗಿ ದೇಹ ತಣ್ಣಗಾಗುತ್ತದೆ. ನಾಡಿಮಿಡಿತ ಸಹಜವಾಗುತ್ತದೆ. ಮನಸ್ಸು ತಿಳಿಯಾಗುತ್ತದೆ. ನಾಲಿಗೆ ಸ್ವಚ್ಛವಾಗುತ್ತದೆ. ಹೊಟ್ಟೆಯ ತೊಂದರೆ ಇಲ್ಲವಾಗುತ್ತದೆ. ಹಸಿವು ಮರುಕಳಿಸುತ್ತದೆ. ಆದರೆ ಸರಿಯಾಗಿ ಚಿಕಿತ್ಸೆ ಪಡೆಯದ ರೋಗಿ ಮೂರನೇ ವಾರದಷ್ಟು ಹೊತ್ತಿಗೆ ರೋಗಾಣು ಪಸರಿಸುವ ವಿಷದಿಂದಾಗಿ ವಿಷಮ ಸ್ಥಿತಿಗೆ ತಲುಪುತ್ತಾನೆ. ಅತಿಯಾದ ಜ್ವರದಿಂದಾಗಿ ಪ್ರಜ್ಞೆ ಕಳೆದುಕೊಳ್ಳುತ್ತಾನೆ. ಅರೆಪ್ರಜ್ಞಾವಸ್ಥೆಯಲ್ಲಿ ಅಸಂಬದ್ಧವಾಗಿ ಬಡಬಡಿಸುತ್ತಾನೆ. ಕಣ್ಣನ್ನು ತೆರೆದು ತನ್ನದೇ ಆದ ಕಾಲ್ಪನಿಕ ಲೋಕದಲ್ಲಿ ವಿಹರಿಸುತ್ತಾನೆ. ಇದೇ ಸಮಯದಲ್ಲಿ ಕರುಳಿನ ಹುಣ್ಣು ಕರುಳಿನಲ್ಲಿ ತೂತು ಕೊರೆದು, ಹೊಟ್ಟೆಯಲ್ಲಿ ರಕ್ತಸ್ರಾವವಾಗಿ ರೋಗಿ ಕುಸಿಯುತ್ತಾನೆ. ದೇಹ ಬಿಳಚಿಕೊಂಡು ಬದುಕುಳಿಯುವ ಸಾಧ್ಯತೆ ಕ್ಷೀಣಿಸಬಹುದಾಗಿದೆ.

ಇಂದಿನ ವೈಜ್ಞಾನಿಕಯುಗದಲ್ಲಿ ಅನೇಕ ಪ್ರತಿಜೈವಿಕ ಔಷಧಿಗಳನ್ನು ಬಳಸಲಾಗುತ್ತಿದೆಯಾದುದರಿಂದ ಅಪಾಯದ ಅಂಚನ್ನು ತಲುಪುವ ಹಾಗೂ ಟೈಫಾಯಿಡ್ ರೋಗದಿಂದ ಸಾಯುವ ರೋಗಿಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ.

ಪ್ಯಾರಾ ಟೈಫಾಯಿಡ್ ಜ್ವರ

ಸಕಲ ವಿಷಯಗಳಲ್ಲೂ ಟೈಫಾಯಿಡ್‌ಅನ್ನೇ ಹೋಲುವ ಜ್ವರ ಒಂದಿದೆ. ಅದುವೇ ಪ್ಯಾರಾಟೈಫಾಯಿಡ್ ಆದರೆ ರೋಗಲಕ್ಷಣಗಳು ಬಹಳ ಸೌಮ್ಯವಾಗಿರುತ್ತವೆ. ಈ ಸಾಂಕ್ರಾಮಿಕಕ್ಕೆ ಪ್ಯಾರಾಟೈಫಾಯಿಡ್ 'ಏ' ಮತ್ತು ಪ್ಯಾರಾ ಟೈಫಾಯಿಡ್ 'ಬಿ' ಎಂಬ ರೋಗಾಣುಗಳು ಕಾರಣ. ಈ ಕಾಯಿಲೆ ಹರಡುವ ರೀತಿ, ಚಿಕಿತ್ಸೆ, ನಿವಾರಣೆ ಎಲ್ಲಾ ಟೈಫಾಯಿಡ್‌ನಂತೆಯೆ.

ರೋಗನಿದಾನ

ಜ್ವರ ಬಂದಾಕ್ಷಣ ಅಲಕ್ಷಿಸದೆ ವೈದ್ಯರ ಬಳಿ ಹೋಗಬೇಕು. ವೈದ್ಯರು ರೋಗಿಯನ್ನು ಪರೀಕ್ಷಿಸಿ, ಏಣಿಯ ಮೆಟ್ಟಲಿನಂತೆ ಏರಿಳಿಯುವ ಜ್ವರ, ನಾಡಿಮಿಡಿತ, ನಾಲಿಗೆ, ಮೈಮೇಲಿರಬಹುದಾದ ಗುಲಾಬಿವರ್ಣದ ಚುಕ್ಕೆ ಮತ್ತಿತರ ಲಕ್ಷಣಗಳನ್ನು ವೀಕ್ಷಿಸಿ, ರೋಗಿಗೆ ಟೈಫಾಯಿಡ್ ಇರಬಹುದೆಂದು ಊಹಿಸುತ್ತಾರೆ. ಖಚಿತಪಡಿಸಿಕೊಳ್ಳಲು ರಕ್ತಪರೀಕ್ಷೆ ಮಾಡಿಸಲು ಸಲಹೆ ನೀಡುತ್ತಾರೆ.

ರಕ್ತದಲ್ಲಿನ ಬಿಳಿ ರಕ್ತ ಕಣಗಳ (ನ್ಯೂಟ್ರೋಫಿಲ್, ಇಯೋಸಿನೋಫಿಲ್ ಹಾಗೂ ಲಿಂಫೋಸೈಟ್) ಸಂಖ್ಯೆ ಕಡಿಮೆಯಾಗಿರುವುದು ಟೈಫಾಯಿಡ್ ಸೋಂಕನ್ನು ಸೂಚಿಸುತ್ತದೆ.

ವೈಡಾಲ್ ಎಂಬ ವಿಜ್ಞಾನಿ ೧೮೯೬ರಲ್ಲಿ ಟೈಫಾಯಿಡ್ ರೋಗಿಗಳ ರಕ್ತರಸ (ಸೀರಂ) ದಲ್ಲಿ `O' `H' ಪ್ರತಿಜೀವಿಗಳಿರುವುದನ್ನು ಕಂಡುಹಿಡಿದಿದ್ದಾರೆ. ಇಂದಿಗೂ ಈ ವೈಡಾಲ್ ರಕ್ತಪರೀಕ್ಷೆಯೇ ಟೈಫಾಯಿಡ್ ಅನ್ನು ಪತ್ತೆ ಹಚ್ಚುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

ಇದಲ್ಲದೆ ರೋಗಿಯ ಮಲಮೂತ್ರಗಳಲ್ಲಿನ ಟೈಫಾಯಿಡ್ ರೋಗಾಣುಗಳನ್ನು ಪ್ರಯೋಗಶಾಲೆಯಲ್ಲಿ ಕೃತಕವಾಗಿ ಕೃಷಿಗೊಳಿಸಿ, ರೋಗಾಣುಗಳ ಇರುವಿಕೆಯನ್ನು ತಿಳಿದುಕೊಳ್ಳಬಹುದಾಗಿದೆ.

ರಣಾಂಗಣದಲ್ಲಿ ಟೈಫಾಯಿಡ್

ಸ್ಪ್ಯಾನೋ- ಅಮೆರಿಕನ್ ಯುದ್ಧ, ಅಮೆರಿಕದ ಯಾದವೀ ಕಲಹ ಮತ್ತು ಬೋರ್‌ಯುದ್ಧ (Boer War) ದಲ್ಲಿ ಅನುಕ್ರಮವಾಗಿ ೬೮,೧೬೪; ೫೧,೧೩೩; ೮೦೨೨ ಜನ ಸೈನಿಕರು ಟೈಫಾಯಿಡ್‌ನಿಂದಾಗಿ ಸಾವಿಗೀಡಾದರು. ಯುದ್ಧದಲ್ಲಿ ಗುಂಡಿನಿಂದ ಹತರಾದವರ ಸಂಖ್ಯೆಗಿಂತ ಟೈಫಾಯಿಡ್‌ನಿಂದ ಸತ್ತವರ ಸಂಖ್ಯೆಯೇ ಅಧಿಕವಾಗಿತ್ತು. ಮೊದಲನೆಯ ಜಾಗತಿಕ ಮಹಾಯುದ್ಧದಲ್ಲಿ ಕೇವಲ ೧೨೨೯ ಸೈನಿಕರು ಟೈಫಾಯಿಡ್‌ಗೆ ಬಲಿಯಾಗಿದ್ದರು. ಏಕೆಂದರೆ ಆಗ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.

ಎಲ್ಲಿ ಚಿಕಿತ್ಸೆ?

ಟೈಫಾಯಿಡ್ ರೋಗ ಸೌಮ್ಯವಾಗಿದ್ದರೆ ಮನೆಯಲ್ಲೇ ಚಿಕಿತ್ಸೆ ಮಾಡಬಹುದು. ರೋಗಿಯ ಪರಿಸ್ಥಿತಿ ವಿಷಮಗೊಂಡಿದ್ದರೆ, ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುವುದು ಕ್ಷೇಮಕರ. ರೋಗಿಗೆ ಎಲ್ಲಿ ಚಿಕಿತ್ಸೆ ಕೊಡಿಸಬಹುದೆಂಬುದನ್ನು ವೈದ್ಯರ ನಿರ್ಧಾರಕ್ಕೇ ಬಿಡಬೇಕು.

ವಿಶ್ರಾಂತಿ

ರೋಗಿಯನ್ನು ಮನೆಯಲ್ಲಿನ ಒಂದು ಪ್ರತ್ಯೇಕ ಕೋಣೆಯಲ್ಲಿ ಇರಿಸಬೇಕು. ಕೋಣೆಯಲ್ಲಿ ಸಾಕಷ್ಟು ಗಾಳಿ, ಬೆಳಕು, ಇರಲಿ. ಕೋಣೆಯಲ್ಲಿ ಹೆಚ್ಚು ಸಾಮಾನು ಸರಂಜಾಮು ಇರಬಾರದು. ರೋಗಿಯ ಕೋಣೆಗೆ ಹೆಚ್ಚು ಜನರು ಹೋಗಲು ಅನುಮತಿ ನೀಡಬಾರದು. ರೋಗಿಗೆ ಸಂಪೂರ್ಣ ವಿಶ್ರಾಂತಿಯ ಅಗತ್ಯವಿರುತ್ತದೆ.

ಅವನು ಸದಾಕಾಲ ಹಾಸಿಗೆಯಲ್ಲಿಯೇ ಮಲಗಿರುವಂತೆ ಹೇಳಬೇಕು. ಮೈಮೇಲೆ ಒತ್ತು ಗಾಯಗಳಾಗದಿರಲು ರೋಗಿ ಪದೇ ಪದೇ ಮಗ್ಗಲು ಬದಲಿಸುತ್ತಿರಬೇಕು. ತೀರ ಅಶಕ್ತರಾಗಿರದವರು ಮಲಮೂತ್ರ ವಿಸರ್ಜನೆಗೆ ಓಡಾಡಬಹುದು. ಸ್ವಲ್ಪ ಹೊತ್ತು ಹಾಸಿಗೆಯಲ್ಲಿ ಎದ್ದು ಕೂಡಬಹುದು.

ಆರೈಕೆ

ರೋಗಿಯ ಕ್ಷೇಮ ನೋಡಿಕೊಳ್ಳುವವರೂ ಸ್ವಚ್ಛತಾ ನಿಯಮಗಳಿಗೆ ಆದ್ಯತೆ ನೀಡಬೇಕು. ಅವರು ತಮಗೆ ಟೈಫಾಯಿಡ್ ತಗಲದಂತೆ ಎಚ್ಚರವಹಿಸಬೇಕು. ಟೈಫಾಯಿಡ್ ನಿರೋಧಕ ಲಸಿಕೆಯನ್ನು ಹಾಕಿಸಿಕೊಳ್ಳಬೇಕು. ರೋಗಿಯು ಬಳಸಿದ ತಟ್ಟೆ, ಪಾತ್ರೆ, ಚಮಚ, ಬಟ್ಟೆ ಹಾಗೂ ಇತರ ಪರಿಕರಗಳನ್ನು ಕ್ರಿಮಿನಾಶಕಗಳಿಂದ ಶುದ್ಧಗೊಳಿಸಬೇಕು. ಆರೈಕೆಯಲ್ಲಿ ನಿರತರಾದವರು ತಮ್ಮ ಕೈಗಳನ್ನು ಆಗಾಗ್ಯೆ ಸೋಪಿನಿಂದ ತೊಳೆದುಕೊಳ್ಳಬೇಕು. ಪ್ರತಿದಿನ ಒದ್ದೆ ಬಟ್ಟೆಯಿಂದ ರೋಗಿಯ ಮೈ ಒರೆಸಬೇಕು. ರೋಗಿಯ ಬಾಯಿಯನ್ನು ಚೆನ್ನಾಗಿ ತೊಳೆಸಬೇಕು. ರೋಗಿಯ ಪರಿಚಾರಕರು ತಾವು ಊಟಮಾಡುವ ಮುನ್ನ ಕಡ್ಡಾಯವಾಗಿ ಸೋಪು ನೀರಿನಿಂದ ಕೈ ತೊಳೆದುಕೊಳ್ಳಬೇಕು.

ಆಹಾರ

ಟೈಫಾಯಿಡ್ ರೋಗಿಗೆ ಆಹಾರದ ಪಥ್ಯ ಹೆಚ್ಚೇನೂ ಇಲ್ಲ. ರೋಗಿಯ ಆಹಾರ ಸಮತೂಕದ್ದಾಗಿರಬೇಕು. ನೀರು, ಹಾಲು, ಹಾರ್ಲಿಕ್ಸ್, ಗಂಜಿ, ನಿಂಬೆರಸ, ತಾಜಾಹಣ್ಣಿನ ರಸ, ಬಾರ್ಲಿ, ಮಜ್ಜಿಗೆ, ಟೀ, ಕಾಫಿ ಇವನ್ನೆಲ್ಲಾ ಧಾರಾಳವಾಗಿ ಕೊಡಬೇಕು. ಮೆತ್ತಗೆ ಬೇಯಿಸಿದ ಅನ್ನ, ಕಾರ ಕಡಿಮೆ ಇರುವ ತಿಳಿಸಾರು ಕೊಡಬಹುದು. ಮೆತ್ತನೆ ಬೇಯಿಸಿದ ಸೊಪ್ಪು, ತರಕಾರಿಗಳನ್ನು ತಿನ್ನಿಸಬೇಕು. ಹೆಚ್ಚು ಗಟ್ಟಿ ಇರುವ ಆಹಾರವನ್ನು ಕೆಲ ದಿನಗಳ ಕಾಲ ಕೊಡಬಾರದು. ಕಾಯಿಲೆಯಿಂದ ಗುಣಮುಖರಾದ ಒಂದು ತಿಂಗಳ ಅನಂತರ ರೋಗಿ ಎಲ್ಲಾ ಆಹಾರ ಸೇವಿಸಬಹುದು.

ಔಷಧೋಪಚಾರ

೧೯೪೭ರಲ್ಲಿ ಕಂಡು ಹಿಡಿದ ಕ್ಲೋರಾಮ್‌ಫಿನಿಕಾಲ್ *(Chloramphenicol)* ಇಂದಿಗೂ ಟೈಫಾಯಿಡ್‌ಗೆ ರಾಮಬಾಣವಾಗಿದೆ. ೫೦೦ ಮಿಲಿಗ್ರಾಂನ ಕ್ಯಾಪ್ಸೂಲ್ ಒಂದನ್ನು ದಿನಕ್ಕೆ ನಾಲ್ಕು ಬಾರಿ (ಪ್ರತಿ ಆರುಗಂಟೆಗೊಮ್ಮೆ) ಕೊಟ್ಟಾಗ, ರೋಗಿಯ ಜ್ವರ ಮತ್ತಿತರ ಲಕ್ಷಣಗಳು ೪೮ ಗಂಟೆಗಳಲ್ಲಿ ಚಮತ್ಕಾರಿಕವಾಗಿ ಮಾಯವಾಗುತ್ತವೆ. ಆದಾಗ್ಯೂ ಔಷಧಿಯನ್ನು ವೈದ್ಯರ ಸಲಹೆಯಂತೆ ೧೪ ದಿನಗಳವರೆಗೆ ಮುಂದುವರಿಸಬೇಕಾಗುತ್ತದೆ.

ಕೆಲವೊಮ್ಮೆ ಟೈಫಾಯಿಡ್ ರೋಗಾಣುಗಳು ಕ್ಲೋರಾಮ್‌ಫೆನಿಕಾಲ್‌ಗೆ ಮಣಿಯುವುದಿಲ್ಲ. ಅಂತಹ ಸಂದರ್ಭಗಳಲ್ಲಿ ವೈದ್ಯರು ಸಿಪ್ರೊಫ್ಲಾಕ್ಸಿನ್ (*Cifrofloxin*) ಎಂಬ ಔಷಧಿಯನ್ನು ೫೦೦ ಮಿಲಿ ಗ್ರಾಂ. ಪ್ರಮಾಣದಲ್ಲಿ, ಆರುಗಂಟೆಗಳಿಗೊಮ್ಮೆ ಉಪಯೋಗಿಸಲು ಸಲಹೆ ಮಾಡುತ್ತಾರೆ. ಈ ಔಷಧಿಯಿಂದಲೂ ರೋಗಿ ನಾಟಕೀಯ ರೀತಿಯಲ್ಲಿ ಚೇತರಿಸಿಕೊಳ್ಳುತ್ತಾನೆ. ಇವೆರಡಲ್ಲದೆ ಟೈಫಾಯಿಡ್ ರೋಗಾಣುಗಳನ್ನು ಸಂಹರಿಸಬಲ್ಲ ಅನೇಕ ಹೊಸ ಔಷಧಿಗಳೂ (ಪಿ. ಫ್ಲಾಕ್ಸಸಿಲಿನ್, ಓ. ಫ್ಲಾಕ್ಸಸಿಲಿನ್) ಈಗ ಲಭ್ಯವಿವೆ.

ಜ್ವರದ ತಾಪ ಇರುವಾಗ ಜ್ವರವನ್ನು ಇಳಿಸಲು ಪ್ಯಾರಸಿಟಮಾಲ್ ಮಾತ್ರೆಗಳನ್ನು ಪ್ರತಿ ಆರುಗಂಟೆಗೊಮ್ಮೆ ೫೦೦ ಮಿಲಿ ಗ್ರಾಂ.ಗಳಷ್ಟು ಪ್ರಮಾಣದಲ್ಲಿ ಕೊಡಲಾಗುತ್ತದೆ.

ಅಸಡ್ಡೆ ಮಾಡಿದರೆ ಅಪಾಯ

ಟೈಫಾಯಿಡ್ ಮೂಲತಃ ಕರುಳಿಗೆ ಸಂಬಂಧಪಟ್ಟ ಕಾಯಿಲೆ. ಸೂಕ್ತ ಚಿಕಿತ್ಸೆ ಪಡೆಯಲು ಅಸಡ್ಡೆ ತೋರಿಸಿದಲ್ಲಿ ಕರುಳಿನ ಹುಣ್ಣುಗಳು ಆಳವಾಗಿ ಕರುಳಿನಲ್ಲಿ ತೂತು ಬಿದ್ದು ರೋಗಿಯ ಸ್ಥಿತಿ ಅಪಾಯದ ಅಂಚನ್ನು ತಲುಪಬಹುದು. ಇಂತಹ ಸಂದರ್ಭಗಳಲ್ಲಿ ರೋಗಿಯ ಪ್ರಾಣ ಕಾಪಾಡಲು ಪರಿಣತರಿಂದ ತುರ್ತು ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸೆಯ ಅಗತ್ಯ ಬೀಳುತ್ತದೆ.

ಅನೇಕ ಸಂದರ್ಭಗಳಲ್ಲಿ ಬಾಯಿ ಮತ್ತು ಅನ್ನನಾಳದಲ್ಲಿ ಹುಣ್ಣುಗಳು ತಲೆದೋರುತ್ತವೆ. ಕರುಳಿನ ಚಲನೆ ಮಂದವಾಗಿ ಹೊಟ್ಟೆಯುಬ್ಬರ ಉಂಟಾಗುತ್ತದೆ. ರೋಗಾಣುಗಳು ದೇಹದೆಲ್ಲೆಡೆ ವ್ಯಾಪಿಸುವುದರಿಂದ ಯಕೃತ್ತು, ಪಿತ್ತಕೋಶ, ಹೃದಯ, ಮೂತ್ರಪಿಂಡ, ಮಿದುಳು, ಮೂಳೆಗಳು ಹಾಗೂ ಶ್ವಾಸಕೋಶದಲ್ಲಿ ಉರಿಯೂತ ಉಂಟಾಗಿ ಈ ಎಲ್ಲಾ ಅಂಗಗಳ ಕಾರ್ಯಕ್ಷಮತೆಗೆ ಅಡಚಣೆ ಉಂಟಾಗುವುದಿದೆ. ರೋಗಾಣುಗಳ ವಿಷದ ಪರಿಣಾಮವಾಗಿ ಹೃದಯ ಸೋತು (*Heart Failure*) ಸಾವು ಸಂಭವಿಸಬಹುದು.

ಟೈಫಾಯಿಡ್‌ನಿಂದ ಉಂಟಾಗುವ ಅಪಾಯಗಳ ಆಳ ಮತ್ತು ವಿಸ್ತಾರ ಎಷ್ಟೇ ಇದ್ದಾಗಲೂ, ಇವುಗಳ ಸಂಭಾವ್ಯತೆ ಕೇವಲ ರೋಗವನ್ನು ಅಲಕ್ಷಿಸುವವರಿಗಷ್ಟೇ ಮೀಸಲು. ಸೂಕ್ತ ಸಲಹೆ, ಚಿಕಿತ್ಸೆ ಪಡೆಯುವ ಬಹುಪಾಲು ರೋಗಿಗಳು ಟೈಫಾಯಿಡ್‌ನಿಂದ ಬಹುಬೇಗನೆ ಸಂಪೂರ್ಣವಾಗಿ ಗುಣಮುಖರಾಗುತ್ತಾರೆ.

ರೋಗದಿಂದ ರಕ್ಷಣೆ: ರೋಗಬಂದ ಅನಂತರ ಚಿಕಿತ್ಸೆ ಪಡೆದು ಗುಣಮುಖರಾಗುವುದಕ್ಕಿಂತ ರೋಗಬಾರದಂತೆ ಎಚ್ಚರವಹಿಸುವುದೇ ಶ್ರೇಷ್ಠ ಎಂಬ

ಹೇಳಿಕೆ ಇದೆ. ಇದು ಎಲ್ಲಾ ಕಾಯಿಲೆಗಳಿಗೂ ಅನ್ವಯಿಸುವಂತೆ ಟೈಫಾಯಿಡ್ ಜ್ವರಕ್ಕೂ ಅನ್ವಯಿಸುತ್ತದೆ.

ಟೈಫಾಯಿಡ್ ರೋಗಾಣುವಿನ ಮೂಲ ಎಂದರೆ ಟೈಫಾಯಿಡ್ ಅನುಭವಿಸುತ್ತಿರುವ ರೋಗಿಗಳು ಮತ್ತು ಟೈಫಾಯಿಡ್ ರೋಗವಾಹಕರು. ಹೀಗಾಗಿ ರೋಗಿಗಳನ್ನು ಆರಂಭದ ಹಂತದಲ್ಲಿಯೇ ಆದಷ್ಟು ಬೇಗ ಗುರುತಿಸಿ ಚಿಕಿತ್ಸೆ ಮಾಡಿದರೆ, ಪರಿಸರದಲ್ಲಿ ರೋಗಾಣುಗಳ ಸಂಖ್ಯೆ ಗಣನೀಯವಾಗಿ ತಗ್ಗುತ್ತದೆ. ಇದೇ ರೀತಿ ರೋಗವಾಹಕರನ್ನು ಗುರುತಿಸಿ ಅವರನ್ನು ರೋಗಾಣುಗಳಿಂದ ಮುಕ್ತರನ್ನಾಗಿ ಮಾಡುವ ಅಗತ್ಯವಿದೆ. ರೋಗವಾಹಕರಿಗೆ ಒಂದು ವರಸೆ (೧೪ ದಿನ) ಆ್ಯಂಪಿಸಿಲಿನ್ (ದಿನಕ್ಕೆ ೨ ಗ್ರಾಂ) ಮತ್ತು ಪ್ರೊಬೆನಾಸಿಡ್ (*probenecid*) ದಿನಕ್ಕೆ ೨ ಗ್ರಾಂ ಕೊಟ್ಟು ಅನಂತರ ತಿಂಗಳಿಗೊಮ್ಮೆಯಂತೆ ೩-೪ ತಿಂಗಳವರೆಗೆ ಅವರ ಮಲಮೂತ್ರ ಪರೀಕ್ಷಿಸಿ ಅವರು ರೋಗಾಣು ರಹಿತರಾಗಿರುವುದನ್ನು ಖಚಿತವಾಗಿ ತಿಳಿದುಕೊಳ್ಳಬಹುದು. ಕೆಲ ರೋಗವಾಹಕರು ಈ ಚಿಕಿತ್ಸೆಯಿಂದಲೂ ರೋಗಾಣುರಹಿತರಾಗುವುದಿಲ್ಲ. ಅಂಥವರ ಪಿತ್ತಕೋಶ (*Gall Bladder*) ವನ್ನು ಶಸ್ತ್ರಚಿಕಿತ್ಸೆಯಿಂದ ತೆಗೆದುಹಾಕಬೇಕಾಗುತ್ತದೆ. ಏಕೆಂದರೆ ರೋಗಾಣುಗಳ ದಾಸ್ತಾನು ಇರುವುದು ಈ ಪಿತ್ತ ಕೋಶದಲ್ಲಿಯೇ.

ಒಟ್ಟಿನಲ್ಲಿ ರೋಗಿಗಳನ್ನು ಮತ್ತು ರೋಗವಾಹಕರನ್ನು . ಸಕಾಲಿಕವಾಗಿ ಚಿಕಿತ್ಸೆಗೊಳಪಡಿಸುವುದರಿಂದ ರೋಗಾಣುಗಳ ಮೂಲ ಅಸ್ತಿತ್ವವನ್ನೇ ಅಳಿಸಬಹುದು.

ಟೈಫ್ ಒರಲ್ ಲಸಿಕೆ

ಈ ಲಸಿಕೆಯ ಪ್ರತಿ ಕ್ಯಾಪ್ಸೂಲ್‌ನಲ್ಲಿ $೧೦^{೯}$ ಸಂಖ್ಯೆಯ ನಿಷ್ಕ್ರಿಯಗೊಳಿಸಿದ *Ty* ೨೧ *a* ಜಾತಿಯ ಟೈಫಾಯಿಡ್ ರೋಗಾಣುಗಳಿರುತ್ತವೆ. ರೋಗಾಣುಗಳು ಜೀವಂತವಾಗಿರುತ್ತವೆ. ಆದ್ದರಿಂದ ಈ ಲಸಿಕೆಗೆ ಜೀವಂತ ಲಸಿಕೆ (*Live vaccine*) ಎನ್ನುತ್ತಾರೆ.

ಟಿ.ಎ.ಬಿ.ಲಸಿಕೆ

ಪ್ರತಿ ಮಿಲಿ ಲೀಟರ್ ಟಿ.ಎ.ಬಿ.ಲಸಿಕೆಯಲ್ಲಿ

ಸಾಲ್ಮೋನಿಲ ಟೈಫೀ	-	೧೦೦೦ ಮಿಲಿಯನ್
ಪ್ಯಾರಟೈಫೀ *A*	-	೫೦೦-೭೫೦ ಮಿಲಿಯನ್
ಪ್ಯಾರಟೈಫೀ *B*	-	೫೦೦-೭೫೦ ಮಿಲಿಯನ್

ನಿರ್ಜೀವ ರೋಗಾಣುಗಳಿರುತ್ತವೆ.

ಬಾಯಿ ಮೂಲಕ ಸೇವಿಸುವ ಲಸಿಕೆ

ಟೈಫಾಯಿಡ್ ಲಸಿಕೆಯ ಇಂಜೆಕ್ಷನ್ ನೋವನ್ನು ತಪ್ಪಿಸಲು ಭಾರತಕ್ಕೆ ಹೆಕ್ಸ್ಟ್ (*HOECHST*) ಕಂಪನಿಯವರು ಕ್ಯಾಪ್ಸೂಲ್ ರೂಪದಲ್ಲಿನ ಟೈಫಾಯಿಡ್ ಲಸಿಕೆ (ಟ್ಯಾಫ್ ಒರಲ್) ಯನ್ನು ಪರಿಚಯಿಸಿದ್ದಾರೆ. ದಿನ ಬಿಟ್ಟು ದಿನ ಒಂದು ಕ್ಯಾಪ್ಸೂಲ್‌ನಂತೆ ೩ ಕ್ಯಾಪ್ಸೂಲ್ ಸೇವಿಸಬೇಕಾಗುತ್ತದೆ (೧-೩-೫ ನೇ ದಿನ). ಲಸಿಕೆಯ ವರಸೆ ಮುಗಿದ ೧೫ ದಿನಗಳ ಅನಂತರ ದೇಹಕ್ಕೆ ಟೈಫಾಯಿಡ್ ಸಾಂಕ್ರಾಮಿಕದಿಂದ ಸಂರಕ್ಷಣೆ ಸಿಗುತ್ತದೆ. ಈ ಲಸಿಕೆಯನ್ನೂ ಮೂರು ವರ್ಷಕ್ಕೊಮ್ಮೆ ಪುನರಾವರ್ತಿಸುತ್ತಿರಬೇಕಾಗುತ್ತದೆ.

ಹಲವು ಸಂದರ್ಭಗಳಲ್ಲಿ ಟೈಫಾಯಿಡ್ ಲಸಿಕೆ ನೂರಕ್ಕೆ ನೂರರಷ್ಟು ರಕ್ಷಣೆ ನೀಡಲು ವಿಫಲವಾಗಬಹುದು. ಆದಾಗ್ಯೂ ಇದು ಕಾಯಿಲೆಯ ಸಾಧ್ಯತೆಯನ್ನೂ, ಕಾಯಿಲೆಯ ಗಂಭೀರತೆಯನ್ನೂ ಸಮರ್ಥವಾಗಿ ತಗ್ಗಿಸುತ್ತದೆ. ಹೀಗಾಗಿ ಶಾಲಾಮಕ್ಕಳು, ಟೈಫಾಯಿಡ್ ಪೀಡಿತ ಪ್ರದೇಶಗಳಲ್ಲಿ ವಾಸಿಸುವವರು, ರೋಗಿಯ ಮನೆಯವರು, ಪದೇ ಪದೇ ಪ್ರವಾಸದಲ್ಲಿ ನಿರತರಾಗಿರುವವರು, ಜಾತ್ರೆ, ಮೇಳಗಳಿಗೆ ಹೋಗುವವರು ಟೈಫಾಯಿಡ್ ಲಸಿಕೆಯನ್ನು ತೆಗೆದುಕೊಳ್ಳುವುದು ಕ್ಷೇಮಕರ.

ಲಸಿಕೆಗಳು

ಟೈಫಾಯಿಡ್ ಜ್ವರದಿಂದ ರಕ್ಷಣೆಪಡೆಯಲು ಲಸಿಕೆ (*Vaccine*) ಗಳು ಲಭ್ಯವಿವೆ. ಅವುಗಳಲ್ಲಿ ಟಿ.ಎ.ಬಿ. (*TAB*) ಎಂಬ ಲಸಿಕೆಯನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಈ ಲಸಿಕೆ ಇಂಜೆಕ್ಷನ್ ಆಗಿದ್ದು ೦.೫ ಪ್ರಮಾಣದಲ್ಲಿ ತೋಳಿನ ಚರ್ಮದಡಿಗೆ ಚುಚ್ಚಲಾಗುತ್ತದೆ. ಯಾರಾದರೂ ಯಾವ ವಯಸ್ಸಿನಲ್ಲಿಯಾದರೂ ಈ ಲಸಿಕೆಯನ್ನು ಪಡೆಯಬಹುದಾಗಿದ್ದು ಲಸಿಕೆಯ ವೇಳಾಪಟ್ಟಿ ಈ ರೀತಿ ಇದೆ.

ಟಿ.ಎ.ಬಿ. (*T.A.B.*) ಲಸಿಕೆ

ಮೊದಲನೆ ಇಂಜೆಕ್ಷನ್	-	ಇಚ್ಛಿತ ದಿನ
ಎರಡನೇ ಇಂಜೆಕ್ಷನ್	-	೬ ವಾರಗಳ ಅನಂತರ
ಮೂರನೇ ಇಂಜೆಕ್ಷನ್	-	೩ ವರ್ಷಗಳ ಅನಂತರ

ಲಸಿಕೆ ಪಡೆದುಕೊಂಡ ೨-೩ ವಾರಗಳ ಅನಂತರ ಟೈಫಾಯಿಡ್ ನಿರೋಧಕ ರಕ್ಷಣಾ ಸಾಮರ್ಥ್ಯ ನಮ್ಮ ದೇಹದಲ್ಲಿ ವೃದ್ಧಿಯಾಗುತ್ತದೆ. ಪ್ರತಿ ಮೂರುವರ್ಷಗಳಿಗೊಮ್ಮೆ ಟಿ.ಎ.ಬಿ

ಟೈಫಾಯಿಡ್: ಚರಿತ್ರಾರ್ಹ ದಾಖಲೆಗಳು

ಚುಂಗ್ ಚಿಂಗ್	ಕ್ರಿ.ಶ.೧೯೬	ಟೈಫಾಯಿಡ್ ಬಗ್ಗೆ ಆಗಲೇ ಪುಸ್ತಕ ಬರೆದಿದ್ದ.
ವಿಲ್ಲೀಸ್	೧೬೪೩	ರೋಗ ಹರಡುವಿಕೆಯನ್ನು ವಿವರಿಸಿದ್ದಾನೆ.
ಬ್ರೆಟೊನ್ಹೆ	೧೮೨೭	ಟೈಫಾಯಿಡ್ ಆದಾಗ ಕರುಳಿನಲ್ಲಿ ಹುಣ್ಣಾಗುವುದನ್ನು ತೋರಿಸಿದ್ದಾನೆ.
ಲೂಯಿಸ್	೧೮೨೯	ಟೈಫಾಯಿಡ್ ಎಂದು ಹೆಸರಿಟ್ಟವನು.
ಗೆರ್ಹಾರ್ಡ್	೧೮೩೭	ಟೈಫಾಯಿಡ್ ಮತ್ತು ಪ್ಯಾರಾಟೈಫಾಯಿಡ್‌ಗೆ ಇರುವ ವ್ಯತ್ಯಾಸ ಗುರುತಿಸಿದನು.
ಕೊರಿಗನ್	೧೮೫೩	ಟೈಫಾಯಿಡ್ ಚಿಹ್ನೆಗಳನ್ನು ತಿಳಿಸಿದ್ದಾನೆ.
ಬಡ್	೧೮೫೬	ಕಲುಷಿತ ನೀರಿನಿಂದ ರೋಗ ಹರಡುತ್ತದೆ ಎಂದು ತೋರಿಸಿದ.
ಬೆಡೆಲ್	೧೮೬೩	ಮಲದಿಂದ ಟೈಫಾಯಿಡ್ ಹರಡುತ್ತದೆ ಎಂದು ತಿಳಿಸಿದ
ಎಬರ್	೧೮೮೦	ಟೈಫಾಯಿಡ್ ರೋಗಾಣುವನ್ನು ಕಂಡುಹಿಡಿದ.
ಗಾಫ್ಕಿ	೧೮೮೪	ರೋಗಾಣುವನ್ನು ವಿವರವಾಗಿ ಅಧ್ಯಯನ ಮಾಡಿದ.
ರೀಡ್	೧೮೯೫	ನೊಣಗಳು ಟೈಫಾಯಿಡ್ ಹರಡುತ್ತವೆ ಎಂದು ತಿಳಿಸಿದ.
ವೈಡಾಲ್	೧೮೯೬	ರಕ್ತಪರೀಕ್ಷೆಯಿಂದ ಟೈಫಾಯಿಡ್ ಪತ್ತೆ ಹಚ್ಚಬಹುದೆಂದು ತೋರಿಸಿದ.
ಗೌನಿ	೧೮೯೬	ಪ್ಯಾರಾ ಟೈಫಾಯಿಡ್ 'ಬಿ' ರೋಗಾಣು ಪತ್ತೆ ಹಚ್ಚಿದ.
ರೈಟ್	೧೮೯೭	ಟೈಫಾಯಿಡ್ ಲಸಿಕೆ ಆವಿಷ್ಕರಿಸಿದ.
ಗೌನಿ	೧೮೯೮	ಪ್ಯಾರಾಟೈಫಾಯಿಡ್ 'ಎ' ರೋಗಾಣು ಪತ್ತೆ ಹಚ್ಚಿದ
ಭಾರತೀಯ ಸೇನೆ	೧೮೯೯	ಭಾರತದ ಸೇನೆಯಲ್ಲಿ ಟೈಫಾಯಿಡ್ ಲಸಿಕೆ ಬಳಕೆಗೆ ಬಂತು
ಮೆಟನಿಕಾಫ್	೧೯೦೦	ಪ್ರಯೋಗಾತ್ಮಕವಾಗಿ ಪ್ರಾಣಿಗಳಿಗೆ ಟೈಫಾಯಿಡ್ ಉಂಟುಮಾಡಿದ.
ಜರ್ಮನಿರ್ ಮತ್ತು ಬಾಂಟ	೧೯೦೩	ಬಾಯಿ ಮೂಲಕಸೇವಿಸುವ ಲಸಿಕೆ ಕಂಡುಹಿಡಿದರು.
ಉಹುಲಿನಥ್ ಹುಬೆನಿರ್	೧೯೦೮	ಪ್ಯಾರಾಟೈಫಾಯಿಡ್ 'ಸಿ' ರೋಗಾಣು ಪತ್ತೆಹಚ್ಚಿದ.
ರಸೆಲ್	೧೯೦೯	ಟೈಫಾಯಿಡ್ ಲಸಿಕೆಯನ್ನು ಬಳಕೆಗೆ ತಂದ.
ಮೊದಲನೆಯ ಮಹಾಯುದ್ಧ	೧೯೧೧	ಶುದ್ಧನೀರು, ನೊಣಗಳ ಹತೋಟಿ ಮತ್ತು ಲಸಿಕೆಗಳ ಬಳಕೆಯಿಂದ ಟೈಫಾಯಿಡ್ ಸೋಂಕು ಬಹಳಷ್ಟು ಕಡಿಮೆಯಾಯಿತು.
ಜಾನ್ ಎರ್ಲಿಚ್	೧೯೪೭	ಟೈಫಾಯಿಡ್‌ಗೆ ರಾಮಬಾಣವಾದ ಔಷಧಿ ಕ್ಲೋರೋಮೈಸಿಟನ್ ಕಂಡುಹಿಡಿದ.

ಲಸಿಕೆಯನ್ನು ತೆಗೆದುಕೊಳ್ಳುತ್ತಿದ್ದರೆ ಆರೋಗ್ಯ ನಿರ್ಬಾಧಿತವಾಗಿರುತ್ತದೆ.

ಟೈಫಾಯಿಡ್‌ನಿಂದ ರಕ್ಷಣೆ ಪಡೆಯಲು ನಾವು ಸೇವಿಸುವ ಆಹಾರ ಮತ್ತು ನೀರಿನ ನೈರ್ಮಲ್ಯದ ಬಗ್ಗೆ ಅತಿ ಹೆಚ್ಚಿನ ಗಮನ ನೀಡಬೇಕಾಗುತ್ತದೆ. ಬೇಯಿಸದೆ ಸೇವಿಸುವ ಹಣ್ಣು, ತರಕಾರಿ, ಸೊಪ್ಪು, ಇವುಗಳ ಸ್ವಚ್ಛತೆಗೆ ವಿಶೇಷ ಆದ್ಯತೆ ನೀಡಬೇಕು. ಸರ್ವರಿಗೂ ಸ್ವಚ್ಛನೀರಿನ ಸರಬರಾಜಾಗಬೇಕು. ಮನೆಯಲ್ಲಿ ನೀರನ್ನು ಸ್ವಚ್ಛವಾಗಿ ಸಂಗ್ರಹಿಸಿಕೊಳ್ಳಬೇಕು. ಕುಡಿಯುವ ನೀರಿನಲ್ಲಿ ಕೈ ಅದ್ದಬಾರದು. ಪ್ರತಿಯೊಬ್ಬರೂ ಮಲಮೂತ್ರ ವಿಸರ್ಜಿಸಿ ಬಂದ ಅನಂತರ ಮತ್ತು ಆಹಾರ ಸೇವಿಸುವ ಮುನ್ನ ಕೈಗಳನ್ನು ಸೋಪು-ನೀರಿನಿಂದ ಸ್ವಚ್ಛವಾಗಿ ತೊಳೆದುಕೊಳ್ಳುವ ರೂಢಿ ಬೆಳೆಸಿಕೊಳ್ಳಬೇಕು.


ರೋಗವಾಹಕರನ್ನು ಅಡಿಗೆ ಮಾಡುವ ಹಾಗೂ ವಿತರಿಸುವ ಕಾರ್ಯಕ್ಕೆ ನೇಮಿಸಿಕೊಳ್ಳಬಾರದು. ಪ್ರತಿಯೊಬ್ಬರೂ ಬಯಲಿನಲ್ಲಿ ಮಲವಿಸರ್ಜಿಸುವ ಪದ್ಧತಿಯನ್ನು ಬಿಟ್ಟು ಶೌಚಾಲಯವನ್ನು ಬಳಸಬೇಕು. ಅಲ್ಲದೆ ಒಳಚರಂಡಿ ನೀರು ಕುಡಿಯುವ ನೀರಿಗೆ ಬೆರೆಯದಂತೆ ಕಟ್ಟೆಚ್ಚರ ವಹಿಸಬೇಕು. ಆಗ ಟೈಫಾಯಿಡ್ ಒಂದೇ ಅಲ್ಲ, ನೀರಿನಿಂದ ಹರಡಬಹುದಾದ ಅನೇಕ ಕಾಯಿಲೆಗಳಿಗೆ ವಿದಾಯ ಕೋರಬಹುದು. ●

Printed & Published by S.K. KATOTE on behalf of Loka Shikshana Trust at Samyukta Karnataka Press, Koppikar Road, Hubli-580 020 (Ph: 364303)

Managing Editor: **K. SHAMARAO** *Editor:* **N.V. JOSHI**

RNI. Regd No. 3633/57

ಯಾರೂ ನೋಡ್ತಾ ಇಲ್ಲ!



KASTURI Kannada Digest, Reg. No. KRNG 43, Licence No. 1.2120 WPP No. 33, Price Rs.

